೨೦
ವರ್ಷ ೪

ಸಂಕಲನ

ಮಾರ್ಚ್ + ಏಪ್ರಿಲ್ ೨೦೦೫

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

FORM-IV

"SANKALANA"

1. Place of publication	:	Dharwad
2. Periodicity of publication	:	Bimonthly
3. Language	:	Kannada
4. Name of the editor	:	Dr. Siddhaling Pattanshetti
Address	:	Hoomane, Shridevinagar Vidyagiri, Dharwad-580 004
Nationality	:	Indian
5. Name of the publisher	:	Dr. Hema Pattanshetti
Address	:	Hoomane, Shridevinagar Vidyagiri, Dharwad-580 004
Nationality	:	Indian
6. Name of the printer	:	Saraswati Offset Printers
Address	:	Shivaji Road, Dharwad - 580 001
Nationality	:	Indian
7. Registration No. TC	:	RNI No. KARKAN 14160 / 10 / 1 / 2002 -
8. Proprietor	:	Sankalana Prakashana Hoomane, Shridevinagar Vidyagiri, Dharwad-580 004

I, Dr, Hema Pattanshetti, hereby declared that the particulars given above are true to the best of my knowledge and belief.

Sd/-
(Hema Pattanshetti)
Publisher

Date : 01-03-2005

ಅನನ್ಯ ಪ್ರಕಾಶನದ ಲಭ್ಯವಿರುವ ನಾಟಕಗಳು

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪

೧. ಅಲೆಗಳಲ್ಲಿ ರಾಜಹಂಸಗಳು : ಮೋಹನ್ ರಾಕೇಶ್	೧೨-೦೦
೨. ಅರಗಿನ ಬೆಟ್ಟ : ಹೂಲಿ ಶೇಖರ್	೧೦-೦೦
೩. ದಫನ್ : ಹೂಲಿ ಶೇಖರ್	೯-೦೦
೪. ಅಂಧಯುಗ : ಧರ್ಮವೀರ್ ಭಾರತೀ	೨೦-೦೦
೫. ಕರಿಭಂಟ : ನಿಸರ್ಗಪ್ರಿಯ	೨೦-೦೦
೬. ಕೋರ್ಟ್ ಮಾರ್ಶ್ಯಲ್ : ಸ್ವದೇಶ್ ದೀಪಕ್	೬೦-೦೦
೭. ಪ್ರಸನ್ನರ ನಾಲ್ಕು ನಾಟಕಗಳು : ಪ್ರಸನ್ನ	೧೪೦-೦೦
೮. ಶಸ್ತ್ರ ಸಂತಾನ : ರಾಮೇಶ್ವರ್ ಪ್ರೇಮ್	೬೦-೦೦
೯. ಹ್ಯಾಮ್ಲೆಟ್ : ಶೇಕ್ಸ್‌ಪಿಯರ್ : ಪ್ರಸನ್ನ	೮೦-೦೦
೧೦. ತದ್ರೂಪಿ : ಪ್ರಸನ್ನ	೫೦-೦೦
೧೧. ಚೋರ ಚರಣದಾಸ : ಹಬೀಬ್ ತನ್‌ವೀರ್	೬೦-೦೦

ಸಂಕಲನ

ಮಾರ್ಚ್ + ಏಪ್ರಿಲ್ ೨೦೦೫

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ

ಧಾರವಾಡ - ೫೮೦ ೦೦೪

R N I No. KARKAN 14160 / 10 / 1 / 2002 - TC

SANKALANA :

A Kannada Literary Magazine
Volume 4, Issue 2 : March + April 2005
Edited by Dr. Siddhaling Pattanshetti
Hoomane, Shridevinagar, Vidyagiri, Dharwad - 580 004

Printed by Saraswati Offset Printers, Shivaji Road, Dharwad - 580 001

•
•
•

ಸಂಕಲನ - ೨೦ : ಸಂಪುಟ ೪, ಸಂಚಿಕೆ ೨ : ಮಾರ್ಚ್ + ಏಪ್ರಿಲ್ ೨೦೦೫
ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಡಾ. ಹೇಮಾ ಪಟ್ಟಣಶೆಟ್ಟಿ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪
✆ : ೦೮೩೬-೨೪೬ ೨೭೧೮

•

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ
ಅಭಿಪ್ರಾಯಗಳ ಹೊಣೆ, ಹಕ್ಕು ಆಯಾ ಲೇಖಕರವು.

•

೨೦೦೫ ರಿಂದ ಒಟ್ಟು ೩ ವರ್ಷಗಳ ಚಂದಾ ರೂ. ೫೦೦/- (ಚೆಕ್ ೫೫೦/-)
ವಾರ್ಷಿಕ ಚಂದಾ ರೂ. ೨೦೦/- (ಚೆಕ್ ೨೨೦/-)

•

•

ಡಿಟಿಪಿ : ಬಿಜಿಗ್ರಾಫಿಕ್ಸ್, ೧ನೇ ಕ್ರಾಸ್, ಜೋಶಿ ಫಾರ್ಮ್, ಧಾರವಾಡ - ೫೮೦ ೦೦೮

ಸಂಪಾದಕರ ಮಾತು

ಸಂಕಲನ-೧೯ ರಿಂದ ನಾವು ಆರಂಭಿಸಿದ 'ನನ್ನ ಶಾಲಾಗುರುಗಳು' ಗೌರವ ಮಾಲಿಕೆಗೆ ಉತ್ತಮ ಪ್ರತಿಕ್ರಿಯೆ ಬಂದಿದೆ. ಇದೊಂದು ಗೌರವಾಭಿವ್ಯಕ್ತಿಯ ಅತ್ಯುತ್ತಮ ಸಾಂಸ್ಕೃತಿಕ ದಾಖಲೆ ಎಂದು ಮೆಚ್ಚಿದ ಅನೇಕ ಮಿತ್ರರು ಒಳ್ಳೆಯ ಲೇಖನಗಳನ್ನು ಕಳಿಸಿದ್ದಾರೆ.

ಮುಖ್ಯವಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾಹಂತದ ಗುರುಗಳ ಬಗ್ಗೆ ಬರೆಯಬೇಕು ಎಂದು ಕಳೆದ ಸಂಚಿಕೆಯ ಸಂಪಾದಕೀಯದಲ್ಲಿ ನಾವು ಅಪೇಕ್ಷಿಸಿದ್ದೆವು. ಆದರೆ ಮಹಾವಿದ್ಯಾಲಯ ಮತ್ತು ವಿಶ್ವವಿದ್ಯಾಲಯದ ಶಿಕ್ಷಣ ವಲಯವನ್ನೂ ಒಳಗೊಂಡು, ಅಲ್ಲಿ ತಮಗೆ ಶ್ರೇಯಸ್ಸನ್ನು ನೀಡಿದ, ಬದುಕನ್ನು ಕಟ್ಟಿದ, ಇಂದಿಗೂ ಸ್ಪೃಹಣೀಯರೆನಿಸಿದ ಗುರುವರ್ಗವನ್ನು ನೆನೆಸಿ ಕೆಲವರು ಲೇಖನ ಕಳಿಸಿದ್ದಾರೆ. ನಿಜದ ಅರ್ಥದಲ್ಲಿ ಗುರುತ್ವವನ್ನು ಸಾಧಿಸಿದವರು, ಬೋಧಿಸಿದವರು, ಬಿತ್ತಿದವರು ಎಲ್ಲಿದ್ದರೂ ಗುರುಗಳೇ. ಅಂಥವರ ಬಗ್ಗೆ ಬಂದ ಲೇಖನಗಳನ್ನೂ ಸಂಕಲನ ಪ್ರಕಟಿಸಲಿದೆ. ಒಟ್ಟಿನಲ್ಲಿ ಮುದ್ರಣದಲ್ಲಿ ೧೦-೧೨ ಪುಟ ಮಿಕ್ಕದಂತೆ ಲೇಖಕರು ತಮ್ಮ ಲೇಖನಗಳನ್ನು ಮಿತಿಗೊಳಿಸಿಕೊಳ್ಳಲಿ.

ಕವಿರಾಜಮಾರ್ಗ ಮಂಥನದ ವಿಶೇಷ ಲೇಖನಮಾಲಿಕೆಯ ೩ ನೇ ಲೇಖನ ಈ ಸಂಚಿಕೆಯಲ್ಲಿ ಪ್ರಕಟವಾಗಿದೆ. ೨ ಲೇಖನಗಳು ಅತ್ಯಗತ್ಯದ ವಿಶಿಷ್ಟ ವಿಷಯವ್ಯಾಪ್ತಿ ಹೊಂದಿದ್ದರಿಂದ ಅನಿವಾರ್ಯವಾಗಿ ಸ್ವಲ್ಪ ದೀರ್ಘವಾಗಿದ್ದುವು. ಇನ್ನು ಮುಂದಿನವು ೧೦-೧೨ ಪುಟಗಳ ಮಿತಿಯಲ್ಲಿಯೇ ಇರುತ್ತವೆ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಇತಿಹಾಸಗಳ ಅಧ್ಯಯನಗಳಿಗೆ ತೆರೆದುಕೊಳ್ಳುವ, ಸಂಶೋಧನೆ, ವಿಶ್ಲೇಷಣೆ, ವಿಮರ್ಶೆಗಳಿಗೆ ಒತ್ತು ಕೊಡುವ ಇಂಥ ಲೇಖನಗಳನ್ನು ಬೇರೆ ಬೇರೆ ಕ್ಷೇತ್ರಗಳಲ್ಲಿ ವ್ಯಾಸಂಗ ಮಾಡಿದವರು ಕಳಿಸುತ್ತಿದ್ದಾರೆ. ಅವು ಒಂದೊಂದಾಗಿ ಮುಂಬರುವ ಸಂಚಿಕೆಗಳಲ್ಲಿ ಪ್ರಕಟವಾಗುವುವು.

ಸಂಕಲನದಲ್ಲಿ ಪ್ರಕಟಿಸಲು ನಾಲ್ಕಾರು ಉತ್ತಮ ನಾಟಕಗಳು ಬಂದಿದ್ದುವು. ಅವು ಮುದ್ರಣದಲ್ಲಿ ೨೦-೨೨ ಪುಟಗಳ ಮಿತಿಯನ್ನೂ ಮೀರುತ್ತಿದ್ದವು. ಹೀಗಾಗಿ ಅತ್ಯಂತ ವಿಷಾದದಿಂದ ಅವನ್ನು ಮರಳಿಸಬೇಕಾಯಿತು. ಸಂಕಲನದ ೮೦ ಪುಟಗಳ ಮಿತಿಯಲ್ಲಿ ವೈವಿಧ್ಯವನ್ನು ಉಳಿಸಿಕೊಂಡು, ಚಿಕ್ಕ ಅಕ್ಷರಗಳನ್ನು ಬಳಸಿಕೊಂಡು, ಒಂದಿಷ್ಟೂ ಸ್ಥಳವನ್ನೂ ವ್ಯರ್ಥಗೊಳಿಸದಂತೆ ಕನಿಷ್ಠ ೮-೧೦ ಲೇಖನ, ಕವನ; ೧೦-೧೨ ಪುಸ್ತಕ ಪರಿಶೀಲನೆ ಇತ್ಯಾದಿ ನಿಯಮಿತವಾಗಿ ಕೊಡುತ್ತ ಬಂದಿದ್ದೇವೆ. ಆದ್ದರಿಂದ ಲೇಖಕರು ತಮ್ಮ ಲೇಖನಗಳನ್ನು ೧೦-೧೨ ಪುಟಗಳಿಗೆ ಸೀಮಿತಗೊಳಿಸಿಕೊಂಡರೆ ಒಳ್ಳೆಯದು.

೧ ಮಾರ್ಚ್ ೨೦೦೫
ಹೂಮನೆ, ಧಾರವಾಡ-೪

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

ಪರಿವಿಡಿ

೧. ನನ್ನ ಶಾಲಾ ಗುರುಗಳು : *ಟಿ. ಆರ್. ರಾಧಾಕೃಷ್ಣ* ೫ - ೧೪

೨. ನನ್ನ ಅಪ್ಪ ಅಮ್ಮ : *ಜಿ. ಟಿ. ಶ್ರೀಧರ ಶರ್ಮ* ೧೫ - ೨೧

೩. ನನ್ನ ಅಪ್ಪಯ್ಯ ಮತ್ತು ಅಮ್ಮ : *ಪ್ರೇಮಾ ಭಟ್* ೨೨ - ೨೬

೪. ಐದು ಕವಿತೆಗಳು : *ಜ್ಯೋತಿ ಗುರುಪ್ರಸಾದ್* ೨೬ - ೨೭

೫. ದ್ರಾವಿಡ ಸಂಬಂಧ -೧ : *ಷ. ಶೆಟ್ಟರ್* ೨೮ - ೪೪

೬. ಹನ್ನೆರಡು ಹನಿಗಳು : *ಸಿ. ಪಿ. ಕೃಷ್ಣಕುಮಾರ್* ೪೫ - ೪೬

೭. ಕನ್ನಡದಲ್ಲಿ ಈಚಿನ ಸಂಶೋಧನ ಪ್ರಬಂಧಗಳು : *ಹರಿಕೃಷ್ಣ ಭರಣ್ಯ* ೪೬ - ೫೨

೮. ಮೂರು ಕವಿತೆಗಳು : *ಎಲ್. ಸಿ. ಸುಮಿತ್ರಾ* ೫೩ - ೫೪

೯. ಕುವೆಂಪು ಸಾಹಿತ್ಯದಲ್ಲಿ ಶೂದ್ರ ಸಂಸ್ಕೃತಿ-ದರ್ಶನ : *ಮನು ಬಳಿಗಾರ್* ೫೫ - ೬೩

೧೦. ಸಾವೆಂಬ ಅನಿವಾರ್ಯತೆ : *ಯು. ಎನ್. ಸಂಗನಾಳಮಠ* ೬೪ - ೬೯

೧೧. ಪುಸ್ತಕ ಪರಿಶೀಲನೆ : ೭೦ - ೭೮

೧. ಗತಿ-ಚಿತ್ರ : ಪ್ರಮೀಳಾ ಚೊಕ್ಕಾಡಿ, ೨. ಹೊಸ್ತಿಲು ಹಿಮಾಲಯದ ಮಧ್ಯೆ : ವಾಸುದೇವ ನಾಡಿಗ್ —*ದುಷ್ಯಂತ ನಾಡಗೌಡ*

೩. ಕಣ್ಣಳತೆ : ಟಿ. ಸಿ. ಪೂರ್ಣಿಮಾ —*ಬಂದಗದ್ದೆ ರಾಧಾಕೃಷ್ಣ*

೪. ಇಬ್ಬನಿ : ಅಪ್ಪಾಸಾಹೇಬ ಅಲಿಬಾದಿ —*ದೇಶಪಾಂಡೆ ಸುಬ್ಬರಾಯ*

೫. ಸುತ್ತಮುತ್ತ : ಎಚ್. ಎ. ಪಾರ್ಶ್ವನಾಥ್ —*ಮೋತಿಲಾಲ ಹಲವಾಯಿ*

೬. ತೇಜಸ್ವಿ ಕಥನ : ಟಿ. ಪಿ. ಅಶೋಕ —*ನಾ. ದಾಮೋದರ ಶೆಟ್ಟಿ*

೭. ನಮ್ಮೊಳಗಿನ ನಾವು : ವನಮಾಲಾ ಕಟ್ಟೇಗೌಡರ —*ಜಿ. ಟಿ. ಶ್ರೀಧರ ಶರ್ಮ*

೮. ಬಡಜನರು : ಅನು. ಶ್ರೀನಿವಾಸ ವಿ. ಸುತ್ರಾವೆ —*ಶಿವಶಂಕರ ಹಿರೇಮಠ*

೯. ಹೊನ್ನ ಬೆಳಕೆ ಬಾ : ಪಾರ್ವತಿ ಜಿ. ಐತಾಳ್ —*ಎಲ್. ವಿ. ಶಾಂತಕುಮಾರಿ*

೧೦. ಆಳು ಕೂಗಿನ ಹಕ್ಕಿ : ಬಸವರಾಜ ವಕ್ಕುಂದ —*ಸುಮಿತ್ರಾ ಹಲವಾಯಿ*

೧೧. ಅಪ್ಪ ಮತ್ತು ಮಣ್ಣು : ಶಶಿಕಲಾ ವೀರಯ್ಯಸ್ವಾಮಿ —*ಬಸವರಾಜ ವಕ್ಕುಂದ*

೧೨. ಸಂಕಲನ : ಅನಿಸಿಕೆ : ೭೯

೧೩. ಕಡೇಪುಟ : *ಸಿದ್ಧಲಿಂಗ ಪಟ್ಟಣಶೆಟ್ಟಿ* ೮೦

ನನ್ನ ಶಾಲಾ ಗುರುಗಳು

ಟಿ. ಆರ್. ರಾಧಾಕೃಷ್ಣ

ನನ್ನ ಪ್ರಾಥಮಿಕ, ಮಾಧ್ಯಮಿಕ ಶಾಲಾ ಜಗತ್ತನ್ನು ಮತ್ತು ಅಲ್ಲಿನ ಉಪಾಧ್ಯಾಯರನ್ನು ಕುರಿತು ಯೋಚಿಸುವಾಗ ಅಂದಿನ ಕಾಲ, ಅಂದಿನ ಚಿತ್ರದುರ್ಗ, ಅಂದಿನ ಜನ ಇತ್ಯಾದಿಯಾಗಿ ಹಲವಾರು ನೆನಪುಗಳು ಕಾಡುತ್ತವೆ. ಈ ನೆನಪುಗಳನ್ನು ದಾಖಲಿಸದಿದ್ದರೆ ನನ್ನ ಪ್ರಾಥಮಿಕ ಶಾಲಾ ಜಗತ್ತು ಅರ್ಥಪೂರ್ಣವೆನಿಸುವುದಿಲ್ಲ. ೧೯೪೦ ರಲ್ಲಿ ನಾನು ಹುಟ್ಟಿದ್ದು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಅದೊಂದು ರೀತಿಯ ಆವೇಶ, ಉದ್ವಿಗ್ನತೆ, ಹೋರಾಟ, ಯುದ್ಧ, ರೋಗರುಜಿನಗಳು ಬಹುಶಃ ದೇಶವನ್ನೇ ತುಂಬಿಕೊಂಡಂತೆ ನಮ್ಮ ಚಿತ್ರದುರ್ಗದಂತಹ ಪುಟ್ಟ ಊರನ್ನೂ ತುಂಬಿಕೊಂಡಿದ್ದಿತು. ನನಗೆ ನೆನಪಿರುವಂತೆ ೧೯೪೪-೪೫ ರ ಅವಧಿಯಲ್ಲಿ ಪ್ಲೇಗ್ ಪಿಡುಗಿನಿಂದ ನಮ್ಮೂರಿನ ಜನ ಕಳವಳದಿಂದ ಕೂಡಿ ಭಯಗ್ರಸ್ತರಾಗಿದ್ದರೆಂದು ಕಾಣುತ್ತದೆ. ಅದನ್ನು ನಾನು ಅರ್ಥ ಮಾಡಿಕೊಳ್ಳುವ ವಯಸ್ಸಲ್ಲ. ನಾವಿದ್ದ ಮನೆಯಿಂದ ಸ್ವಲ್ಪ ದೂರದಲ್ಲಿಯೇ ಶೃಂಗೇರಿಮಠದಿಂದ ಹಾಯ್ದುಹೋದ ಕೋಟೆಯ ಸಾಲಿನ ಕೆಳಭಾಗದಲ್ಲಿ ಈಗ ಕರುವಿನಕಟ್ಟೆಯ ಪ್ರಾಥಮಿಕ ಶಾಲೆಯಿದೆ. ಆಗ ಇದು ಕೋಟೆಗೆ ಹೊಂದಿಕೊಂಡಂತೆ ಇದ್ದ ಬಯಲು ಪ್ರದೇಶ. ಇಲ್ಲಿ ಈ ಬಯಲು ಪ್ರದೇಶದಲ್ಲಿ ಪ್ಲೇಗಿನ ಪಿಡುಗಿಗೆ ಹೆದರಿ ನಮ್ಮ ಮನೆಯವರು, ನಮ್ಮ ಅಜ್ಜಿ ಮನೆಯವರು ಮತ್ತು ಇನ್ನೂ ಅನೇಕರು ಕ್ಯಾಂಪುಗಳನ್ನು ಹಾಕಿದ್ದೆವು. ಈ ಕ್ಯಾಂಪಿನಿಂದ ನನ್ನ ಅಣ್ಣ (ಬಹುಶಃ ಆಗ ಅವನು ಒಂದು ಅಥವಾ ಎರಡನೇ ತರಗತಿಯಿದ್ದಿರಬೇಕು) ಸೊಪ್ಪಿನ ಮಾರ್ಕೆಟ್ ಬಳಿ ಇರುವ ನಾರ್ಮಲ್ ಶಾಲೆಗೆ ಬರುತ್ತಿದ್ದ. ನಾನು ಯಾವ ತರಗತಿಗೂ ಸೇರಿರಲಿಲ್ಲವಾದರೂ, ಅವನ ಜೊತೆಗೆ ಕಂಪನಿ ಕೊಡಲೆಂದು ಶಾಲೆಗೆ ಹೋಗುತ್ತಿದ್ದೆ. ಬಳಿಕ ಪ್ಲೇಗಿನ ಗಲಾಟೆ ಯಾವಾಗ ಕಡಿಮೆಯಾಯಿತೋ ಗೊತ್ತಿಲ್ಲ. ಎಲ್ಲರೂ ತಮ್ಮತಮ್ಮ ಮನೆಗಳನ್ನು ಮೆತ್ತಿ, ಬಳಿದುಕೊಂಡು ಸುಣ್ಣ ಬಣ್ಣ ಕಾರಣೆಗಳಿಂದ ಮನೆಗಳನ್ನು ಶುಚಿಗೊಳಿಸಿಕೊಂಡು ಅವರವರ ಮನೆಗಳಿಗೆ ಹಿಂದಿರುಗಿದ್ದೆವು.

ಆಗ ಎರಡನೇ ಮಹಾಯುದ್ಧ ಭೀಕರವಾಗಿ ನಡೆಯುತ್ತಿದ್ದ ಕಾಲವೆಂದು ಕಾಣುತ್ತದೆ. ದೊಡ್ಡವರೆಲ್ಲ ಹಿಟ್ಲರ್‌ನ ಸೋಲು ಗೆಲುವುಗಳನ್ನು, ಇಂಗ್ಲಿಷರ ಸಾಹಸಗಳನ್ನು ಹಾಗೂ ಇನ್ನೂ ಏನೇನೋ ವಿಷಯಗಳನ್ನು ಕುರಿತು ಮಾತನಾಡುತ್ತಿದ್ದರು. ಆಗ ಬ್ರಿಟಿಷ್ ಸರಕಾರ ಕರ್ಫ್ಯೂ ವಿಧಿಸಿತ್ತೆಂದು ಕಾಣುತ್ತದೆ. ನಾವೆಲ್ಲಾ ಗೃಹಬಂಧಿಗಳಂತೆ ಮನೆಗಳಲ್ಲೇ ಇರುತ್ತಿದ್ದೆವು. ಹೊರಗೆ ಇಣುಕಿದರೆ ಸಾಕು, ಹಿರಿಯರಿಂದ ಹೊಡೆತ ಬೀಳುತ್ತಿದ್ದವು. ನಮ್ಮ ಮನೆಯಿಂದ ಸ್ವಲ್ಪ ದೂರಕ್ಕೆ ಇತಿಹಾಸ ಪ್ರಸಿದ್ಧವಾದ ರಂಗಯ್ಯನ ಬಾಗಿಲು, ದೊಡ್ಡಪೇಟೆ ಇವೆ. ಆ ರಂಗಯ್ಯನ ಬಾಗಿಲಿನ ಮೂಲಕ ಅನೇಕ ಸ್ವಾತಂತ್ರ್ಯ ಹೋರಾಟಗಾರರ ಮೆರವಣಿಗೆಗಳು ಹಾಯ್ದು ಹೋಗುತ್ತಿದ್ದವು. :

"ದಂಡು ಬಂತು ದಂಡು
ಯಾವೂರು ದಂಡು?
ಮೆದಿಕೆಪುರದ ದಂಡು."

ಹೀಗೆ ಸಾಮೂಹಿಕವಾಗಿ ಹಳ್ಳಿಗಳಿಂದ ಗಾಂಧೀಜಿಯ ಕರೆಗೆ ಮನ್ನಣೆ ಕೊಟ್ಟು, ಅನೇಕರು ಮೆರವಣಿಗೆಗಳಲ್ಲಿ ಹಾಡುತ್ತಾ ದೊಡ್ಡಪೇಟೆಯಲ್ಲಿ ಹೋಗುವುದು ನಮಗೆ ಕೇಳಿಸುತ್ತಿತ್ತು. ತುಂಬ ಚಿಕ್ಕವರಾದ ನಾವು ಅದನ್ನು ನೋಡುವಂತಿರಲಿಲ್ಲ. ಮನೆಗಳಲ್ಲಿ 'ಜಾತಿಗಳನ್ನೆಲ್ಲ ಕೆಡಿಸಿಬಿಟ್ಟ ಗಾಂಧಿ' ಎಂದು ಕೆಲವರು ಬಯ್ಯುತ್ತಿದ್ದರೆ, ಮತ್ತೆ ಕೆಲವರು ಗಾಂಧೀಜಿಯನ್ನು ಕೊಂಡಾಡುತ್ತಿದ್ದುದು ನಮಗೆ ಕೇಳಿ ಬರುತ್ತಿತ್ತು. ಎಲ್ಲೆಡೆಯೂ 'ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಲಿ' ಎಂಬ ಕೂಗು ಕೇಳಿಬರುತ್ತಿತ್ತು. ಎಲ್ಲರ ಮನಸ್ಸಿನಲ್ಲಿಯೂ ಸ್ವಾತಂತ್ರ್ಯದ ಹಂಬಲ ಬಹಳ ಗಟ್ಟಿಯಾಗಿರುವಂತೆ ತೋರುತ್ತಿತ್ತು. ಎಲ್ಲಿ ನೋಡಿದರೂ 'ಮಹಾತ್ಮಾ ಗಾಂಧೀ ಕೀ ಜೈ', 'ಜವಾಹರಲಾಲ್ ನೆಹರೂ ಕೀ ಜೈ', 'ಸುಭಾಸಚಂದ್ರ ಬೋಸ್‌ಕೀ ಜೈ', 'ಭಾರತ್‌ಮಾತಾಕೀ ಜೈ'— ಎಂಬಿತ್ಯಾದಿ ಜೈಕಾರಗಳು ಕೇಳಿಬರುತ್ತಿದ್ದವು. ಇದೆಲ್ಲ ಸ್ವಾತಂತ್ರ್ಯ ಹೋರಾಟದ ಸಂಗತಿಗಳೆಂದು ನಮಗೆ ತಿಳಿದಿರಲಿಲ್ಲ.

ಇಂತಹ ದೇಶದ ಸ್ವಾತಂತ್ರ್ಯದ ಸಂದರ್ಭ ಮತ್ತು ಮಹಾತ್ಮಾಗಾಂಧಿಯ ನೆನಪಿನಿಂದಲೇ ನನ್ನ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸದ ಮತ್ತು ಅಧ್ಯಾಪಕರ ನೆನಪು ತುಂಬಿಕೊಂಡಿದೆ. ನಾನು ಒಂದು ಅಥವಾ ಎರಡನೇ ತರಗತಿಯನ್ನು ಹೇಗೆ ಓದಿದೆ; ನನ್ನ ಅಧ್ಯಾಪಕರು ಎಂಥವರು ಎಂಬುದು ನನಗೆ ಒಂದು ಸ್ಪಷ್ಟಚಿತ್ರ ಮೂಡುವುದಿಲ್ಲ. ಆದರೆ ೧೯೪೭ ರ ಆಗಸ್ಟ್ ೧೫ ರ ಸ್ವಾತಂತ್ರ್ಯ ದಿನಾಚರಣೆ ಮತ್ತು ನನ್ನ ಪ್ರಾಥಮಿಕ ಶಾಲೆ ನನಗೆ ಚೆನ್ನಾಗಿ ನೆನಪಿದೆ. ಎಲ್ಲಾ ಕಡೆಯೂ ಸ್ವಾತಂತ್ರ್ಯದ ಜೈಕಾರ ಕೇಳಿಸುತ್ತಿತ್ತು ಎಂದೆನಲ್ಲ, ಅದು ಮನೆಮನೆಗಳಲ್ಲಿಯೂ ಮಾತಾಗಿತ್ತು ಎನ್ನಿಸುತ್ತದೆ. ನಮ್ಮ ಮನೆಯ ತೊಟ್ಟಿಲಿನಲ್ಲಿ ಮಲಗಿದ್ದ ಹತ್ತು ಹನ್ನೊಂದು ತಿಂಗಳ ಮಗು ನನ್ನ ತಮ್ಮ ರಾಮಕೃಷ್ಣ ಈ ಜೈಕಾರಗಳನ್ನು ಕೇಳಿ "ಜೈ" ಎಂದು ಉದ್ಗರಿಸಿದ್ದನಂತೆ! ಪೊಲೀಸ್ ಕೆಲಸದಲ್ಲಿದ್ದ ನನ್ನ ತಂದೆ ವ್ಯಕ್ತವಾಗಿ ಪೊಲೀಸ್ ಆಗಿದ್ದರೆ ಗುಪ್ತವಾಗಿ ದೇಶಪ್ರೇಮಿಯಾಗಿದ್ದರು. ಅವರು ತೊಟ್ಟಿಲಮಗು ಹೀಗೆ ಜೈಕಾರ ಮಾಡಿದ್ದನ್ನು ಕಂಡು ಗಾಂಧಿ ದೇಶಕ್ಕೆ ಸ್ವಾತಂತ್ರ್ಯ ತಂದೇ ತರುತ್ತಾನೆ ಎಂದು ಖುಷಿಯಿಂದ ಅಮ್ಮನ ಬಳಿ, ನೆರೆಹೊರೆಯವರ ಬಳಿ ಹೇಳಿಕೊಂಡು ಕುಣಿದಾಡಿಬಿಟ್ಟಿದ್ದರಂತೆ! ಅದಕ್ಕೆ ಸರಿಯಾಗಿ ೧೯೪೭ ರ ಆಗಸ್ಟ್ ೧೫ ರಂದು ಸ್ವಾತಂತ್ರ್ಯ ಸಿಕ್ಕಾಗ ಇಡೀ ದೇಶ ಸಡಗರ ಸಂಭ್ರಮದಿಂದ ಈ ಸ್ವಾತಂತ್ರ್ಯ ವನ್ನು ಆಚರಿಸುತ್ತಿರುವಾಗ, ಊರೂರುಗಳಲ್ಲಿ, ಕೇರಿಕೇರಿಗಳಲ್ಲಿ, ಮನೆಮನೆಗಳಲ್ಲಿಯೂ ಈ ಸ್ವಾತಂತ್ರ್ಯದ ಹಬ್ಬ ಅತ್ಯಂತ ಖುಷಿಯಿಂದ, ಸಡಗರ, ವೈಭವಗಳಿಂದ ಆಚರಿಸಲ್ಪಟ್ಟಿತು ಎಂದು ನನಗನ್ನಿಸುತ್ತದೆ. ಪ್ರತಿ ಮನೆಯಲ್ಲಿಯೂ ಮಾವಿನ ತೋರಣ ಕಟ್ಟಿದ್ದರೋ ಇಲ್ಲವೋ ನನಗೆ ನೆನಪಿಲ್ಲವಾದರೂ ಎಲ್ಲರ ಮನೆಯ ಮೇಲೂ ಒಂದೊಂದು ತ್ರಿವರ್ಣಧ್ವಜ ಹಾರುತ್ತಿತ್ತು. ಆ ದಿವಸ ಎಲ್ಲರ ಮನೆಗಳಲ್ಲಿಯೂ ನಿಜವಾಗಿಯೂ ಒಂದು ದೊಡ್ಡ ಹಬ್ಬ. ಎಲ್ಲರ ಮನೆ ಗಳಲ್ಲಿಯೂ ಸಿಹಿಯಡುಗೆ. ಆಗ ನನಗೆ ಚೆನ್ನಾಗಿ ನೆನಪಿರುವಂತೆ, ನಮ್ಮ ಮನೆಯಲ್ಲಿ ಆ ದಿನ ಲಾಡುವಿನ ಘಮಘಮ!

ನನಗೆ ನನ್ನ ಶಾಲೆ ಮತ್ತು ಪ್ರಥಮ ಸ್ವಾತಂತ್ರ್ಯ ದಿನಾಚರಣೆ ಯಾಕೆ ನೆನಪಿದೆಯೆಂದರೆ, ನಾನು ಆ ದಿನ ಶಾಲೆಗೆ ಹೋಗಿರಲಿಲ್ಲ. ಆ ದಿನ ನನಗೆ ಜ್ವರ ಬಂದಿತ್ತು. ಜೊತೆಗೆ ಮನೆಯಲ್ಲಿ,

ಬೀದಿಯಲ್ಲಿ ಹಬ್ಬ ಮಾಡಿದ್ದರಿಂದ ಶಾಲೆಗೆ ಹೋಗುವ ಅಗತ್ಯವಿಲ್ಲವೆಂದು ಅಮ್ಮ ನನ್ನನ್ನು ಶಾಲೆಗೆ ಕಳಿಸಿರಲಿಲ್ಲ. ಸುಮಾರು ಹತ್ತೂವರೆ, ಹನ್ನೊಂದರ ಸಮಯಕ್ಕೆ ನಮ್ಮ ಶಾಲೆಯಿಂದ ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದ ದಾಸಪ್ಪ ಮತ್ತು ಇನ್ನೊಬ್ಬ ಹುಡುಗನನ್ನು ಹೆಡ್ಮಾಸ್ಟರರು ಮತ್ತು ಇತರ ಮೇಷ್ಟ್ರುಗಳು ನಮ್ಮ ಮನೆಗೆ ಕಳಿಸಿದ್ದರು. ನನ್ನನ್ನು ಕರೆದುಕೊಂಡು ಹೋಗಲು ಬಂದಿರುವುದಾಗಿ ಅವರು ಹೇಳಿದಾಗ, ನಾನು ಅಳತೊಡಗಿದೆ. ದಾಸಪ್ಪ ಮತ್ತು ಅವನ ಜೊತೆಯ ಹುಡುಗ ಪುನಃ ಶಾಲೆಗೆ ಹೋಗಿ ಕೆಲವೇ ನಿಮಿಷಗಳಲ್ಲಿ ನಮ್ಮ ಮನೆಗೆ ವಾಪಾಸು ಬಂದರು. "ಮೇಷ್ಟ್ರು ಮತ್ತು ಹೆಡ್ಮೇಷ್ಟ್ರು ಇವನನ್ನು ಎತ್ತಿಕೊಂಡು ಬರಲಿಕ್ಕೆ ಹೇಳಿದಾರೆ. ನಮ್ಮ ಜೊತೆಗೆ ಕಳಿಸಿ. ಇವನನ್ನು ಎಷ್ಟೊತ್ತಿದ್ರು ಕರ್‍ಕಂಡು ಬರಬೇಕು ಅಂತ ಮೇಷ್ಟ್ರು ಹೇಳಿದಾರೆ. ಇವನನ್ನ ಈಗ್ಲೇ ಕರಕೊಂಡು ಹೋಗಿ ಈಗ್ಲೇ ಕರ್‍ಕಂಡು ಬಂದ್ಬಿಡ್ತೀವಿ" ಅಂತ ಬಲವಂತ ಮಾಡಿದರು. ಬಳಿಕ ನಾನು ದಾಸಪ್ಪನ ಹೆಗಲ ಮೇಲೆ ಕುಳಿತೆ. ಅವರು ಉತ್ಸಾಹದಿಂದ ಓಡೋಡುತ್ತ ಅನತಿ ದೂರದಲ್ಲಿದ್ದ ಶಾಲೆಯನ್ನು ಮುಟ್ಟಿದರು. ಅಲ್ಲಿ ಹೆಡ್ಮೇಷ್ಟ್ರು ಮತ್ತಿತರ ಮೇಷ್ಟ್ರುಗಳು ಅಟೆಂಡೆನ್ಸ್ ಪುಸ್ತಕ ಹಿಡಿದುಕೊಂಡು ನನ್ನ ಹೆಸರಿನ ಮುಂದೆ ಟಿಕ್ ಹಾಕಿಕೊಂಡು ದಪ್ಪ ಲಾಡು ಉಂಡೆಯೊಂದನ್ನು ಕೊಟ್ಟರು. ಅದು, ಒಂದು ಕಾಲದಲ್ಲಿ ಕೊಡುತ್ತಿದ್ದ ತಿರುಪತಿಯ ಲಾಡುವಿನ ಎರಡು ಮೂರು ಪಟ್ಟು ದೊಡ್ಡದಿತ್ತೆಂದರೆ ಅದರ ಗಾತ್ರವನ್ನು ಊಹಿಸಿಕೊಳ್ಳಿ! ಇಂತಹ ಲಾಡುವನ್ನು ಪ್ರಾಮಾಣಿಕವಾಗಿ ಕೊಟ್ಟು ಕೃತಾರ್ಥರಾದೆವೆಂದು ಆ ಮೇಷ್ಟ್ರುಗಳು ಭಾವಿಸಿದ್ದರೆ, ಈ ಕಡೆ ನಾನು ಆ ಲಾಡುವನ್ನು ಸಂಜೀವಿನಿ ಪರ್ವತವನ್ನು ಹೊತ್ತ ಆಂಜನೇಯ ನಂತೆ ಬಲಗೈಲಿ ಹಿಡಿದು ಮತ್ತೆ ದಾಸಪ್ಪನ ಹೆಗಲೇರಿ ನಗುನಗುತ್ತಾ ಮನೆಯ ಬಳಿ ಬಂದು ಇಳಿದೆ. ಹೀಗೆ ಸಿಹಿಯಾದ ಘಟನೆಯೊಂದಿಗೆ ನನ್ನ ಪ್ರಾಥಮಿಕ ಶಾಲಾ ಜೀವನದ ನೆನಪು ಆರಂಭಗೊಳ್ಳುತ್ತದೆ.

ಪ್ರಾಥಮಿಕ ಶಾಲಾ ಜೀವನದಲ್ಲಿ ನನಗೆ ನೆನಪಿರುವಂತೆ ಅಂದಿನ ನಮ್ಮ ಶಾಲೆಯಲ್ಲಿ ಮಹಾ ನಿಪುಣರೂ, ಸೃಜನಶೀಲರೂ ಆದ ಅಧ್ಯಾಪಕರು ಇದ್ದಂತೆ ನನಗನ್ನಿಸುವುದಿಲ್ಲ. ಅದರ ಜೊತೆಗೆ ಇಂದಿನ ಪ್ರಗತಿದಾಯಕ ಶಿಕ್ಷಣಪದ್ಧತಿಗೆ ಅನುಗುಣವಾಗಿ ಇರಬೇಕಾದ ಅನೇಕ ಅಗತ್ಯ ಬೇಡಿಕೆಗಳು ಅಂದಿನ ಅಧ್ಯಾಪಕರು ಪೂರೈಸಬೇಕಾಗಿರಲಿಲ್ಲವೆಂದು ಕಾಣುತ್ತದೆ. ಆದರೆ ಅವರೆಲ್ಲರು ಸರಳವಾದ ವರ್ತನೆಯುಳ್ಳವರಾಗಿದ್ದರು. ಬಹುಶಃ ಕೆಲವು ಅಧ್ಯಾಪಕರ ಸರಳತನ ನಮ್ಮೆಲ್ಲರ ಮೇಲೆ ತುಂಬಾ ಪ್ರಭಾವ ಬೀರಿದ್ದಿತೆಂದು ಕಾಣುತ್ತದೆ. ಸ್ವಾತಂತ್ರ್ಯ ಆಂದೋಳನ ಮಸಕು ಮಸಕಾಗಿ ನೆನಪಿದ್ದರೂ ಪ್ರಥಮ ಸ್ವಾತಂತ್ರ್ಯ ದಿನಾಚರಣೆ ನನ್ನ ನೆನಪಿನಲ್ಲಿ ಉಳಿದಿದೆ. ಇಂತಹ ಸ್ವಾತಂತ್ರ್ಯ ಆಂದೋಳನದ ನಾಯಕರಾದ ಗಾಂಧೀಜಿಯ ಸಾವನ್ನು ಕುರಿತಾದ ಒಂದು ಗಾಢ ನೆನಪು ನನ್ನ ಪ್ರಾಥಮಿಕ ಶಾಲಾ ಜೀವನದಲ್ಲಿ ಇದೆಯೆಂಬುದನ್ನು ಇಲ್ಲಿ ಹೇಳಬೇಕೆನಿ ಸುತ್ತದೆ. ಗಾಂಧೀಜಿಯವರು ೧೯೪೮ ರ ಜನವರಿ ೩೦ ರಂದು ಸತ್ತಾಗ ಬಹುಶಃ ನಾನು ಎರಡನೇ ಕ್ಲಾಸಿನಲ್ಲಿದ್ದಂತೆ ನೆನಪು. ಆಗಿನ ಸರ್ಕಾರಿ ಶಾಲೆಗಳಲ್ಲಿ ಓದುತ್ತಿದ್ದ ಬಹಳಷ್ಟು ಹುಡುಗರಿಗೆ ಶಿಕ್ಷಣದ ಮಹತ್ವ, ಅದರ ಆವಶ್ಯಕತೆಗಳು ತಿಳಿದಿರಲಿಲ್ಲ. ನಿಜ ಹೇಳಬೇಕೆಂದರೆ ಮಕ್ಕಳನ್ನು ಕಳುಹಿಸುತ್ತಿದ್ದ ತಂದೆತಾಯಂದಿರಿಗೂ ಈ ವಿಷಯದ ಬಗ್ಗೆ ತಿಳಿವಳಿಕೆಯಿರಲಿಲ್ಲ.

ಕ್ಲಾಸುಗಳು ಬಿಟ್ಟ ತಕ್ಷಣ ಗಂಟಲು ಹರಿಯುವಂತೆ ಅರಚುತ್ತಾ 'ಲಬೊಲಬೊ' ಎಂದು ಹೊಡೆದುಕೊಳ್ಳುತ್ತಾ, ಕೇಕೆ ಹಾಕುತ್ತ ಅತ್ಯಂತ ಖುಷಿಯಾಗಿ ಹೊರಗೆ ಬರುತ್ತಿದ್ದೆವು. ಯಾವುದೇ ರಜಾದಿನವನ್ನು ಘೋಷಣೆ ಮಾಡಿದಾಗಲಂತೂ ನಮ್ಮೆಲ್ಲರ ಕೇಕೆ ಕೂಗುಗಳು ಇನ್ನಷ್ಟು ಜಾಸ್ತಿಯಾಗುತ್ತಿತ್ತು. ಇಂಥದರಲ್ಲಿ ಜನವರಿ ೩೧ ನೇ ತಾರೀಖು ಬೆಳಿಗ್ಗೆ ನಾವು ಶಾಲೆಗೆ ಹೋಗಿ ನಮ್ಮ ನಮ್ಮ ತರಗತಿಗಳಲ್ಲಿ ಕುಳಿತುಕೊಂಡಿದ್ದಾಗ ನಮ್ಮ ತರಗತಿಯ ಅಧ್ಯಾಪಕರಾದ ತಿಪ್ಪರಾಜ ಎಂಬ ಮೇಷ್ಟ್ರು ತರಗತಿಯೊಳಕ್ಕೆ ಬಂದು ಗಾಂಧೀಜಿ ಸತ್ತ ಸುದ್ದಿಯನ್ನು ಬಿತ್ತರಿಸಿದರು. ಹಾಗೆಯೇ "ಎಲ್ಲರೂ ಶಾಂತವಾಗಿ ಕೆಳಗಿಳಿದು ಸಾಲಾಗಿ ಮನೆಗೆ ಹೋಗಿ" ಎಂದು ಹೇಳಿದರು. ರಜೆಯೆಂಬ ಘೋಷಣೆ ಕೇಳಿದ ತಕ್ಷಣವೇ ನಾವೆಲ್ಲ ಕೇಕೆ ಹಾಕುತ್ತಾ, ಕೂಗುತ್ತಾ ಕೈಚೀಲಗಳನ್ನು ಜೋಡಿಸಿಕೊಂಡು ಎದ್ದು ನಿಲ್ಲತೊಡಗಿದೆವು. ತಕ್ಷಣವೇ ನಮ್ಮ ತಿಪ್ಪರಾಜ ಮೇಷ್ಟ್ರು ಹಿಂದಿರುಗಿ ಬಂದು ಟೇಬಲ್ ಮುಂದೆ ನಿಂತು, "ಅಯ್ಯೋ ಮುಂಡೇಮಕ್ಕಳ್ರಾ, ನಮ್ಮ ದೇಶದ ತಂದೆ ಸತ್ತಿದ್ದಾನೆ ಎಂದು ಹೇಳಿದ್ರೆ ಕೇಕೆ... ಕೇಕೆ ಹಾಕ್ತಿರಲ್ರೋ... ಅಯ್ಯಯ್ಯೋ ಅಯ್ಯಯ್ಯೋ..." ಎಂದು ಗಳಗಳ ಅಳತೊಡಗಿದರು. ಅವರು ಹೋಲಿಕೆಯಲ್ಲಿ ಸ್ವಲ್ಪ ಗಾಂಧೀಜಿಯಂತೆಯೇ ಇದ್ದರು. ಹಾಗೇ ಅಳುತ್ತಾ ತಾವು ಹಾಕಿಕೊಂಡಿದ್ದ ಶಲ್ಯದಿಂದ ಕಣ್ಣೀರು ಒರೆಸಿಕೊಳ್ಳತೊಡಗಿದರು. ಕೇಕೆ ಕೂಗುಗಳು ನಿಂತು ತರಗತಿ ಸ್ತಬ್ಧವಾಯಿತು. ತಿಪ್ಪರಾಜ ಮೇಷ್ಟ್ರ ಅಂತರಾಳದ ಶೋಕ ತರಗತಿಯ ಎಲ್ಲಾ ವಿದ್ಯಾರ್ಥಿಗಳ ಅಂತಃಕರಣಗಳನ್ನು ತಟ್ಟಿತು. ನಮಗೆ ಗಾಂಧೀಜಿಯ ಬಗ್ಗೆ ಆಗ ಅರಿವಿಲ್ಲದೇ ಇದ್ದರೂ ನಮ್ಮ ಮೇಷ್ಟ್ರು ಅಳತೊಡಗಿದ್ದರಿಂದ ನಾವೂ ಅಳತೊಡಗಿದೆವು. ಆ ಅಳು ನೋವನ್ನು ತುಂಬಿಕೊಂಡೇ ಮೌನವಾಗಿ ಮನೆ ಮುಟ್ಟಿದೆವು. ನಮ್ಮ ತಿಪ್ಪರಾಜ ಮೇಷ್ಟ್ರು ನಿವೃತ್ತರಾದ ಮೇಲೆ ಯಾವಾಗಲಾದರೊಮ್ಮೆ ನೋಡಿದರೆ ನನಗೆ ನೆನಪಿಗೆ ಬರುತ್ತಿದ್ದುದು ಗಾಂಧೀಜಿಯ ಸಾವಿನಿಂದ ನಮ್ಮ ತರಗತಿಯಲ್ಲಿ ಉಂಟಾದ ಮೂಕ ಶೋಕದ ಸಂಚಾರ.

ಆಮೇಲೆ ನಾವು ನಾಲ್ಕನೆಯ ತರಗತಿಗೆ ಬಂದಾಗ ಇಕ್ಕಟ್ಟಾದ ಶಾಲೆಯಲ್ಲಿ ನಮ್ಮ ತರಗತಿಯು ಹೆಡ್ಮೇಷ್ಟ್ರ ರೂಮಿನಲ್ಲಿಯೇ ನಡೆಯುತ್ತಿತ್ತು. ಅಲ್ಲಿ ನನಗೆ ಇಬ್ಬರು ಮೇಷ್ಟ್ರುಗಳು ಚೆನ್ನಾಗಿ ನೆನಪಿದ್ದಾರೆ. ಒಬ್ಬರು ನಾಗೇಶ್ ಎಂಬ ಮೇಷ್ಟ್ರು; ಇನ್ನೊಬ್ಬರು ಶಾಲೆಯ ಹೆಡ್ಮಾಷ್ಟರಾದ ನರಸಿಂಹಾಚಾರ್ ಅವರು. ನಾಗೇಶ್ ಮೇಷ್ಟ್ರು ನಾಲ್ಕನೆಯ ತರಗತಿಯಲ್ಲಿ ಚೆನ್ನಾಗಿ ಪಾಠ ಮಾಡುತ್ತಿದ್ದರು. ಹುಡುಗರಾದ ನಾವು ಹುಡುಗಿಯರ ಜೊತೆಗೆ ಆಟ ಆಡಿದ್ದು ತಿಳಿದರೆ ಅವರು ಹುಡುಗರನ್ನು ಹೀಯಾಳಿಸುತ್ತಿದ್ದರು. ನಾವೆಲ್ಲ ತರಗತಿ ಬಿಟ್ಟ ಬಳಿಕ ನಮ್ಮ ಬೀದಿಗಳಲ್ಲಿದ್ದ ಹುಡುಗಿಯರ ಜೊತೆ ಕುಂಟಾಬಿಲ್ಲೆ, ಹಗ್ಗ ಕುಣಿಯುವುದು– ಇಂಥ ಆಟಗಳನ್ನಾಡುತ್ತಿದ್ದೆವು. ಒಮ್ಮೆ ಒಬ್ಬ ಹುಡುಗ ತರಗತಿಯಲ್ಲಿ ಹೀಗೆ ಕುಂಟಾಬಿಲ್ಲೆ ಕುಣಿಯುವ ಹುಡುಗನೊಬ್ಬನ ಬಗ್ಗೆ ನಾಗೇಶ್ ಮೇಷ್ಟ್ರ ಹತ್ರ ಚಾಡಿ ಹೇಳಿದ. ಮೇಷ್ಟ್ರು ಆ ಹುಡುಗನನ್ನು ಎಬ್ಬಿಸಿ ನಿಲ್ಲಿಸಿ, "ನಿಜ ಹೇಳಬೇಕು, ಸುಳ್ಳು ಹೇಳಬಾರದು, ನಿಜ ಹೇಳು ನೀನು ಹುಡುಗಿಯರ ಜೊತೆ ಕುಂಟಾಬಿಲ್ಲೆ ಆಡಿದೆಯಾ? ನಿಜ ಹೇಳಿದರೆ ಬಹುಮಾನ ಕೊಡುತ್ತೇನೆ" ಎಂದು ಹೇಳಿದರು. ಆ ಹುಡುಗ ಬಹುಮಾನದ ಆಸೆಗೋ ಅಥವಾ ತಾನು ಧೈರ್ಯಶಾಲಿಯೆಂದು

ತೋರಿಸಲೋ ಎಂಬಂತೆ ಎದ್ದು ನಿಂತು, `ನಿಜ ಸಾರ್ ಆಡಿದೆ` ಎಂದು ಎದೆಸೆಟೆಸಿ ಹೇಳಿದನು. ಅದಕ್ಕೆ ನಾಗೇಶ್ ಮೇಷ್ಟು ಅವನನ್ನು ಹತ್ತಿರ ಕರೆದು ನಗುತ್ತಾ ಒಂದು ಬಣ್ಣದ ಚಾಕ್‌ಪೀಸನ್ನು ಅವನ ಕೈಗಿತ್ತರು. ಪುನಃ ಅವರು, "ನಿಜ ಹೇಳಿದ ಎಲ್ಲರಿಗೂ ಇಂತಹ ಬಹುಮಾನವುಂಟು" ಎಂದರು. ಬಣ್ಣದ ಚಾಕ್‌ಪೀಸಿನ ಮೋಹಕ್ಕೆ ಮರುಳಾಗಿ ಹುಡುಗಿಯರ ಜೊತೆ ಹಗ್ಗ ಆಡಿದ, ಕುಂಟಾಬಿಲ್ಲೆ ಕುಣಿದ ಹಲವರು ನಿಧಾನವಾಗಿ ಒಬ್ಬೊಬ್ಬರೇ ಎದ್ದು ನಿಲ್ಲತೊಡಗಿದರು. ಕುಂಟಾಬಿಲ್ಲೆ, ಹಗ್ಗ ಕುಣಿಯುವುದರಲ್ಲಿ ನಿಸ್ಸೀಮನಾಗಿದ್ದ ನಾನೂ ಕೂಡ ಮೆತ್ತಗೆ ಎದ್ದು ನಿಂತೆ. ಆಮೇಲೆ ನಮ್ಮೆಲ್ಲರನ್ನು ಕರೆದು `ಹಿಡಿಯಿರಿ ಕೈ' ಎಂದು ದೊಣ್ಣೆಯಿಂದ ಎರಡೆರಡು ಹೊಡೆತಗಳನ್ನು ಕೊಟ್ಟರು. ಅದರಲ್ಲಿ ಘನಿ ಎಂಬುವವನು "ಬೆಳಿಗ್ಗೆ ಎದ್ದೇಟಿಗೆ ಖರ್ಚಿಗೆ ಸಿಗ್ತು" ಎಂದು ಗಟ್ಟಿಯಾಗಿ ಹೇಳುತ್ತಾ ಹಿಂದಿರುಗಿ ಬಂದ. ಅದಕ್ಕಾಗಿ ಪುನಃ ಅವನನ್ನು ವಾಪಾಸು ಕರೆದು ಅವನ ಖರ್ಚಿಗೆ ಮತ್ತೆರಡು ಕೊಟ್ಟು ಕಳುಹಿಸಿದರು. ಇಂತಹ ನಾಗೇಶ್ ಮೇಷ್ಟು ನಗುನಗುತ್ತಾ ಪಾಠ ಮಾಡುತ್ತಿದ್ದುದರಿಂದ ಅವರ ಬಗ್ಗೆ ನಮಗೆ ಪ್ರೀತಿಯೇ ಇದ್ದಿತು. ಆದರೆ ಇದ್ದಕ್ಕಿದ್ದಂತೆ ಒಮ್ಮೆ ಬೆಳಿಗ್ಗೆ ಕ್ಲಾಸಿಗೆ ಬಂದ ಮೇಷ್ಟನ್ನು ಸಿಐಡಿ ಪೊಲೀಸ್‌ರು ಮಫ್ತಿ ವೇಷದಲ್ಲಿ ಬಂದು ಹಿಡಿದುಕೊಂಡು ಹೋದರೆಂದು ಶಾಲೆಯಲ್ಲಿ ಗುಲ್ಲಾಯಿತು. ಏಕೆಂದರೆ ಅವರು ಆ ಕಾಲದಲ್ಲಿ ಆರೆಸಸ್‌ಗೆ ಸೇರಿದ್ದರಂತೆ. ಈ ಬಂಧನವನ್ನು ಕೇಳಿ ನಮ್ಮ ತರಗತಿಯಲ್ಲಿದ್ದ ಹುಡುಗ ಹುಡುಗಿಯರೆಲ್ಲ ಮ್ಲಾನವದನರಾಗಿ ಕುಳಿತುಬಿಟ್ಟರು. ಆದರೆ ಆಗ ನಾವು ಗಾಂಧೀಜಿಯ ಸಾವಿಗೆ ಪ್ರತಿಕ್ರಿಯಿಸಿದಂತೆ ಅಳಲಿಲ್ಲ, ಬಿಕ್ಕಲಿಲ್ಲ. ಅವರು ಯಾವಾಗ ಬಿಡುಗಡೆಯಾದರೋ ನನಗೆ ತಿಳಿಯದು.

ನಾವು ಕುಳಿತುಕೊಳ್ಳುತ್ತಿದ್ದ ತರಗತಿಯ ಒಂದು ಭಾಗವೇ ಹೆಡ್ಮಾಷ್ಟ ಕೋಣೆಯೂ ಆಗಿದ್ದಿತು. ಇಲ್ಲಿ ನಮ್ಮ ಹೆಡ್ಮಾಷ್ಟರಾದ ನರಸಿಂಹಾಚಾರ್ ಅವರಿಗೆ ಸಂಬಂಧಿಸಿದ ಮುಖ್ಯ ನೆನಪೊಂದನ್ನು ಇಲ್ಲಿ ದಾಖಲಿಸಬೇಕೆನಿಸುತ್ತದೆ. ನಾವು ಮಿಡ್ಲ್‌ಸ್ಕೂಲ್‌ಗೆ ಹೋಗಬೇಕಾದರೆ ನಾಲ್ಕನೇ ತರಗತಿಯ ಪ್ರಮೋಶನಲ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಹೋಗಬೇಕಿತ್ತು. ಇದರಿಂದ ತರಗತಿಯ ಅಧ್ಯಾಪಕರು ಮಾಡಿದ ಪರೀಕ್ಷೆಯಲ್ಲದೆ ಹೆಡ್ಮಾಷ್ಟು ಮಾಡುವ ಸಾಮಾನ್ಯಜ್ಞಾನದ ಮೌಖಿಕ ಪರೀಕ್ಷೆಯನ್ನು ಸಹ ಎದುರಿಸಬೇಕಾಗುತ್ತಿತ್ತು. ನಮಗೊ ನರಸಿಂಹಾಚಾರರು ಕಣ್ಣು ಬಿಟ್ಟರೆ ಹೆದರಿಕೆ! ಮಾತನಾಡಿಸಿದರೆ ಭಯ! ಇನ್ನು ಅವರು ಮೌಖಿಕ ಪರೀಕ್ಷೆ ಮಾಡುತ್ತಾರೆಂದರೆ ದೇವರೇ ಗತಿ! ಅಧ್ಯಾಪಕರು ನಡೆಸಿದ ಪರೀಕ್ಷೆ ಮತ್ತು ಹೆಡ್ಮಾಷ್ಟ ಸಾಮಾನ್ಯಜ್ಞಾನ ಪರೀಕ್ಷೆಯೆರಡರಲ್ಲೂ ತಾಳೆ ಹಾಕಿ ಉತ್ತೀರ್ಣತೆ, ಅನುತ್ತೀರ್ಣತೆಯನ್ನು ನಿರ್ಧರಿಸುತ್ತಿದ್ದರೇನೊ. ಅದರಿಂದ ಸರಕಾರಿ ಶಾಲೆಗಳಿಗೆ ಬರುವ ಬರುತ್ತಿದ್ದ ಹುಡುಗರಿಗೆ ಬಡತನದಿಂದ ಸೂಕ್ತ ಮಾರ್ಗದರ್ಶನಗಳಿಲ್ಲದೆ ಬಂದುದರಿಂದ `ಆ' ಎಂದರೆ `ಟೋ' ಎನ್ನಲು ಬರುತ್ತಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಒಬ್ಬ ಹುಡುಗನಿಗೆ ನರಸಿಂಹಾಚಾರ್ಯರು ಮಾಡಿದ ಮೌಖಿಕ ಪರೀಕ್ಷೆಯ ಸ್ಯಾಂಪಲ್ ಹೀಗಿದೆ :

ನರಸಿಂಹಾಚಾರ್ : "ನಿನ್ನನ್ನು ಖಂಡಿತ ಪ್ಯಾಸ್ ಮಾಡುವುದಿಲ್ಲ. ಇಗೋ ನೋಡು, ನಿನ್ನ ಉತ್ತರಪತ್ರಿಕೆಗಳು. ಹೋಗಲಿ ನಾನೀಗ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಬೇಕು."

ಹುಡುಗ : (ಮೌನ)

ನರಸಿಂಹಾಚಾರ್ : "ನಾನೇನು ಹುಲಿ ಕರಡಿ ಕಟ್ಟಿಕೊಂಡು ಬರಲಿಲ್ಲ. ಈಗ ನಾನು ಕೇಳಿದ ಪ್ರಶ್ನೆಗೆ ಉತ್ತರಿಸಿದರೆ ನಿನಗೆ ಪ್ರಮೋಶನ್. ಇಲ್ಲದಿದ್ದರೆ ನೀನು ಈ ಕ್ಲಾಸಿನಲ್ಲೇ ಇನ್ನೊಂದೊರ್ಷ ಓದಬೇಕು, ತಿಳೀತೇನಯ್ಯಾ?"

ಹೀಗೆಂದು ಆ ಹುಡುಗನನ್ನು ಒಂದು ಪ್ರಶ್ನೆ ಕೇಳಿದರು– "ಆಕಾಶವನ್ನು ನೋಡಿದೆಯೇನಯ್ಯಾ?" ಅವನು ಹೆದರುತ್ತಾ "ಹ್ಞೂ" ಎಂದ. ಇವರು, "ಹಾಗಾದರೆ ಎಲ್ಲಿದೆ ತೋರಿಸು" ಎಂದರು. ಕ್ಲಾಸ್‌ರೂಮಿನಲ್ಲಿ ಆಕಾಶ ತೋರಿಸಲು ಅಸಹಾಯಕನಾದ ಹುಡುಗ ಮೇಲುಗಡೆ ಕೈ ತೋರಿಸಿದ. ಆಗ ಹೆಡ್ಮಾಷ್ಟ್ರು "ಎಂಥಾ ದಡ್ಡ ಮುಂಡೇಗಂಡ ಇವನು, ಆಕಾಶ ತೋರಿಸು ಎಂದರೆ ಕೋಣೆಯ ಸೂರು ತೋರಿಸುತ್ತಿದ್ದಾನೆ?" ಎಂದು ಪಕ್ಕದಲ್ಲಿದ್ದ ಅಧ್ಯಾಪಕರ ಮುಖ ನೋಡಿದರು. ಮತ್ತೆ ಹುಡುಗನ ಕಡೆ ತಿರುಗಿ, "ನೋಡು ನೀನು ಆಕಾಶ ತೋರಿಸದಿದ್ದರೆ, ಫೇಲಾಗುತ್ತೀಯ. ಆಕಾಶ ನೋಡೀದೀಯಾ ತಾನೇ...? ಮತ್ತೆ ತೋರಿಸು" ಎಂದು ಗತ್ತಿನಿಂದ ಪ್ರಶ್ನೆ ಹಾಕಿ ಕೂತರು. ಆ ಹುಡುಗನಿಗೆ ಇವರಿಗೆ ಆಕಾಶ ಹೇಗೆ ತೋರಿಸಬೇಕೆಂದು ಅರಿಯದೆ ಕಿಟಕಿಯ ಕಡೆಗೆ ಕಣ್ಣುಬಿಟ್ಟ, ಕಿಟಕಿಯಲ್ಲಿ ಆಕಾಶ ಕಾಣುತ್ತಿತ್ತು! ಆದ್ದರಿಂದ ಕೈಚಾಚಿ ಕಿಟಕಿ ಕಡೆ ಕೈ ತೋರಿಸಿದ. ಹೆಡ್ಮಾಷ್ಟ್ರಿಗೆ ಈ ಉತ್ತರವೂ ಸಮಾಧಾನ ತರುವಂತಿರಲಿಲ್ಲ. ಅವರು ರೇಗುತ್ತಾ, ಉಪಾಧ್ಯಾಯರ ಕಡೆ ತಿರುಗಿ, "ಇವನ್ನ ನೋಡ್ರೀ, ಆಕಾಶ ತೋರಿಸು ಅಂದ್ರೆ ಒಂದ್ಸಾರಿ ಸೂರು ತೋರಿಸ್ತಾನೆ, ಒಂದ್ಸರಿ ಕಿಟಕಿ ತೋರಿಸ್ತಾನೆ. ಇವ್ನಿಗೆ ಪ್ರಮೋಶನ್ ನಿಲ್ಸಿಬಿಡಿ" ಎಂದು ಗರ್ಜಿಸಿಬಿಟ್ಟರು. ಹೀಗಿತ್ತು ಆಗಿನ ದರ್ಪದ ಒಂದು ಮುಖ!! ಮತ್ತು ವಿದ್ಯಾರ್ಥಿಗಳನ್ನು ಬೆಪ್ಪುತಕ್ಕಡಿ ಮಾಡಿ ನೋಡುವ ವಿಧಾನ.

ಇನ್ನು ಪ್ರಾಥಮಿಕ ಶಾಲಾ ಅಧ್ಯಾಪಕರ ಬಗ್ಗೆ ಯೋಚಿಸುವಾಗ ಐವತ್ತು ಅರವತ್ತು ವರ್ಷಗಳ ಹಿಂದಿನ ಚಿತ್ರದುರ್ಗದ ಜನಜೀವನವನ್ನು ಕೊಂಚ ಅವಲೋಕಿಸಿದರೆ ಆಗ ದೊಡ್ಡ ದೊಡ್ಡ ಅಧಿಕಾರಿಗಳಾಗಲಿ, ರಾಜಕಾರಣಿಗಳಾಗಲಿ ಮೆರೆಯುತ್ತಿದ್ದ ಕಾಲವಲ್ಲ. ಬದಲಾಗಿ ಅನೇಕ ನಿವೃತ್ತ ಉಪಾಧ್ಯಾಯರುಗಳು ಊರಿನಲ್ಲಿ ಒಂದು ರೀತಿ ಪ್ರಖ್ಯಾತಿಯಾಗಿದ್ದ ಕಾಲ ಅದು. ಅವರ ಬಗ್ಗೆ ಐತಿಹ್ಯಗಳೇ ಇದ್ದವು. ಕರಿಯಪ್ಪ ಎಂಬ ನಿವೃತ್ತ ಅಧ್ಯಾಪಕರು ಕಂಡವರಿಗೆಲ್ಲ ನಮಸ್ಕಾರ ಮಾಡುತ್ತ, ಕುಶಲ ವಿಚಾರಿಸುತ್ತ ಓಡಾಡುತ್ತಿದ್ದರು. ಯಾರಾದರೂ, "ಮೇಷ್ಟ್ರೆ ಗೊತ್ತಾಯಿತಾ? ಕೇಶವಣ್ಣನ ಮಗಳ ಮದುವೆಯಾಯ್ತು" ಎಂದರೆ ಅವರು, "ಒಳ್ಳೆಯದು, ಒಳ್ಳೆಯದು" ಎನ್ನುತ್ತಿದ್ದರು. ಇನ್ಯಾರಾದರೂ "ಮೇಷ್ಟ್ರೇ ಹೆಂಚಿನ ಮನೆ ತಿಮ್ಮಣ್ಣ ಸತ್ತ" ಎಂದರೆ ಅದಕ್ಕೂ ಅವರು "ಒಳ್ಳೆಯದು, ಒಳ್ಳೆಯದು" ಎನ್ನುತ್ತಿದ್ದರು. ಇನ್ನೊಬ್ಬರು ವೆಂಕಟಪ್ಪ ಎನ್ನುವವರು ಯಾವಾಗಲೂ ಕಪ್ಪು ಕೋಟು, ಕಚ್ಚೆಪಂಚೆ, ಮೈಸೂರುಪೇಟ ಧರಿಸಿ, ಕೈಯ್ಯಲ್ಲೊಂದು ಮಡಚಿದ ಛತ್ರಿಯನ್ನು ಹಿಡಿದು ಗಂಭೀರವಾಗಿ ಓಡಾಡುತ್ತಿದ್ದರು. ಯಾರೇ ಒಬ್ಬರು ರಸ್ತೆಯಲ್ಲಿ ಸಿಕ್ಕು ಅವರನ್ನು 'ಮೇಷ್ಟ್ರೇ' ಎಂದು ಮಾತನಾಡಿಸಿದರೆ ಸಾಕು, ಚರಂಡಿ ಬದಿಯಲ್ಲೋ, ಲೈಟುಕಂಬದ ಬಳಿಯೋ ಛತ್ರಿ ಅಗಲಿಸಿ ಮೂತ್ರ ಮಾಡಲು ಕುಳಿತು ಬಿಡುತ್ತಿದ್ದರು. ಯಾಕೆಂದರೆ ಅವರನ್ನು ಮಾತನಾಡಿಸುವವರೆಲ್ಲ ಅವರಿಗೆ ಸಾಲ ಕೊಟ್ಟವರಾಗಿರುತ್ತಿದ್ದರು. "ನೀವು ಸಾಲ ವಾಪಾಸು ಕೊಡದಿದ್ರು ಪರವಾಗಿಲ್ಲ, ಮೇಲೇದ್ದೇಳಿ" ಎಂಬ

ಭರವಸೆ ಸಿಕ್ಕ ಮೇಲೆಯೇ ಅವರ ಮೂತ್ರ ವಿಸರ್ಜನ ಕಾರ್ಯ ನಿಲ್ಲುತ್ತಿದ್ದುದು! ಮತ್ತೆ ಕೆಲವು ಮೇಷ್ಟ್ರುಗಳು ತಮ್ಮ ಒಳ್ಳೆಯ ಮೃದುಭಾವದ ನಡೆವಳಿಕೆಗಳಿಂದ ಹೆಸರು ಮಾಡಿದ್ದರು. ಕೆಲವರು ವ್ಯಾಕರಣ ಮಾಡುವುದರಲ್ಲಿ, ಪಾಠ ಕಲಿಸುವುದರಲ್ಲಿ ಹೆಸರಾಗಿದ್ದರು. ಇಂಥವರೆ ಅಲ್ಲಿರುತ್ತಾರೆ ಎಂದುಕೊಂಡು ಪ್ರಾಥಮಿಕ ಶಾಲೆ ಸೇರಿದಾಗ ಆದ ಅನುಭವಗಳೇ ಬೇರೆ. ಸಾಧಾರಣ ತಿಳಿವಳಿಕೆಯ ಮೇಷ್ಟ್ರುಗಳು ಕೆಲವರಿದ್ದರೆ, ಇನ್ನೂ ಕೆಲವರು ಅನೇಕರು ಶಿಕ್ಷೆ ಕೊಡುವುದರಲ್ಲಿಯೇ ಪ್ರಖ್ಯಾತರಾಗಿದ್ದರು. ಎಷ್ಟೋ ಸಾರಿ ಬೊಬ್ಬೆ ಬೀಳುವಂತೆ ಕೆನ್ನೆಯಲ್ಲಿ ಬಾಸಾಳ ಮೂಡುವಂತೆ ಮಕ್ಕಳನ್ನು ಚಚ್ಚುತ್ತಿದ್ದರು. ಇದರ ಪರಿಣಾಮವಾಗಿ ಎಷ್ಟೋ ಹುಡುಗರು ಹುಡುಗಿಯರು ಉಟ್ಟಿದ್ದ ಬಟ್ಟೆಯಲ್ಲಿಯೇ ಉಚ್ಚೆ ಹೊಯ್ದುಕೊಳ್ಳುತ್ತಿದ್ದರು. ಆಗಿನ ಕಾಲದ ಶಿಕ್ಷೆಗಳಲ್ಲಿ ಬಗ್ಗಿಸಿ ನಿಲ್ಲಿಸುವುದು ಒಂದು ರೀತಿ. ಬಗ್ಗಿಸಿ ಎರಡು ಕಾಲುಗಳ ಮಧ್ಯದಿಂದ ಕೈ ತೂರಿಸಿ ಕಿವಿ ಹಿಡಿದು ನಿಲ್ಲಿಸುವುದು ಇನ್ನೊಂದು ರೀತಿ. ಹುಡುಗರಿಂದಲೇ ಬೇರೆ ಹುಡುಗರ ಮೂಗು ಹಿಡಿದು ಕೆನ್ನೆಗೆ ಹೊಡೆಸುತ್ತಿದ್ದುದು ಇನ್ನೊಂದು ರೀತಿ! ಮತ್ತೆ ಕೆಲವು ಮೇಷ್ಟ್ರುಗಳು ಹಿಂಸೆಗೆ ಇಚ್ಛಿಸದೆ ತರಗತಿಯ ಮೂಲೆಗಳಲ್ಲಿ ಮುಖಮಾಡಿ ನಿಲ್ಲಿಸಿ ಕೊಡುತ್ತಿದ್ದ ಶಿಕ್ಷೆ ಇನ್ನೊಂದು ರೀತಿಯದು. ಬಹುಶಃ ಶಾಲೆಯನ್ನು ಮಧ್ಯದಲ್ಲೇ ಬಿಡುವುದಕ್ಕೆ ಇಂತಹ ಶಿಕ್ಷೆಗಳೂ ಕಾರಣವೆಂಬುದು ಈಗ ನನ್ನ ಮನಸ್ಸಿಗೆ ಅನ್ನಿಸುತ್ತದೆ.

ಇಂತಹ ಸಿಹಿಕಹಿ ನೆನಪುಗಳಿಂದ ಕೂಡಿದ ನನ್ನ ಪ್ರಾಥಮಿಕ ವಿದ್ಯಾಭ್ಯಾಸ ಮಾಧ್ಯಮಿಕ ತರಗತಿಗೆ ಬಂದಾಗ ಬೇರೆ ರೀತಿಯದಾಗಿತ್ತು ಎಂದೇನು ಅನ್ನಿಸುವುದಿಲ್ಲ. ಪ್ರಾಥಮಿಕ ತರಗತಿಗಳಲ್ಲಿ ಶಿಕ್ಷೆಯ ಮೂಲಕ ಕಹಿ ನೆನಪುಗಳನ್ನು ಉಳಿಸಿದ್ದ ಮೇಷ್ಟ್ರುಗಳಿಗಿಂತ ಮಾಧ್ಯಮಿಕ ಶಾಲೆಯಲ್ಲಿ ಓದುವಾಗ ಇದ್ದ ಕೆಲವು ಮೇಷ್ಟ್ರುಗಳು ಭಿನ್ನರೇನೂ ಅಲ್ಲ. ಒಬ್ಬೊಬ್ಬರು ತಮ್ಮ ಕ್ರೂರ ಶಿಕ್ಷೆಗಳಿಗೇ ಪ್ರಖ್ಯಾತರಾಗಿದ್ದರು. ಒಬ್ಬರಂತು ಈಗ ನೆನಸಿಕೊಂಡರೂ ಅವರನ್ನು ಪೋಲಿ ಮೇಷ್ಟ್ರು ಅಥವಾ ಅಪಾಪೋಲಿ ಮೇಷ್ಟ್ರೆಂದು ಕರೆಯಬೇಕು ಎನ್ನಿಸುತ್ತದೆ. ಅವರು ಕ್ರೂರವಾಗಿ ಶಿಕ್ಷಿಸುತ್ತಿದ್ದರಲ್ಲದೆ ಹಲವಾರು ಅಶ್ಲೀಲ ರೀತಿಯ ಶಿಕ್ಷೆಯನ್ನು ಹುಡುಗರಿಗೆ ಕೊಟ್ಟು, ಅತ್ಯಂತ ಅಸಭ್ಯ ರೀತಿಯ ಆನಂದವನ್ನು ಅನುಭವಿಸುತ್ತಿದ್ದರು. ಅತ್ಯಂತ ಕರ್ಕಶವಾಗಿ ಬೇಕಾಗಿಯೇ ಕೂಗಿ ಪಾಠ ಮಾಡುತ್ತ ಇತರರಿಗೆ ತೊಂದರೆ ಕೊಡುತ್ತಿದ್ದರು. ಇಷ್ಟು ಸಾಲದೆಂಬಂತೆ ವಾರಕ್ಕೆ ಎರಡು ಮೂರು ದಿನ ಮಧ್ಯಾಹ್ನದ ಅವಧಿಗಳನ್ನು ಚಕ್ಕರ್ ಹೊಡೆದು ಹೋಗಿಬಿಡುತ್ತಿದ್ದರು. ಯಾಕೆಂದರೆ ಆ ಸಮಯದಲ್ಲಿ ಅವರು ಒಂದು ಖಾಸಗಿ ಬಸ್ಸಿನ ಏಜೆಂಟರಾಗಿದ್ದರು. ಬಸ್ ಟಿಕೆಟ್‌ಗಳನ್ನು ವಿತರಿಸಲು ಹಾಗೇ ಚಕ್ಕರ್ ಹೊಡೆಯುವುದು ಅನಿವಾರ್ಯವಾಗಿತ್ತು. ಇಂತಹ ಪೋಲೀ ಶಿಕ್ಷೆ ಕೊಡುವ ಕರ್ಕಶ ಧ್ವನಿಯ ಹಿಂಸಿಸುವ ಮೇಷ್ಟ್ರುಗಳನ್ನು ಯಾರು ತಾನೆ ಮರೆಯಲು ಸಾಧ್ಯ? ಒಳ್ಳೆಯವರನ್ನು ನೆನೆಯುವಂತೆ ಇಂಥವರನ್ನು ಜೀವನದುದ್ದಕ್ಕೂ ನೆನೆಯುವ ಅನಿವಾರ್ಯತೆ ತಪ್ಪಿಸಲಾದೀತೆ?

ಮಾಧ್ಯಮಿಕ ತರಗತಿಯ ಮೇಷ್ಟ್ರುಗಳಲ್ಲಿ ಅಂದಿನ ದಿನಗಳಲ್ಲಿ ಸ್ವಲ್ಪ ಮಟ್ಟಿಗೆ ಕೀಳರಿಮೆ ಇದ್ದಿತೋ ಏನೋ ಗೊತ್ತಿಲ್ಲ. ಈಗಿನಂತೆಯೇ ಆಗಲೂ ಕೂಡ ಸ್ವಲ್ಪ ದೊಡ್ಡ ಮನುಷ್ಯರ ಮಕ್ಕಳಿಗೆ ಮನ್ನಣೆ ಕೊಡುತ್ತಿದ್ದಂತೆ ಭಾಸವಾಗುತ್ತದೆ. ಜೊತೆಗೆ ಅಂದಿನ ದಿನಗಳಲ್ಲಿ

ಚಿತ್ರದುರ್ಗದಲ್ಲಿ ಮೂರೇ ಪ್ರೌಢಶಾಲೆಗಳು ಇದ್ದುದು. ಒಂದು ಸರ್ಕಾರಿ ಬಾಲಕರ ಪ್ರೌಢಶಾಲೆ, ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಹಾಗೂ ಮುನ್ಸಿಪಲ್ ಹೈಸ್ಕೂಲ್. ನಾವು ಮಾಧ್ಯಮಿಕ ತರಗತಿಯಲ್ಲಿ ಓದುತ್ತಿದ್ದಾಗ 'ವಿಷುಯಲ್ ಎಜುಕೇಶನ್' ಅಂಗವಾಗಿ ಪಕ್ಕದಲ್ಲಿಯೇ ಇದ್ದ ಪ್ರೌಢಶಾಲೆಗೆ ವಾರಕ್ಕೊಮ್ಮೆ ನಾವು ಸಂಜೆಯ ಹೊತ್ತು ಹೋಗುತ್ತಿದ್ದೆವು. 'ಸಿನಿಮಾ ತೋರಿಸುತ್ತಾರೆ' ಎಂದು ಆ ಕಾರ್ಯಕ್ರಮವನ್ನು ಕರೆಯುತ್ತಿದ್ದೆವು. ಆ ಚಿತ್ರಗಳೆಲ್ಲವು ವಿಜ್ಞಾನ, ಆರೋಗ್ಯಕ್ಕೆ ಸಂಬಂಧಪಟ್ಟವು. ಆ ಪ್ರೌಢಶಾಲೆಯ ಅಧ್ಯಾಪಕರುಗಳನ್ನು ನಮ್ಮ ಮಾಧ್ಯಮಿಕ ಶಾಲೆಯ ಅಧ್ಯಾಪಕರು ಮಾತನಾಡಿಸುತ್ತಿದ್ದುದೇ ಒಂದು ಹೆಮ್ಮೆಯ ಸಂಗತಿಯೆಂದು ಭಾವಿಸುತ್ತಿದ್ದರು. ಅನುಕೂಲಸ್ಥರ ಮಗನೊಬ್ಬ ಒಮ್ಮೆ ಬೇರೆ ಶಾಲೆಗೆ ಹೋಗುತ್ತೇನೆ ಎಂದಾಗ ನಮ್ಮ ಒಬ್ಬ ಮೇಷ್ಟ್ರು, "ಥೂ, ಆ ಶಾಲೆಗೆ ಯಾಕೆ ಹೋಗ್ತೀಯಾ? ನಮಗಾದ್ರೆ ಹೈಸ್ಕೂಲ್ ಮೇಷ್ಟ್ರುಗಳೆಲ್ಲ ಪರಿಚಯ ಇದ್ದಾರೆ. ಅವ್ರಿಗೆ ಯಾರು ಗೊತ್ತಿದ್ದಾರೆ?" ಎಂಬಂತಹ ಮಾತು ಗಳನ್ನು ಹೇಳಿ ಆ ಹುಡುಗನನ್ನು ಇಲ್ಲಿಯೇ ಇರಿಸಿಕೊಂಡರು.

೧೯೫೨ ನೇ ಇಸವಿಯ ಹೊತ್ತಿಗೆ ನಾವು ಮಾಧ್ಯಮಿಕ ಶಾಲೆಯ ಎಂಟನೆಯ ತರಗತಿಗೆ ಬಂದೆವು. ಆಗ ನಮಗೆ ಪಬ್ಲಿಕ್ ಪರೀಕ್ಷೆ ನಡೆಯುತ್ತಿತ್ತು. ಅದು ಅಂದಿನ ದಿನಗಳಲ್ಲಿ ಒಂದು ಮುಖ್ಯ ಘಟ್ಟವೇ ಆಗಿದ್ದಿತು. ಆದ್ದರಿಂದ ನಾವು ಎಂಟನೆಯ ತರಗತಿಗೆ ಬರುತ್ತಿದ್ದಂತೆಯೇ ಕೆಲವು ವಿಚಿತ್ರ, ವಿಲಕ್ಷಣ ಬದಲಾವಣೆಗಳನ್ನು ಗಮನಿಸಿದೆವು. ಇದ್ದಕ್ಕಿದ್ದಂತೆ ನಮ್ಮ ನಾಲ್ಕೂ ಸೆಕ್ಷನ್‌ಗಳಲ್ಲಿ ಇದ್ದ ಹುಡುಗರೆಲ್ಲ ಅದಲು ಬದಲಾದರು. ಇದು ಅಂದಿನ ಹೆಡ್ಮಾಸ್ತರು ಮತ್ತು ಕೆಲವು ಅಧ್ಯಾಪಕರ ಕುತಂತ್ರವೆಂಬುದು ನಮ್ಮ ಎಳೆಯ ಮನಸ್ಸುಗಳಿಗೆ ಸ್ಪಷ್ಟವಾಗಿ ತಿಳಿಯಿತು. ಅಂದಿನ ನಮ್ಮ ಹೆಡ್ಮಾಷ್ಟ್ರು ಪುಟ್ಟೂರಾವ್ ಅವರು ಇಂಗ್ಲಿಷ್ ಮತ್ತು ಇಂಗ್ಲಿಷ್ ಗ್ರಾಮರ್‌ಅನ್ನು ಕಲಿಸುವುದರಲ್ಲಿ ನಿಷ್ಣಾತರಾಗಿದ್ದರು. ಬಹುಶಃ ಅವರು ಗಣಿತವನ್ನೂ ಬೋಧಿಸುತ್ತಿದ್ದರೆಂದು ನೆನಪು. ಅವರಿಗೆ ಕೊಂಚ ಸಿಟ್ಟು ಜಾಸ್ತಿ. ಜೊತೆಗೆ ಕಲಿಯದ ಹುಡುಗರಿಗೆ ಶಿಕ್ಷೆಯನ್ನು ಬಹಳ ಕ್ರೂರವಾಗಿ ವಿಧಿಸುತ್ತಿದ್ದರು. ಇದರಿಂದ ಹುಡುಗರು ಅವರಿಗೆ ಹೆದರುತ್ತಿದ್ದರು. ಅವರಿಗೆ ಬೇಕಾದ ಕೆಲವು ಮೇಲ್ಜಾತಿಯ ಹುಡುಗರನ್ನೂ, ಅಧಿಕಾರಿಗಳ ಮಕ್ಕಳನ್ನೂ, ಶ್ರೀಮಂತರ ಮನೆಯ ಹುಡುಗರನ್ನೂ ಸೋಸಿಸೋಸಿ 'ಎ' ಸೆಕ್ಷನ್‌ಗೆ ಸೇರಿಸುತ್ತಿದ್ದಂತೆಯೇ ನಮ್ಮ ಮನಸ್ಸಿನಲ್ಲಿ ಒಂದು ಕೀಳರಿಮೆಯ ಮಸಿ ಬಲವಾಗಿ ಮೆತ್ತಿಕೊಂಡಿತು. ನಮಗೆ 'ಇಂಗ್ಲಿಷ್ ಬರುವುದಿಲ್ಲ', 'ಗಣಿತ ಅರ್ಥವಾಗುವುದಿಲ್ಲ' ಎಂಬ ಭಾವನೆಯನ್ನು ಶಾಲೆಯ ಮುಖ್ಯೋಪಾಧ್ಯಾಯರೊಬ್ಬರು ನಿರ್ಮಿಸಿದ್ದು ಒಂದು ವ್ಯಥೆಯ ಸಂಗತಿ. ಈಗಲೂ ಇಂಗ್ಲಿಷ್ ಭೂತಕ್ಕೆ ಹೆದರುತ್ತಿದ್ದೇನೆ. ಇಂಗ್ಲಿಷ್ ಮತ್ತು ಗಣಿತದ ಭಯದ ಭೂತ ನನ್ನ ಓದು ಮುಗಿಯುವ ತನಕವು ಬೆನ್ನಟ್ಟಿ ಬಂದಿತು.

ಎಂಟನೆಯ ತರಗತಿಯಲ್ಲಿ ನಾವು ಹೀಗೆ ಒಳ್ಳೆಯ ಶಿಕ್ಷಣದಿಂದ ವಂಚಿತರಾದೆವೆಂಬ ಭಾವನೆ ಬಂದರೂ, ಕೆಲವು ಒಳ್ಳೆಯ ಅಧ್ಯಾಪಕರು ನಮ್ಮ ಪಾಲಿಗೆ ಸಿಕ್ಕಿದ್ದು ನಮ್ಮ ಪುಣ್ಯವೆಂದೇ ಹೇಳಬೇಕು. ಈ ಅಧ್ಯಾಪಕರಲ್ಲಿ ವಿಶೇಷವಾಗಿ ಕನ್ನಡ ಅಧ್ಯಾಪಕರಾದ ಭೀಮರಾವ್ ಅವರು. ಅಂದಿನ ಕಾಲದಲ್ಲಿ ನಾವು ಮೇಷ್ಟ್ರುಗಳಿಗೆ ಭಯ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದೆವು. ಸಿಕ್ಕಲ್ಲಿ

ಅವರಿಗೆ ನಮಸ್ಕಾರ ಗೌರವ ಸಲ್ಲಿಸುತ್ತಿವ್ದೆವು. ಇವನ್ನು ಬರೆಯುತ್ತಿರುವಾಗ ನನಗೆ ಗೋಪಾಲಕೃಷ್ಣ ಅಡಿಗರು ಆಡಿದ ಒಂದೆರಡು ಮಾತುಗಳು ನೆನಪಿಗೆ ಬರುತ್ತವೆ. ಅಡಿಗರು ಒಂದೆರಡು ದಶಕಗಳ ಹಿಂದೆ ಚಿಂತನ ಎಂಬ ಸಾಹಿತ್ಯಕೂಟದ ಪರವಾಗಿ ಚಿತ್ರದುರ್ಗಕ್ಕೆ ಬಂದಿದ್ದರು. ರಾತ್ರಿ ಊಟಕ್ಕೆಂದು ಹೋಟೆಲಿಗೆ ಹೋದಾಗ ಅಡಿಗರು, ಆ ಹೋಟೆಲಿನ ಮುಂದೆ ಬಂದಾಗ, "ನಾನು ಇಲ್ಲಿ ಕೆಲವು ದಿವಸಗಳ ಕಾಲ ಪ್ರೌಢಶಾಲೆಯ ಅಧ್ಯಾಪಕನಾಗಿದ್ದೆ. ಆಗ ಇಲ್ಲಿನ ಹುಡುಗರು ತುಂಬಾ ಒಬಿಡಿಯಂಟ್ ಆಗಿ ನಡೆದುಕೊಳ್ತಾ ಇದ್ರು ಕಣ್ರೀ, ಸೈಕಲ್ ಹತ್ತಿಕೊಂಡ ಹುಡುಗರು ಕೆಳಗಿಳಿದು ನಮಸ್ಕಾರ ಮಾಡ್ತಿದ್ರು ಕಣ್ರೀ, ಇಲ್ಲಿನ ಹುಡುಗರ ನೇಚರ್ ಈಗ್ಲೂ ಅದೇ ತರ ಇದೆಯಾ?" ಎಂದು ಕೇಳಿದರು. ಆಗ ನಾನು, ನಮ್ಮೂರ ಹುಡುಗರನ್ನು ಬಿಟ್ಟುಕೊಡುವುದೇಕೆ ಎಂದು "ಹ್ಞೂ" ಎಂದೆ! ಅವರು ಕೆಲಸ ಮಾಡುತ್ತಿದ್ದ ಪ್ರೌಢಶಾಲೆ ನಮ್ಮ ಕಣ್ಣ ಮುಂದೆಯೇ ಇತ್ತು. ಇದನ್ನು ಅವರಿಗೆ ತೋರಿಸಿದೆ. ಅಡಿಗರ ಮಾತು ಇಲ್ಲಿ ಯಾಕೆ ಜ್ಞಾಪಕಕ್ಕೆ ಬರುತ್ತಿದೆಯೆಂದರೆ ನಮ್ಮ ಭೀಮರಾವ್ ಮೇಷ್ಟ್ರನ್ನು ರಸ್ತೆಯಲ್ಲಿ ಕಂಡಾಗ ಇದೇ ರೀತಿಯಾಗಿಯೇ ನಾವು ಗೌರವಿಸುತ್ತಿದ್ದುದು. ಒಮ್ಮೆ ನಮ್ಮ ಭೀಮರಾವ್ ಮೇಷ್ಟ್ರು ಸೋಮವಾರದ ದಿನ ನಡೆಯುವ ಸಂತೆಯಲ್ಲಿ ನನ್ನ ಗೆಳೆಯ ಗೋಪಾಲನಿಗೆ ಎದುರಲ್ಲಿ ಸಿಕ್ಕರಂತೆ. ಅವನು ತರಕಾರಿಗಳನ್ನು ಕೊಂಡ ಬುಟ್ಟಿಯನ್ನು ತಲೆ ಮೇಲೆ ಹೊತ್ತುಕೊಂಡಿದ್ದ. ಮೇಷ್ಟ್ರಿಗೆ ನಮಸ್ಕಾರ ಮಾಡಲು ಹೋಗಿ ತಲೆಮೇಲಿದ್ದ ಬುಟ್ಟಿ ಕೆಳಗೆ ಬಿದ್ದು ತರಕಾರಿಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಹೋಗಿ ಒಂದು ಆಭಾಸವೇ ಸೃಷ್ಟಿಯಾಯಿತು. ಅವೊತ್ತಿನಿಂದ ಗೆಳೆಯ ಗೋಪಾಲ ಅವರ ಬಗ್ಗೆ ಗೌರವ ಇಟ್ಟುಕೊಂಡಿದ್ದರೂ ನಮಸ್ಕಾರ ಮಾತ್ರ ಎಂದೂ ಮಾಡುತ್ತಿರಲಿಲ್ಲ.

ಹೀಗೆ ಗೌರವವನ್ನು ಗಳಿಸಿಕೊಂಡಿದ್ದ ಭೀಮರಾವ್ ಮೇಷ್ಟ್ರು ಕನ್ನಡವನ್ನು ಮನೋಜ್ಞವಾಗಿ ಮಾಡುತ್ತಿದ್ದರು. ಅವರು ರಾಗವಾಗಿ ಹಾಡುತ್ತಿದ್ದ ನಳಚರಿತ್ರೆ, ಮಾಡುತ್ತಿದ್ದ ವ್ಯಾಖ್ಯಾನ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಸ್ಪಷ್ಟ ಉಚ್ಚಾರಣೆ, ತಪ್ಪಿಲ್ಲದ ಉಕ್ತಲೇಖನಗಳಿಗೆ ಅವರು ತುಂಬಾ ಒತ್ತು ಕೊಟ್ಟು ಕಲಿಸುತ್ತಿದ್ದರು. ಅಂದವಾದ ಬರವಣಿಗೆಯನ್ನು ಕುರಿತು ಅವರು ಹೇಳಿದ ಮಾತುಗಳನ್ನು ಇಷ್ಟು ವರ್ಷಗಳಾದರೂ ನಾನು ಮರೆತಿಲ್ಲ. "ನಮ್ಮ ಕನ್ನಡ ಅಕ್ಷರಗಳು ಹೆಸರು ಕಾಳಿನಷ್ಟು ಸಣ್ಣಗೂ ಇರಬಾರದು, ಅವರೇಕಾಳಿನಷ್ಟು ದಪ್ಪಗೂ ಇರಬಾರದು. ಅವು ಕಡ್ಲೆ ಕಾಳಿನಷ್ಟು ಗಾತ್ರದಲ್ಲಿರಬೇಕು." ಇದು ಕನ್ನಡ ಲಿಪಿಯ ಸೌಂದರ್ಯವನ್ನು ಕುರಿತು ಹೇಳಿದ ಒಂದು ಅತ್ಯುತ್ತಮ ಹೇಳಿಕೆಯೆಂದೇ ನನ್ನ ಭಾವನೆ.

ಎಂಟನೇ ತರಗತಿಯಲ್ಲಿ ಓದುತ್ತಿರುವಾಗ ನನ್ನ ಸ್ಮರಣೆಯಲ್ಲಿರುವ ಇನ್ನೊಬ್ಬ ಅಧ್ಯಾಪಕರೆಂದರೆ ಲಕ್ಷ್ಮೀಪತಿರಾವ್ ಎನ್ನುವವರು. ಅವರು ನಮಗೆ ಇಂಗ್ಲಿಷ್ ಹಾಗೂ ಗಣಿತ ವನ್ನು ತೆಗೆದುಕೊಳ್ಳುತ್ತಿದ್ದರೆಂದು ಕಾಣುತ್ತದೆ. ಆ ಸಮಯದಲ್ಲಿ ವರ್ಷಕ್ಕೊಮ್ಮೆ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್, ಫ್ರೀಶಿಪ್ ಕೊಡುವ ಪದ್ಧತಿಯಿತ್ತು. ಪ್ರತಿಷ್ಠಿತ ವಕೀಲರು ಇನ್ನು ಯಾರಯಾರೋ ಕೂಡಿಕೊಂಡು ಮೀಟಿಂಗ್ ಮಾಡಿ ಇವನ್ನು ನಿರ್ಧರಿಸುತ್ತಿದ್ದರು. ಯಥಾಪ್ರಕಾರ ಕೊಂಚಮಟ್ಟಿಗೆ ಪ್ರಭಾವ ಬೀರಿದವರಿಗೆ ಇವೆಲ್ಲಾ ಲಭ್ಯವಾಗುತ್ತಿದ್ದವು. ಮಿಕ್ಕವರಿಗೆ ಸಿಕ್ಕುತ್ತಿರಲಿಲ್ಲ. ಅಂದಿನ

ಕಾಲದಲ್ಲಿ ಫೀಸೂ ಜಾಸ್ತಿಯೇನಿರಲಿಲ್ಲ. ಬಹುಶಃ ಮೂರು ರೂಪಾಯಿನ ಎರಡು ಕಂತನ್ನು ಕಟ್ಟಿದರೆ ಮುಗಿಯಿತು. ಇಷ್ಟು ಫೀಸೂ ಕಟ್ಟಲಾರದವರಿಗೆ ಕಡೇ ಪಕ್ಷ ಫ್ರೀಶಿಪ್ ಸಿಕ್ಕುತ್ತಿತ್ತು. ನಾವೆಲ್ಲ ಬಡತನ ಅನುಭವಿಸುತ್ತಿದ್ದರೂ, ನಮ್ಮಲ್ಲಿ ಅನೇಕರಿಗೆ ಈ ಫ್ರೀಶಿಪ್ ಕೂಡ ಸಿಕ್ಕಿರಲಿಲ್ಲ. ಒಮ್ಮೆ ಅಟೆಂಡೆನ್ಸ್ ಹಾಕುವಾಗ ನಮ್ಮ ಲಕ್ಷ್ಮೀಪತಿರಾವ್ ಮೇಷ್ಟ್ರು "ಇಲ್ಲಿ ಬಡವರು ಯಾರ್‍ಯಾರಿದೀರೋ ನಿಂತ್ಕಳ್ರೋ..." ಎಂದರು. ನಾವು ಒಂದೇಳೆಂಟು ಜನ ನಿಂತುಕೊಂಡೆವು. "ನಿಮಗೆ ಸ್ಕಾಲರ್‌ಶಿಪ್ ಬಂದಿಲ್ವಾ?" ಎಂದಾಗ ನಾವು "ಇಲ್ಲ" ಎಂದೆವು. "ಫ್ರೀಶಿಪ್ಪೂ ಬಂದಿಲ್ವಾ?" ಅದಕ್ಕೂ ನಾವು "ಇಲ್ಲ" ಎಂದಾಗ ತಕ್ಷಣ ನಮ್ಮೆಲ್ಲರ ಹೆಸರುಗಳನ್ನು ಬರೆದುಕೊಂಡು ಆಫೀಸ್ ರೂಮಿಗೆ ಹೋದರು. ಹೋಗಿ ಹತ್ತಿಪ್ಪತ್ತು ನಿಮಿಷಗಳಲ್ಲಿ ಹಿಂದಿರುಗಿ ಬಂದರು. ಬಳಿಕ, "ನಿಮಗೆಲ್ಲ ಫ್ರೀಶಿಪ್ ಮಾಡ್ಸಿದ್ದೀನಿ ಕಣ್ರೋ. ನೀವು ಕಟ್ಟಿದ ಫೀಸ್ ರೀಫಂಡ್ ಮಾಡ್ತಾರೆ, ಮಧ್ಯಾಹ್ನ ತಗೊಂಡು ಹೋಗಿ" ಎಂದರು. ಅವರು ತೋರಿದ ಈ ಔದಾರ್ಯವನ್ನು ಏನು ಮಾಡಿದರೂ ನನಗೆ ಮರೆಯಲು ಸಾಧ್ಯವಾಗಿಲ್ಲ.

ನಮ್ಮ ಇನ್ನೊಬ್ಬ ಮೇಷ್ಟ್ರು ಎಂದರೆ ಸಿದ್ಧಬಸಪ್ಪನವರು. ಅವರು ತುಂಬಾ ಅಚ್ಚುಕಟ್ಟಾಗಿ ಭೂಗೋಳ, ಚರಿತ್ರೆ ಮಾಡುತ್ತಿದ್ದರು. ಆಗ ಮ್ಯಾಪ್ ಡ್ರಾಯಿಂಗ್ ಬಗ್ಗೆ ಸ್ಥಳ, ವಾಯುಗುಣ, ರೈಲುಮಾರ್ಗ, ವಿಮಾನಮಾರ್ಗ ಮೊದಲಾದವುಗಳನ್ನು ಅಂದವಾಗಿ ಗುರುತಿಸಲು ಹೇಳಿಕೊಟ್ಟವರು ಅವರೇ. ಹಾಗೇ ಅಂದವಾಗಿ ಬರೆದಾಗಲೆಲ್ಲ ಸಿದ್ಧಬಸಪ್ಪ ಮೇಷ್ಟ್ರು "ಗುಡ್", "ವೆರಿಗುಡ್" ಎಂದು ಬರೆದು ಸಹಿ ಹಾಕಿಕೊಡುತ್ತಿದ್ದರು. ವಿದ್ಯಾರ್ಥಿಗಳಿಗೆ ಉತ್ತೇಜನ ಕೊಡುವುದು ಅವರಿಗೆ ಚೆನ್ನಾಗಿ ತಿಳಿದಿದ್ದಿತು. ಜೊತೆಗೆ ಹುಡುಗರನ್ನು ತುಂಬಾ ಪ್ರೀತಿಸುತ್ತಿದ್ದರು. ಬಹುಶಃ ಈ ಕಾರಣದಿಂದಲೇ ಇರಬೇಕು, ಸುಮಾರು ೩೦-೪೦ ವರ್ಷಗಳಾದ ಮೇಲೆಯೂ ಅಮೆರಿಕಾದಲ್ಲಿದ್ದ ಒಬ್ಬರು ನನಗೆ ಕಾಗದ ಬರೆದು ಈ ಮೇಷ್ಟ್ರ ಬಗ್ಗೆ ವಿಚಾರಿಸಿದ್ದರು. ನಾವೆಲ್ಲ ಅಂತೂ ಇಂತೂ ಪಬ್ಲಿಕ್ ಪರೀಕ್ಷೆ ಪಾಸು ಮಾಡಿ ಪ್ರೌಢಶಾಲೆಯನ್ನು ಸೇರಿದೆವು.

ನನ್ನ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಜೀವನದ ಬಗ್ಗೆ ಈಗ ಹಿಂದಕ್ಕೆ ತಿರುಗಿ ಬಂದು ವಿಹಂಗಮ ದೃಷ್ಟಿ ಹರಿಸಿದರೆ ಎದ್ದು ನಿಲ್ಲುವ ಸಂಗತಿಗಳು ಯಾವುವು ಎಂಬುದನ್ನು ನಾನು ಆಗಾಗ ಯೋಚಿಸುತ್ತೇನೆ. ಅವುಗಳಲ್ಲಿ ಕೆಲವು ಮುಖ್ಯ ಸಂಗತಿಗಳೆಂದರೆ– ಗಾಂಧೀಜಿಯ ಸಾವಿಗಾಗಿ ನಮ್ಮ ಅಧ್ಯಾಪಕರು, ನಾವು ಅತ್ತಿದ್ದು; ನಾಲ್ಕನೆಯ ತರಗತಿಯಲ್ಲಿ ಹುಡುಗನೊಬ್ಬನಿಗೆ ಆಕಾಶ ತೋರಿಸಲು ತಿಳಿಸಿ, ಅವನನ್ನು ತಬ್ಬಿಬ್ಬುಗೊಳಿಸಿದ್ದು; ಆರ್‌ಎಸ್‌ಎಸ್ ಸೇರಿದ್ದ ಒಬ್ಬ ಮೇಷ್ಟ್ರು; ಜಾತಿ, ಶ್ರೀಮಂತಿಕೆ, ಅಧಿಕಾರಗಳನ್ನು ಗಮನಿಸಿ ವಿದ್ಯಾರ್ಥಿಗಳನ್ನು ವಿಂಗಡಿಸಿದ್ದು; ಕೆಲವು ಒಳ್ಳೆಯ ಮೇಷ್ಟ್ರುಗಳು. ನಾನು ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಮುಗಿಸಿ ಈಗಾಗಲೇ ಐವತ್ತೈದು-ಅರವತ್ತು ವರ್ಷಗಳ ಮೇಲಾಗಿದ್ದರೂ ಇಂಥ ವಿಷಯಗಳೇ ನಮ್ಮ ಮಧ್ಯೆ ಇನ್ನೂ ಚಾಲ್ತಿಯಲ್ಲಿವೆ ಎಂಬುದನ್ನು ನೆನೆದಾಗ ವಿಷಾದ, ವಿಸ್ಮಯ, ಸಮಾಧಾನಗಳಿಂದ ಕೂಡಿದ ಮಿಶ್ರ ಭಾವನೆಯೊಂದು ನನ್ನಲ್ಲಿ ಮೂಡುತ್ತದೆ.

(ಈ ಲೇಖನ ಪ್ರತಿ ಮಾಡಿಕೊಟ್ಟ ಮಗಳು ತಾರಿಣಿಶುಭದಾಯಿನಿಗೆ ನನ್ನ ಪ್ರೀತಿಯ ಕೃತಜ್ಞತೆಗಳು.)

■ ಟಿ. ಆರ್. ರಾಧಾಕೃಷ್ಣ : 'ಆತ್ಮೀಯ', ಫಿಲ್ಟರ್ ಹೌಸ್ ರಸ್ತೆ, ಚಿತ್ರದುರ್ಗ - ೫೭೭ ೫೦೧ ■

ನನ್ನ ಅಪ್ಪ ಅಮ್ಮ

ಜಿ. ಟಿ. ಶ್ರೀಧರ ಶರ್ಮ

"ಅರಮನೆ-ಗುರುಮನೆ-ಸೆರೆಮನೆಗಳಿಂದ ಸದಾ ದೂರವೇ ಇರು" ಎಂದು ಹೇಳುತ್ತಲೇ ಇದ್ದ ಅಪ್ಪನ ನುಡಿಗಳು ಇನ್ನೂ ನನ್ನ ಕಿವಿಗಳಲ್ಲಿ ಅನುರಣಿತ. ಅಮ್ಮನೊಂದಿಗೆ ಸಂಸಾರದ ಬಗ್ಗೆ, ಅಕ್ಕನೊಂದಿಗೆ ಮನೆಗೆಲಸ, ಅಣ್ಣ ಭೀಮಣ್ಣನೊಂದಿಗೆ ಹಸುಗಳು, ನನ್ನೊಂದಿಗೆ ಸಾಹಿತ್ಯ-ಪತ್ರಿಕೋದ್ಯಮ, ತಂಗಿ ಶಾಂತಾಳೊಂದಿಗೆ ಶಿವಮೊಗ್ಗ, ತಮ್ಮಂದಿರಾವ ಪರಮೇಶ್ವರನೊಂದಿಗೆ ಅಡುಗೆ, ನರಹರಿಯೊಂದಿಗೆ ವಾಹನ ಮತ್ತು ಕಿರಿಯವನಾದ ರಂಗನಾಥನೊಂದಿಗೆ ಕೃಷಿ-ಹಣಕಾಸುಗಳ ಬಗ್ಗೆ ಸದಾ ಸಂವಾದ ನಡೆಸುತ್ತಲೇ ಎಂಭತ್ತೈದು ವಸಂತಗಳನ್ನು ಅರ್ಥಪೂರ್ಣವಾಗಿ ಪೂರೈಸಿದ ಅಪ್ಪನನ್ನು ನಾ ಮರೆಯಲಿ ಹೇಗೆ? ಅಂತೆಯೇ 'ಅತಿಥಿ ದೇವೋ ಭವ' ಎನ್ನುವ ಉಪನಿಷತ್ತಿನ ವಾಕ್ಯವನ್ನು ಅನ್ವರ್ಥವಾಗಿ ಆಚರಣೆಗೆ ತಂದು ಬಡತನ, ಅವಮಾನ, ಶೋಷಣೆ ಮತ್ತು ಮಾನಸಿಕ ತಳಮಳಗಳ ಚಂಡಮಾರುತಗಳು ಅಪ್ಪಳಿಸುತ್ತಿದ್ದರೂ ಅಳುವನ್ನು ಒಳಗಿಟ್ಟು- ನಗುವನ್ನು ಹೊರಗಿಟ್ಟು ಸಂಸಾರದ ಸರ್ವತೋಮುಖ ಅಭಿವೃದ್ಧಿಯೊಂದನ್ನೇ ಮಾಧ್ಯಮ ಗುರಿಯನ್ನಾಗಿ ಸ್ವೀಕರಿಸಿ ಅದನ್ನು ಸಾಧಿಸಿ, ಸಿದ್ಧಿ ಪಡೆದ ನಮ್ಮೆಲ್ಲರ ಸರ್ವಸ್ವವೂ ಆಗಿದ್ದ ಅಥವಾ ಮಾತಿಗೆ ಮೀರಿದ ತಾಳ್ಮೆಯ ಮುದ್ದೆಯಾಗಿದ್ದ ಮೇರು ವ್ಯಕ್ತಿತ್ವದ ಅಮ್ಮನನ್ನು ನಾ ಮರೆಯಲಿ ಹೇಗೆ?

ಆಳಾಳೆತ್ತರಕ್ಕೆ ಬೆಳೆದು ನಿಂತಿರುವ ನಾನಾ ರೀತಿಯ ಮರಗಳು, ಮನೆಸುತ್ತಲೂ ಹಬ್ಬಿರುವ ಗುಡ್ಡಗಳು, ದಿನವಿಡೀ ಹರಿದು ಬರುವ ಅಬ್ಬಿನೀರು, ಊರೊಳಗಿದ್ದೂ ಇರದಂತಿರುವ ಕೊನೇ ಮನೆ, ಒಳಗೆ ಕತ್ತಲಿದ್ದರೂ ಪಕ್ವತೆಯನ್ನು ಸೂಸುವ ಪ್ರಶಾಂತತೆಯ ಪರಂಪರೆಯ ಪಳೆಯುಳಿಕೆಗೆ ಉದಾಹರಣೆಯಾದ, ದಿವ್ಯತೆಯ ಆಗರವಾದ ಸುಂದರ ಪರಿಸರದಲ್ಲಿ ನನ್ನಪ್ಪ ಹೂವಿನಕುಳಿ ತಿಮ್ಮಯ್ಯ ಅವರು ಹಿರಿಯ ಮಗನಾಗಿ ಜನಿಸಿದರು. ಸದಾ ಹೂಗಳಿಂದ ಕೂಡಿರುವ ಅಚ್ಚಹಸುರಿನ ಈ ಮನೆಯಿರುವುದು ಮಲೆನಾಡಿನ ಶಿವಮೊಗ್ಗಾ ಜಿಲ್ಲೆ ಸಾಗರ ತಾಲ್ಲೂಕಿನ ತಾಳಗುಪ್ಪಾ ಹೋಬಳಿಯ ಸಿರಿವಂತೆ ಸೀಮೆಯ ಖಂಡಿಕಾದ ತುತ್ತ ತುದಿಯಲ್ಲಿ. ಈ ಹೂವಿನಕುಳಿ ಮನೆತನದವರು ನನ್ನ ಅಪ್ಪನ ಅಜ್ಜನ ಕಾಲದಲ್ಲಿ ಭೀಮೇಶ್ವರದ ಹತ್ತಿರ ಸಳ್ಳಳ್ಳಿ ಸೀಮೆಯಿಂದ ಇಲ್ಲಿಗೆ ವಲಸೆ ಬಂದು ನಿಂತವರು. ನನ್ನಪ್ಪನಿಗೆ ಅಜ್ಜನಿಂದ ಬಂದ ಆಸ್ತಿಗಳೆಂದರೆ ದೈವಭಕ್ತಿ, ಗುರುವಿನಲ್ಲಿ ಅಪಾರ ನಂಬಿಕೆ, ಸ್ವಾಭಿಮಾನ ಮತ್ತು ಕ್ರಿಯಾಶೀಲತೆ. ಹೂವಿನಕುಳಿ ಮನೆತನಕ್ಕೂ ವರದಾ ಮೂಲದ ಹತ್ತಿರವಿರುವ ಕುಂಬಗೋಡಿನ ವಿಭೂತಿ ಮನೆತನದ 'ಗುರುಮನೆ'ಗೂ ಬಿಡಿಸಲಾಗದ ಬ್ರಹ್ಮಗಂಟು.

ಅಪ್ಪನಿಂದ ಕಕ್ಕನ ತನಕ ಐದು ಜನ ಗಂಡುಮಕ್ಕಳೂ 'ಆ ಗುರುಗಳ ಅನುಗ್ರಹದಿಂದಲೇ' ಹುಟ್ಟಿದವರೆಂಬುದನ್ನು ಈಗಲೂ ಬಲ್ಲವರು ಹೇಳುತ್ತಾರೆ. ಇಂಥ ಹಿನ್ನೆಲೆಯ ಭೀಮಯ್ಯ -ದುರ್ಗಾಂಬೆಯರ ಹಿರಿಯ ಮಗನಾದ ನನ್ನಪ್ಪ ಹುಟ್ಟಿದ ಮನೆ ಹೂವಿನಕುಳಿಯಲ್ಲಿ-ಮೇ-ಮದುವೆಯಾಗುವ ವರೆಗೆ- ಕೆಲವು ವರ್ಷ ಕಳೆದರು. 'ಅಣ್ಣ-ತಮ್ಮಂದಿರು ತೀರ ಹತ್ತಿರಬಾರದು,

ಜ್ಞಾನಸಂಪಾದನೆಯಲ್ಲಿ ಬ್ರಾಹ್ಮಣ ಆದರ್ಶನಾದರೆ, ಆಸ್ತಿ ಸಂಪಾದನೆಯಲ್ಲಿ ಕ್ಷತ್ರಿಯ ಆದರ್ಶ' ಎಂಬ ಕಾರಣದಿಂದ ಖಂಡಿಕಾ ಬಿಟ್ಟು ಸ್ವಲ್ಪ ದೂರದ ಗೋಳಗೋಡಿಗೆ ಬಂದು ಸಾಯುವ ತನಕ ಅಲ್ಲಿಯೇ ಇದ್ದರು. ಅಪ್ಪನ ಬೆನ್ನಿಗೆ ನಾಲ್ಕು ಜನ ತಮ್ಮಂದಿರಿದ್ದರೂ ಅವರು ಅತಿಯಾದ ಪ್ರೀತಿ-ವಾತ್ಸಲ್ಯ-ವ್ಯಾಮೋಹ ಇಟ್ಟುಕೊಂಡಿದ್ದು ಪಕ್ಕದಮನೆ ಗಣಪತಿ ಚಿಕ್ಕಪ್ಪನೊಂದಿಗೆ ಮತ್ತು ನಾವೆಲ್ಲ ಪ್ರೀತಿಯಿಂದ 'ಕಕ್ಕ' ಎಂದೇ ಕರೆಯುವ ಮೇಲಿನಸದೊಂಬೆಯ ನಾರಾಯಣ ಶರ್ಮ– ಇವರೊಂದಿಗೆ. ಇವರಿಬ್ಬರ ಉಪನಯನ– ಮದುವೆ, ಬಾಲ್ಯ ಮತ್ತಿತರ ಒಡನಾಟಗಳನ್ನು ಅಪ್ಪ-ಅಮ್ಮ ಇಬ್ಬರೂ ರಸವತ್ತಾಗಿ ವಿವರಿಸುತ್ತಿದ್ದುದನ್ನು ಮರೆಯುವಂತಿಲ್ಲ.

ಅಪ್ಪ ಮತ್ತು ಕಕ್ಕ ಸೇರಿ ಸಾಲ ಮಾಡಿ ಗೋಳಗೋಡಿನಲ್ಲಿಯೇ ಅಂಗಡಿ ಹಾಕಿದ್ದು, ಅದು ಕೈ ಹತ್ತದೆ ಅರ್ಧಕ್ಕೆ ಬಿಟ್ಟದ್ದು, ಹೊಸನಗರ ತಾಲ್ಲೂಕಿನ ಹೀಲಗೋಡಿನಲ್ಲಿ ಜಮೀನು ಮಾಡಿದ್ದು, ಅದರ ಅಭಿವೃದ್ಧಿಗಾಗಿ ಇಬ್ಬರೂ ಜೀವ ತೇದದ್ದು, ಅನಂತರ ಕಕ್ಕನ ಹಿಸೆಗೆ ಬಂದ ಅದನ್ನು ಮಾರಿ ಕಕ್ಕ ಮತ್ತೆ ಅಪ್ಪನ ಹತ್ತಿರ ದೊಂಬೆಗೆ ಬಂದು ನೆಲೆಸಿದ್ದು ಎಲ್ಲವೂ ಒಂದೊಂದು ರೋಚಕ ಕತೆಗಳೇ ಸರಿ. ಈ ಕಕ್ಕ ನನ್ನ ಅಪ್ಪ-ಅಮ್ಮ ಎಂದರೆ ತನ್ನ ಅಪ್ಪ-ಅಮ್ಮ ಎಂದೇ ನಂಬಿ ನಡೆದುಕೊಳ್ಳುತ್ತಿದ್ದ. ಅಪ್ಪ, ಅಮ್ಮ ಸತ್ತಾಗ ಅವನೂ ನಮ್ಮೊಂದಿಗೆ ಕಂಗಾಲಾಗಿ ಮರುಗಿ ಅವರಿಬ್ಬರ ಅಸ್ಥಿಗಳನ್ನು ಕಾಶಿಗೆ ತೆಗೆದುಕೊಂಡು ಹೋಗಿ ನಿಟ್ಟುಸಿರು ಬಿಟ್ಟಿದ್ದ. ಗಣಪತಿ ಚಿಕ್ಕಪ್ಪನೂ ಕೂಡ ಸೂತಕ ಕಳೆಯುವ ತನಕ ನಮ್ಮೊಂದಿಗೇ ಉಪವಾಸವಿದ್ದು ಅಪ್ಪ-ಅಮ್ಮನ ಬಗ್ಗೆ ತನ್ನ ಅನುಭವಗಳನ್ನು ಹೇಳುತ್ತ ಹೇಳುತ್ತ ಕಂಬಕ್ಕಾತು ಕಣ್ಣೀರು ಸುರಿಸುತ್ತ ಕೂರುತ್ತ ಅಪೂರ್ವವಾದ ಭ್ರಾತೃಪ್ರೇಮ ತೋರುತ್ತಿದ್ದ.

ಅಪ್ಪನ ನೆನಪಿನೊಂದಿಗೇ ನನ್ನನ್ನು ಸದಾ ಕಾಡುವ ಅವರದೊಂದು ವಿಶೇಷ ಗುಣವೆಂದರೆ ಪ್ರಾಣಿ ಮತ್ತು ಸಸ್ಯ ವರ್ಗದಲ್ಲಿದ್ದ ಅವರ ಅಪಾರ ಮಮತೆ ಮತ್ತು ಪ್ರೀತಿ. ನನ್ನಜ್ಜ, ಎಂದರೆ ಅಪ್ಪನ ಅಪ್ಪ ಸತ್ತು ಸೂತಕ ಕಳೆಯುವ ಮೊದಲೇ ಅವರು ಅಡಿಕೆ ತೋಟದಲ್ಲಿ ಕಳೆ ತೆಗೆಯುತ್ತಾ ಗಿಡಗಳಿಗೆ ನೀರು ಹಾಕುತ್ತಿದ್ದರಂತೆ. ನನ್ನ ಬೆನ್ನಿಗೇ ಬಂದ, ಮಾನಸಿಕವಾಗಿ ಸ್ವಲ್ಪ ಅಸ್ವಸ್ಥನಾಗಿದ್ದ ಚಂದ್ರಶೇಖರ ಆಕಸ್ಮಿಕವಾಗಿ ಒಂದು ದಿನ ಸತ್ತೇ ಹೋದ. ಅತ್ತೂ ಅತ್ತು ಮೂಲೆ ಹಿಡಿದಿದ್ದ ಅಮ್ಮ-ಅಕ್ಕ, ಪುರೋಹಿತರಿಗೆ ಅಗತ್ಯದ ಪರಿಕರಗಳನ್ನು ಸಿದ್ಧಪಡಿಸಿಕೊಡುತ್ತಿದ್ದ ಗಣಪತಿ ಚಿಕ್ಕಪ್ಪ, ಸಾಂತ್ವನ ಹೇಳಲು ಬಂದವರ ಸಾಲು ಸಾಲು ಇತ್ಯಾದಿಗಳ ನಡುವೆಯೇ ಅಪ್ಪ ಗುಡುಗಿದ— "ಶ್ರೀಧರಾ ಮೊದಲು ಕೊಟ್ಟಿಗೆಯಲ್ಲಿರುವ ದನಕರುಗಳಿಗೆ ಅಕ್ಕಚ್ಚು(ನೀರು) ಕುಡಿಸಿ ತಿನ್ನಲು ಹುಲ್ಲು ಹಾಕು. ಕೊನೆಗೆ ನಿನ್ನ ಅಳುವುದು ಹೆಣ ಸುಡುವ ಸಂಸ್ಕಾರ ಇತ್ಯಾದಿ ಶಾಸ್ತ್ರ. ಏಳು ಮೇಲೆ; ಬೇಗ ಹೋಗು" ಮನೆಗೆ ನೀರೆತ್ತುವ ಯಂತ್ರ ಬರುವ ವರೆಗೆ ಸ್ನಾನ ಮಾಡಿಯೂ –ಬಿಸಿಲಿರಲಿ ಮಳೆಯಿರಲಿ ನೀರು ಸೇದಿ ಸೇದಿ ಹಾಕುತ್ತಿದ್ದ– ಹಾಕಿಸುತ್ತಿದ್ದ ಅಪ್ಪನ ಅಗಾಧ ಕರ್ತವ್ಯಪ್ರಜ್ಞೆ ಇಂದೂ ನನಗೆ ಅಚ್ಚಹಸಿರು.

ಇಂಥ ನಿರಂತರ ಕ್ರಿಯಾಶೀಲ ಅಪ್ಪನ ಹೆಂಡತಿ– ನನ್ನಮ್ಮ– ತಾಳ್ಮೆಯಲ್ಲಿ, ಅತಿಥಿ ಸತ್ಕಾರದಲ್ಲಿ ಅಪ್ಪನಿಗಿಂತ ಒಂದು ತೂಕ ಮೇಲು. ಹೊಸನಗರ ತಾಲ್ಲೂಕು ಪುರಪ್ಪೇಮನೆ ಶೇಷಪ್ಪನ ಮನೆತನದ ಪುಟ್ಟಯ್ಯ ಕೊಲ್ಲೂರಿ ದಂಪತಿಗಳ ನಾಲ್ಕನೆಯ ಕಿರಿಯ ಮಗಳಾದ ನನ್ನಮ್ಮ ಕಮಲಾಕ್ಷಿ ಗುಣದಲ್ಲಿಯೂ ಹಿರಿಯಳೇ ಸರಿ. ಅಮ್ಮನ ಹಿರಿಯರು ಆ ಊರಿನ

ಆರಾಧ್ಯದೈವ ಉಮಾಮಹೇಶ್ವರನ ದೇವಾಲಯದಲ್ಲಿ ನಡೆಯುವ ರಾಮನವಮಿ ಉತ್ಸವದಂದು ಪಾನಕ-ಪನಿವಾರ ಹಂಚಲು ಆರು ಗುಂಟೆ ಅಡಿಕೆ ತೋಟವನ್ನು ದಾನವಾಗಿ ಬಿಟ್ಟಿದ್ದರಂತೆ. ಅಪಾರ ದೈವಭಕ್ತಿ- ದಾನಧರ್ಮದ ಕುಟುಂಬದ ಹಿನ್ನೆಲೆಯಿಂದ ಬಂದ ನನ್ನಮ್ಮ ಮನೆಗೆ ಬಂದವರಿಗೆ ಬರಿ ನೀರು ಕೊಟ್ಟಿದ್ದೇ ಅಪರೂಪವಾಗಿತ್ತು. ನಮ್ಮ ಬಂಧು-ಬಾಂಧವರಿರಲಿ, ಊರು-ಕೇರಿಯವರಿರಲಿ, ಆಳುಕಾಳುಗಳಿರಲಿ ತಾನೇ ನಿಂತು ಸತ್ಕರಿಸುತ್ತಿದ್ದಳು. ಅಜ್ಜಂಪುರದ ನನ್ನ ಮೂವತ್ತೆರಡು ವರ್ಷಗಳ ಶಿಕ್ಷಕ ವೃತ್ತಿಯಲ್ಲಿ ನನ್ನ ಹೆತ್ತಮಗಳು ಆತ್ಮಾಳಷ್ಟೇ ಅತಿಯಾದ ವಾತ್ಸಲ್ಯದಿಂದ ಕಾಣುತ್ತಿರುವ ಅತಿ ವಿಧೇಯ ವಿದ್ಯಾರ್ಥಿನಿ ಪ್ರೀತಿಯ ಪ್ರಭಾಳನ್ನು (ಇವಳ ವಿಧೇಯತೆ ಬಗ್ಗೆ ಅಮ್ಮನಲ್ಲಿ ಅನೇಕ ಬಾರಿ ಪ್ರಸ್ತಾಪಿಸಿದ್ದೆ) ತಾನು ಕರೆಸಿ ಸತ್ಕರಿಸಲಿಲ್ಲ ಎಂದು ಒಂದೊಮ್ಮೆ ಮಮ್ಮಲ ಮರುಗುತ್ತಿದ್ದ ಅಮ್ಮನ ಮಮತೆಯ ಮೂರ್ತಿ ಕಣ್ಣ ಮುಂದೆ ಬಂದರೆ ನಾನು ಈಗಲೂ ಅತ್ತು ಬಿಡುತ್ತೇನೆ.

ಅಮ್ಮನ ದೊಡ್ಡಣ್ಣ ಸುಬ್ರಾಯನ ತಿಥಿಗೆಂದು ಅವರ ಮಗ ಗೋಪಾಲಕೃಷ್ಣನ ಮನೆಗೆ ಪ್ರೀತಿಪೂರ್ವಕವಾಗಿ ನನ್ನನ್ನು ಕರೆದುಕೊಂಡು ಹೋಗಿ ಸಿಹಿಬೆಲ್ಲವನ್ನು ಅಜ್ಜಂಪುರಕ್ಕೆಂದು ಕೊಡಿಸಿದ ಆ ವಾತ್ಸಲ್ಯಮೂರ್ತಿಗೆ ನಾನೇನು ತಾನೇ ಹೇಳಲು ಸಾಧ್ಯ? ಮಳೆಗಾಲದಂಚಿನಲ್ಲಿ ದೂರದ ಪುರಪ್ಪೇಮನೆಯಿಂದ ಗೋಳಗೋಡಿನ ನಮ್ಮ ಮನೆತನಕ ದೊಡ್ಡದಾದ ಇಡೀ ಹಲಸಿನ ಹಣ್ಣನ್ನು ತಲೆಯ ಮೇಲೇ ಹೊತ್ತು ತಂದು ನಮ್ಮ ಮನೆ ಅಡಿಗೆ ಕೋಣೆಯಲ್ಲಿರುವ ಅಮ್ಮನಿಗೆ ತಲುಪಿಸಿಯೇ ತೃಪ್ತಿಪಡುತ್ತಿದ್ದ ನನ್ನ ಅಮ್ಮನ ಅಣ್ಣ ವೆಂಕಟಗಿರಿಯಪ್ಪನ ಅಥವಾ ಆ ಊರಿನವರೆಲ್ಲ ಪ್ರೀತಿಯಿಂದ ಕರೆಯುವ ಅಪ್ಪಣ್ಣ ಮಾವನ ವರ್ಣನೆಗೆ ನಿಲುಕದ ವಾತ್ಸಲ್ಯಕ್ಕೆ ಮಿಗಿಲಾಮುದನ್ನು ನಾನು ಇದುವರೆಗೂ ಕಂಡಿಲ್ಲ. ಇಂಥ ಹಿನ್ನೆಲೆಯಿಂದ ಬಂದ ಅಮ್ಮನ ಕೈಯಿಂದ ತಿಂದ ಬಗೆಬಗೆಯ ತಿಂಡಿಗಳಿಗೆ, ಕುಡಿದ ಹಣ(ಪಾನೀಯ)ಗಳಿಗೆ, ಬಣ್ಣದ ಸಾತೆಯ ತನುವಿಗೆ– ಎರೆಯಪ್ಪಗೆ ನಾನೇನು ತಾನೆ ಕೊಡಲು ಸಾಧ್ಯ? ಅಮ್ಮ ಒಮ್ಮೆ ಅಜ್ಜಂಪುರಕ್ಕೆ ಬಂದಾಗ ಅಮ್ಮನಿಗೇನು ಬೇಕೆಂದು ಅಂಗಲಾಚಿದರೂ ಹೇಳದ ಆಕೆ ತನ್ನ ಸೊಸೆ– ನನ್ನ ಮಡದಿ– ರೋಹಿಣಿ ಮತ್ತು ಮೊಮ್ಮಗ ಆರ್ಯಮಿತ್ರನೊಂದಿಗೆ ಹೋಗಿ ಮಾರ್ವಾಡಿ ಅಂಗಡಿಯಿಂದ ಕೊಂಡು ತಂದ ಕೈಚೀಲವನ್ನು ತನ್ನ ಆಪ್ತ ಗೆಳತಿ ಖಂಡಿಕಾದ ಪದ್ಮಾವತಮ್ಮನಿಗೆ ತೋರಿಸಿ ತೋರಿಸಿ ತೃಪ್ತಿಪಡುತ್ತಿದ್ದ ಅಮ್ಮನ ಹೃದಯ ಶ್ರೀಮಂತಿಕೆ ನನಗೆ ಬತ್ತಲಾರದ ಗಂಗೆ.

ಅಗತ್ಯದ ವಿದ್ಯಾಭ್ಯಾಸಕ್ಕಾಗಿ ನನ್ನನ್ನು ಖಂಡಿಕಾದ ಪ್ರಾಥಮಿಕ ಶಾಲೆಗೆ ಸೇರಿಸಿದ ನನ್ನಪ್ಪ ಅಲ್ಲಿ ಸರಿಯಾದ ಶಿಕ್ಷಕರಿಲ್ಲವೆಂದು ವರ್ಷದ ನಡುವೆಯೇ ಸಿರಿವಂತೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸೇರಿಸಿದರು. ೬ ನೇ ತರಗತಿಯಿಂದ ೧೦ ನೇ ತರಗತಿ ತನಕ ತುಮಕೂರು ಜಿಲ್ಲೆ ಗುಬ್ಬಿಯ ಶ್ರೀಚಿದಂಬರಾಶ್ರಮದಲ್ಲಿ ಬಿಟ್ಟು ಆಧುನಿಕ ಶಿಕ್ಷಣದೊಂದಿಗೆ ವೇದ-ಸಂಸ್ಕೃತ ಮತ್ತು ಹಿಂದಿಯನ್ನೂ ಕಲಿಯಲು ಅನುವು ಮಾಡಿಕೊಟ್ಟರು. ಅನಂತರ ಸಾಗರದ ಲಾಲಬಹಾದುರ್ ಕಾಲೇಜಿನಲ್ಲಿ ಕನ್ನಡದ ಸುಪ್ರಸಿದ್ಧ ನವ್ಯಕವಿ ಎಂ. ಗೋಪಾಲಕೃಷ್ಣ ಅಡಿಗರಿದ್ದ ಕಾಲದಲ್ಲಿ ಪದವಿಶಿಕ್ಷಣದ ವ್ಯವಸ್ಥೆ ಕಲ್ಪಿಸಿದರು. ಈ ಎಲ್ಲವೂ ನನಗೆ ಹೂವಿನಹಾಸಿಗೆಯಾಗಿರದೆ ಕಲ್ಲು-ಮುಳ್ಳುಗಳ ಕಠಿಣ ಮಾರ್ಗವೇ ಆಗಿತ್ತು. ತೀವ್ರ ಬಡತನದೊಂದಿಗೆ ದುಡಿಯುವ ಕೈಗಳಿಗೆ ಹತ್ತು ಪಾಲು ಹೊಟ್ಟೆಯಿದ್ದ ಆಗಿನ ಕಾಲದಲ್ಲಿ ಶಾಲಾ-ಕಾಲೇಜುಗಳ ಕನಿಷ್ಠ ಶುಲ್ಕ

ಪೂರೈಸುವುದೂ ಗಗನಕುಸುಮವೇ ಸರಿ. ನನ್ನ ಓದಿಗಾಗಿ ಅಪ್ಪ ಬೈದಿದ್ದೆಷ್ಟೋ? ಅಮ್ಮ ಉಪವಾಸವಿದ್ದದ್ದೆಷ್ಟೋ? ಅಕ್ಕ ಪರಿತಪಿಸಿದ್ದೆಷ್ಟೋ? ಆ ದಯಾಮಯಿ ಭಗವಂತನೇ ಬಲ್ಲ.

ಅಂದಿನ ನನ್ನ ಖರ್ಚಿಗಾಗಿ ಮನೆಯಿಂದ ಮೇಲಿನ ದೊಂಬೆ ತನಕ ಮುಂಜಾನೆದ್ದು ರಸ್ತೆಯಲ್ಲಿ ಬಿದ್ದ ಸಗಣಿ ಆರಿಸಿ ಗೊಬ್ಬರ ಮಾಡಿ ಅದನ್ನೇ ಅಪ್ಪನಿಗೆ ಮಾರಿ ಹಣ ಪಡೆಯುತ್ತಿದ್ದೆ. ನಮ್ಮೂರಿನ ದನ, ಎಮ್ಮೆ ಕೊಟ್ಟಿಗೆಯಲ್ಲಿ ಕೊಡುವ ಹಾಲಿಗಿಂತ ರಸ್ತೆಯಲ್ಲಿ ಹಾಕುವ ಸೆಗಣಿಗಾಗಿ ನಾನು ಕಾಯುತ್ತಿದ್ದೆ. ಒಂದು ದನ ಅಥವಾ ಎಮ್ಮೆ ಸಗಣಿ ಹಾಕಿತೆಂದರೆ ಸ್ವರ್ಗ ಸಿಕ್ಕಷ್ಟು ಸಡಗರ-ಸಂಭ್ರಮಗಳಿಂದ ಬೀಗಿ ಬೀಗಿ ಅವುಗಳಂಡಿಗೆ ನಾನು ಬುಟ್ಟಿ ಹಿಡಿಯುತ್ತಿದ್ದೆ. ಹಾಗೆ ಮಾರಿದ ಗೊಬ್ಬರದ ಹಣದಿಂದ ನಾನೊಂದು ಉದ್ದನೆಯ ಪೈಜಾಮ-ಅಂಗಿಯನ್ನು ಧರಿಸಿ ಮೇಲಿನ ಮನೆ ತನಕ ಹೋಗಿ ಪ್ರದರ್ಶನ ಮಾಡಿ ಬಂದಿದ್ದೆ- ಬಿಂಕ-ಬಡಿವಾರ-ಅಹಂಕಾರ ಗತ್ತುಗಳ ಮಿಶ್ರಣದಿಂದ. ಆದರೆ ಯಾವುದೇ ಕೆಲಸವೂ ಮೇಲಲ್ಲ- ಕೀಳಲ್ಲ ಎಂಬುದನ್ನು ನನಗೆ ಕಲಿಸಿದ ಅಪ್ಪ-ಅಮ್ಮನ ಮಾರ್ಗದರ್ಶನ ನನಗಿಂದು ದಾರಿದೀಪ ವಾಗಿದೆ. ನಾನೀಗ ಪ್ರೌಢಶಾಲೆಯ ಮುಖ್ಯ ಶಿಕ್ಷಕನಾಗಿದ್ದರೂ ಜನದಟ್ಟಣೆಯ ಪೇಟೆ ವೃತ್ತದಿಂದ ಎಳನೀರ ಸಿಪ್ಪೆ ಚೀಲ ತಲೆ ಮೇಲಿಟ್ಟು ತರುತ್ತೇನೆ. ನನ್ನ ಗುರುಗಳ ಮನೆಗೆ ಮಡಿನೀರು ಬೇಕೆಂದರೆ ಬರಿ ಹೊಟ್ಟೆ ಬಿಟ್ಟುಕೊಂಡು ತುಂಬಿದ ಕೊಡ ಹಿಡಿದುಕೊಂಡು ಹೋಗುತ್ತೇನೆ.

ಕಾಲೇಜಿಗೆ ಹೋಗುವಾಗ ಬೇಸಿಗೆ ರಜಾದಿನಗಳಲ್ಲಿ 'ಮಗನಿಗೆ ವ್ಯವಹಾರದ ಜ್ಞಾನ' ಬರಲೆಂದು ನನ್ನಪ್ಪ ನನ್ನನ್ನು ಸಾಗರದ 'ಶ್ರೀ ಗಜಾನನ ಅಡಿಕೆ ಮಂಡಿ'ಯಲ್ಲಿ ಗುಮಾಸ್ತನನ್ನಾಗಿ ಮಾಡಿ, ಅಲ್ಪಸ್ವಲ್ಪ ವ್ಯವಹಾರ ಕಲಿಸಿದರು. ಅಪ್ಪನ ಈ ಮುಂದಾಲೋಚನೆಗೆ ನಾನೀಗಲೂ ಆ ವಿಷಯದಲ್ಲಿ ತೀರಾ ಹಿಂದೇ ಇದ್ದೇನೆ. ಹಾಗೆ ವ್ಯವಹಾರ ಜ್ಞಾನವಿದ್ದಿದ್ದರೆ ನಾನು ಗಳಿಸಿದ ಹಣವನ್ನೆಲ್ಲ ಪುಸ್ತಕ ಕೊಳ್ಳಲು, ಊರೂರು ತಿರುಗಲು ವ್ಯಯ ಮಾಡುತ್ತ, ಮನೆಯ ಮಾತಂತಿರಲಿ ಸಾಗರದಲ್ಲಿ ಸ್ವಂತದ್ದೊಂದು ನಿವೇಶನ ಕೊಳ್ಳದ ಜಾಣ್ಮೆಯನ್ನು ಗಳಿಸುತ್ತಿರಲಿಲ್ಲ.

ಅಪ್ಪ ಕಲಿಸಿದ ಮತ್ತೊಂದು ಗುಣವೆಂದರೆ ಕರ್ತವ್ಯಪ್ರಜ್ಞೆ ಮತ್ತು ಕಡಿಮೆ ರಜ ಹೆಚ್ಚು ಕೆಲಸ. 'ರಜಾಕ್ಕಾಗಿ ರಜಾ ಹಾಕಬೇಡ, ಮೊದಲು ಕರ್ತವ್ಯ ಅನಂತರ ರಜಾ' ಎಂದು ತಾಕೀತು ಮಾಡಿದ್ದರು. ಇದರಿಂದ ಪ್ರಭಾವಿತನಾದ ನಾನು ನನ್ನ ಮದುವೆಗೆ ಆರು ಪ್ರಾಸಂಗಿಕ ರಜಾ ಹಾಕಿದ್ದರೆ ಅಮ್ಮ ಸತ್ತಾಗ ಕೇವಲ ಐದು ಗಳಿಕೆ ರಜಾಗಳನ್ನು ಬಳಸಿಕೊಂಡಿದ್ದೆ. ಬರಿದೆ ರಜಾ ಹಾಕುವುದನ್ನು, ಹಾಕದಿರುವುದನ್ನು ಮೇಲಧಿಕಾರಿಗಳು ಗಮನಿಸಲಿ, ಗಮನಿಸದಿರಲಿ 'ನಿನ್ನ ಗುರಿಯಂತೆ ಮಾರ್ಗವೂ ಸರಿಯಾಗಿರಲಿ' ಎಂದೇ ಅರೆದು ಕುಡಿಸಿದ್ದರು. ಇದರಿಂದಾಗ ನನ್ನ ಗಳಿಕೆ ರಜಾಗಳ ಉಳಿಕೆಯೊಂದಿಗೆ ನನ್ನ ಹಕ್ಕಿನಲ್ಲಿದ್ದ ಸಾಂದರ್ಭಿಕ ರಜಾಗಳಲ್ಲಿ ಸುಮಾರು ೧೫೦ ಖರ್ಚಾಗದೆ, ನೈತಿಕವಾಗಿ ಜಮಾ ಆಗುತ್ತ ಹಾಗೇ ಉಳಿದಿವೆ. ಇಂಥ ಕರ್ತವ್ಯಪ್ರಜ್ಞೆಯ ಪರಾಕಾಷ್ಠೆಯ ಉದಾಹರಣೆ ಅಮ್ಮ ಅಪ್ಪ ಸತ್ತ ಸಂದರ್ಭದಲ್ಲಿ ನನಗೆ ಪ್ರಾಪ್ತವಾಯಿತು.

'ಅಮ್ಮನಿಗೆ ತೀವ್ರ ಹೃದಯಾಘಾತವಾಗಿದೆಯೆಂದೂ ಕೂಡಲೇ ಸಾಗರದ ಸಂಜೀವಿನಿ ಆಸ್ಪತ್ರೆಗೆ ಬರಬೇಕೆಂದೂ' ಅಕ್ಕನ ಮಗ- ಆರತಿ ಎಂಟರ್‌ಪ್ರೈಸಸ್‌ನ ಮಾಲಿಕ ರವೀಂದ್ರ ದೂರವಾಣಿಯಿಂದ ತಿಳಿಸಿದ. ಅಂದು ಶನಿವಾರವಾದ್ದರಿಂದ ನಾನು ಮಧ್ಯಾಹ್ನ ಮೂರಕ್ಕೇ ಸಾಗರಕ್ಕೆ ಹೊರಟು ಸಂಜೆ ಆರರ ಸುಮಾರಿಗೆ ಆಸ್ಪತ್ರೆ ಸೇರಿದೆ. ಅಮ್ಮ ಪ್ರಜ್ಞಾಹೀನ

ಸ್ಥಿತಿಯಲ್ಲಿದ್ದಳು. ದುಃಖ ಉಮ್ಮಳಿಸಿ ಬಂತು. ಹಿಂದಿನವೆಲ್ಲ ನೆನಪಾಗಿ ಔಚಿತ್ಯದ ಎಲ್ಲೆ ಮೀರಿ ಗಟ್ಟಿಯಾಗಿ ಅತ್ತುಬಿಟ್ಟೆ. ಆ ರಾತ್ರಿಯಿಡೀ ನಾನು, ಅಕ್ಕ, ನರಹರಿ ಮತ್ತು ರಂಗನಾಥ ಅಮ್ಮನ ಬಳಿ ಇದ್ದೆವು. ಅಮ್ಮನ ಆಯುಸ್ಸು ಇನ್ನು ಒಂದೇ ದಿನ ಎಂದು ಗೊತ್ತಿದ್ದ ನರಹರಿ-ರಂಗನಾಥ ಅದನ್ನು ನನಗೆ ತಿಳಿಸುವುದು ಹೇಗೆಂಬ ಸಂದಿಗ್ಧದಲ್ಲಿದ್ದರು. ತಮ್ಮ ಪರಮೇಶ್ವರನಂತೂ ಊಟವನ್ನೂ ಮಾಡದೇ ಮನದಲ್ಲಿಯೇ ಮರುಗುತ್ತಿದ್ದ. ಭಾನುವಾರ ಸಂಜೆ ಸಮಯ. ಆಸ್ಪತ್ರೆಯಿಡೀ ಬಂಧುಗಳು, ಮನೆ ಮಂದಿ, ಹಿತೈಷಿಗಳು, ಅಮ್ಮನ ಗಟ್ಟಿ ಗೆಳತಿ ಪದ್ಮಾವತಿ, ಒಲುಮೆಯ ಅತ್ತಿಗೆ ಸರಸ್ವತಿ ಮತ್ತಿತರರಿಂದ ತುಂಬಿದೆ. ಸಾವು ಸಮೀಪಿಸುತ್ತಿರುವ ಸಂಗತಿ ಅವರಿಬ್ಬರಿಗೆ ಮತ್ತು ನಮ್ಮ ಕುಲಪುರೋಹಿತರೂ, ಹಿರಿಯರೂ ಆಗಿರುವ ಖಂಡಿಕಾದ ರಾಮಭಟ್ಟರಿಗೆ ತಿಳಿದಿದೆ. ಆದರೆ ನಮಗೆ ಹೇಳುವಂತಿಲ್ಲ; ಹೇಳದೆ ಬಿಡುವಂತಿಲ್ಲ. ಮರುದಿನವೇ ೧೦ ನೇ ತರಗತಿ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ಸಿದ್ಧತಾ ಪರೀಕ್ಷೆ- ಪ್ರಶ್ನೆಪತ್ರಿಕೆಗಳೆಲ್ಲ ನನ್ನ ಸುಪರ್ದಿನಲ್ಲಿದ್ದವು. ಸಾವಿನಂಚಿನಲ್ಲಿದ್ದ, ಈಗಲೇ ಸಾಯುತ್ತಾಳೆಂದು ಖಾತ್ರಿಯಿದ್ದ ಅಮ್ಮನ ಶರೀರ ಎಂಬ ಹೆಣಕ್ಕೆ ಬಾಗಿ ನಮಸ್ಕರಿಸಿದೆ. ಎಪ್ಪತ್ತನಾಲ್ಕು ವಸಂತಗಳನ್ನು ಒಂದು ತಪಸ್ಸಿನಂತೆ ಪೂರೈಸಿದ ಅಮ್ಮ ಆಗ ನೇಪಥ್ಯಕ್ಕೆ ಸರಿಯುತ್ತಿದ್ದಳು.

ನಾನು ಕಣ್ಣೀರು ಸುರಿಸುತ್ತಲೇ ಅಜ್ಜಂಪುರದತ್ತ ಪ್ರಯಾಣ ಬೆಳೆಸಿದೆ. ನನ್ನ ತಂಗಿಯ ಗಂಡ ಶಿವಮೊಗ್ಗಾದಲ್ಲಿರುವ ಶೇಷಾದ್ರಿ ಮತ್ತು ಅಮ್ಮನ ಅಕ್ಕನ ಮಗ ಹೊನ್ನೇಸರದ ಹೊಂಗೋಡು ಚಂದ್ರಶೇಖರ ಇಬ್ಬರೂ ಸಮಾಧಾನ ಹೇಳುತ್ತ ಹೇಳುತ್ತ ಬಂದು ಶಿವಮೊಗ್ಗಾದ ಬಸ್ಸಿನಲ್ಲಿ ಕೂರಿಸಿದರು. ಸಾಗರ ಬಿಟ್ಟು ತರೀಕೆರೆ ತಲುಪುವಷ್ಟರಲ್ಲಿ ಅಮ್ಮನ ಪ್ರಾಣಪಕ್ಷಿ ಹಾರಿ ಹೋಗಿತ್ತು. ಮನೆಗೆ ಬಂದೊಡನೆ ಹೆಂಡತಿ-ಮಗನಿಂದ ವಿಷಯ ತಿಳಿದ ನಾನು ಸ್ವಲ್ಪವೂ ಗಾಬರಿಯಾಗದೆ ಮಗನೊಡನೆ ಹೋಗಿ ಶಾಲಾ ಆಡಳಿತ ಮಂಡಳಿಯ ಕಾರ್ಯದರ್ಶಿ ಯವರಿಗೆ ವಿಷಯ ತಿಳಿಸಿ ರಜಾ ಪಡೆದೆ. ಮರುದಿನ ಬೆಳಿಗ್ಗೆ ಐದು ಗಂಟೆಗೇ ಎದ್ದು ಲಾಟೀನು ಹಿಡಿದು ಮಗಳೊಂದಿಗೆ ಶಾಲೆಗೆ ಹೋಗಿ ಪ್ರಶ್ನೆಪತ್ರಿಕೆ ಮತ್ತಿತರ ಅಗತ್ಯ ದಾಖಲೆಗಳಿಗೆ ಸೂಕ್ತ ವ್ಯವಸ್ಥೆ ಮಾಡಿ ಅಮ್ಮನ ಸಂಸ್ಕಾರಕ್ಕೆ ಸಿದ್ಧನಾದೆ. 'ಸತ್ತ ಅಮ್ಮನನ್ನು ಬಿಟ್ಟು ಹೊರಟವನೆಂಬ' ಪಟ್ಟ ನನಗೆ ಊರಲ್ಲಿ ಸಿಕ್ಕಿತಾದರೂ ಕರ್ತವ್ಯಪ್ರಜ್ಞೆಯನ್ನು ಮರೆಯಲಿಲ್ಲವೆಂಬ ನೈತಿಕ ಜಯ, ಮಾನಸಿಕ ತೃಪ್ತಿ ನನಗೆ ಮಾತ್ರವಲ್ಲ ನನ್ನ ಕುಟುಂಬ ವರ್ಗದವರಿಗೆ ಶಾಶ್ವತವಾಗಿ ಲಭಿಸಿತು. ಇದನ್ನು ಕಲಿಸಿದ ಅಪ್ಪ ಕಾಲೇಜಿನಲ್ಲಿ ಕಲಿತವರಲ್ಲ; ಅಮ್ಮ ಭಾಷೆ-ಸಾಹಿತ್ಯ ಸಮಾಜಸೇವೆ ಅರಿತವರಲ್ಲ.

ಅಪ್ಪನ ಮಿತವ್ಯಯ ತೀರ ಅಪರೂಪದ್ದಾಗಿತ್ತು. ಆಹಾರ-ಬಟ್ಟೆಯೇ ಮುಂತಾಗಿ ಪ್ರತಿಯೊಂದರಲ್ಲಿಯೂ ಆತ ತುಂಬ ಮಿತವ್ಯಯಿ. ಅನ್ನವನ್ನಂತೂ ಆತ ತುಂಬ-ತುಂಬ ಕಡಿಮೆ ತಿನ್ನುತ್ತಿದ್ದರು; ನೀರು-ಪಾನಕ-ಮಜ್ಜಿಗೆಗಳನ್ನು ಧಾರಾಳವಾಗಿ ಬಳಸುತ್ತಿದ್ದರು. ಮನೆಯಲ್ಲಿರುವಾಗ ಅಂಗಿ ಧರಿಸಿದ್ದೇ ನನಗೆ ನೆನಪಿಲ್ಲ; ಉಡಲೊಂದು ಗಿಡ್ಡನೆಯ ಪಂಚೆ-ಹೊದೆಯಲೊಂದು ಶಲ್ಯ. ಅಂಗಿಗಳ ಬಗ್ಗೆ ಅವರ ನಿರ್ಲಿಪ್ತತೆಯನ್ನು ಕುರಿತು ನಾನೊಮ್ಮೆ ಅಪ್ಪನನ್ನೇ ಪ್ರಶ್ನಿಸಿದೆ. "ನೋಡು ಶ್ರೀಧರಾ, ಇದಕ್ಕೆ ಮುಖ್ಯವಾಗಿ ಮೂರು ಕಾರಣಗಳಿವೆ. ಅಂಗಿ ಹೊಲಿಸಲು ಅಳತೆ ಕೊಡಲೆಂದು ಸಾಗರದಲ್ಲಿ ಆ ದರ್ಜಿ ಮುಂದೆ ತುಂಬಾ ಹೊತ್ತು

ಕಾಯುವುದು ನನಗೆ ಸೇರದು. ತೊಡುವ ಅಂಗಿಗಳಿಗಿಂತಲೂ ಪೆಟ್ಟಿಗೆಯಲ್ಲಿಡುವ ಅಂಗಿಗಳೇ ಹೆಚ್ಚಾದರೆ ಅದು ರಾಷ್ಟ್ರೀಯ ನಷ್ಟವಲ್ಲವೆ? ಮೂರನೆಯ ಕಾರಣವೆಂದರೆ ಮಾಣಿಯಿಂದ (ನನ್ನಣ್ಣ) ರಂಗನ ತನಕ ನೀವಾರೂ ಹೊಲಿಸಿದ ಅಂಗಿಗಳನ್ನು ಅವು ಪೂರ್ತಿಯಾಗಿ ಹರಿಯುವ ತನಕ ಧರಿಸುವುದಿಲ್ಲ. ಹಳೇ ಅಂಗಿಗಳನ್ನು ಹಾಗೆ 'ಜೋಲಂಬಾಲೆ' ಮಾಡಿ (ಅಸ್ತವ್ಯಸ್ತ ಎಂದು) ಗೂಟಕ್ಕೆ ನೇತು ಹಾಕುತ್ತೀರಿ. ಅಂಥ ಹಳೆ ಅಂಗಿಗಳನ್ನು ನಾನಾದರೂ ಪೂರ್ತಿ ಹರಿಯುವಷ್ಟು ಬಳಸಬಹುದಲ್ಲವೆ? ನನಗವೇ ಸಾಕು." ಅಪ್ಪನ ಅಂಗಿಗಳ ಆಯ್ಕೆ ಬಗ್ಗೆ ಅವರಿವರು ನಗುತ್ತಿದ್ದರೂ ಅಪ್ಪನಿಗೆ ಲಕ್ಷ್ಯವಿರಲಿಲ್ಲ. ಅಪ್ಪನ ಮನಃಸ್ಥಿತಿ ಈ ಅಂಗಿ ಪ್ರಪಂಚದಿಂದ ಬಲು ದೂರ ಸಾಗಿತ್ತು. ಆಂಗ್ಲ ಸಾಹಿತಿ ಥೋರೋ ಬರೆದ ವಾಲ್ಡನ್‌ನಲ್ಲಿ ಬಂದರೆ ಮಾತ್ರ ಅನುಸರಿಸುವ ನನ್ನಂಥ ಅರ್ಧಕೊಡಗಳಿಗೆ ಅಪ್ಪ ಹೇಗೆ ಹತ್ತಿರವಾದಾನು ಹೇಳಿ?

ಅಪ್ಪ ಸತ್ತ ಹದಿನಾರನೇ ದಿನ, ಸೂತಕದ ಶಾಸ್ತ್ರ ಕಳೆದರೂ ಉಮ್ಮಳದ ಪರಿಸರ ಸಡಿಲವಾಗಿರಲಿಲ್ಲ. ನಾನು ಅಜ್ಜಂಪುರಕ್ಕೆ ಹೊರಡುವ ಸಮಯವಾಗುತ್ತಾ ಬಂತು. 'ಒಟ್ಟಿಗೇ ಊಟ ಮಾಡಿ ಸಾಗರದ ವರೆಗೆ ಒಟ್ಟಿಗೇ ಹೋಗೋಣ' ಎಂದು ಕಿರಿಯ ಸಹೋದರ ರಂಗನಾಥ ದುಃಖಿಸುತ್ತಲೇ ಹೇಳಿದ. ಅದಕ್ಕೆ ಸಮ್ಮತಿಸಿದ ನಾನು ಅದೂ ಇದೂ ಜೋಡಿಸುತ್ತ ಅಮ್ಮನ ಸುತ್ತಲೇ ಸುತ್ತುತ್ತಿದ್ದೆ.

ಗಂಡನನ್ನು ಕಳೆದುಕೊಂಡ ದುಃಖದ ನಡುವೆಯೂ ಅಮ್ಮ ನನಗಾಗಿ ಸೋರಲೆ ಸೊಪ್ಪಿನ ಚಟ್ನಿಯನ್ನು ಒರಳಿನಲ್ಲಿ ರುಬ್ಬುತ್ತಿದ್ದಳು. ಮನೆಯಲ್ಲಿ ಮಿಕ್ಸಿ ಮತ್ತು ವಿದ್ಯುತ್ತಿನ ಅನುಕೂಲವಿದ್ದರೂ ಕೂಡ– ಮಿಕ್ಸಿ ಚಟ್ನಿ ರುಚಿಸುವುದಿಲ್ಲ– ರಾತ್ರಿಗೇ ಹಾಳಾಗುತ್ತದೆ ಎಂಬ ವಾಸ್ತವ ಕಾರಣದಿಂದ. ಹನ್ನೆರಡು ಗಂಟೆಯ ಮಟಮಟ ಮಧ್ಯಾಹ್ನ, ನಮ್ಮ ಕುಟುಂಬದ ಗೆಳೆಯರಿಬ್ಬರ ಆಗಮನ. ಅವರು ಯಾವುದೋ ಮುಖ್ಯವಾದ ವಿಚಾರಕ್ಕೆ ನಾಲ್ಕೈದು ಮನೆಗಳನ್ನು ಹತ್ತಿ-ಇಳಿದು ನಮ್ಮ ಮನೆಗೂ ಬಂದಿದ್ದರು. ಅವರ ಧ್ವನಿ ಕೇಳಿ ಸೀದ ಜಗುಲಿಗೇ ಬಂದ ಅಮ್ಮನ ವಾತ್ಸಲ್ಯದ ಕರೆ– 'ಸೂರೂ, ರಾಮೂ, ನಡು ಮಧ್ಯಾಹ್ನವಾಗಿದೆ. ಹೇಗೂ ನಮ್ಮ ಶ್ರೀಧರನೂ ಇದ್ದಾನೆ. ಸೋರಲೇ ಸೊಪ್ಪಿನ ಚಟ್ನಿಯನ್ನು ನಾನೇ ಕೈಯಿಂದ ಬೀಸಿಟ್ಟಿದ್ದೇನೆ. ಕೈಕಾಲು ತೊಳೆದು ಊಟಕ್ಕೆ ಬನ್ನಿ.' ಸ್ನಾನವಾಗಿಲ್ಲ ಎಂದು ಸಬೂಬು ನುಡಿದರೂ ಬಿಡದೆ ಸ್ನಾನ ಮಾಡಿಸಿ ಊಟ ಬಡಿಸಿಯೇ ತಾನು ಊಟ ಮಾಡಿದಳು. ಮಜ್ಜಿಗೆ ಅನ್ನ ಊಟ ಮಾಡುವಾಗ ಅಮ್ಮನ ಪ್ರಶ್ನೆ– 'ಅವರು ಸತ್ತರೆಂದು ನಿಮಗೆ ಊಟ ಬಡಿಸದೆ ನಾನು ಅಳುತ್ತಿದ್ದರೆ ನಿಮ್ಮ ಹೊಟ್ಟೆ ತುಂಬುತ್ತದೆಯೆ? ಇದಕ್ಕಿಂತ ಉತ್ತಮ ದೇವರ ಪೂಜೆ ನನಗೇನು ಬೇಕು?' ಇಂಥ ಸೂತಕೋತ್ತರ ಸಮಯದಲ್ಲಿಯೂ ಇದು ಹೇಗೆ ಸಾಧ್ಯ ಎಂದು ನನ್ನ ತಮ್ಮ ಅವಾಕ್ಕಾಗಿ ಕೇಳಿದ. 'ಅಮ್ಮನದು ಆಡಂಬರದ ಧಾರ್ಮಿಕ ಜೀವನವಾಗಿರಲಿಲ್ಲ. ಅವಳೆಂದೂ ವೇದ ಓದಿ, ವಾದದಲ್ಲಿ ಗೆದ್ದು ಶಾಲು ಹೊದ್ದಿರಲಿಲ್ಲ. ಮಠ-ಮಂದಿರ-ಪರಿಷತ್ತು ಎಂದು ಆರ್ಭಟಿಸಲಿಲ್ಲ. ಆದರೆ ಪರೋಪಕಾರ, ದಯೆ, ಅನುಕಂಪ ಮತ್ತು ಅತಿಥಿಸೇವೆ ಅವಳಿಗೆ ಮುಖ್ಯವಾಗಿತ್ತು; ರಕ್ತದಲ್ಲಿ ಹರಿದು ಬಂದಿತ್ತು. ಅವಳ ಜೀವನಧರ್ಮವೇ ಅದಾಗಿತ್ತು. ಅವಳಿಗೆ ಜೀವನ ಬೇರೆ ಧರ್ಮ ಬೇರೆ ಆಗಿರದೆ ಎರಡೂ ಒಂದೇ ಆಗಿತ್ತು. ಧಾರ್ಮಿಕ ಜೀವನಕ್ಕಿಂತ ಜೀವನಧರ್ಮಕ್ಕೆ ಮಹತ್ವವಿದೆ' ಎಂದು ನಾನು ಅಮ್ಮ ಕಲಿಯದೇ ಆಚರಿಸಿದ್ದನ್ನು

ನಯವಾಗಿ ವಿವರಿಸಿದೆ. ಇದನ್ನೇ ಆ ಗೆಳೆಯ ನಮ್ಮೂರಿನ ವಕೀಲ ಸೂರ್ಯನಾರಾಯಣ ಇಂದೂ ಹೆಮ್ಮೆಯಿಂದ ಹೇಳುತ್ತಾನೆ, "ಶ್ರೀಧರಣ್ಣ, ನಿನ್ನಮ್ಮ- ಕಮಲಾಕ್ಷಕ್ಕ ನಿನಗೆ ಮಾತ್ರ ಅಮ್ಮನಲ್ಲ ನನಗೂ ಕೂಡ ಅಮ್ಮ. ನಾವೆಲ್ಲ ಹಣ ಖರ್ಚು ಮಾಡಿ ಓದಿದೆವು. ನಿನ್ನಮ್ಮ ಓದಿಗೂ ಹಣ ಖರ್ಚು ಮಾಡದೆ ಆ ಹಣದಿಂದಲೂ ಅತಿಥಿ ಸತ್ಕಾರ ಮಾಡಿದಳು. ನಾವು ಕಲಿಯಲಾಗದ್ದನ್ನು ಅವಳು ಆಚರಣೆಗೆ ತಂದು ನನ್ನಂಥ ಅನೇಕರಿಗೆ ಮಾದರಿಯಾದಳು."

ಸೂತಕದ ಮನೆಗಳಲ್ಲಿ ಜ್ಞಾತಿಗಳ ಹೊರತಾಗಿ ಉಳಿದವರಾರೂ ಆಹಾರ ಸ್ವೀಕರಿಸಬಾರ ದೆನ್ನುವ ಅಪರ ಸಂವಿಧಾನಕ್ಕೆ ವಿರುದ್ಧವಾಗಿ ಅಮ್ಮ ಸತ್ತ ಹತ್ತನೆಯ ದಿನ ಮಧ್ಯಾಹ್ನ ಅಮ್ಮನ ಅಭಿಮಾನಿ ಖಂಡಿಕದ ಕೆ. ಟಿ. ಮಹಾಬಲಗಿರಿ ಸಾಂತ್ವನ ಹೇಳಲು ಬಂದವರಾದರೂ ಸ್ನಾನ ಮಾಡಿ ಊಟ ಮಾಡುವಷ್ಟು ಅಮ್ಮ ಮಡಿ ಮೀರಿ ಬೆಳೆದಿದ್ದಳು. ಆಚಾರ-ವಿಚಾರ ಮತ್ತು ಧಾರ್ಮಿಕ ವಿಷಯಗಳ ಬಗ್ಗೆ ಅಧಿಕೃತವಾಗಿ ಮಾತನಾಡುವ ನಮ್ಮ ಮನೆತನದವನೇ ಆದ ಆಚೆದಿಂಬದ ನಾರಾಯಣ ಕೂಡ ಅಮ್ಮ ಕರೆದ ಕೂಡಲೇ ಮರುಮಾತನಾಡದೆ ಒಳಗೆ ಬಂದು 'ಆಸರಿಗೆ' ಕುಡಿಯುವಷ್ಟು ಅಮ್ಮ ತನ್ನದೇ ಆದ ಪ್ರಭಾವ-ಗೌರವ ಸಂಪಾದಿಸಿದ್ದಳು. ಅಪ್ಪ ಅಗಾಧ ಜೀವನಪ್ರೀತಿ, ಸದಾ ಅಧ್ಯಯನಶೀಲತೆ ಮತ್ತು ಶಿಸ್ತುಬದ್ಧತೆಗೆ ಹೆಸರಾಗಿದ್ದರೆ ಅಮ್ಮ ಅನುಪಮ ಅಂತಃಕರಣ, ಅತಿಯಾದ ಮಮತೆ ಮತ್ತು ಫಲಾಪೇಕ್ಷೆಯಿಲ್ಲದ ಸದಾ ಸಾಂತ್ವನಕ್ಕೆ ಹೆಸರಾಗಿದ್ದಳು.

ಬೀದಿ ಬೀದಿಗಳಲ್ಲಿ ಸಗಣಿ ಎತ್ತುತ್ತ ಎತ್ತುತ್ತ ಮಲೆನಾಡ ಹಳ್ಳಿ ಮೂಲೆಯಲ್ಲಿಯೇ ಕೊರಬೇಕಾಗುತ್ತಿದ್ದ ನನಗೆ ಕನ್ನಡ-ಇಂಗ್ಲಿಷ್-ಸಂಸ್ಕೃತ-ಹಿಂದೀ ಭಾಷೆಗಳ ಪ್ರಾಥಮಿಕ ಜ್ಞಾನ, ವೇದ-ವ್ಯವಹಾರ ಜ್ಞಾನ ಅದಕ್ಕಿಂತ ಮಿಗಿಲಾಗಿ ಆತ್ಮಾಭಿಮಾನ ಮತ್ತು ಆತ್ಮವಿಶ್ವಾಸಗಳನ್ನು ಕಲಿಸಿದರು. ಜ್ಞಾನದಾಹ ಮುಂದಿದ್ದು ಹಣದಾಹ ಹಿಂದಿರುವಂತೆ, ಸದಾ ಕ್ರಿಯಾಶೀಲನಾಗಿ, ಪರೋಪಕಾರಿಯಾಗಿರದಿದ್ದರೂ ಪರಾಪಕಾರಿಯಾಗದಂತೆ, ಪರನಿಂದೆಯಲ್ಲಿಯೇ ಕಾಲಹರಣ ಮಾಡದಂತೆ ಅಪರೂಪದ ವ್ಯಕ್ತಿತ್ವ ರೂಪಿಸಿದರು. ಪ್ರತಿ ದಿನ ಓದಿ-ಬರೆಯುವಂತೆ, ಪರರ ತಪ್ಪು ತಿದ್ದದಂತೆ, ಸಾಲ ಮಾಡಿ ಬದುಕದಂತೆ, ತಿಪ್ಪದೇ ತಿದ್ದಲು ತಮ್ಮ ಶಕ್ತಿ-ಬಲ- ಪ್ರಾಮಾಣಿಕತೆ, ಶರೀರ, ಹಣ ಮತ್ತು ಸಮಯಗಳನ್ನೇ ಒಂದು ಮಾಡಿ, ಪ್ರತಿಫಲಾಪೇಕ್ಷೆ ಇರದೆ ನಿರ್ವಿಕಾರ ಭಾವದಿಂದ ಧಾರೆಯೆರೆದ, ನನ್ನ ಬದುಕಿಗೆಂದೆಂದೂ ಆದರ್ಶವಾಗಿಯೇ ಉಳಿಯುವ ಅಪ್ಪ-ಅಮ್ಮರನ್ನು ಮರೆಯಲಿ ಹೇಗೆ? ನಾನಿಂದು ಇವತ್ತಿನ ಹಂತಕ್ಕೆ ಬರಲು ಕಾರಣರಾದ ಅಪ್ಪ-ಅಮ್ಮನನ್ನು ಪ್ರತಿ ಕ್ಷಣದಲ್ಲಿಯೂ ನೆನೆಯುತ್ತೇನೆ. ಅವರ ಔದಾರ್ಯದ ಶ್ರೀಮಂತಿಕೆಗೆ, ಸೋಲರಿಯದ ಮನೋನಿರ್ಧಾರಕ್ಕೆ, ತಮಗಿಂತ ಮಗನ ಪ್ರಗತಿ ಮಿಗಿಲಾಗಲಿ ಎಂಬ ಮಹತ್ತರವಾದ ಮುನ್ನೋಟಕ್ಕೆ ಮನಃಪೂರ್ವಕ ನಮಸ್ಕರಿಸುತ್ತ ಕೃತಜ್ಞನಾಗಿರುತ್ತೇನೆ. ಅಪ್ಪ-ಅಮ್ಮನ ಬದುಕು ಮತ್ತು ಅಂತ್ಯದ ಕ್ಷಣಗಳು ನೆನಪಾದಾಗ ಒಮ್ಮೆ ದುಃಖ ಮಡುಗಟ್ಟಿ ಬಂದರೂ ಅವರ ಜೀವನೋತ್ಸಾಹಕ್ಕೆ ತಲೆಬಾಗುತ್ತೇನೆ.

■ ಜಿ. ಟಿ. ಶ್ರೀಧರ ಶರ್ಮ :

ತ್ಯಾಗರಾಜ ವಿಸ್ತರಣೆ, ಅಜ್ಜಂಪುರ-೫೭೭ ೫೫೭, ತಾ. ತರೀಕೆರೆ, ಜಿ. ಚಿಕ್ಕಮಗಳೂರು ■

ನನ್ನ ಅಪ್ಪಯ್ಯ ಮತ್ತು ಅಮ್ಮ

ಪ್ರೇಮಾ ಭಟ್

ನಮ್ಮದು ದಕ್ಷಿಣ ಕನ್ನಡ (ಈಗ ಉಡುಪಿ) ಜಿಲ್ಲೆಯ ಕುಗ್ರಾಮಗಳಲ್ಲಿ ಒಂದಾದ ಹೆರ್ಗ. ಉಡುಪಿಯ ಮಠದಲ್ಲಿ ವೇದಾಭ್ಯಾಸ ಮಾಡುತ್ತಿದ್ದ ನನ್ನ ಅಪ್ಪಯ್ಯ ಜನಾರ್ದನ ಭಟ್ಟರನ್ನು ಹಾದಿ ತಪ್ಪಿಸಿ, ಪಟ್ಟಣಕ್ಕೆ ಕರೆತಂದವರು ಬೇರಾರೂ ಅಗಿರದೇ ಅದೇ ಹಳ್ಳಿಯವರಾದ ‘ಹಡಬೆ ಮಾಣಿ’ ಎಂದು ಆಗಲೇ ಕುಖ್ಯಾತಿ ಪಡೆದಿದ್ದ ಸೀತಾರಾಮ ಎಂಬುವವನು. ಯಾರೊಬ್ಬರ ಮನ ಒಲಿಸುವುದರಲ್ಲಿ ನಿಷ್ಣಾತನಾಗಿದ್ದ ಅವನು, ‘ತಾನು ಕೆಡುವುದಲ್ಲದೆ ಕೋತಿ ವನವನ್ನೆಲ್ಲಾ ಕೆಡಿಸಿತು’ ಎಂಬಂತೆ, ಅಪ್ಪಯ್ಯನ ಮನ ಒಲಿಸಿ ಹಳ್ಳಿ ಬಿಡುವಂತೆ ಮಾಡಿದ್ದ. ಬುದ್ಧಿವಂತರಾಗಿದ್ದ ಅಪ್ಪಯ್ಯ ಹಳ್ಳಿ ಬಿಡದೆ ಹೋಗಿದ್ದರೆ ಒಬ್ಬ ಪಂಡಿತರಾಗುತ್ತಿದ್ದರೇನೋ? ಆದರೆ, ಅಪ್ಪಯ್ಯ ಹೆತ್ತಮ್ಮನಿಗೆ ಗುಟ್ಟು ಬಿಟ್ಟು ಕೊಡದೆ, ಹೇಳದೆ ಕೇಳದೆ ಹಳ್ಳಿ ಬಿಟ್ಟು ಪಟ್ಟಣ ಸೇರಿದ್ದರು. ಆಮೇಲೆ ಅವರು ಪಟ್ಟ ಕಷ್ಟ, ಅನುಭವಿಸಿದ ಬವಣೆಯ ಕುರಿತು ಅಮ್ಮ ಆಗಾಗ ಹೇಳಿಕೊಳ್ಳುತ್ತ ನಿಟ್ಟುಸಿರು ಬಿಡುತ್ತಿದ್ದುದುಂಟು. ದೊಡ್ಡ ಬಂಗಲೆಯೊಂದರಲ್ಲಿ ಬಾಣಸಿಗ ವೃತ್ತಿಗೆ ಅಪ್ಪಯ್ಯನನ್ನು ತಂದು ಬಿಟ್ಟ ಸೀತಾರಾಮ ಎಲ್ಲಿಗೋ ಪರಾರಿಯಾಗಿ ಬಿಟ್ಟಿದ್ದ. ಅಪ್ಪಯ್ಯ ೧೦ ರೂಪಾಯಿ ಸಂಬಳಕ್ಕೆ ನಿಂತರು. ಆ ಕಾಲಕ್ಕೆ ಅದೇ ಹೆಚ್ಚು ಎನ್ನುತ್ತಿದ್ದಳು ನನ್ನಮ್ಮ ವನಜಾಕ್ಷಿ. ಅಪ್ಪಯ್ಯನ ನಳಪಾಕದ ಸ್ವಾದವನ್ನು ಆ ಬಂಗಲೆಯವರೆಲ್ಲಾ ಮೆಚ್ಚಿಕೊಳ್ಳುತ್ತಿದ್ದರಂತೆ. ಬಂಗಲೆಯ ಕೆಲಸದ ಜೊತೆಗೆ ಸಮಯ ಸಿಕ್ಕಾಗ ಅವರು ಮನೆಯಲ್ಲೆ, ಮನೆಯ ಖರ್ಚಿಗೆ ಸಾಲುವುದಿಲ್ಲವೆಂದು ಹಪ್ಪಳ, ಸಂಡಿಗೆ, ಉಪ್ಪಿನಕಾಯಿ, ಕೆಲವೊಮ್ಮೆ ಕುರುಕಲು ತಿಂಡಿಗಳನ್ನು ಮಾಡಿ ಕೈಗಾಡಿಯಲ್ಲಿ ಒಯ್ದು ಬೀದಿಯಲ್ಲಿ ಮಾರುತ್ತಿದ್ದದ್ದುಂಟು. ಇದೆಲ್ಲ ನಾವು ಅಪ್ಪಯ್ಯನ ಒಟ್ಟಿಗಿರಲು ಬೆಂಗಳೂರು ಹಾದಿ ಹಿಡಿದ ಮೇಲೆ ನೋಡಿದ್ದು. ಅಮ್ಮ ಇದರಲ್ಲಿ ಭಾಗಿಯಾಗುತ್ತಿದ್ದಳು.

ನನ್ನಮ್ಮನಿಗೆ ಮೂರು ಮಂದಿ ಮಕ್ಕಳಾಗುವ ವರೆಗೆ ನಾವು ಹಳ್ಳಿಮನೆಯಲ್ಲೇ ಇದ್ದೆವು. ನನಗೆ ಚೆನ್ನಾಗಿ ನೆನಪಿದೆ, ನಾನಾಗ ಪರಕಾರದ ಹುಡುಗಿ. ಆದರೆ ಹಳ್ಳಿಮನೆಯಲ್ಲಿ ಪರಕಾರಕ್ಕೂ ಕೊರತೆ. ತುಂಡು ಬೈರಾಸದ ಮುಂಡುಟ್ಟು. ಬೆಳಗೆದ್ದರೆ ಸಾಕು, ನಾವು ಮಕ್ಕಳು ರಂಜೆ ಹೂವು ಹೆಕ್ಕಲು ಓಡುತ್ತಿದ್ದೆವು. ತಂದ ರಂಜೆ ಹೂವನ್ನು ಸುರಿದು ಮಾಲೆ ಮಾಡಿ ಮನೆಯ ಮಗ್ಗುಲಿಗೆ ಇದ್ದ ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ಹೋಗಿ ಕೊಟ್ಟು ಬರುತ್ತಿದ್ದೆವು. ಇದು ನನಗೆ ಅಮ್ಮನಿಂದ ಆದ ಪಾಠ. ನಮ್ಮದು ಅವಿಭಕ್ತ ಕುಟುಂಬ. ಸರಾಸರಿ ಹದಿನೈದು ಇಪ್ಪತ್ತು ಮಂದಿ ಮನೆಯಲ್ಲಿರುತ್ತಿದ್ದೆವು. ಅಪ್ಪಯ್ಯ ಬೆಂಗಳೂರು ನಗರದ ಬಂಗಲೆಯಲ್ಲಿ, ನಾವೆಲ್ಲ ಹಳ್ಳಿಮನೆಯಲ್ಲಿ. ಮಕ್ಕಳಾದ ನಮಗೇನೋ ಖುಷಿಯೇ, ಆದರೆ ಅಮ್ಮನ ಕಷ್ಟ ದೇವರೆ ಬಲ್ಲ. ಮೂರು ತಿಂಗಳಿಗೋ ಆರು ತಿಂಗಳಿಗೋ ಬಂದು ಹೋಗುವ ಅಪ್ಪಯ್ಯನಿಗೆ ಅಮ್ಮನ ಕಷ್ಟ ಅರ್ಥವಾಗುತ್ತಿತ್ತೋ ಇಲ್ಲವೋ ತಿಳಿಯದು. ಅವರು ಅಮ್ಮ ಬೆಂಗಳೂರಿಗೆ ಬರುತ್ತೇನೆಂದು ಕಾಡಿದಾಗಲೆಲ್ಲ, ‘ನಿನಗೇನು ಇಲ್ಲಿ ಕಷ್ಟ’ ಎಂದೇ ಕೇಳುತ್ತಿದ್ದರು. ಬೇಸಾಯದ

ಮನೆ. ಅಮ್ಮ ಮನೆಯವರೊಂದಿಗೆ ಸೇರಿ ಕುಟ್ಟುವುದು, ಬೀಸುವುದು, ದರಳೆ ಒಟ್ಟಿ ತಂದು ದನಗಳ ಕಾಲುಬುಡಕ್ಕೆ ಹಾಕುವುದು, ಅದು ಕೊಳೆತ ಮೇಲೆ ಅದನ್ನು ಒಯ್ದು ಗೊಬ್ಬರ ಗುಂಡಿಗೆ ಹಾಕುವುದು, ನೆಟ್ಟಿ ನೆಡುವುದು ಎಲ್ಲಾ ಕೆಲಸ ಮಾಡುತ್ತಿದ್ದಳು. ಆದರೆ ಆ ಮನೆಯಲ್ಲಿ ಅಮ್ಮನಿಗೆ ಇನಿತೂ ಸ್ವಾತಂತ್ರ್ಯವಿರಲಿಲ್ಲ. ಹಿರಿಯ ಸೊಸೆ ಮನೆಗೆ ಯಜಮಾನಿ ದರ್ಪದಿಂದ ಕೆಲಸ ಮಾಡಿಸುವುದರಲ್ಲಿ ಎತ್ತಿದ ಕೈ, ಎಲ್ಲಾ ದೊಡ್ಡಮ್ಮನ ಆಳ್ವಿಕೆಯಲ್ಲಿ ಮನೆ ನಡೆಯುತ್ತಿತ್ತು, ಅಜ್ಜಿ ಇದ್ದರೂ ಅವರಿಗೂ ಗಟ್ಟಿಯಾಗಿ ಮಾತನಾಡುವ ಧೈರ್ಯವಿರಲಿಲ್ಲ, ದೊಡ್ಡಮ್ಮ ಹೇಳಿದಂತೆ ಕೇಳಬೇಕು, ಇಡುವುದು ಕೊಡುವುದು ಬಡುವುದು ಎಲ್ಲಾ ಅವಳಿಗೆ ಸೇರಿದ್ದು, ಎಷ್ಟೇ ಕೆಲಸ ಮಾಡಲಿ ಪಿರಿಪಿರಿ ಇಲ್ಲದ ದಿನವಿಲ್ಲ. ಇಷ್ಟಾದರೂ ತುಟಿ ಎರಡು ಮಾಡದೆ ಗೋಣು ಎತ್ತರಿಸದೆ ದುಡಿಯುತ್ತಿದ್ದಳು ಅಮ್ಮ. ಯಾವಾಗಲೋ ಬಂದು ಹೋಗುವ ಅಪ್ಪಯ್ಯ ನಲ್ಲಿ ನಮಗೆ ಸಲಿಗೆ ಬೆಳೆಯಲೇ ಇಲ್ಲ. ಎತ್ತರಕ್ಕೆ ಆಜಾನುಬಾಹುವಾಗಿ ಬೆಳೆದಿದ್ದ ಅಪ್ಪಯ್ಯ ಶಿಸ್ತಿನ ಮನುಷ್ಯ, ಕಪಟರಹಿತ ನೈಜ ಸ್ವಭಾವ, ಯಾವತ್ತೂ ಯಾರಿಗೂ ಕೇಡನ್ನು ಬಗೆದವರಲ್ಲ, ನನಗೆ ತಿಳಿದ ಹಾಗೆ ಅವರಿಗೆ ಯಾರೂ ಶತ್ರುಗಳಿರಲಿಲ್ಲ. ಅತ್ತಿಗೆ ಎಂದರೆ ತಾಯಿಗೆ ಸಮಾನ ವೆಂದು ಭಾವಿಸುವಾತ.

ನಾವು ಹಳ್ಳಿಮನೆ ಬಿಟ್ಟದ್ದು ನಾನು ಕನ್ನಡ ಶಾಲೆ ಎರಡನೆ ಇಯತ್ತೆ ಮುಗಿಸಿದ ಮೇಲೆ. ಊರು ಬಿಟ್ಟಾಗ ಮಾತ್ರ ದೊಡ್ಡಮ್ಮ ದೊಡ್ಡ ದನಿ ತೆಗೆದು ಅತ್ತದ್ದುಂಟು, ಬಿಟ್ಟುಕೊಡಲಾರದೆ ಬಿಟ್ಟುಕೊಟ್ಟದ್ದುಂಟು, ನಮ್ಮನ್ನೆಲ್ಲ ಬಿಟ್ಟುಕೊಡಲಾರದೆ ಗೋಳಾಡಿದ್ದುಂಟು. ಬೆಂಗಳೂರಿಗೆ ಬಂದ ಮೇಲೂ ನಮಗೆ ಅಪ್ಪಯ್ಯನಲ್ಲಿ ಸಲಿಗೆ ಬೆಳೆಯಲೇ ಇಲ್ಲ. ಅವರ ಮುಂದೆ ನಿಂತು ಮಾತನಾಡಲು ಹೆದರುತ್ತಿದ್ದೆವು. ಅಮ್ಮನ ಸೆರಗಮರೆಯಲ್ಲಿ ನಾವು ಅಪ್ಪಯ್ಯ ಕೇಳುವ ಪ್ರಶ್ನೆಗೆ ಉತ್ತರಿಸುತ್ತಿದ್ದೆವು. ಹಾಗಂತ ಅಪ್ಪಯ್ಯ ಸಿಟ್ಟಿನ ಮನುಷ್ಯರಲ್ಲ. ಸಿಟ್ಟು ಬಂದರೆ ಮಾತ್ರ ದುರ್ವಾಸರೆ ಆಗಿಬಿಡುತ್ತಿದ್ದರು, ಅದು ಪ್ರಾಯಕಾಲದಲ್ಲಿ. ಮತ್ತೆ ಅವರ ಕೋಪ ಅದೆಲ್ಲಿ ಹೋಯಿತೋ ಇಳಿವಯಸ್ಸಿನಲ್ಲಿ ಅವರು ಶಾಂತಮೂರ್ತಿಯಾಗಿ ಬಿಟ್ಟಿದ್ದರು. ಹಿರಿಯರನ್ನು ಕಂಡರೆ ಗೌರವ ತೋರಿಸಬೇಕು ಎನ್ನುವ ಪಾಠ ನನಗಾಗಿದ್ದು ಅಪ್ಪಯ್ಯನಿಂದ. ದೇವರ ಬಗ್ಗೆ ಭಕ್ತಿ ಹುಟ್ಟಿದ್ದು ಅಮ್ಮನಿಂದ. ಸದಾ ಕ್ರಿಯಾಶೀಲರಾಗಿರುತ್ತಿದ್ದ ಅಪ್ಪಯ್ಯನನ್ನು ನೋಡಿ ನಾನು ಅದನ್ನು ನನ್ನ ಜೀವನದಲ್ಲಿ ಅಳವಡಿಸಿಕೊಂಡೆ.

ಬಡತನದ ಬವಣೆ ಮನೆಯಲ್ಲಿ ಹಾಸಿ ಹೊದ್ದುಕೊಳ್ಳುವಷ್ಟಿದ್ದರೂ, ಅಮ್ಮ ಬಂದ ಅತಿಥಿಗಳನ್ನು ಹಾಗೆ ಕಳಿಸುವಂತಿಲ್ಲ, ಮನೆಯಲ್ಲಿ ಏನಿದೆಯೋ ಇಲ್ಲವೋ ಇದ್ದುದರಲ್ಲೇ ಸಾವರಿಸಿಕೊಂಡು ಅವಳು ಊಟಕ್ಕಿಡುವುದನ್ನು ನೋಡಿದಾಗ ಅವಳು ಅನ್ನಪೂರ್ಣೆಯೇ ಸರಿ ಎಂದು ಈಗೆನಿಸುತ್ತದೆ. ನನ್ನಲ್ಲಿ ಪುಸ್ತಕ ಪ್ರೀತಿ ಬೆಳೆಸಿದವರೆ ನನ್ನಪ್ಪಯ್ಯ ನನ್ನಮ್ಮ. ಅಪ್ಪಯ್ಯ-ನನ್ನು ಮದುವೆಯಾದಾಗ ಅಮ್ಮನಿಗೆ ಅಕ್ಷರ ಓದಲು ಬರೆಯಲು ಬರುತ್ತಿರಲಿಲ್ಲವಂತೆ. ಬಾಲಬೋಧೆ ಕಲಿತಿದ್ದ ಅವಳಿಗೆ ಬೆಂಗಳೂರಿಗೆ ಬಂದಮೇಲೆ ಅಪ್ಪಯ್ಯನಿಗೆ ಸಮಯ ಸಿಕ್ಕಾಗ ಕೈಬೆರಳಿನ ಗಿಣ್ಣಿನ ಮೇಲೆ ಹೊಡೆದು ಅಕ್ಷರ ಕಲಿಸಿದ್ದನ್ನು ನೋಡಿದ್ದೆ. ನಂತರ ಅಮ್ಮ ಬರೆಯಲು ಕಲಿಯದಿದ್ದರೂ ಓದಲು ಕಲಿತಿದ್ದಳು. ಆ ಕಾಲದಲ್ಲಿ ಬೀದಿ ಬದಿಯಲ್ಲಿ ನಾಲ್ಕಾಣೆ

ಎಂಟಾಣೆ ಕೊಟ್ಟರೆ ಒಳ್ಳೊಳ್ಳೆಯ ಪುಸ್ತಕಗಳು ಸಿಗುತ್ತಿದ್ದವು, ಮನೆಯಲ್ಲಿ ಬಡತನ ಬಾಧಿಸುತ್ತಿದ್ದರೂ ಪುಸ್ತಕ ರುಚಿ ಬೆಳೆಸಿಕೊಂಡಿದ್ದ ಅಪ್ಪಯ್ಯ ವಾರಕ್ಕೆರಡು ಮೂರು ಪುಸ್ತಕಗಳನ್ನು ತಪ್ಪದೆ ತರುತ್ತಿದ್ದರು, ತಂದುದನ್ನು ತಾವು ಓದಿದ ಮೇಲೆ ನನಗೆ ಕೊಟ್ಟು ಓದಲು ಹೇಳುತ್ತಿದ್ದರು, ಅಮ್ಮನಿಗೂ ಓದಿ ಹೇಳು ಎನ್ನುತ್ತಿದ್ದರು. ಗಳಗನಾಥರ ಕಾದಂಬರಿಯನ್ನು ನಾನು ಓದಿದ್ದು ಆಗಲೇ. ಅಮ್ಮನಿಗೂ ಓದಿ ಹೇಳುತ್ತಿದ್ದೆ. ಸರಾಗವಾಗಿ ಓದಲಾರದ ಅವಳು ನನ್ನಲ್ಲಿ ಓದಿ ಹೇಳಲು ಗೋಗರೆಯುತ್ತಿದ್ದಳು. ನನ್ನ ಅಜ್ಜಯ್ಯ– ನನ್ನಮ್ಮನ ಅಪ್ಪಯ್ಯ– ಪ್ರಕಾಂಡ ಪಂಡಿತರಾಗಿದ್ದರು. ಆ ಕಾಲದಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡುತ್ತಿರಲಿಲ್ಲವಾದರೂ ಅಜ್ಜಯ್ಯ ಅಮ್ಮನನ್ನು ಬಾಲಬೋಧೆಗೆ ಹಾಕಿದ್ದರಂತೆ, ಮರಳಲ್ಲಿ ಅವಳು ಅಕ್ಷರ ತಿದ್ದುವುದನ್ನು ಕಲಿತಿದ್ದಳಂತೆ. ನಾನು ಓದಿದ ಕೃತಿಯ ಕುರಿತು ಅದರಲ್ಲಿ ಬರುವ ಪಾತ್ರಾಪಾತ್ರಗಳ ಕುರಿತು ನಂತರ ನಾನು ಮತ್ತು ಅಮ್ಮ ಚರ್ಚಿಸುತ್ತಿದ್ದೆವು, ಇದೊಂದು ರೀತಿಯಲ್ಲಿ ಬರವಣಿಗೆಗೆ ಬೇಕಾದ ಗಾತ್ರ ಪಾತ್ರ ವೈಶಿಷ್ಟ್ಯದ ಕುರಿತು ಅರಿವನ್ನು ಕೊಡುತ್ತಿತ್ತು. ಮುಂದೊಂದು ದಿನ ನಾನು ಬರವಣಿಗೆ ಪ್ರಾರಂಭಿಸಬೇಕು ಎನ್ನುವ ಮಹೋನ್ನತ ಬಯಕೆಯನ್ನು ನನ್ನಲ್ಲಿ ಹುಟ್ಟುಹಾಕುತ್ತ ನನ್ನನ್ನು ಪ್ರಚೋದಿಸಿತು.

ಬಾಲ್ಯದಲ್ಲಿ ಕಂಡ ನೂರಾರು ಅನುಭವಗಳು ನನ್ನ ನೆನೆಗುದಿಯಲ್ಲಿ ಉಳಿದಿದ್ದವು, ಇವೆಲ್ಲವನ್ನು ಕೂಡಿಟ್ಟುಕೊಂಡಿದ್ದೆನೆಂದೇ ಬರವಣಿಗೆಗೆ ತೊಡಗಿದೆ. ಆದರೆ ಲೆಕ್ಕಣಿಕೆಗೆ ಬೇಕಾದ ಶಾಯಿ ಹಾಗೂ ಬರವಣಿಗೆಗೆ ಬೇಕಾದ ಹಾಳೆಗಳಿಗೆ ಅಪ್ಪಯ್ಯನಿಂದ ದುಡ್ಡು ಕೇಳಿ ಪಡೆಯಲು ಹೆದರುತ್ತಿದ್ದೆ. ಹೊಟ್ಟೆಗೆ ಹಿಟ್ಟಿಲ್ಲದ ಪರಿಸ್ಥಿತಿಯಲ್ಲಿ ನನ್ನ ಆಸೆಗೆ ಅವರು ಬೆಲೆ ಕೊಡಲಾರರು ಎಂದೇ ತಿಳಿದಿದ್ದೆ. ಸಂಜೆ ಶಾಲೆ ಬಿಟ್ಟು ಬಂದರೆ ನಮಗೆ ಸಿಗುತ್ತಿದ್ದದ್ದು ತಿಂಡಿಯಲ್ಲ, ಅದಕ್ಕೆ ಬದಲು ತೆಂಗಿನೆಣ್ಣೆ ಬಿಟ್ಟು ಮಿಡಿ ಉಪ್ಪಿನಕಾಯಿ ರಸದೊಂದಿಗೆ ಕಲೆಸಿದ ಅನ್ನ. ಅಮ್ಮ ಕೈತುತ್ತು ಕೊಡುತ್ತಿದ್ದಳು, ಅದು ಲೆಕ್ಕದ ತುತ್ತು, ಅದೆ ನಮಗೆ ಪಂಚಭಕ್ಷ್ಯ ಪರಮಾನ್ನ. ಸವಿದು ಮೆಲ್ಲುತ್ತಿದ್ದೆವು, ಇಂಥ ಪರಿಸ್ಥಿತಿಯಿರುವಾಗ ನಮಗೆ ದುಡ್ಡು ಎಲ್ಲಿಂದ ಬರಬೇಕು? ಆಗಷ್ಟೆ ಎಸ್.ಎಸ್.ಎಲ್.ಸಿ. ಮುಗಿಸಿದ್ದೆನಾದ್ದರಿಂದ ನೋಟ್ ಪುಸ್ತಕದಲ್ಲಿ ಖಾಲಿ ಉಳಿದಿದ್ದ ಹಾಳೆಗಳನ್ನು ಬಳಸಿಕೊಂಡು ಬರೆದೇ ಬರೆದೆ. ನನ್ನದೊಂದು ಲೇಖನ 'ತಾಯಿನಾಡು' ದಿನಪತ್ರಿಕೆಯಲ್ಲಿ ಪ್ರಕಟವಾದಾಗ, ಅಮ್ಮ ಹಿಗ್ಗಿ ಹೀರೆಕಾಯಿಯಾಗಿ ಬಿಟ್ಟಿದ್ದಳು. ಅಪ್ಪಯ್ಯನಿಗೆ ಒಳಗೊಳಗೆ ಸಂತಸ ಸಂಭ್ರಮಗಳಾಗಿದ್ದರೂ ಬಾಯಿಬಿಟ್ಟು ಅವರೇನೂ ಅಂದಿರಲಿಲ್ಲ. ಅವರೆಂದೂ ಮಕ್ಕಳ ಮುಂದೆ ಮಕ್ಕಳನ್ನು ಹೊಗಳಿದ್ದನ್ನು ನಾನು ನೋಡಿಲ್ಲ, ಅದು ಅವರ ಭವಿಷ್ಯಕ್ಕೆ ಕುಂದು ಎಂದು ಅವರು ಭಾವಿಸಿದ್ದಂತಿತ್ತು. ಮುಂದೆ ಅಮ್ಮನೊಂದಿಗೆ, "ಪ್ರೇಮ ಬರೆಯುವುದಾದರೆ ಬರೆಯಲಿ, ಅವಳಿಗೆ ತೊಂದರೆಯಾಗುವುದು ಬೇಡ" ಎಂದಿದ್ದರಂತೆ. ಸಾಹಿತ್ಯದಲ್ಲಿ ಅಪಾರ ಆಸಕ್ತಿಯಿದ್ದ ಅವರು ನನ್ನ ಬರಬಣಿಗೆಗೆ ತಡೆಯೊಡ್ಡಿದವರಲ್ಲ.

ಅಪ್ಪಯ್ಯ ವಿದ್ಯಾವಂತರಲ್ಲದಿದ್ದರೇನಂತೆ ಅವರ ಬುದ್ಧಿಮತ್ತೆ ಯಾವ ವಿದ್ಯಾವಂತರಿಗೂ ಕಡಿಮೆಯಿರಲಿಲ್ಲ, ದೇವರ ಮುಡಿ ಮೇಲೆ ಹೂವು ತಪ್ಪಿದರೂ ಸರಿ ಅವರು ದಿನಪತ್ರಿಕೆ ಓದುವುದನ್ನು ಬಿಡುತ್ತಿರಲಿಲ್ಲ, ರಾಜಕೀಯದ ವಿದ್ಯಮಾನವನ್ನೆಲ್ಲ ಓದಿ ತಿಳಿದುಕೊಳ್ಳುತ್ತಿದ್ದರು.

ದೇಶದ ಯಾವ ಮೂಲೆಯಲ್ಲಿ ಏನು ನಡೆಯುತ್ತಿದೆ ಎನ್ನುವುದು ಅವರಿಗೆ ತಿಳಿದಷ್ಟು ಬೇರೆಯವರಿಗೆ ತಿಳಿದಿರುತ್ತಿತ್ತೋ ಇಲ್ಲವೋ ನಾನು ಕಾಣೆ. ಅವರಿಗೆ ಹಲವು ಭಾಷೆಗಳು ಮಾತನಾಡಲು ಬರುತ್ತಿತ್ತು. ಕನ್ನಡ, ತುಳು, ಮರಾಠೀ, ಹಿಂದೀ, ಉರ್ದೂ, ತೆಲುಗು, ತಮಿಳು ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡುತ್ತಿದ್ದರು. ಕ್ರಿಕೆಟ್ ಕಾಮೆಂಟ್ರಿಯನ್ನು ಅವಕಾಶ ಸಿಕ್ಕಾಗಲೆಲ್ಲ ಕೇಳುತ್ತಿದ್ದರು, ರಾತ್ರಿ ಮಲಗುವಾಗ ಎಷ್ಟೇ ಹೊತ್ತಾಗಲಿ ಪುಸ್ತಕ ತಿರುವದೆ ಮಲಗುತ್ತಿರಲಿಲ್ಲ.

ಸರಿಯಾದ ಅವಕಾಶ ಸಿಕ್ಕಿದ್ದರೆ, ಆರ್ಥಿಕ ಅನುಕೂಲತೆಗಳಿದ್ದಿದ್ದರೆ ಅಪ್ಪಯ್ಯ ಒಬ್ಬ ಚಿತ್ರಕಲಾವಿದರಾಗಲು ಸಾಧ್ಯವಿತ್ತು. ಆದರೆ ಆ ಯೋಗ ಅವರಿಗೆ ಇರಲಿಲ್ಲ. ಅವರು ಬಿಡಿಸಿದ ಸುಂದರವಾದ ಕಲಾತ್ಮಕವಾದ ತೈಲವರ್ಣದ ಚಿತ್ರಗಳು ಎಷ್ಟೋ ಕಾಲದ ವರೆಗೆ ಮಾಸದೆ ಉಳಿದಿದ್ದನ್ನು ನೋಡಿದ್ದೆ. ಅದನ್ನು ನೋಡಿದಾಗಲೆಲ್ಲ ಸರಿಯಾದ ಮಾರ್ಗದರ್ಶನ ಮತ್ತು ಆರ್ಥಿಕ ಅನುಕೂಲತೆಗಳಿದ್ದಿದ್ದರೆ ಅವರೊಬ್ಬ ಶ್ರೇಷ್ಠ ಮಟ್ಟದ ಕಲಾವಿದರಾಗುತ್ತಿದ್ದರೇನೋ ಎಂದು ನನಗನಿಸುತ್ತಿತ್ತು.

ಜೀವನದ ಸಂಕಷ್ಟಗಳನ್ನು ಎದುರಿಸುತ್ತಲೇ ಅಮ್ಮ, ಅಪ್ಪಯ್ಯನಿಗೆ ಸಹಭಾಗಿಯಾಗಿ ಸಹಕರಿಸುತ್ತ ಅವರ ಎಲ್ಲಾ ಕೆಲಸಗಳಲ್ಲಿ ಕೈ ಜೋಡಿಸುತ್ತ ಅಚ್ಚುಕಟ್ಟಾಗಿ ಸಂಸಾರ ಮಾಡುತ್ತಿದ್ದುದನ್ನು ನೆನೆದಾಗ ಇಂದು ಎಷ್ಟು ಬಂದರೂ ಸಾಲುವುದಿಲ್ಲ ಎನ್ನುವ ನಾವು ಎಷ್ಟು ಕುಬ್ಜರಾಗುತ್ತೇವೆ ಎನಿಸುತ್ತದೆ. ಅಮ್ಮನ ಪತಿವ್ರತಾ ಧರ್ಮ, ಪತಿಭಕ್ತಿಯ ಬಗ್ಗೆ ಹೇಳುತ್ತ ಹೋದರೆ ಪುಟಗಳು ಸಾಲವು ಎನಿಸುತ್ತದೆ. ಅನುಭವಗಳು ನನ್ನ ಎದೆಯಾಳದಲ್ಲಿ ಮಡುಗಟ್ಟಿದಂತೆಲ್ಲ ಹೊರಚೆಲ್ಲುವ ತವಕ ಯಾವಾಗ ಬಂತೋ ಆಗ ಬರೆಯತೊಡಗಿದೆ. ಉಡುಪಿ ಕೃಷ್ಣಮಠದಲ್ಲಿ ಬತ್ತಿ ಹೊಸೆಯುತ್ತ ಬದುಕನ್ನೆಲ್ಲ ಬರಡಾಗಿ ಕಳೆಯುತ್ತಿದ್ದ ಬಾಲವಿಧವೆಯರನ್ನು ಕಂಡಿದ್ದ ನಾನು ಕಥೆಯೊಂದನ್ನು ಬರೆದೆ. ವಿಧವಾ ವಿವಾಹಕ್ಕೆ ಆ ಕಾಲದಲ್ಲಿ ಅವಕಾಶವಿರಲಿಲ್ಲ. 'ಜನಪ್ರಗತಿ'ಯಲ್ಲಿ ಬಂದ ಆ ಕಥೆಯನ್ನು ನೋಡಿದ ಬ್ರಾಹ್ಮಣ ಸಮಾಜ ವಿರೋಧಿಸಿತ್ತು, ಅಮ್ಮ ಸಂತಸಪಟ್ಟಂತೆ ದುಃಖಿಸಿದಳು. ನನ್ನ ಹೆಸರಿಗೆ ಬಂದ ಪತ್ರ ನೋಡಿ ಅವಳಿಗೆ ಆತಂಕವಾಗಿತ್ತು. ಅಮ್ಮ, "ನೀನು ಮದುವೆಯಾಗದೆ ಉಳಿದು ಬಿಟ್ಟರೆ ನನ್ನ ಗತಿಯೇನು, ನಿನ್ನ ಹಿಂದೆ ಮತ್ತೆ ಮೂವರು ಹೆಣ್ಣು ಮಕ್ಕಳಿದ್ದಾರಲ್ಲ. ನೀನು ಬರೆಯುವುದು ಬೇಡ" ಎಂದಳು. ನಾನು ವಾದ ಮಾಡಿದೆ, ಹಟ ಹಿಡಿದೆ, ಅಪ್ಪಯ್ಯನ ಮುಂದಲ್ಲ ಅಮ್ಮನ ಮುಂದೆ. ಅಮ್ಮನ ಕಣ್ಣೀರ ಕೋಡಿಯ ಮುಂದೆ ನಾನು ಸೋಲದೆ ವಿಧಿಯಿಲ್ಲ ಎನಿಸಿತು. "ಅದೆಲ್ಲ ಓದುವುದಕ್ಕಷ್ಟೆ ಜೀವನದಲ್ಲಿ ಇಂಥ ಪ್ರಸಂಗಗಳು ಎದುರಾದರೆ ಅದನ್ನು ಎದುರಿಸಿ ಬಾಳುವುದು ಕಷ್ಟ" ಎಂದಳು. ಅಪ್ಪಯ್ಯನ ಕಿವಿಗೆ ಸುದ್ದಿ ಹಾಕಿದಳು. ಅಪ್ಪಯ್ಯ ಮಾತ್ರ ನನ್ನ ಆಸೆಯನ್ನು ಹತ್ತಿಕ್ಕಲಿಲ್ಲ, ಹತ್ತಿರ ಬಂದು ನನ್ನ ಮುಂಗುರುಳ ಮೇಲೆ ಕೈಯಾಡಿಸುತ್ತ, "ಬರಿ ಮಗಳೆ, ನೀನೇನು ಹಿಂಜರಿಯಬೇಕಾಗಿಲ್ಲ, ವರ್ತಮಾನದಲ್ಲಿ ಸಿಗದ ಮಾನ ಸನ್ಮಾನ ಭವಿಷ್ಯದಲ್ಲಿ ಹುಡುಕಿಕೊಂಡು ಬರಬಹುದು" ಎಂದರು. ನನ್ನಲ್ಲಿ ನಶಿಸಿದ್ದ ಆಶಾಸೌಧವನ್ನು ಪುನಶ್ಚೇತನಗೊಳಿಸಿ ಜೀವಚೈತನ್ಯ ತುಂಬಿದರು. ಅಪ್ಪಯ್ಯನ ಮಾತಿಗೆ ಎಂದೂ ಎದುರಾಡದ ಅಮ್ಮ

ದೇವಕಾರ್ಯದಷ್ಟೆ ಭಯಭಕ್ತಿಯಿಂದ ಅಪ್ಪಯ್ಯನ ಸೇವೆ ಮಾಡುತ್ತಿದ್ದ ಅಮ್ಮ, ರಾತ್ರಿ ಮಲಗುವ ಮುನ್ನ ಅಪ್ಪಯ್ಯನ ಕಾಲೊತ್ತದೆ ಮಲಗಲಾರದ ಅಮ್ಮ, ತುಟಿ ಎರಡು ಮಾಡದೆ ಒಪ್ಪಿಕೊಂಡಾಗ ನಾನು ಸಮಾಧಾನದ ನಿಟ್ಟುಸಿರು ಬಿಟ್ಟಿದ್ದೆ.

ನನ್ನ ಅಪ್ಪಯ್ಯ ಗತಿಸಿ ಆಗಲೇ ಹದಿನೈದು ವರ್ಷ ಕಳೆದು ಹೋದವು. ಅಮ್ಮ ಸತ್ತು ನಾಲ್ಕು ವರ್ಷಗಳಾದವು. ಹದಿಮೂರು ವರ್ಷಕ್ಕೆ ಮದುವೆಯಾಗಿ ಬಂದ ಅಪ್ಪ ಅಮ್ಮನ ಹಳೆ ಭಾವಚಿತ್ರವೊಂದನ್ನು ಶತಮಾನದ ಪ್ರಾತಿನಿಧಿಕ ಸ್ವತ್ತೆಂಬಂತೆ ಕಾಪಾಡಿದ್ದೇನೆ. ಅಮ್ಮ ಬಾಳೆಕಾಯಿ ಹಾಕಿ ಉಟ್ಟ ಸೀರೆ, ಅದಕ್ಕೆ ಬಿಗಿದು ಕಟ್ಟಿದ ಸೊಂಟದ ಬೆಳ್ಳಿಯ ಪಟ್ಟಿ, ಕೈ ತುಂಬ ಧರಿಸಿದ ಗಾಜಿನ ಬಳೆ, ಕಿವಿಗೆ ಹಾಕಿಕೊಂಡಿರುವ ಹಳೆ ಆಭರಣ ಮುಗುಳು, ಅಪ್ಪಯ್ಯನ ಜೊತೆಗೂಡಿ ನಿಂತಿರುವ ಅಮ್ಮ, ಅವರ ಜೀವ ಜೀವದ ಒಡನಾಡಿಯಾಗಿದ್ದವಳು, ಅದನ್ನು ನೋಡಿದಾಗಲೆಲ್ಲ ಕಷ್ಟದ ಬದುಕಿನಲ್ಲೇ ಬದುಕನ್ನು ಸಿಹಿಯಾಗಿಸಿಕೊಂಡು ಬಾಳಿದ ನೆನಪು ಮರುಕೊಳಿಸುತ್ತದೆ, ಆ ನೆನಪು ನನ್ನಲ್ಲಿ ಸದಾ ನವಚೈತನ್ಯ ನೀಡುತ್ತ ಜೀವಸೆಲೆಯಾಗಿದೆ.

■ ಪ್ರೇಮಾ ಭಟ್ಟ : ಶ್ರೀ ಗುರುಪ್ರಸಾದ, ೮೪೫, ೪ನೇ ಮೇನ್, ವಿಜಯನಗರ, ಬೆಂಗಳೂರು-೪೦ ■

ಐದು ಕವಿತೆಗಳು

ಜ್ಯೋತಿ ಗುರುಪ್ರಸಾದ್

೧. ನಾನು

ನನ್ನನ್ನು ಪ್ರೀತಿಸುವುದೆಂದರೆ–
ಈಗಲೇ ಹೋಗಿ
ಕನ್ನಡಿಯಲ್ಲಿ
ಮುಖವನ್ನು ನೋಡಿಕೋ
ನಿದ್ದೆಗೆಟ್ಟು, ಕೆಂಪಡರಿದ
ಕಣ್ಣುಗಳ ನೋಡಿಕೋ

ನನಗೆ ಮೋಸ ಮಾಡುತ್ತಿದ್ದೀಯೆಂದು
ನಾಚು

ಸ್ವಚ್ಛ ತಣ್ಣೀರನ್ನು
ಕಣ್ಣುಗಳಿಗೆರಚಿಕೊಂಡು
ಮುಖದ ಮಬ್ಬನ್ನು
ತೊಳೆ
ಹೊಳೆ
ಸ್ಫಟಿಕ ಶಲಾಕೆಯಂತೆ
ಈಗ ನಗು
ನಾನು ಸಿಗುತ್ತೇನೆ!

೨. ಆಟ

ಈ ಸಂಜೆ
ಮೌನದೊಡನೆ ಮಾತು
ಆಡಿದಾಗ
  ಕೋಗಿಲೆಯ ಕುಹೂ ಒಡನೆ
  ಕಾಗೆಯ ಕಾಕಾ
  ಮೈನಾದ ಸೀಟಿಯೂ ಕೇಳಿ
ಗಿಡ-ಮರಗಳ ಒಲುಮೆ
ತಂಗಾಳಿಯ ತೀಡಿ
  ಸರಳ ಒಳಗೆ ತೂರಿ ಬಂದ
  ಅಂತರಾಳ ಕವಿಸಮಯ
ಸೂರ್ಯನ ಶಾಖ
ಚಂದ್ರನ ಶೀತಲ
ಎರಡೂ ಇಲ್ಲದ
ತಂಪು ಬೆಳಕು
  ಕತ್ತಲಾಗುವ ಮುನ್ನ
  ಆಕಾಶ ನೋಡಿದಾಗ
ನೀಲಿ ಮಾಗಿ ಕೆಂಪಾಗುವ
ಕವಿತೆ ಹುಟ್ಟಿತು!

೩. ನಿಲ್ದಾಣ

ನಿನ್ನ ಪ್ರೀತಿಸಿದಷ್ಟೂ
ಮುಗಿಯದ
ಅಧ್ಯಾಯಗಳು
ತೆರೆದುಕೊಳ್ಳುತ್ತವೆ

ಎಷ್ಟೊಂದು ವಿಧದ ಪ್ರೀತಿ !
ಸುಮ್ಮನಿರುವ ನಿನ್ನ ಮಾತಾಡಿಸುವ ಪ್ರೀತಿ
ಮಾತಿನ ಮರ್ಮವ ಅರಿಯುವ ಪ್ರೀತಿ
ಮುನಿಸಿನ ನೀತಿಯ ಅರಸುವ ಪ್ರೀತಿ
ಬೇಸರದಲ್ಲೂ ಇಂಗದ ಪ್ರೀತಿ !
ಹೀಗೆ
ಅವಮಾನವೇ ಗೊತ್ತಿಲ್ಲದ ಪ್ರೀತಿಗೆ–
ಸದಾ ನಿನ್ನ ಧ್ಯಾನ
ಅಸ್ತಿತ್ವದ ಎಲ್ಲ ಕುರುಹುಗಳೂ
ಅಳಿಸಿ ಹೋಗುವಂತೆ
ತಡೆರಹಿತ
ನಿನ್ನ ನೆನಪಿನಲ್ಲಿ
ತೊಯ್ದಿರುವ ಪ್ರೀತಿಗೆ
ಸಾಕು ಸುಮ್ಮನಿರೆಂದು
ನೀನು ಗದರಿಸಿದರೂ
ಅದು ನಿನ್ನ ಬಳಿಯೇ ನಿಲ್ಲಬೇಕು
ಏಕೆಂದರೆ
ನೀನೇ ಪ್ರೀತಿಯ ನಿಲ್ದಾಣ !

೪. ಪ್ರಕಾಶನ

ನಿನ್ನಾಣತಿಯಂತೆ
ಈ ಕವಿತೆ
ಬರೆದು ಕಳುಹಿಸಿರುವೆ
ನಾನು ಬರೆಯುವುದು ನಿನಗೆ
ಬೇಕೆಂದ ಕ್ಷಣ
ಜೀವಮಾನಕ್ಕೇ ಅರ್ಥ ಬಂದಿದೆ !
ನಿನ್ನ ಕಣ್ಣುಗಳಿಗೆ ಇದು ಕಂಡು
ನಿನ್ನ ಮನದ ಹಾಳೆಯ ಮೇಲೆ
ಮುದ್ರಣವಾಗದಿದ್ದ ಮೇಲೆ
ಇದು ಎಲ್ಲಿ ಪ್ರಕಟಗೊಂಡರೇನು ?
ಕರಾಳ
ಪುಳಕಗೊಳಿಸದ ಜೀವ ಅರ್ಥಹೀನ
ನಿನ್ನ ಹೃದಯವೇ ನನ್ನ
ಮೊದಲ ಪ್ರಕಾಶನ !
ಆನಂತರ ಇದನ್ನು
ಯಾರು ಓದಿಕೊಂಡರೂ
ಮೌಲ್ಯ
ಇಮ್ಮಡಿಸುತ್ತದೆ
ಪೂರ್ಣಿಮೆಯ ಚೆಂದದಂತೆ...

೫. ದೂರವಾಣಿ

ಭಾರತದೊಳಗೆ ಒಂದು ನಂಬರ್
ಭಾರತದಾಚೆಗೆ ಇನ್ನೊಂದು
ಆದರೆ
ದಿಗಂತದನಂತಕ್ಕೆ
ಯಾವ ನಂಬರ್?
ಆ ನಾಡಿಗೆ ಹೋದವರು
ನುಡಿಯಬಹುದೇ?
ತಿಳಿದು ಹೇಳಬಹುದೇ?–
ಪ್ರೀತಿಯಿಂದ
ಶ್ರುತಿಗೊಂಡ ಮನದ
ಸಂಗೀತಲಹರಿಯ ನಂಬರನ್ನು?
ಅಕ್ಕನ
'ನೀವು ಕಾಣಿರೇ, ನೀವು ಕಾಣಿರೇ'
ಎಂಬ ವಾಣಿಯ ದೂರವನ್ನು...?

■ ಜ್ಯೋತಿ ಗುರುಪ್ರಸಾದ್, 'ಕಾವೇರಿ', ತೆಳ್ಳಾರು ರಸ್ತೆ, ೧೬ನೇ ತಿರುವು, ಕಾರ್ಕಳ-೫೭೪ ೧೦೪ ■

ದ್ರಾವಿಡ ಸಂಬಂಧ -೧

ಷ. ಶೆಟ್ಟರ್

ತೊಲ್ಕಾಪ್ಪಿಯಾಣಾರ್ ಮತ್ತು ಮಾರ್ಗಕಾರನ ಸಂವೇದನಾ ಸ್ವರೂಪ *

೧. 'ಕಾವೇರಿಯಿಂದಮಾ ಗೋದಾವರಿವರಮಿರ್ದನಾಡು' ಎಂಬ ಮಾತು ಕನ್ನಡ ನಕಾಶೆಯನ್ನು ರಚಿಸಿಟ್ಟಿದೆ. ಅದಕ್ಕೆ ಹಿಂದೆ, ಯಾವುದೇ ವಾಙ್ಮಯದಲ್ಲು– ಸಂಸ್ಕೃತ ವಾಙ್ಮಯದಲ್ಲು– ಇಂಥ ನಕಾಶೆ ನಿರ್ದೇಶನದ ಉಲ್ಲೇಖಗಳು ಪ್ರಾಯಃ ಕಾಣುವುದಿಲ್ಲ... ಹೀಗೆ ನದಿಗಳ ಗೆರೆ ಹೊಡೆದು ಒಳರಾಜ್ಯ ವೊಂದರ ನಕಾಶೆಯನ್ನು ಸಾಕಷ್ಟು ಖಚಿತವಾಗಿ ನಿರ್ದೇಶಿಸಿರುವುದು ಇದಕ್ಕೆ ಮೊದಲು ಪ್ರಾಯಶಃ ಇನ್ನೆಲ್ಲೂ ಕಾಣಸಿಗದು.

೨. 'ಕವಿರಾಜಮಾರ್ಗ'ದಲ್ಲಿ 'ಕಾವೇರಿಯಿಂದ ಗೋದಾವರಿಯ ವರೆಗೆ' ಎಂಬ ಮಾತು ಬರುತ್ತಿದ್ದು, ಇದು ಮೊಟ್ಟ ಮೊದಲಿನದು ಅಂತ... ಹೇಳಿದರು. ಆದರೆ ತಮಿಳು 'ತೊಲ್ಕಾಪ್ಪಿಯಂ'ದೊಳಗೆ ತಮಿಳುನಾಡಿನ ವ್ಯಾಪ್ತಿಯನ್ನು ಹೇಳುವಾಗ ಇಂತಹ ಭೌಗೋಳಿಕ ವ್ಯಾಪ್ತಿಯ ಸೂಚನೆ ಇದೆ. ಆದ್ದರಿಂದ... ಇದರ ಬೇರುಗಳು ಸಂಸ್ಕೃತದ ಕಡೆಗೆ ಹೋಗದೆ ದ್ರಾವಿಡ ಕಡೆಗೆ ಹೋಗ್ತವೆ. ಆ ದಿಶೆಯೊಳಗೆ ನಾವು ವಿಚಾರ ಮಾಡಬೇಕು ಅಂತ ನನಗೆ ಅನಿಸ್ತಾ ಇದೆ.

೧. ಆದ್ರೆ ಈ ದ್ರಾವಿಡ ಆರ್ಯ ಇದೆಯಲ್ಲ ಈ ಪರಿಕಲ್ಪನೆ ಬಗ್ಗೆ ಮೊದಲನೆಯದಾಗಿ ನನಗೆ ಕೆಲವು ಸಂದೇಹಗಳಿವೆ... ಆದ್ದರಿಂದ ಈ ದ್ರಾವಿಡ ಅನ್ನೋ ಕಲ್ಪನೆ ಇದೆಯಲ್ಲ, ಇದು ಬಹಳ ತಪ್ಪು ಅಂತ ಕಾಣ್ತದೆ.

೨. ಆದರೆ ನನಗೆ ದ್ರಾವಿಡ ಪರಂಪರೆಗೇ ಒಂದು ಥಿಂಕಿಂಗ್ ಅದೆ ಅಂತ ಕಾಣಿಸ್ತದೆ.

೩. 'ಕವಿರಾಜಮಾರ್ಗ'ವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ... ಹೇಳಿದರು– ಸಂಸ್ಕೃತದ ದೃಷ್ಟಿಯಿಂದ ಅದನ್ನು ಅಧ್ಯಯನ ಮಾಡಿರುವುದು ಹೆಚ್ಚಾಗಿದೆಯೇ ಹೊರತು ಇನ್ನು ದಕ್ಷಿಣದ ಇತರೆ ಪ್ರಾಂತೀಯವಾಗಿರುವಂತಹ ಭಾಷೆಗಳಲ್ಲಿ ಬೆಳೆದಿರುವಂತಹ ಸಾಹಿತ್ಯದ ಹಿನ್ನೆಲೆಯಲ್ಲಿ ಅಧ್ಯಯನ ಹೆಚ್ಚಾಗಿಲ್ಲ. ಇದು ನಿಜ.

'ಕವಿರಾಜಮಾರ್ಗ' ವೇದಿಕೆಯ ಮೇಲೆ ನಡೆದ ಮೂವರು ಪಂಡಿತರ ಈ ಸಂವಾದವು ಆರಂಭಕಾಲದ ಕನ್ನಡ ಜಗತ್ತಿನೊಡನೆ ಇದ್ದ ದ್ರಾವಿಡ ಸಂಬಂಧವನ್ನು ತಿಳಿದುಕೊಳ್ಳುವ ದೃಷ್ಟಿಯಲ್ಲಿ ಅತಿ ಮಹತ್ವದ್ದಾಗಿದೆ.[೧] ದುರದೃಷ್ಟವಶಾತ್ ಈ ಚರ್ಚೆ ನೇರವಾಗಿ ಮುಂದುವರಿಯದೆ, ಬೀಜದಲ್ಲಿಯೇ ಕವಲೊಡೆದು, ದ್ರಾವಿಡ-ಆರ್ಯ, ದಕ್ಷಿಣ-ಉತ್ತರ ಮುಂತಾದ

---

* 'ದ್ರಾವಿಡ ಸಂಬಂಧ'ವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಗಿದ್ದು, ಇಲ್ಲಿ ತೊಲ್ಕಾಪ್ಪಿಯಮ್ ಮತ್ತು ಶಂಗಂ ಸಾಹಿತ್ಯದ ಸ್ವರೂಪವನ್ನು ಪರಿಚಯ ಮಾಡಿಕೊಂಡು, ಇವು ಮತ್ತು ಕವಿರಾಜಮಾರ್ಗದಲ್ಲಿ ಕಂಡುಬರುವ ಸಮಾನಾಂತರ ಸಂವೇದನೆಗಳನ್ನು ಗುರುತಿಸಲು ಪ್ರಯತ್ನಪಟ್ಟಿರುವೆನು. ಇಲ್ಲಿ ಸಂಸ್ಕೃತ ಪದಗಳ ಅಳವಡಿಕೆ ಮತ್ತು ಸಂಸ್ಕೃತೀಕರಣ ಪ್ರಕ್ರಿಯೆಗೆ ಪ್ರಧಾನವಾಗಿ ಗಮನ ಹರಿಸಲಾಗಿದೆ. ಎರಡನೆಯ ಲೇಖನದಲ್ಲಿ ಭಾಷಾಪ್ರಜ್ಞೆ ಮತ್ತು ನಕಾಶನಿರ್ದೇಶನದ ಪ್ರಶ್ನೆಯನ್ನು ಕೈಗೆತ್ತಿಕೊಂಡಿರುವೆನು. ಮೂರನೆಯ ಲೇಖನದಲ್ಲಿ ನಕಾಶೆ ನಿರ್ದೇಶದ ಹರವನ್ನು ಹೆಚ್ಚಿಸಿಕೊಂಡು, ತಮಿಳರ 'ಕಡಲು ಕುಡಿದ ಭೂಮಿಖಂಡದ ನಕಾಶೆ'ಯನ್ನು ಕಂಡುಕೊಳ್ಳಲು ಪ್ರಯತ್ನಿಸಿರುವೆ.

ಪರಂಪರೆಯೆಡೆಗೆ ಬಸಿದು ಬತ್ತಿಬಿಟ್ಟಿತು. ಆದರೆ ಈ ಪ್ರಶ್ನೆಯು ನಮ್ಮನ್ನಿಂದು ಅತಿಯಾಗಿ ಕಾಡುತ್ತಿದ್ದು, ಇದಕ್ಕೆ ಉತ್ತರ ಹುಡುಕುವ ಒತ್ತಡ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲಿದೆ. ಕಳೆದ ಶತಮಾನದಲ್ಲಿ ಇದು ಎಂದೋ ಬರಬಹುದಿತ್ತು; ಹಾಗೇನಾದರೂ ಬಂದಿದ್ದರೆ ತಮಿಳನ್ನೂ ಕನ್ನಡವನ್ನೂ ಚೆನ್ನಾಗಿ ಜೀರ್ಣಿಸಿಕೊಂಡಿದ್ದ ಅಂದಿನ ಪಂಡಿತರಲ್ಲಿ ಯಾರೊಬ್ಬರಾದರು ಇದಕ್ಕೆ ತಕ್ಕ ಉತ್ತರವನ್ನು ಹುಡುಕಿಕೊಡುತ್ತಿದ್ದರು. ಆದರೆ ಇಪ್ಪತ್ತನೆಯ ಶತಮಾನದ ಸಂಶೋಧನಾ 'ಧರ್ಮ'ಕ್ಕನುಗುಣವಾಗಿ, ಅಂದು ಮುಖ್ಯವೆನಿಸಿದ್ದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ತಮ್ಮೆಲ್ಲ ಶಕ್ತಿಯನ್ನು ಅವರು ವಿನಿಯೋಗಿಸಿಕೊಳ್ಳಬೇಕಾಯಿತು. ಅವರನ್ನು ಕಾಡಿದ ಪ್ರಶ್ನೆಗಳಲ್ಲಿ ಪ್ರಮುಖವಾದವುಗಳು :

೧. ಕವಿರಾಜಮಾರ್ಗದ ಕರ್ತೃ ಯಾರು? ೨. ಅವನ ಕುಲ-ಜಾತಿ-ಮತಗಳಾವುವು? ೩. ಅವನು ಸಂಸ್ಕೃತ ಲಕ್ಷಣಕಾರರಿಂದ ಎಷ್ಟೆಷ್ಟು ಎರವಲು ಪಡೆದು ಹೇಗೆ ಅಳವಡಿಸಿಕೊಂಡನು? ಎಂಬವು.

ಈ ಪ್ರಶ್ನೆಗಳಿಗೆ ಉತ್ತರ ಹುಡುಕುವುದರಲ್ಲಿಯೇ ಒಂದು ಶತಮಾನ ಉರುಳಿ ಹೋಯಿತೇನೊ ನಿಜ, ಆದರೆ ಅದೆಲ್ಲಾ ನಿರರ್ಥಕ ಶ್ರಮವೆನ್ನಲಾಗದು. ಅವರ ಪ್ರಯತ್ನ ದಿಂದಾಗಿ ಕೆಲವು ನಿರ್ಣಯಗಳಿಗೆ ಬರಲು ನಮಗೆ ಸಾಧ್ಯವಾಗಿರುವುದಲ್ಲದೆ ಅಂತಹ ಪ್ರಶ್ನೆಗಳ ಬಗ್ಗೆ ಮುಂದಿನ ತಲೆಮಾರಿನವರು ಹೆಚ್ಚು ತಲೆಕೆಡಿಸಿಕೊಳ್ಳಬೇಕಾದ ಆವಶ್ಯಕತೆ ಉಂಟಾಗದಂತೆ ಮಾಡಿದೆ. ಈ ಮೂರು ಪ್ರಶ್ನೆಗಳಲ್ಲಿ ಕೊನೆಯದು ಹೆಚ್ಚು ಮಹತ್ವದ್ದಾದುದರಿಂದ, ಈ ಬಗ್ಗೆ ಅವರು ಕೈಕೊಂಡ ಕೆಲವು ನಿರ್ಣಯಗಳನ್ನಿಲ್ಲಿ ನೆನೆಯಬಹುದು. ಅವು ಇಂತಿವೆ :

೧. ಮಾರ್ಗಕಾರನು ಸಂಸ್ಕೃತ ಲಕ್ಷಣಕಾರರಿಂದ, ಅವರಲ್ಲೂ ಭಾಮಹ ಮತ್ತು ದಂಡಿಯಿಂದ, ವಿಶೇಷ ಪ್ರೋತ್ಸಾಹ ಪಡೆದುಕೊಂಡಿದ್ದನೆನ್ನುವುದರಲ್ಲಿ ಅನುಮಾನವಿಲ್ಲ. ಈ ಇಬ್ಬರಲ್ಲಿ, ದೂರ ಕಾಶ್ಮೀರದ ಭಾಮಹನಿಗಿಂತ ಸಮೀಪದ ದ್ರಾವಿಡದೇಶದ ದಂಡಿಯತ್ತ ಅವನು ಹೆಚ್ಚು ಒಲವು ತೋರಿದನು. ದೋಷ ಪ್ರಕರಣದಲ್ಲಿ ಭಾಮಹನಿಗೆ ಸಂಖ್ಯಾದೃಷ್ಟಿಯಲ್ಲಿ ಸನಿಹನೆನಿಸಿದರೆ, ಲಕ್ಷಣದೃಷ್ಟಿಯಲ್ಲಿ ಅವನು ದಂಡಿಗೆ ಅತಿ ಸನಿಹನಾಗಿರುವನು.[೨]

೨. ಶಬ್ದಾಲಂಕಾರದಲ್ಲಿ ದಂಡಿ-ಭಾಮಹರು ಲಕ್ಷ್ಯ-ಲಕ್ಷಣಗಳನ್ನು ನಿರೂಪಿಸಿದರೆ ಮಾರ್ಗಕಾರನು ಲಕ್ಷ್ಯಗಳನ್ನು ನಿರ್ದೇಶಿಸುವುದರಲ್ಲಿ ತೃಪ್ತಿ ಪಡೆದು, ಒಂದು ಬಗೆಯಲ್ಲಿ ಅವರಿಗಿಂತ ಭಿನ್ನನೆನಿಸಿದನು.

೩. ಅರ್ಥಾಲಂಕಾರ ಕ್ಷೇತ್ರದಲ್ಲಿ ಭಾಮಹ(೩೨) ಮತ್ತು ದಂಡಿ(೩೫)ಯರಿಗಿಂತ ಮಾರ್ಗಕಾರನು ಒಂದು ಹೆಜ್ಜೆ ಮುಂದಿಟ್ಟನು(೩೬). ಇಲ್ಲಿ ಮೂವರ ಪಥಗಳು ಹೆಚ್ಚೂ ಕಡಿಮೆ ಸಮಾನ ರೇಖೆಯಲ್ಲಿ ಮುಂದುವರಿದರೂ ಅವು ಪ್ರತ್ಯೇಕವಾದ ಮೂರು ಕಾಲ್ದಾರಿ ಗಳಾಗಿದ್ದವೆಂಬುದು ಗಮನಾರ್ಹ. ಅವರ ಅಲಂಕಾರ ಶೀರ್ಷಿಕೆಗಳೂ ಅವರವರ ವೈಯಕ್ತಿಕ ಮುದ್ರೆಯನ್ನು ಒತ್ತಿಕೊಂಡಿವೆ.

೪. (ಉತ್ತರ ಮತ್ತು ದಕ್ಷಿಣ) ಮಾರ್ಗಭೇದಗಳನ್ನು ಗುರುತಿಸುವುದಲ್ಲದೆ ಅವುಗಳಿಗೆ ಲಕ್ಷ್ಯಗಳನ್ನು ಒದಗಿಸುವಲ್ಲಿ ಕೂಡಾ ಹೊಸದೆನ್ನುವ ಬಗೆಯಲ್ಲಿ ಮಾರ್ಗಕಾರನು ದಂಡಿಯ ಗೌಡೀ (ಪೌರ್ವಾತ್ಯ) ಮತ್ತು ವೈದರ್ಭೀ(ದಾಕ್ಷಿಣಾತ್ಯ)ಗಳನ್ನು ಅನುಕರಿಸಿರುವನೆನ್ನುವುದನ್ನು ಅನುಮಾನಿಸುವುದಕ್ಕೆ ಆಸ್ಪದ ಇಲ್ಲ. ಈ ಎಲ್ಲ ಕಾರಣಗಳಿಂದಾಗಿ–

" 'ಕವಿರಾಜಮಾರ್ಗ'ವೆಂಬ ಲಕ್ಷಣಗ್ರಂಥವು ಸಂಸ್ಕೃತ ಸಾಹಿತ್ಯ ಹಾಗೂ ಕಾವ್ಯಮೀಮಾಂಸೆಯ ತಿಳಿವಳಿಕೆಯಿಂದ ರಚಿತವಾದ ಕೃತಿ ಎಂಬುದನ್ನು ನೆನೆಸಿದರೆ, ಕನ್ನಡ ಸಾಹಿತ್ಯದ ಮೊದಲ ಕಾಲದ ದಟ್ಟವಾದ ಸಂಸ್ಕೃತದ ಪ್ರಭಾವಕ್ಕೆ ಒಳಗಾದ ಕಾಲವಾಗಿತ್ತೆಂಬುದು ಸ್ಪಷ್ಟವಾಗುತ್ತದೆ", ಎಂಬುದು ಒಟ್ಟಾರೆ ಮಾಡಿದ ನಿರ್ಣಯ.[೩]

ದ್ರಾವಿಡ ಸಂಬಂಧದ ಪ್ರಶ್ನೆಗಳು :

ಇಪ್ಪತ್ತನೆಯ ಶತಮಾನದ ಹಿಂಬಡದಂಚಿನಲ್ಲೆಲ್ಲೂ ಕಾಣದ, ಆದರೆ ಈ ಶತಮಾನದ ಮುಂಗುಷ್ಟಕ್ಕಂಟಿಕೊಂಡೇ ಬಂದ ಹೊಸ ಪ್ರಶ್ನೆ: 'ಕವಿರಾಜಮಾರ್ಗ'ದ ದ್ರಾವಿಡ ಬೇರುಗಳಾವುವು? ಎಂಬುದು.[೪]

ಈ ಪ್ರಶ್ನೆಯನ್ನೆತ್ತಿಕೊಂಡು ಅದಕ್ಕೆ ಉತ್ತರ ಹುಡುಕುವವನಿಗೆ ಬೇಕಾದ ಆವಶ್ಯಕ ಅರ್ಹತೆಗಳಲ್ಲಿ ಒಂದು, ತಮಿಳು ಮತ್ತು ಕನ್ನಡ ಕಾವ್ಯಪರಂಪರೆಯ ಜ್ಞಾನ; ಮತ್ತೊಂದು, ಭಾರತೀಯ (ದೇಸಿ-ಮಾರ್ಗೀ) ಕಾವ್ಯಮೀಮಾಂಸೆಯ ಅರಿವು. ಇದರಷ್ಟೇ ಮುಖ್ಯವಾದದ್ದು ಅದಕ್ಕೆ ಸಂಬಂಧಪಟ್ಟ ಆಕರಗಳನ್ನು ಮೂಲ ಭಾಷೆಗಳಲ್ಲಿ ಅಭ್ಯಸಿಸಿ, ಅರ್ಥೈಸುವ ಸಾಮರ್ಥ್ಯ. ಇವಾವೂ ನನ್ನಲ್ಲಿಲ್ಲ. ಆದರೆ ಈ ಎಲ್ಲಾ ಅರ್ಹತೆಗಳಿದ್ದವರಲ್ಲಿ ಈ ಪ್ರಶ್ನೆಯ ಬಗ್ಗೆ ಆಸಕ್ತಿ ಮೂಡಿಸಿ, ಈ ಕಡೆ ಅವರ ಗಮನವನ್ನು ಸೆಳೆಯುವ ತವಕ ನನಗೂ ನನ್ನಂಥವರಲ್ಲಿಯೂ ಇದ್ದು, ನಾವು ಈ ನಿಟ್ಟಿನೆಡೆ ಮೊದಲ ಹೆಜ್ಜೆಯನ್ನು ಇಡುವುದು ಇಂದು ಅನಿವಾರ್ಯವಾಗಿದೆ. ಅಲ್ಲದೆ, ಆರಂಭಿಕ ಕಾಲದ ತಮಿಳು ಅನುವಾದ ಸಾಹಿತ್ಯದ ಒಂದು ಬೆಟ್ಟವೇ ಇತ್ತೀಚಿನ ದಿನಗಳಲ್ಲಿ ಬೆಳೆದಿದ್ದು ಅದು ನಮಗೆ ಸುಲಭ ಲಭ್ಯವೂ ಆಗಿರುವುದು. ಒಂದಕ್ಕಿಂತ ಹೆಚ್ಚು ಪಾಠಗಳು ದೊರೆಯುತ್ತಿರುವುದರಿಂದ, ಈ ಅನುವಾದಗಳ ತುಲನಾತ್ಮಕ ಅಧ್ಯಯನವನ್ನು ಕೈಕೊಂಡು, ಸತ್ಯಾಸತ್ಯತೆಯನ್ನು ಅರಿತುಕೊಳ್ಳಲು ನಮಗೆ ಈಗ ಸಾಧ್ಯವಾಗುವಂತಾಗಿದೆ. ಅನುವಾದಿತ ಕೃತಿಗಳನ್ನು ಅವಲಂಬಿಸಿ ಮಾಡುವ ನಿರ್ಣಯಗಳಲ್ಲಿ ಅಡಗಿರುವ ಅಪಾಯದ ಅರಿವು ನನಗಿದೆ, ಆದರೆ ಈ ಬಗೆಯ ಅಭ್ಯಾಸ ನಮಗಿಂದು ಅನಿವಾರ್ಯವೆಂಬುದು ನನ್ನ ಅನಿಸಿಕೆ. ಅದೃಷ್ಟವಶಾತ್, ತಮ್ಮ ಸಾಹಿತ್ಯವನ್ನು ಪರಭಾಷೀಯರಿಗೆ ಪರಿಚಯಿಸುವ ಕಾರ್ಯವನ್ನು ತಮಿಳು ಭಾಷಾಪಂಡಿತರು ಬಹುಶಃ ಉಳಿದೆಲ್ಲ ಭಾಷಾಪಂಡಿತರಿಗಿಂತಲೂ —ಖಂಡಿತವಾಗಿಯೂ ಕನ್ನಡ ಕೃತಿಗಳನ್ನು ಪರಿಚಯಿಸಲು ಮಾಡಿದ ನಮ್ಮ ಪರಿಶ್ರಮಕ್ಕಿಂತಲೂ ಸರಿಸುಮಾರು ನೂರು ಪಟ್ಟು— ಹೆಚ್ಚು ಶ್ರಮ ಮತ್ತು ಶ್ರದ್ಧೆಯಿಂದ ಪೂರೈಸಿ ಕೊಟ್ಟಿರುವರು. ಇದರಲ್ಲಿ ಪಾಶ್ಚಾತ್ಯ ಪಂಡಿತರ ಕಾಣಿಕೆಯೂ ಸಾಕಷ್ಟು ಪ್ರಮಾಣದಲ್ಲಿದ್ದು ಅದಿನ್ನೂ ಮುಂದುವರಿಯುತ್ತಲಿದೆ. ಉದಾಹರಣೆಗೆ, 'ತೊಲ್ಕಾಪ್ಪಿಯಮ್' ಕೃತಿಯೊಂದನ್ನೇ ತೆಗೆದುಕೊಂಡರೆ ಇದನ್ನು ಭಾಷಾಂತರಿಸಿದ-ವ್ಯಾಖ್ಯಾನಿಸಿದ ಅರ್ಧ ಡಜನ್ ಉತ್ತಮ ಗ್ರಂಥಗಳೂ ಅನೇಕಾನೇಕ ಬಿಡಿ ಲೇಖನಗಳೂ ನಮಗಿಂದು ಇಂಗ್ಲಿಷ್‌ನಲ್ಲಿ ಲಭ್ಯವಿವೆ.[೫] ಇವನ್ನು ಎಚ್ಚರಿಕೆಯಿಂದ ಅಭ್ಯಸಿಸಿದರೆ, ಬಹುಮಟ್ಟಿನ ಸತ್ಯಾಂಶವನ್ನು ಕಂಡುಕೊಳ್ಳಲು ಸಾಧ್ಯವಾಗಬಹುದು. ಇದು ನಿರ್ಣಾಯಕ ಉತ್ತರಗಳನ್ನು ಒದಗಿಸಬಹುದು-ಒದಗಿಸದಿರಬಹುದು, ಆದರೆ ಗುರುತರ ಪ್ರಚೋದನೆಯನ್ನು ಒಡ್ಡಿ ನಮ್ಮನ್ನು ಹೆಚ್ಚಿನ ಸಂಶೋಧನೆಗೆ ಕೊಂಡೊಯ್ಯಬಹುದೆಂದು ನನಗನಿಸುವುದು.

ನನ್ನ ಅಭ್ಯಾಸವು ಈ ನಿಟ್ಟಿನೆಡೆ ಇಟ್ಟ ಮೊದಲ ಹೆಜ್ಜೆ. ದ್ರಾವಿಡ ಸಂಬಂಧದ ಎಲ್ಲಾ ಪ್ರಶ್ನೆಗಳನ್ನು ನಾನಿಲ್ಲಿ ಎತ್ತಿಕೊಂಡಿಲ್ಲ– ಅವುಗಳಲ್ಲಿ ಪ್ರಮುಖವೂ ನಮಗಿಂದು ಪ್ರಸ್ತುತವೂ ಎನಿಸಿರುವ ಎರಡು ಪ್ರಶ್ನೆಗಳನ್ನು ಮಾತ್ರ ಆಯ್ದು ಮಾಡಿಕೊಂಡು, ಮೊದಲ ಅರ್ಧ ಸಹಸ್ರಮಾನದ (ಕ್ರಿ.ಶ. ೧ ರಿಂದ ೫ ನೆಯ ಶತಕ) ತಮಿಳು ಸಾಹಿತ್ಯದಲ್ಲಿ ಅವಕ್ಕೆ ಉತ್ತರ ಕಂಡುಕೊಳ್ಳಲು ಪ್ರಯತ್ನಪಟ್ಟಿರುವೆ. ಈ ಸಾಹಿತ್ಯವನ್ನು ಸ್ಥೂಲವಾಗಿ ಮೂರು ವರ್ಗಗಳಡಿ ತರಬಹುದು : (೧) ಆರಂಭ ಕಾಲದ ತಮಿಳು ಸಾಹಿತ್ಯ (ಪ್ರಧಾನವಾಗಿ ತೊಲ್ಕಾಪ್ಪಿಯಮ್); (೨) ಎರಡನೆಯ ಘಟಕದ ತಮಿಳು ಸಾಹಿತ್ಯ (ಪ್ರಧಾನವಾಗಿ 'ಶಂಗಂ ಸಂಕಲನ'); ಮತ್ತು (೩) ಆನಂತರ ಕಾಲದ ಮಹಾಕಾವ್ಯಗಳು (ವಿಶೇಷವಾಗಿ 'ಶಿಲಪ್ಪತಿಕಾರಂ' ಮತ್ತು 'ಮಣಿಮೇಕಲೈ').

'ಕವಿರಾಜಮಾರ್ಗ'ದ ವೇದಿಕೆಯ ಮೇಲೆ ತಂದ ಪ್ರಮುಖ ಪ್ರಶ್ನೆಯು ನೇರವಾಗಿದ್ದು, ಅದು 'ಭಾಷಾ-ಜನಾಂಗದ ಭೌಗೋಳಿಕ ಮೇರೆಯನ್ನು ಮೊಟ್ಟಮೊದಲು ಗುರುತಿಸಿದವನು ಕವಿರಾಜಮಾರ್ಗಕಾರನೋ ಅಥವಾ ಅದಕ್ಕಿಂತ ಏಳೆಂಟು ನೂರು ವರ್ಷ ಕಾಲ ಮುಂಚೆ ಇದ್ದ ತಮಿಳು ವೈಯಾಕರಣಿಯಾದ ತೊಲ್ಕಾಪ್ಪಿಯಾಣಾರ್‌ನೋ?' ಎನ್ನುವುದು. ಈ ಪ್ರಶ್ನೆ ಬಂದುದು 'ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡು' ಎಂದು 'ಕನ್ನಡದ' ನಕ್ಷೆಯನ್ನು ನಿರ್ಮಿಸಿದ ಮಾರ್ಗಕಾರನಿಗಿಂತ ಮುಂಚೆ "ಯಾವುದೇ ವಾಙ್ಮಯದಲ್ಲು- ಸಂಸ್ಕೃತ ವಾಙ್ಮಯದಲ್ಲು– ಇಂಥ ನಕಾಶೆ ನಿರ್ದೇಶನದ ಉಲ್ಲೇಖಗಳು ಪ್ರಾಯಃ ಕಾಣುವುದಿಲ್ಲ", ಎಂಬ ಅನಿಸಿಕೆ ನಮ್ಮಲ್ಲಿ ಬೇರೂರಿರುವುದರಿಂದ.

ತೊಲ್ಕಾಪ್ಪಿಯಮ್ ಮತ್ತಿನ್ನಿತರ ಶಂಗಂ ಸಾಹಿತ್ಯ :

ತೊಲ್ಕಾಪ್ಪಿಯಮ್ ಶಂಗಂ ಸಾಹಿತ್ಯದ ಒಂದು (ಪ್ರಥಮ) ಅಂಗ ಮಾತ್ರ. ಈ ಶಾಸ್ತ್ರಗ್ರಂಥವನ್ನು ಹೊರತುಪಡಿಸಿ, ಸಾಕಷ್ಟು ಸೃಜನಾತ್ಮಕ ಮತ್ತು ಲಕ್ಷಣ ಗ್ರಂಥಗಳು ಕ್ರಿ.ಶ. ಆರಂಭಕಾಲದಲ್ಲಿ ತಮಿಳಿನಲ್ಲಿ ನಿರ್ಮಾಣಗೊಂಡವು. ಆದರೆ ಅವೆಲ್ಲವೂ ಇಂದು ನಮಗೆ ಲಭ್ಯವಿಲ್ಲ; ಅಲ್ಲದೆ, ನಾಶಗೊಂಡ ಸಾಹಿತ್ಯದ ಪ್ರಮಾಣವೆಷ್ಟೆಂಬುದನ್ನು ನಿರ್ಧರಿಸಲೂ ನಮಗಿಂದು ಸಾಧ್ಯವಾಗುತ್ತಿಲ್ಲ.[1] ಅಳಿದುಳಿದು ಬಂದ 'ಶಂಗಂ-ಸಂಕಲನ'ದಲ್ಲಿ ಸುಮಾರು ೩೦,೦೦೦ ಸಾಲುಗಳ, ೨,೩೮೧ ಕವನಗಳಿದ್ದು, ಇವು (ಮೂವತ್ತೊಂಬತ್ತು ಕವಯಿತ್ರಿಯರ ನ್ನೊಳಗೊಂಡ) ನಾಲ್ಕುನೂರಾ ಎಪ್ಪತ್ತ್ಮೂರು ಕವಿಗಳ ಹೆಸರುಗಳೊಂದಿಗೆ ಗುರುತಿಸಿಕೊಂಡಿವೆ. ಇದರಲ್ಲಿ ಸುಮಾರು ಅರ್ಧದಷ್ಟು ಕಾವ್ಯವನ್ನು ರಚಿಸಿದ ಕೀರ್ತಿಯು ಆರು ಕವಿಗಳಿಗೆ ಸಲ್ಲುವುದು. ನೂರಕ್ಕೂ ಹೆಚ್ಚು ಸಂಖ್ಯೆಯ ಕಾವ್ಯಕರ್ತೃಗಳ ಬಗ್ಗೆ ನಮಗೇನೂ ತಿಳಿಯದು. ಸುಮಾರು ಎರಡುನೂರಾ ತೊಂಭತ್ತ್ಮೂರು ಕವಿಗಳು ಒಂದಕ್ಕಿಂತ ಹೆಚ್ಚು ಕವನಗಳಿಗೆ 'ಶಂಗಂ'ನಿಂದ ಮನ್ನಣೆ ದೊರಕಿಸಿಕೊಳ್ಳಲು ಸಾಧ್ಯವಾಗಲಿಲ್ಲವೆಂದು ತೋರುವುದು– ಏಕೆಂದರೆ, ಇವರ ಹೆಸರಿನ ಒಂದೊಂದೇ ಕವನ ಈ ಸಂಕಲನದಲ್ಲಿ ಕಂಡುಬರುವುದು. 'ಶಂಗಂ' ಕವಿಗಳಲ್ಲಿ ಅತ್ಯಂತ ಹೆಚ್ಚು ಗೌರವಕ್ಕೆ ಪಾತ್ರನಾದವನೆಂದರೆ, ಸುಮಾರು ನೂರಾ ಎಪ್ಪತ್ತೇಳು ಕವನಗಳನ್ನು ರಚಿಸಿದ 'ಕಪಿಲರ್'.[2] ಇವರೆಲ್ಲರಿಗೂ ಪೂಜ್ಯನೂ ಪೂರ್ವಜನೂ ಆದವನು ತೊಲ್ಕಾಪ್ಪಿಯಾಣಾರ್.

ತೊಲ್ಕಾಪ್ಪಿಯಮ್ ೧,೬೦೨ ಪದ್ಯಗಳನ್ನೊಳಗೊಂಡ ಬೃಹತ್ ಗ್ರಂಥ. ಲೋಕಾರೂಢಿಯಲ್ಲಿ ಇದು 'ವ್ಯಾಕರಣ'ಗ್ರಂಥವೆಂದೇ ಪ್ರಸಿದ್ಧಿ ಪಡೆದಿದೆ. ವಾಸ್ತವವಾಗಿ ಇದರ ಹರವು ತುಂಬಾ ವಿಸ್ತಾರವಾಗಿದ್ದು, ಇದನ್ನು ಭಾಷಾಶಾಸ್ತ್ರದ 'ಎನ್‌ಸೈಕ್ಲೋಪಯಿಡಿಯಾ' ಎಂದರೂ ತಪ್ಪಾಗಲಿಕ್ಕಿಲ್ಲ. ಕವಿರಾಜಮಾರ್ಗದಂತೆ ತೊಲ್ಕಾಪ್ಪಿಯಮ್ ಕೂಡಾ ಮೂರು ವಿಭಾಗಗಳಲ್ಲಿ ('ಅತಿಕಾರಂ') ಹಂಚಿಕೊಂಡಿದೆ: ಆದರೆ ಈ ಒಂದೊಂದು 'ಅತಿಕಾರ'ವೂ ಒಂಭತ್ತು ಉಪವಿಭಾಗಗಳಲ್ಲಿ ವರ್ಗೀಕರಿಸಲ್ಪಟ್ಟಿರುವುದು ತೊಲ್‌ನ ವಿಶೇಷತೆ. ಅದರ ಮೂರು ಪ್ರಧಾನ 'ಅತಿಕಾರ'ಗಳೆಂದರೆ : (೧) 'ಎಟುತ್ತು' (೪೮೦ ಸೂತ್ರ); (೨) 'ಶೊಲ್' (೪೬೦ ಸೂತ್ರ) ಮತ್ತು (೩) 'ಪೊರುಟುಳ್' (೬೬೦ ಸೂತ್ರ). ಇದರ ಕಾಲವು ವಿವಾದದ ತಿರುಗಣಿಯಿಂದ ಇನ್ನೂ ಹೊರಬಂದಿಲ್ಲ: ಕೆಲವರು ಇದನ್ನು ಕ್ರಿ. ಪೂ. ೫೦೦ ಕ್ಕೆ ಕೊಂಡೊಯ್ದರೆ, ಇನ್ನು ಕೆಲವರು ಕ್ರಿ.ಶ. ೫೦೦ ಕ್ಕೆ ತಂದು ನಿಲ್ಲಿಸುವರು.[೮] ಆರಂಭಕಾಲದ ತಮಿಳು ಭಾಷೆಯ ಸೃಜನಕಾವ್ಯ ನಿರ್ಮಾಣವಾಗುವುದಕ್ಕಿಂತ ಮುಂಚೆ ಈ ಶಾಸ್ತ್ರಗ್ರಂಥವು ಸಿದ್ಧವಾಗಿತ್ತೆಂಬುದರಲ್ಲಿ ಅನುಮಾನವಿಲ್ಲ. ಏಕೆಂದರೆ ಶಂಗಂ ಕವಿಗಳು ಕಟ್ಟಿದ 'ಅಹಂ' (ಪ್ರಣಯಗೀತೆ) ಮತ್ತು 'ಪುರಂ' (ವೀರಗೀತೆ) ಎಂಬ ಎರಡು ಕಾವ್ಯ ಪ್ರಭೇದಗಳಿಗೆ ಚೌಕಟ್ಟು ನಿರ್ಮಿಸಿ ಕೊಟ್ಟವನೇ ತೊಲ್ಕಾಪ್ಪಿಯಾಣಾರ್. ಸುಮಾರು ಒಂದು ಶತಮಾನ ಕಾಲದ ಚರ್ಚೆಯ ನಂತರ ಇದರ ಕಾಲವಿಂದು ಕ್ರಿ.ಶ. ಮೊದಲ ಶತಮಾನದಲ್ಲಿ ನೆಲೆಕಂಡುಕೊಂಡಿದೆ. ಅಂದರೆ ಕವಿರಾಜಮಾರ್ಗಕ್ಕಿಂತ ಸುಮಾರು ಎಂಟುನೂರು ವರ್ಷಗಳ ಹಿಂದೆ ಈ ಗ್ರಂಥವು ನಿರ್ಮಾಣವಾಗಿತ್ತೆಂದು ನಾವು ಭಾವಿಸಬಹುದು.

ತೊಲ್ಕಾಪ್ಪಿಯಮ್ ಮತ್ತು ಶಂಗಂ ಸಂಕಲನಗಳನ್ನು ಒಟ್ಟು ಸೇರಿಸಿದರೆ, ಆರಂಭ ಕಾಲದ ತಮಿಳು ಸಾಹಿತ್ಯದ (ವಾಸ್ತವವಾಗಿ ಅಳಿದುಳಿದು ಬಂದಿರುವ) ಪ್ರಮಾಣವು ಸುಮಾರು ೪,೦೦೦ ಪದ್ಯಗಳಿಗೆ ಏರಬಹುದು. ಭಾಷೆಯೊಂದರ ಬೆಳವಣಿಗೆಯ ಆರಂಭ ಕಾಲದಲ್ಲಿ ಇಷ್ಟೊಂದು ಕವಿಗಳಿಂದ ನಿರ್ಮಾಣಗೊಂಡ ಈ ಪ್ರಮಾಣದ ಸಾಹಿತ್ಯವನ್ನು ಬೇರೆಡೆ ಕಾಣುವುದು ಅಪರೂಪ. ಬಹುಶಃ ಇದೊಂದು ಬಗೆಯ ವಿಶ್ವದಾಖಲೆಯಾಗಿರಬಹುದೇನೋ ಅನಿಸುವುದು.

'ತೊಲ್' ಎಂದರೆ 'ಪುರಾತನ'ವೆಂಬ, 'ಕಾಪ್ಪಿಯಮ್' ಅಂದರೆ 'ಸಂಯೋಜನ', 'ಸಂಕಲನ', 'ಪ್ರಬಂಧರಚನೆ' ಎಂಬ ಅರ್ಥಗಳನ್ನು ಕೊಡಲಾಗಿದೆ.[೯] 'ಶಯ್ಯುಳ್ ಇಯಲ್' (ಛಂದಃಶಾಸ್ತ್ರ)ದಡಿ 'ತೊಲ್' ಎಂಬ ಹೆಸರಿನ ಒಂದು ಕಾವ್ಯ ಪ್ರಬೇಧವನ್ನು ಹೆಸರಿಸಿ, ಅಲ್ಲಿ 'ತುಂಬಾ ಸೊಗಸಾದ ಶೈಲಿಯಲ್ಲಿ ರಚಿಸಿದ ನೀತಿಬೋಧಕ ಕತೆ ಮತ್ತು ಸವಿಸ್ತಾರವಾಗಿ ವರ್ಣಿಸಲ್ಪಟ್ಟ ಒಂದು ಕಾವ್ಯ ಪ್ರಬೇಧ'ವೆಂದು ಅರ್ಥೈಸಲಾಗಿದೆ.[೧೦] 'ಕಾಪ್ಪಿಯರ್' ಎಂಬ ಒಂದು ಪುರಾತನ ಮನೆತನವಿತ್ತೆಂದು ಕ್ರಿ.ಶ. ೫೦೦-೬೦೦ ಕಾಲದ 'ಶಿಲಪ್ಪತಿಕಾರಂ'ನಿಂದ ತಿಳಿದುಬರುವುದು. ಈ ಮನೆತನದವರನ್ನು 'ಕಾವ್ಯಗೋತ್ರ'ದವರೆಂದೂ ವೈಯಾಕರಣಿಯಾದ ತೊಲ್ಕಾಪ್ಪಿಯಾಣಾರ್ ಕೂಡಾ ಈ ಮನೆತನ(ಗೋತ್ರ)ಕ್ಕೆ ಸೇರಿದವನಾಗಿದ್ದನೆಂದೂ ವಾದಿಸಲಾಗಿದೆ.[೧೧]

ತೊಲ್ಕಾಪ್ಪಿಯಮ್ ಗ್ರಂಥದಲ್ಲಿ ಅದರ ಹೆಸರಾಗಲೀ ಅದರ ಕರ್ತೃವಿನ ಹೆಸರಾಗಲೀ ಬರುವುದಿಲ್ಲ. ಅಲ್ಲದೆ ಇದರ ಕವಿಯ ಮತ್ತಾವ ವಿವರಗಳೂ ಇಲ್ಲಿ ದೊರೆಯುವುದಿಲ್ಲ. ಈ

ಕಾರಣದಿಂದಾಗಿ ಇದು ಒಬ್ಬನ ಕೃತಿಯೋ ಅಥವಾ ಹಲವರ ಸಾಮೂಹಿಕ ಕೃಷಿಯೋ, ಎಂಬ ವಾದ-ವಿವಾದಗಳೂ ಎದ್ದಿರುವುವು.[೧೨] ಈ ಗ್ರಂಥಕ್ಕೆ ಹೆಸರು ಕೊಟ್ಟವರಲ್ಲಿ ಮೊದಲಿಗನು ಪಣಂಪಾರಣಾರ್. ಇವನು ಈ ಗ್ರಂಥಕ್ಕೆ ಒಂದು ಪ್ರಸ್ತಾವನಾ ಸ್ತುತಿಯನ್ನು ಬರೆದು, ಇದರ ಕರ್ತೃವನ್ನು 'ತೊಲ್ಕಾಪ್ಪಿಯಾಣಾರ್' ಎಂದು ಗುರುತಿಸಿದವನು.[೧೩] ಪಣಂಪಾರಣಾರ್‌ನು ತೊಲ್ಕಾಪ್ಪಿಯಾಣರ್‌ನ ಸಮಕಾಲೀನನೂ ಸ್ವತಃ ವೈಯಾಕರಣಿಯೂ ಆಗಿದ್ದನೆಂಬ ಅಭಿಮತವಿದೆ. ೧೪ನೆಯ ಶತಮಾನದ ಮತ್ತೊಬ್ಬ ಟೀಕಾಕಾರನು ಈ ಗ್ರಂಥಕರ್ತೃವು 'ತಿರುಮಾಣುತಾಗ್ನಿ' (ಸಂ. ತೃಣಧೂಮಾಗ್ನಿ), ಅವನು ಬ್ರಾಹ್ಮಣ ಚಮತಗ್ನಿ(ಸಂ. ಜಮದಗ್ನಿ)ಯ ಪುತ್ರನೂ ಅಕತ್ತಿಯನ್(ಸಂ. ಅಗಸ್ತ್ಯ)ನ ಹನ್ನೆರಡು ಜನ ಶಿಷ್ಯರಲ್ಲಿ ಒಬ್ಬನೂ ಎಂದು ಹೇಳಿರುವನು.[೧೪] ಮೇಲ್ನೋಟಕ್ಕೆ ಕಾಣುವಂತೆ, ಇದೊಂದು ಕಾಲಾನಂತರದಲ್ಲಿ ಕೈಕೊಂಡ ಸಂಸ್ಕೃತೀಕರಣದ ಪ್ರಕ್ರಿಯೆಯಲ್ಲದೆ ಮತ್ತೇನೂ ಅಲ್ಲ.

ತೊಲ್ಕಾಪ್ಪಿಯಾಣಾರ್ ಮತ್ತು ಮಾರ್ಗಕಾರನ ಪೂರ್ವಾಚಾರ್ಯರು :

ತೊಲ್ಕಾಪ್ಪಿಯಮ್‌ನ ಒಡಲನ್ನು ಬಗೆದು ನೋಡಿದರೆ, ತನ್ನ ಪೂರ್ವಾಚಾರ್ಯರಿಗೆ ಈ ಗ್ರಂಥಕರ್ತೃವು ಎಷ್ಟು ಋಣಿಯಾಗಿದ್ದನೆಂಬುದು ಸ್ಪಷ್ಟಗೊಳ್ಳುವುದು. ತನ್ನ ಪೂರ್ವಜರಿಂದ ಮತ್ತು ತನ್ನ ಕಾಲದ ಹಿರಿಯರಿಂದ ಪಡೆದ ಮಾರ್ಗದರ್ಶನವನ್ನು ಕನಿಷ್ಠ ೨೪೦ ಬಾರಿ ಇವನು ಈ ಕಾವ್ಯದಲ್ಲಿ ಸ್ಮರಿಸಿರುವನು. ಆದರೆ ಇವರಾರನ್ನೂ ಹೆಸರಿಸದೆ, ಬರಿ 'ಎಣ್ಪ', 'ಮೊಟಿಪ' ಮುಂತಾದ ಪದಗಳಿಂದ ಅವರನ್ನು ಸೂಚಿಸಿರುವನು. ಈ ಪದಗಳ ಸ್ಥೂಲಾರ್ಥ 'ಪಂಡಿತರ ಮತ', 'ಪರಂಪರೆಯ ಮಾರ್ಗ', 'ಪೂರ್ವಜರ ಪ್ರಯೋಗ', 'ಬಲ್ಲವರ ಅಭಿಮತ', ಎಂದು.[೧೫] ಐತಿಹ್ಯಗಳನ್ನೂ ಕಾಲಾನಂತರದ ಉಲ್ಲೇಖನಗಳನ್ನೂ ಗಣನೆಗೆ ತೆಗೆದುಕೊಂಡರೆ, ಪಣಂಪಾರಣಾರ್ ತೊಲ್ಕಾಪ್ಪಿಯಾಣಾರ್‌ನ ಸಮಕಾಲೀನರಲ್ಲಿ ಒಬ್ಬ ವೈಯಾಕರಣಿ. ಆತನು ರಚಿಸಿದ ವ್ಯಾಕರಣ ಗ್ರಂಥದ ಬಗ್ಗೆ ೧೩ ನೆಯ ಶತಮಾನದ ಮಯಿಲೈನಾತರ್ ಎಂಬ ಟೀಕಾಕಾರನು 'ನಣ್ಣೂಲ್' ಎಂಬ ಗ್ರಂಥದಲ್ಲಿ ಉಲ್ಲೇಖಿಸಿರುವನು; ಆದರೆ ಪಣಂಪಾರಣಾರ್ ಗ್ರಂಥವು ಈಗ ಲಭ್ಯವಿಲ್ಲ. ೧೩-೧೪ ನೆಯ ಶತಕದಲ್ಲಿದ್ದ ಮತ್ತೊಬ್ಬ ಟೀಕಾಕಾರನಾದ 'ನಚ್ಚಿನಾರ್‌ಕ್ಕಿಣಿಯಾರ್' ಒಂದು ಕುತೂಹಲಕಾರೀ ಘಟನೆಯನ್ನು ನಿರೂಪಿಸಿ, ತೊಲ್ಕಾಪ್ಪಿಯಾಣಾರ್ ಮತ್ತು ಅವನ ಸಮಕಾಲೀನ ಶಾಸ್ತ್ರಜ್ಞರ ಮೇಲೆ ಬೆಳಕು ಚೆಲ್ಲಿದ್ದು, ಅದನ್ನಿಲ್ಲಿ ನೆನೆಯುವುದು ಪ್ರಸ್ತುತವೆನಿಸುವುದು.[೧೬] ಇದರಂತೆ ತೊಲ್ಕಾಪ್ಪಿಯಾಣಾರ್ ರಚಿಸಿದ ಶಾಸ್ತ್ರಗ್ರಂಥವನ್ನು ಅವನ ಗುರುವಾದ ಅಕತ್ತಿಯನ್(ಅಗಸ್ತ್ಯ)ನು ವಿರೋಧಿಸಿ, 'ಶಂಗಂ' ಸಭೆಯು ಅದಕ್ಕೆ ಮನ್ನಣೆ ನಿರಾಕರಿಸುವಂತಹ ಒಂದು ಸಂಚನ್ನು ಹೂಡಿದನಲ್ಲದೆ, ತನ್ನ ಮತ್ತೊಬ್ಬ ಶಿಷ್ಯನಾದ ಅತಂಕೊಟ್ಟಾಂಚಾನ್‌ನನ್ನು ಹುರಿದುಂಬಿಸಿ, ಅದನ್ನು ವಿರೋಧಿಸಲು ಸಜ್ಜುಗೊಳಿಸಿದನು. ಪಾಂಡ್ಯರಾಜನ ಸಮ್ಮುಖದಲ್ಲಿ ನಡೆದ ಈ ವಾದದಲ್ಲಿ ತನ್ನ ಗ್ರಂಥದ ವಿರುದ್ಧ ಎತ್ತಿದ ಎಲ್ಲಾ ಆಕ್ಷೇಪಗಳಿಗೆ ಸರಿಯಾದ ಉತ್ತರವಿತ್ತು, ತೊಲ್ಕಾಪ್ಪಿಯಾಣಾರ್ ಆ ಸಭೆಯ ಅಂಗೀಕಾರವನ್ನು ತನ್ನ ಗ್ರಂಥಕ್ಕೆ ಪಡೆದುಕೊಳ್ಳುವಲ್ಲಿ ಯಶಸ್ವಿಯಾದನು.

ವೈಯಾಕರಣಿಯಾದ ಅಗಸ್ತ್ಯನು ಏಕೆ ತನ್ನ ಶಿಷ್ಯನನ್ನು ವಿರೋಧಿಸಿದನು ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲವೆನಿಸುವುದು. ತಾನು ರಚಿಸಿದುದಕ್ಕಿಂತಲೂ ಶ್ರೇಷ್ಠವಾದ ವ್ಯಾಕರಣ

ಗ್ರಂಥವೆಂದು ಶಂಗಂ ಪ್ರಾಜ್ಞರಿಂದ ತೀರ್ಮಾನಕ್ಕೊಳಗಾದರೆ ತೊಲ್ಕಾಪ್ಪಿಯಾಣಾರ್‌ನ ಕೃತಿಯು ತನ್ನನ್ನೂ ತನ್ನ ಗ್ರಂಥವನ್ನೂ ಮೂಲೆಗುಂಪುಗೊಳಿಸುವುದೆಂಬ ಭೀತಿಯೂ ತನಗಿಂತಲೂ ಹೆಚ್ಚು ಪಾಂಡಿತ್ಯವನ್ನು ಪಡೆದುಕೊಂಡಿದ್ದ ಶಿಷ್ಯನ ಮೇಲಿನ ಮತ್ಸರವೂ ಇದಕ್ಕೆ ಕಾರಣವಾಗಿತ್ತೆಂಬುದು ಇಲ್ಲಿ ಸುಸ್ಪಷ್ಟ. ಪಣಂಪಾರಣಾರ್‌ನು ಈ ಗ್ರಂಥಕ್ಕೆ ಬರೆದ ಪ್ರಸ್ತಾವನಾ ಸ್ತುತಿಯಲ್ಲಿ ಅತಂಕೊಟ್ಟಾಂಚಾನ್‌ನ ಪ್ರಸ್ತಾಪವೂ ಬರುವುದು, ಆದರೆ ಅಲ್ಲಿ ಈ ಐತಿಹ್ಯಕ್ಕಾಗಲೀ ಅತಂಕೊಟ್ಟಾಂಚಾನ್‌ನ ವೈಯಕ್ತಿಕ ಪ್ರತಿರೋಧಕ್ಕಾಗಲೀ ಅಗಸ್ತ್ಯನಿಗಾಗಲೀ ಉಲ್ಲೇಖಗಳಿಲ್ಲ. ಪಣಂ ಬರೆದ ಪ್ರಸ್ತಾವನೆಯ ಪೂರ್ಣ ವಿವರಗಳನ್ನು ಮುಂದಿನ ಲೇಖನದಲ್ಲಿ ಪ್ರಸ್ತಾಪಿಸುವೆನು.[೧೭]

ಕವಿರಾಜಮಾರ್ಗದಲ್ಲಿ ಬರುವ ಪೂರ್ವಾಚಾರ್ಯರ ಪ್ರಸ್ತಾಪವು ನಮಗೆ ಬಹುಮಟ್ಟಿಗೆ ತಿಳಿದದ್ದಾಗಿದೆ. ಮಾರ್ಗಕಾರನು ಇವರಲ್ಲಿ ಕೆಲವರನ್ನು ಸ್ಪಷ್ಟವಾಗಿ ಹೆಸರಿಸುವನು; ಇನ್ನು ಕೆಲವರನ್ನು ಪರೋಕ್ಷವಾಗಿ ಮಾತ್ರ ಸ್ಮರಿಸುವನು. (ಕರಾಮಾ., ೧-೨೬-೨೯, ೩೦-೩೨). ಆದರೆ ಗದ್ಯಕಥೆಯ ಪೂರ್ವಾಚಾರ್ಯರನ್ನು (೧-೨೭, ೨೯, ೩೬-೩೭) ಮಹಾಕಾವ್ಯದ ಮಾರ್ಗದರ್ಶಿಗಳನ್ನು (೧-೩೧-೩೨) ಅವರವರ ವ್ಯಕ್ತಿಗತ ಹೆಸರುಗಳಿಂದ ಗುರುತಿಸುವ ಉತ್ಸಾಹವನ್ನು, ಲಾಕ್ಷಣಿಕ ಪಂಡಿತವೃಷಭರನ್ನು ಗುರುತಿಸುವಾಗ (ಉದಾ. ದಂಡಿ, ಭಾಮಹ ಮೊದಲಾದವರು) ಅವನು ತೋರದಿರುವುದು ಗಮನಾರ್ಹ. ಇದು ಏನೇ ಇರಲಿ, ತೊಲ್ಕಾಪ್ಪಿಯಾಣಾರ್‌ಗಿಂತ ಹೆಚ್ಚು ಸ್ಪಷ್ಟವಾದ ಪದಗಳಿಂದ ಮಾರ್ಗಕಾರನು ತನ್ನ ಪೂರ್ವಾಚಾರ್ಯರನ್ನು ಗುರುತಿಸಿರುವನೆಂಬುದರಲ್ಲಿ ಅನುಮಾನವಿಲ್ಲ. ಅವುಗಳಲ್ಲಿ 'ಪೂರ್ವಕವಿ', 'ಪುರಾಣಕವಿ', 'ಪುರಾತನಕವಿ', 'ಪೂವಾಚಾರ್ಯ', 'ಪರಮಾಚಾರ್ಯ', 'ಪರಮಾಗಮ ಕೋವಿದ', ಎಂಬವುಗಳು ಸಾಮಾನ್ಯವಾಗಿ ಅವನಿಗಿಂತ ಹಿಂದಿನ ಕಾಲದಲ್ಲಿದ್ದ ಶಾಸ್ತ್ರಜ್ಞರನ್ನು ಉದ್ದೇಶಿಸಿ ಮಾಡಿದವುಗಳಾದರೆ,[೧೮] 'ಆಚಾರ್ಯ', 'ಕಬ್ಬಿಗ', 'ಕವಿ', 'ಕವಿಪ್ರಧಾನ', 'ಕವಿಮುಖ್ಯ', 'ಕವಿವೃಷಭ', 'ಕವೀಶ', 'ಚತುರಕವಿ', 'ಚಿಂತಿತ ಪುರಾಣಕವಿ', 'ಜಾಣ', 'ನಿಪುಣ', 'ಪಂಡಿತ', 'ಪೂಣೆಗ', 'ಭಾಷಾವಿದ', 'ಬುಧ' ಅಥವಾ 'ಬುಧೋತ್ತಮ', 'ಮಾತರಿವ', 'ವಿವೇಕಿ', ಮತ್ತು 'ವಿವೇಕಬೃಹಸ್ಪತಿ', ಎಂಬವು ಅವನ ಪೂರ್ವಜರನ್ನೂ ಸಮಕಾಲೀನ ಹಿರಿಯರನ್ನೂ ಸಹಪಾಠಿಗಳನ್ನೂ ಉದ್ದೇಶಿಸಿ ಮಾಡಿದ ಉಲ್ಲೇಖಗಳಾಗಿರಲು ಸಾಧ್ಯ.[೧೯] ಇವರನ್ನು 'ಕವಿತಾನೀತಿಯುತರ್', 'ಕಾವ್ಯಪ್ರಯೋಗ ಪರಿಣತಮತಿಗಳ್' ಎಂದು ಗುರುತಿಸಿದರೆ, ಅವರು ಹಾಕಿಕೊಟ್ಟ ಮಾರ್ಗವನ್ನು 'ಅಪರಿಮಿತಾಖ್ಯಾಕೃತಿಪ್ರಯೋಗಾನುಗತಂ', 'ಕವಿಜನತಾಪ್ರಯೋಗ ಸಂಬಂಧನದಿಂ', 'ಕವಿವೃಷಭರಾಪ್ರಯೋಗಂಗಳೊಳಂ', 'ಕವೀಶಪದಪದ್ಧತಿಯೊಳ್', 'ಚಿಂತಿತ ಪುರಾಣಕವಿ ವಿದಿತಂಗಳ್', 'ಪುರಾಣಕವಿ ವಿದಿತಂಗಳ್', 'ಪುರಾಣಕವಿಪ್ರಭು ಪ್ರಯೋಗಾವಿಳ', 'ಪುರಾಣಕಾವ್ಯ ಪ್ರಯೋಗದೊಳ್', 'ಪುರಾಣಶಾಸ್ತ್ರೋಂಗಳತದನುಮತಂ', 'ಪುರಾಣಕವಿ ಸಂತತಮಾರ್ಗಂ', 'ಪೂರ್ವಶಾಸ್ತ್ರಪದವಿಯಂ', ಎಂಬ ಪದಗಳಿಂದ ಗುರುತಿಸಿರುವನು.[೨೦] ಇವಲ್ಲದೆ, ತನ್ನ (ತನ್ನ ಪೋಷಕನ) ಅಧಿಕಾರಮುದ್ರೆಯನ್ನು ಪಡೆದ ಶಾಸ್ತ್ರನಿಯಮಗಳನ್ನು ಅವನು ವೈಯಕ್ತಿಕ ಅಂಕಿತದಲ್ಲಿ ಗುರುತಿಸಿಕೊಂಡಿರುವನು. 'ನೃಪತುಂಗದೇವವಿದಿತಕ್ರಮ', 'ನೃಪತುಂಗದೇವಾನುಮತದೊಳ್', 'ನೃಪತುಂಗದೇವಮಾರ್ಗ', 'ನೃಪತುಂಗದೇವನ್ ಆದರದೊಳ್ ಪೇಟ್ದ ಮಾರ್ಗಗತಿ', 'ಮಾರ್ಗೋದಿತಕ್ರಮ', 'ಮಾರ್ಗಕ್ರಮ', 'ಮಾರ್ಗಾನುರೂಪ

ಪದಪ್ರಯೋಗ', 'ಧವಳೋಪನೀತಿಮಾರ್ಗೋಚಿತಗತಿ ಭಾವಿತಮ್', 'ನಿತ್ಯವಲ್ಲಭಮತದಿಂ', 'ನೀತಿನಿರಂತರಕ್ರಮಮ್', 'ನೀತಿನಿರಂತರಾನುಗತಂ', 'ನೀತಿಮಾರ್ಗೋಚಿತಂ' ಎಂಬವು ಇದಕ್ಕೆ ಉದಾಹರಣೆ.[೨೧] ಈ ಬಗೆಯ ಸ್ವಾತಂತ್ರ್ಯವನ್ನು ಸ್ಪಷ್ಟ ನಿಲುವನ್ನು ತೊಲ್ಕಾಪ್ಪಿಯಾಣಾರ್ ತನ್ನ ಕೃತಿಯಲ್ಲಿ ತೋರಿಲ್ಲ.

ತೊಲ್ಕಾಪ್ಪಿಯಮ್‌ನ ವಿಶೇಷತೆ :

'ತೊಲ್ಕಾಪ್ಪಿಯಮ್'ನ ಮೂರು 'ಅತಿಕಾರ'ಗಳಲ್ಲಿ ಮೊದಲಿನವೆರಡು ಭಾಷಾಶಾಸ್ತ್ರಕ್ಕೆ, ಮೂರನೆಯದು 'ಅಲಂಕಾರ' ಶಾಸ್ತ್ರಕ್ಕೆ ಸಂಬಂಧಿಸಿವೆ. 'ಎಟುತ್ತಿಕಾರಮ್'ನ ಸೂತ್ರಗಳು ಧ್ವನಿಮಾ ಮತ್ತು ಶಬ್ದರೂಪಶಾಸ್ತ್ರಗಳನ್ನು ಚರ್ಚಿಸುವುವು. 'ಶೊಲ್ಲತಿಕಾರಮ್'ನ ಪ್ರಧಾನವಸ್ತು ಶಬ್ದರಚನಾಶಾಸ್ತ್ರವಲ್ಲದೆ, ಅನ್ವಯ ನಿಯಮ ಮತ್ತು ಶಬ್ದಾರ್ಥಶಾಸ್ತ್ರ. 'ಪೊರುಟತಿಕಾರಮ್'ನ ವಸ್ತು, ಅಲಂಕಾರ. ಇಲ್ಲಿ 'ಅಹಂ' ಕಾವ್ಯಪ್ರಭೇದವನ್ನು ನಾಲ್ಕು ಅಧ್ಯಾಯಗಳಲ್ಲಿ (೧, ೩, ೪, ೫) 'ಪುರಂ' ಪ್ರಭೇದವನ್ನು ಒಂದು ಅಧ್ಯಾಯ(೨)ದಲ್ಲಿ ಚರ್ಚಿಸಲಾಗಿದೆ. 'ಅಹಂ' ಎಂದರೆ ಪ್ರಣಯಗೀತೆ; 'ಪುರಂ' ಎಂದರೆ ವೀರಗಾಥೆ. ಇವಲ್ಲದೆ ರಸ, ಉಪಮಾ, ಛಂದಸ್ಸು ಮತ್ತು ಭಾಷಾಪ್ರಯೋಗಗಳನ್ನು ಪ್ರತ್ಯೇಕವಾಗಿ ಚರ್ಚಿಸಲಾಗಿದೆ. ಮೂರನೆಯ ಅತಿಕಾರಮ್‌ನಲ್ಲಿ 'ಅಹಂ' ಮತ್ತು 'ಪುರಂ' ಕಾವ್ಯವನ್ನು ಹೇಗೆ, ಯಾವ ವಸ್ತುವನ್ನು ಆಯ್ಕೆ ಮಾಡಿಕೊಂಡು, ಯಾವ ರಸ ಬಳಸಿ ಮತ್ತು ಯಾವ ಛಂದಸ್ಸಿನಲ್ಲಿ ನಿರೂಪಿಸಬೇಕೆನ್ನುವುದನ್ನು ತಿಳಿಸಲಾಗಿದೆ. ಈ ಪ್ರಭೇದಗಳು ತಮಿಳು ಭಾಷೆಯ ಅರುಣೋದಯ ಕಾಲದ ವಿಶೇಷ ಹಾಗೂ ವಿಶಿಷ್ಟ ಕೊಡುಗೆಗಳಾಗಿವೆ. ಒಂದು ಲಕ್ಷಣಗ್ರಂಥದಲ್ಲಿ ವಿನೂತನಕಾವ್ಯ ಪ್ರಯೋಗದ ಬಗೆಯನ್ನು ತೊಲ್ಕಾಪ್ಪಿಯಾಣಾರ್‌ಗಿಂತ ಮುಂಚೆ ದ್ರಾವಿಡ ಭಾಷೆಯಲ್ಲಿ ಯಾರೂ ಚರ್ಚೆ ಮಾಡಿರಲಿಲ್ಲ; ಆನಂತರ ಕಾಲದಲ್ಲಿ ಕೂಡಾ ಇನ್ನಾವ ದೇಸೀಯ ಭಾಷಾತಜ್ಞರಿಂದ ಈ ಬಗೆಯ ಚರ್ಚೆಯಾಗಲಿಲ್ಲವೆನ್ನಬಹುದು.

'ತೊಲ್ಕಾಪ್ಪಿಯಮ್' ಒಂದು ಅದ್ಭುತ ಗ್ರಂಥ. ಸೂಕ್ಷ್ಮ ತರದ ಶಾಸ್ತ್ರೀಯ ಶಸ್ತ್ರಕ್ರಿಯಾ ವಿಧಾನಕ್ಕೆ ಇದೊಂದು ಅಪರೂಪ ಮಾದರಿ. ಇಲ್ಲಿಯ ಶಾಸ್ತ್ರನಿಯಮಗಳು ಗಣಿತಶಾಸ್ತ್ರದ ನಿಖರತೆಯನ್ನು ಪಡೆದುಕೊಂಡಿದ್ದು, ಅವು ಈ ಕವಿಯ ವೈಜ್ಞಾನಿಕ ಚಿಂತನಾ ಪ್ರವೃತ್ತಿಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸಿರುವುವು. ಅವನ ಆಳವಾದ ಪಾಂಡಿತ್ಯ, ಶಿಸ್ತು, ಶ್ರಮ ಮಾತ್ರವಲ್ಲದೆ, ಅವನಲ್ಲಿದ್ದ ಸೂಕ್ಷ್ಮತರದ ಭಾಷಾ ಕಳಕಳಿ ಮತ್ತು ಸಮರ್ಪಣಾಪ್ರವೃತ್ತಿಯನ್ನು ನಾವಿಲ್ಲಿ ಕಾಣುವೆವು. ತಮಿಳು ಲಿಪಿಯಿಂದ ಆರಂಭಗೊಳ್ಳುವ ಅವನ ಚರ್ಚೆಯು ಸೃಜನ ಕಾವ್ಯದ ಎರಡು ಅದ್ಭುತ ಮುಖಗಳನ್ನು ಪರಿಚಯಿಸಿ, ಶಾಸ್ತ್ರಗ್ರಂಥಗಳನ್ನು ಹೇಗೆ ಅರ್ಥೈಸಿ, ಹೇಗೆ ಟೀಕೆಗಳನ್ನು ಬರೆಯಬೇಕೆಂಬ ವಿಧಿವಿಧಾನಗಳನ್ನು ವಿವರಿಸುವುದರೊಂದಿಗೆ ಮುಕ್ತಾಯಗೊಳ್ಳುವುದು. ಆನುಷಂಗಿಕವಾಗಿ ಕವಿರಾಜಮಾರ್ಗದಲ್ಲಿ ಪ್ರಸ್ತಾಪಗೊಂಡಿರುವ ಅವಳಿ ದೇಸಿ ಕಾವ್ಯಪ್ರಭೇದಗಳಿಗೂ– 'ಬೆದಂಡೆ' ಮತ್ತು 'ಚತ್ತಾಣ'– ಮತ್ತು ತೊಲ್ಕಾಪ್ಪಿಯಮ್‌ನಲ್ಲಿ ಬರುವ ಅವಳಿ ಕಾವ್ಯಪ್ರಭೇದಗಳಿಗೂ– 'ಅಹಂ' ಮತ್ತು 'ಪುರಂ'– ಇರುವ ಅಂತರವು ಭೂಮ್ಯಾಕಾಶ ಪ್ರಮಾಣದ್ದು. ಬಹುಶಃ ಈ ಹೋಲಿಕೆಯೇ ಅಸಂಬದ್ಧ. ಆದರೂ ಈ

ಗ್ರಂಥಗಳಿಗೆ ಸಂಬಂಧಪಟ್ಟ ಒಂದೆರಡು ಅಂಶಗಳನ್ನು ಇಲ್ಲಿ ಗುರುತಿಸಲೇಬೇಕು. ಇದರಲ್ಲಿ ಮೊದಲಿನದು, ಕಾವ್ಯಪರಂಪರೆಯ ಹುಟ್ಟಿಗೆ ಸಂಬಂಧಪಟ್ಟದ್ದು. ತೊಲ್ಕಾಪ್ಪಿಯಮ್‌ನಲ್ಲಿ ಹಾಕಿಕೊಟ್ಟ 'ಅಹಂ'-'ಪುರಂ' ನಿಯಮಗಳು, ತಮಿಳು ಭಾಷೆಯಲ್ಲಿ ಹೊಸಮಾರ್ಗದ ಒಂದು ಬಾಗಿಲನ್ನೇ ತೆರೆದು, ಸಮೃದ್ಧವಾದ ಕಾವ್ಯಪ್ರವಾಹಕ್ಕೆ ಕಾರಣವಾದವು; ಈ ಬಗೆಯ ಪ್ರೇರಣೆಯನ್ನು ಕವಿರಾಜಮಾರ್ಗ ಒದಗಿಸಲಿಲ್ಲ, ಅಥವಾ ಶಂಗಂ ಕವಿಗಳು ಪಡೆದ ಪ್ರಚೋದನೆಯನ್ನು ಮಾರ್ಗಕಾರನ ಕನ್ನಡ ವಾರಸುದಾರರು ಅವನಿಂದ ಪಡೆದುಕೊಳ್ಳಲಿಲ್ಲ. ಇಷ್ಟೇ ಗಮನಾರ್ಹವಾದ ಮತ್ತೊಂದು ಅಂಶವೆಂದರೆ, ತೊಲ್ಕಾಪ್ಪಿಯಮ್ ಗ್ರಂಥವನ್ನು ಪುನಃ ಪುನಃ ಜೀವಂತಗೊಳಿಸುವ ಕಾರ್ಯವನ್ನು ಮುಂದಿನ ತಲೆಮಾರಿನ ತಮಿಳರು ನಿಷ್ಠೆಯಿಂದ ಕೈಕೊಂಡು, ಒಂದೂವರೆ ಸಹಸ್ರಮಾನ ಕಾಲಾವಧಿಯಲ್ಲಿ (ಕ್ರಿ.ಶ. ೧೦೦ ರಿಂದ ೧೪೦೦) ಸುಮಾರು ಅರ್ಧ ಡಜನ್ ಪಾಂಡಿತ್ಯಪೂರ್ಣ ವ್ಯಾಖ್ಯಾನ ಗ್ರಂಥಗಳನ್ನು ಹೊರತಂದುದು. ಇದಕ್ಕೆ ಹೋಲಿಸಿ ನೋಡಿದರೆ, ಕನ್ನಡ ಕವಿಗಳೂ-ಶಾಸ್ತ್ರಜ್ಞರೂ ಕವಿರಾಜಮಾರ್ಗಕ್ಕೆ ಕೊಟ್ಟ ಗಮನ ತುಂಬಾ ನಿರಾಶಾದಾಯಕವೆನಿಸುವುದು. ಒಬ್ಬರಿಬ್ಬರು ಆನುಷಂಗಿಕವಾಗಿ ಮಾಡಿದ ಉಲ್ಲೇಖಗಳನ್ನು, ವಿವಾದಾತ್ಮಕವಾದ 'ಶ್ರೀವಿಜಯನ' ಸ್ಮರಣೆಯನ್ನು ಬಿಟ್ಟರೆ, ಕವಿರಾಜಮಾರ್ಗದಂತಹ ಮಹಾಧ್ವಕೃತಿಯು ಮುಂದಿನ ಪೀಳಿಗೆಯಿಂದ ಪಡೆದ ಗಮನವೂ-ಗೌರವವೂ ಅತ್ಯಲ್ಪವೆಂದೇ ಹೇಳಬೇಕು.

ಸಂಸ್ಕೃತ, ತಮಿಳು ಮತ್ತು ಕನ್ನಡ ಯುಗಧರ್ಮಗಳ ಪ್ರಭಾವ :

ಇದು ಏನೇ ಇರಲಿ, ತೊಲ್ಕಾಪ್ಪಿಯಾಣಾರ್ ಮತ್ತು ಮಾರ್ಗಕಾರ ಕ್ರಮವಾಗಿ ತಮಿಳು ಮತ್ತು ಕನ್ನಡ ಕಾವ್ಯ ನಿಯಮಾವಳಿಗಳನ್ನು ರೂಪಿಸುವಾಗ ಕೆಲವು ಸಮಾನಾಂತರ ಸಂವೇದನೆಗಳನ್ನು ಹಂಚಿಕೊಂಡಿರುವರು. ಆದರೆ ಇಲ್ಲಿಯೂ ಅವರವರ ಯುಗಧರ್ಮಗಳು ಅವರಲ್ಲಿ ಅಂತರವನ್ನು ನಿರ್ಮಿಸಿದವು. ಇಂಥವುಗಳಲ್ಲಿ ಒಂದು, ಸಂಸ್ಕೃತ ಭಾಷೆ ಮತ್ತು ಕಾವ್ಯದಿಂದ ದ್ರಾವಿಡ ಭಾಷೆ ಮತ್ತು ಕಾವ್ಯ ಪಡೆದುಕೊಂಡ ಮಾದರಿಗಳು. ಪರಭಾಷೆ, ಅದರಲ್ಲೂ ಸಂಸ್ಕೃತ–ವಟಶೊಲ್–ದಿಂದ ಪದಗಳನ್ನು ಪಡೆದುಕೊಳ್ಳಲು ತೊಲ್ಕಾಪ್ಪಿಯಾಣಾರ್‌ನ ತಕರಾರೇನೂ ಇರಲಿಲ್ಲ, ಆದರೆ ಅವು ತಮಿಳೀಕರಣಗೊಂಡು– ಅಂದರೆ ತಮಿಳು ಧ್ವನಿ(ಉಚ್ಚಾರ)ಮಾಕ್ಕೆ ಹೊಂದಿಕೊಂಡು– ಬರಬೇಕೆಂಬುದು ಅವನ ಪರಭಾಷಾ ಸಂಹಿತೆ – *ಎಜುತ್ತೊಟು ಪುಣರ್ನ್ತ ಶೊಲ್-ಆಕುಮ್ಮೇ...*[೨೨] ಇಂತಹ ಪರಭಾಷಾ ಪದಗಳನ್ನು ರೂಪಾಂತರಿಸಿಕೊಳ್ಳುವ ವಿಧಾನವನ್ನೂ 'ವಯಿನೂಲ್'ನ ನಾಲ್ಕು ನಿಯಮಗಳೊಂದರಡಿಯಲ್ಲಿ ಅವನು ತಿಳಿಸಿಕೊಟ್ಟನು. ಇಷ್ಟಾದರೂ ಈ ವೈಯಾಕರಣಿಯು ಸಂಸ್ಕೃತದಿಂದ ತಮಿಳಿಗೆ ಸ್ವತಃ ತಂದುಕೊಂಡ ಪದಪ್ರಮಾಣವು ಆರಂಭಕಾಲದ ತಮಿಳು-ಬ್ರಾಹ್ಮೀ ಶಾಸನಗಳಲ್ಲಿ ಬರುವ ಪದಪ್ರಮಾಣಕ್ಕಿಂತಾ ತುಂಬಾ ಕಡಿಮೆ ಎಂದು ಅಂದಾಜು ಕಟ್ಟಲಾಗಿದೆ.[೨೩] ಇದೇನಿದ್ದರೂ ಈ ಪ್ರಕ್ರಿಯೆ ಪ್ರಾರಂಭಗೊಂಡಿದ್ದು ತೊಲ್ಕಾಪ್ಪಿಯಾಣಾರ್‌ನ ಕಾಲದಿಂದಲೇ ಎನ್ನುವುದನ್ನು ನಿರ್ಲಕ್ಷಿಸುವಂತಿಲ್ಲ.

ಯುಗಧರ್ಮವು ಬದಲಾಗಿ, ತನ್ನ ಜ್ಯೇಷ್ಠತೆಯನ್ನು ಸಂಸ್ಕೃತವು ಪ್ರತಿಷ್ಠಾಪಿಸಿಕೊಂಡಿದ್ದ ಮಾರ್ಗಕಾರನ ಕಾಲದಲ್ಲಿ, ಸಂಸ್ಕೃತ ಪದಗಳನ್ನು ದೇಸೀ ಭಾಷೆಗೆ ತಂದುಕೊಳ್ಳುವುದು ಒಂದು

ಹೆಮ್ಮೆಯ ಹಾಗೂ ಗೌರವಾನ್ವಿತ ಗುಣವಾಗಿ ಪರಿವರ್ತನೆಗೊಂಡಿತ್ತು. ಸಂಸ್ಕೃತದ ಉಕ್ತಿಮಾರ್ಗವನ್ನು ವಿವೇಚಿಸಿ, ಅವನ್ನು ಕನ್ನಡಕ್ಕೆ ಹೊಂದಿಸಿಕೊಂಡಾಗ ಮಾತ್ರ ಕಾವ್ಯವು ನಿರ್ದುಷ್ಟವೂ ಶೋಭಾಯಮಾನವೂ ಆಗುವುದೆಂಬುದನ್ನು ಮಾರ್ಗಕಾರನು "*ನೆಗಟ್ದಿರ್ದ ಕನ್ನಡಂಗಳೊಳಗಣಿತ ಗುಣ-ವಿದಿತ-ಸಂಸ್ಕೃತೋಕ್ತ-ಕ್ರಮಮಂ। ಬಗೆದೊಂದು ಮಾಡಿ ಪೇಟ್ದೊಡೆ ಸೊಗಯಿಸುಗುಂ ಕಾವ್ಯಬಂಧಂ*" (೧-೫೭), ಎಂಬ ನುಡಿಯಲ್ಲಿ ಗಟ್ಟಿಗೊಳಿಸಿದನು. ಸಂಸ್ಕೃತ-ಕನ್ನಡ ಪದಗಳು ಹೇಗೆ ಹಿತವಾಗಿ ಕೂಡಬೇಕು, ಹೀಗೆ ಕೂಡಿ ಹೊಸತನವನ್ನು ಪಡೆದುಕೊಂಡ ಪದಗಳನ್ನು ಉಚ್ಚರಿಸುವಾಗ ಮೃದಂಗದ ಮಾಧುರ್ಯದಂತೆ (೧-೫೫), ಕನಕರಚನೆಯೊಳ್ ಮಣಿನಿಕರದಂತೆ, ಕೇಳಲೂ-ಕಾಣಲೂ ಶೋಭಾಯಮಾನಗೊಳ್ಳಬೇಕು (೧-೬೧); ಅರಿಸಮಾಸಗಳಿಂದ ಅವುಗಳ ಧ್ವನಿ-ಪ್ರಭೇದಗಳು 'ಘುರಘುರ'ವಾಗಿ ಗಡುಸುಗೊಳ್ಳಬಾರದು ಎಂಬವುಗಳ ಸುತ್ತ ಅವನ ಕಳಕಳಿಯು ಕೇಂದ್ರೀಕೃತವಾಗಿತ್ತು. ಅಂದಮಾತ್ರಕ್ಕೆ ಬೆಳೆಯುತ್ತಿದ್ದ ಕನ್ನಡದ ಕಳಕಳಿಯು ಅವನಲ್ಲಿ ಗೌಣಗೊಂಡಿತ್ತೆಂದು ಭಾವಿಸಿದರೆ ಅದು ತಪ್ಪಾಗುವುದು. ಕನ್ನಡ (ದೇಸಿಯ) ಮಾತುಗಳಲ್ಲಿ ನಾಣ್ನುಡಿಯ ಬೆಡಗಿರಬೇಕೆನ್ನುವುದನ್ನೂ ಪರುಷಾಕ್ಷರಗಳಿಂದ ತುಂಬಿರುವ ಸಂಸ್ಕೃತವನ್ನು ಯಾಂತ್ರಿಕವಾಗಿ ಬಳಸಿ ಕನ್ನಡವನ್ನು ತೊಡರಿಸಬಾರದೆಂಬುದನ್ನೂ ಹವಣಾದ-ಮೆಲ್ಪುವೆತ್ತಿದ ಪದರಚನೆಯನ್ನು ಸಾಧಿಸಿಕೊಳ್ಳುವ ಹಂಬಲವನ್ನೂ ಅವನು ಅಪಾರ ಪ್ರಮಾಣದಲ್ಲಿ ಪ್ರದರ್ಶಿಸಿರುವುದು ಇದಕ್ಕೆ ಸಾಕ್ಷಿ (೧-೧೪೯). ದೃಷ್ಟಾಂತಾಲಂಕಾರವನ್ನು ವಿವರಿಸುವಾಗ ಅದನ್ನು 'ಕನ್ನಡದೊಳ್' ಹದವಾಗಿ ಹೇಗೆ ಮಾರ್ಪಡಿಸಿಕೊಳ್ಳಬೇಕೆಂಬುದಕ್ಕೆ ಅವನು ಒಡ್ಡಿರುವ ವಾದ ಇದನ್ನು ಇನ್ನಷ್ಟು ಸ್ಪಷ್ಟಗೊಳಿಸುವುದು.

ತೊಲ್ಕಾಪ್ಪಿಯಾಣಾರ್‌ನಲ್ಲಿ ಇಲ್ಲದ, ಇದ್ದರೂ ಗಟ್ಟಿಗೊಳ್ಳದಿರುವ, ಸಂಸ್ಕೃತ ಪ್ರಜ್ಞೆಯನ್ನು ನಾವು ಮಾರ್ಗಕಾರನಲ್ಲಿ ಕಾಣುವಾಗ ಅವರವರ ಯುಗಧರ್ಮಗಳನ್ನು ದೂರವಿಡಬಾರದು. ಹೀಗೇನಾದರೂ ಅವನ್ನು ಮರೆತು ಮಾರ್ಗಕಾರನೆಡೆ ನೋಡಿದರೆ, ಅವನು ತೊಲ್ಕಾಪ್ಪಿಯಾಣಾರ್‌ನು ಈಜಿದ ವಿರುದ್ಧ ದಿಕ್ಕಿನಲ್ಲಿ ಈಜಿದನೇನೋ ಎಂಬ ಭಾವನೆ ಬಂದರೂ ಬರಬಹುದು. ತೊಲ್ಕಾಪ್ಪಿಯಾಣಾರ್‌ನ ದಿಟ್ಟ ಮತ್ತು ದಕ್ಷ ನಿಲುವು (ಅವನ ಯುಗಧರ್ಮಕ್ಕನುಗುಣವಾಗಿ) ಸಂಸ್ಕೃತ ಪರಂಪರೆಯನ್ನು ಕುರುಡುಕಣ್ಣಿನಿಂದ ಗೌರವಿಸುವುದಾಗಲೀ ಅಬ್ಬರದಿಂದ ಆರಾಧಿಸುವುದಾಗಲೀ ಆಗಿರಲಿಲ್ಲ; ಆ ಪರಂಪರೆಯ ಪ್ರಸ್ತಾಪ ಮತ್ತು ಪ್ರಸ್ತುತತೆಯೂ ಅವನಿಗೆ ಆನುಷಂಗಿಕ ಮಾತ್ರ. ಅಂದರೆ ಸಂಸ್ಕೃತವನ್ನು ಹೊರಗಿಡಬೇಕೆಂಬ ಉನ್ಮಾದತೆಯೂ ಅವನಲ್ಲಿರಲಿಲ್ಲ. ಸಂಸ್ಕೃತ ಪದಗಳನ್ನು ಪಡೆದುಕೊಳ್ಳುವ ಪ್ರಮೇಯವೇನಾದರೂ ಉದ್ಭವಿಸಿದರೆ, ತಮಿಳಿನ ಧ್ವನಿ-ನಿಯಂತ್ರಣಕ್ಕೊಳಪಡಿಸಿಕೊಂಡು ಅವುಗಳನ್ನು ಪಡೆಯಬೇಕೆಂಬುದು ಮಾತ್ರ ಅವನ ಗುರಿಯಾಗಿತ್ತು. ಹೀಗೆ ಅಳವಡಿಸಿಕೊಳ್ಳುವಾಗ, ಸಂಸ್ಕೃತ ಪದವೊಂದು ತನ್ನ ಮೂಲಾರ್ಥವನ್ನು ಕಳೆದುಕೊಂಡರೆ, ವಿರುದ್ಧಾರ್ಥಕ್ಕೆ ಎಡೆಮಾಡಿಕೊಟ್ಟರೆ, ಅದರಿಂದ 'ಕುದಿಯುವ ಹಾಲಿನಲ್ಲಿ ಹುಳಿ ಹಿಂಡಿದರೆ ಆಗುವಂತಹ ಅನಾಹುತದ ಭೀಕರತೆ'ಯು (ಮಾರ್ಗಕಾರನನ್ನು ಮುಂದೊಮ್ಮೆ ಕಾಡುವಂತೆ) ಅವನನ್ನು ಕಾಡಲಿಲ್ಲ. ಇದಕ್ಕೊಂದು ನಿದರ್ಶನ ನನಗೆ ನೆನಪಾಗುವುದು. 'ರಾಜನ್' ಎಂಬುದು ಸಂಸ್ಕೃತ ಪದ. ಆದರೆ 'ರ'ಕಾರದಿಂದ

ತಮಿಳಿನಲ್ಲಿ ಯಾವ ಪದವೂ ಪ್ರಾರಂಭಗೊಳ್ಳದಿರುವುದರಿಂದ, ಅದನ್ನು ತಮಿಳೀಕರಿಸಿದಾಗ, ಅದು ರೂಪ ಬದಲಿಸಿಕೊಂಡು (ಅರಜನ್) 'ಅರಸ' ಎಂದು ಅಂತ್ಯಗೊಳ್ಳುವುದು.[೨೪] ಸಂಸ್ಕೃತದ 'ಅರಸ' (ಅ-ರಸ : ರಸರಹಿತ, ರಸಹೀನ, ರಸಶೂನ್ಯ ಮುಂ.) ಪದದ ಅರ್ಥವು ಅನಾಹುತಕ್ಕೆ ಎಡೆಮಾಡಿಕೊಳ್ಳುವಂತಹದಾದರೂ, ತಮಿಳಿಗೆ ಪರಿವರ್ತಿತಗೊಂಡ 'ಅರಸ' ಪದದಲ್ಲಿ ಈ ಅನಾಹುತಕ್ಕೆ ಅವಕಾಶವೇ ಉಂಟಾಗಲಿಲ್ಲ. ಈ ಬಗೆಯ ಅರ್ಥಾಂತರಕ್ಕೆ ಕಾರಣವಾದ ಪದಗಳ ಕೊಡುಕೊಳ್ಳುವಿಕೆಯು ಕುಲಗೆಡಿಸುವ ಕ್ರಿಯೆ ಎಂದು, ಬದಲಾದ ಯುಗಧರ್ಮಕ್ಕೆ ಒಳಗಾದ ಮಾರ್ಗಕಾರನನ್ನು ಗಾಬರಿಗೊಳಿಸುತ್ತಿತ್ತೆಂಬುದರಲ್ಲಿ ಅನುಮಾನವಿಲ್ಲ.

ಮಾರ್ಗಕಾರನ ಆದರ್ಶ ಕವಿಗಳು 'ಹರ್ಷಚರಿತ' ಮತ್ತು 'ಕಾದಂಬರಿ'ಗಳ ಗದ್ಯಕಾವ್ಯ ಕರ್ತೃಗಳು (೧-೨೬); ವಿಮಲೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತ ಮುಂತಾದ ಗದ್ಯಾಶ್ರಮ ಪದಗುರುಗಳು (೧-೨೯); ಗುಣಸೂರಿ, ನಾರಾಯಣ, ಭಾರವಿ, ಕಾಳಿದಾಸ, ಮಾಘ ಮುಂತಾದ ಮಹಾಕಾವ್ಯಗಳ 'ಅಮಳ ಕವಿವೃಷಭಾರ್ಕಳು' (೧-೩೧); ಶ್ರೀವಿಜಯ, ಕವೀಶ್ವರ ಪಂಡಿತ, ಚಂದ್ರಲೋಕಪಾಲ ಮುಂತಾದ ಅದ್ಭುತ ಲಕ್ಷ್ಯ ಮಾದರಿಗಳನ್ನು ಒದಗಿಸಿಕೊಟ್ಟ ಮಹಾನುಭಾವರು (೧-೩೨). ಇವರೆಲ್ಲರೂ ಹಾಕಿಕೊಟ್ಟ ಮಾರ್ಗದಲ್ಲಿಯೇ ನಡೆದು, ಅವರ ಸಂಪ್ರದಾಯಗಳನ್ನು ಇನ್ನೂ ಸಂಪದ್ಭರಿಸಿ, ಅವರನ್ನು ಸ್ವರ್ಗದಲ್ಲಿ ಸುಖಪಡಿಸುವುದು ಮಾರ್ಗಕಾರನ ಯುಗಧರ್ಮವಾಗಿತ್ತು. ಕಾರಣ, "ಸಮಸಂಸ್ಕೃತಗಳೊಳ್ ಸೈತಮರ್ದಿರೆ ಕನ್ನಡಮಱಿದು ಪೇಳ್" ಎಂಬುದು (೧-೫೧), 'ವಿದಿತ ಸಮಸಂಸ್ಕೃತೋದಿತ ಪದಂಗಳೊಳ್ ಪುದಿದು ಬೆರಸಿ ಬರೆ ಕನ್ನಡದೊಳ್ ಮುದಮನವು ತರ್ಕು', (೧-೫೫) ಎಂಬುದು, ಮಾರ್ಗಕಾರನಲ್ಲಿ ಬಲವಾಗಿ ಬೇರುಬಿಟ್ಟಿತ್ತು. ದೇಸಿಯ ಬಗ್ಗೆ ಅವನಿಗೆ ಎಷ್ಟೇ ಕಳಕಳಿ ಇದ್ದರೂ– ಅದಕ್ಕೆ ಅಡಚಣೆ ಇರಲಿಲ್ಲವೆಂಬುದನ್ನು ಈಗಾಗಲೇ ಕಂಡಿರುವೆವು– ಅದರ ಚರ್ಚೆಯನ್ನು ಮೊಟಕುಗೊಳಿಸಿ, ಮಾರ್ಗೀಯ ಪರಂಪರೆಯ ಚರ್ಚೆಯನ್ನು ಅವನು ಸಾಕಷ್ಟು ವಿಸ್ತಾರಗೊಳಿಸುವುದನ್ನು ನೋಡಿದರೆ, ಸಂಸ್ಕೃತನಿಷ್ಠೆಯು ಅವನನ್ನೆಷ್ಟು ಪ್ರೇರೇಪಿಸಿ ತೆಂಬುದು ಸ್ಪಷ್ಟಗೊಳ್ಳುವುದು.

ರಸಪ್ರಜ್ಞೆ-ಕಾವ್ಯಧರ್ಮ :

ಸಮಾಸ, ಛಂದಸ್ಸು ಮತ್ತು ಪದಬಂಧಕ್ಕೆ ಈ ಅಭ್ಯಾಸವನ್ನು ಸೀಮಿತಗೊಳಿಸಿದೇ ಕಾವ್ಯದ ಜೀವಾಳವಾದ ರಸಪ್ರಜ್ಞೆಗೆ ಇದನ್ನು ವಿಸ್ತರಿಸಿದರೆ, ಕುತೂಹಲಕರವಾದ ಕೆಲವು ಅಂಶಗಳನ್ನು ತೊಲ್ಕಾಪ್ಪಿಯಾಣಾರ್ ಮತ್ತು ಮಾರ್ಗಕಾರನ ಯುಗಧರ್ಮಗಳು ಪ್ರದರ್ಶಿಸುವುವು. ಹಸಿರು ಕಂಡಲ್ಲೆಲ್ಲ ಮುಕ್ತವಾಗಿ ಬಾಯಾಡಿಸಲು ಬಯಸಿದ ಮಾರ್ಗಕಾರನೊಡನೆ ಹೋಲಿಸಿದರೆ, ತಾನೇ ಹಾಕಿಕೊಂಡ ಶಾಸ್ತ್ರೀಯ ಬೇಲಿಯನ್ನು ಒಂದಿಂಚೂ ಉಲ್ಲಂಘಿಸದೆ, ಏಕಮುಖವೂ-ನೇರವೂ ಆದ ದಾರಿಯನ್ನು ತುಳಿದ ತೊಲ್ಕಾಪ್ಪಿಯಾಣಾರ್‌ನ ಭಿನ್ನ ವ್ಯಕ್ತಿತ್ವವು ಎದ್ದು ಕಾಣುವುದು. ಭಾಷೆ, ಭಾಷಿಕರ ಸ್ವಭಾವ, ಭಾಷಾನಕ್ಷೆ, ದೇಸಿಕಾವ್ಯದಲ್ಲಿಯ ಕೊರತೆ, ಮಾರ್ಗೀಯದ ಮಾಧುರ್ಯ– ಇವಾವನ್ನೂ ತೊಲ್ಕಾಪ್ಪಿಯಾಣಾರ್‌ನಲ್ಲಿ ನಾವು ಕಾಣುವುದಿಲ್ಲ. ಅಷ್ಟೇಕೆ, 'ತಮಿಳು' (ಭಾಷೆ) ಮತ್ತು ತಮಿಲಹಂ (ತಮಿಳು ತವರುಮನೆ) ಬಗ್ಗೆ ಭಾವಾವೇಶದ ಮಾತೂ ಅವನಿಂದ ಬರುವುದಿಲ್ಲ. ಮಾರ್ಗಕಾರನಂತೆ ಪುಳಕಿತಗೊಳಿಸುವ, ಕಚಕುಳಿ ಇಡುವ,

ಭಾವನಾಲೋಕಕ್ಕೆಳೆದೊಯ್ಯುವ, ಶೃಂಗಾರರಸದಲ್ಲದ್ದಿ ಸಿಹಿಗೊಳಿಸಿದ, ನುಡಿಗಳಾಗಲೀ ಲಕ್ಷ್ಯಗಳಾಗಲೀ ತೊಲ್ಕಾಪ್ಪಿಯಮ್‌ನಲ್ಲಿ ಅವಕಾಶ ಪಡೆದುಕೊಂಡಿಲ್ಲ.

ಆರಂಭಕಾಲದ ತಮಿಳು ಕಾವ್ಯದ ಪ್ರಧಾನ ವಸ್ತುಗಳಲ್ಲೊಂದು, ಪ್ರಣಯ. 'ಅಹಂ' ಪದದ ಮೂಲಕ ಇದರ ವೇದಿಕೆಯನ್ನು ನಿರ್ಮಾಣ ಮಾಡಿಕೊಟ್ಟ ಮೊದಲ ತಮಿಳನು ತೊಲ್ಕಾಪ್ಪಿಯಾಣಾರ್. ಪ್ರಕೃತಿಯ ಅಗಾಧತೆಯನ್ನು ಕಣ್ತುಂಬ ಸವಿದುಂಡ ಈ ಕವಿಯು ಪ್ರಣಯ ಪ್ರಭೇದಗಳನ್ನು ಪ್ರಾದೇಶಿಕ ಪರಿಸರದಲ್ಲಿ– ಮುಲ್ಲೈ, ಕುರುಂಚಿ, ಮರುತಮ್, ನೆಯ್ದಿಲ್ ಮತ್ತು ಪಾಲೈ ಕ್ಷೇತ್ರಗಳಾದ ಕಾನನ, ಬೆಟ್ಟ, ಕೃಷಿಭೂಮಿ, ತೀರಪ್ರದೇಶ ಮತ್ತು ಮರಳು(ಪಾಳ್)ಭೂಮಿಯಲ್ಲಿ– ಪ್ರಣಯ ವ್ಯಾಪಾರಗಳಾದ 'ಕೂಡುವಿಕೆ', 'ಅಗಲುವಿಕೆ', 'ಸಹನೆ', 'ಕಾತರ' ಮತ್ತು 'ವಿರಹ'ಗಳನ್ನು ಗುರುತಿಸಿದನು. ಪ್ರಣಯ ಸೆಳೆತಕ್ಕೊಳಗಾದವರು ಹನ್ನೆರಡು ಬಗೆಯ ಗುಪ್ತಸ್ಥಳಗಳಲ್ಲಿ ಸಂಧಿಸುವುದು, ಕಣ್ಣನಿಂದಲೇ ಮೂಕಿಯಾಡುವುದು, ಸಖಿಯರ ಸಹಾಯದಿಂದ ಸದವಕಾಶ ದೊರಕಿಸಿಕೊಳ್ಳುವುದು, ಪ್ರಣಯ ಕ್ರೀಡೆಯಲ್ಲಿ ತೊಡಗುವುದು, ಮನೆಯನ್ನು(ಸಮಾಜವನ್ನು) ತೊರೆದು ಪ್ರಿಯರೊಡನೆ ಪಲಾಯನ ಮಾಡುವುದು, ಸಮಾಜದ ಕಟ್ಟಳೆಯನ್ನು ದಿಟ್ಟವಾಗಿ ಮುರಿಯುವುದು– ಈ ಮುಂತಾದವು ಇವನಿಂದ ಸಮಗ್ರವಾಗಿ ಗುರುತಿಸಿಕೊಂಡವು. ಆದರೆ ಸಂಸ್ಕೃತ ಕವಿಗಳಿಂದಾದ ಪ್ರಣಯಿಗಳ ಮಾದಕ ಸರ್ವೇಕ್ಷಣ, 'ತಲೈವಿ'(ನಾಯಿಕೆ)ಯ ಮೈಮಾಟ ನಿಷ್ಕರ್ಷೆ ಮತ್ತು ಮೋಹಕಾಂಗ ಮಾಪನಾ ಕ್ರಿಯೆಗಳನ್ನು ಇವನು ಪ್ರಣಯಗೀತಾ ಸಂಹಿತೆಯಿಂದ ಹೊರಗಿಟ್ಟಿರುವುದು ಗಮನಾರ್ಹ. ಅಂದರೆ ಜೇನುಗೂಡಿನಂತೆ ದಟ್ಟೈಸಿದ ಗುಂಗುರು ಕೂದಲನ್ನು, ಸರ್ಪದಂತೆ ಸುಳಿವ ನೀಳ ಜಡೆಯನ್ನು, ಬಿಲ್ಲಿನ ಹುಬ್ಬನ್ನು, ದಾಳಿಂಬದ ದಂತಪಂಕ್ತಿಯನ್ನು, ತೊಂಡೆಯ ತುಟಿಯನ್ನು, ಶಂಖದ ಕೊರಳನ್ನು, ಪದ್ಮ ಮತ್ತು ಚಂದ್ರನನ್ನು ಹೀಯಾಳಿಸುವ ಮುಖವನ್ನು, ಜೋಡು ಪಾರಿವಾಳಗಳಂತೆ ವಿಶ್ರಮಿಸಿದ ಸ್ತನದ್ವಯಗಳನ್ನು ಮತ್ತು ಕಳಸದಂಚಿನ ಚೂಚುಕಗಳನ್ನು, ಸಾಗರದಂತೆ ಓಲಾಡುವ ಸಿಂಹಕಟಿಯನ್ನು, ತ್ರಿವಳಿಗಳಿಂದ ಗುರುತಿಸಿಕೊಂಡ ಕಿಬ್ಬೊಟ್ಟೆಯನ್ನು ಅಲ್ಲಿಂದ ಕೆಳಗಿಳಿದ ಸೂಕ್ಷ್ಮ ರೋಮರೇಖೆಯನ್ನು, ಸೊಕ್ಕಿದ ಗಜಪೃಷ್ಠಗಳನ್ನು, ಬಾಳೆದಿಂಡಿನ ತೊಡೆಗಳನ್ನು, ಪದ್ಮದ ಪಾದಗಳನ್ನು ಮತ್ತು ಹಂಸದ ನಡಿಗೆಯನ್ನು ತೊಲ್ಕಾಪ್ಪಿಯಾಣಾರ್‌ನ ತಲೈವಿಯಲ್ಲಿ ನಾವು ಕಾಣುವುದಿಲ್ಲ. ಪ್ರಣಯಜ್ವರ ಕ್ಕೀಡಾದ ನಾಯಕನಾಗಲೀ ತೆರೆಯ ಮರೆಯಲ್ಲಿ ನಿಂತು ಇಣುಕು ಹಾಕುವ ಕವಿಮಿತ್ರನಾಗಲೀ ನಾಯಿಕೆಯ ಸುಂದರ ಸೌಷ್ಠವದೆಡೆಗೆ ಕಣ್ಣಾಡಿಸದೆ, ಪ್ರಧಾನವಾಗಿ ಅವಳ ಭಾವಾಂತರಂಗಕ್ಕಿಳಿದು, ಅವಳ ತುಮುಲ-ತುಡಿತಕ್ಕೆ ಅನುಕಂಪಿತನಾಗಿ, ಅವುಗಳನ್ನು ಮುಕ್ತಮನಸ್ಸಿನಿಂದ ಅನ್ವೇಷಿಸುವನು. ಅಲ್ಲೊಮ್ಮೆ-ಇಲ್ಲೊಮ್ಮೆ ಅವನೂ ನಾಯಿಕೆಯ ದೇಹಾಂಗಗಳೆಡೆ ಕಣ್ಣು ಹಾಯಿಸುವನು, ನಿಜ; ಆದರೆ ಅಲ್ಲಿ ಅವನು ಕಾಣುವುದು ಅವಳ ಕಾಂತಿಗುಂದಿದ ಮುಖ, ಬೆಂಡಾದ ಭುಜದ್ವಯ, ಬಸವಳಿದ ಮುಂಗೈ ಮತ್ತು ಅದರಿಂದ ಬಿಚ್ಚಿ ಬೀಳುವ ಕಂಕಣ, ಕುಂದಿದ ಕರ್ಣ ಮತ್ತು ಅದರಿಂದ ಕಳಚಿ ಬೀಳುವ ಕಾನದಾವಲಿ ಮಾತ್ರ. ಮುಖ ಮತ್ತು ಭುಜಗಳನ್ನು ಬಿಟ್ಟು ಅವನ ದೃಷ್ಟಿ ಕೆಳಗಿಳಿದರೆ, ಅದು ತುಂಬಾ ಅಪರೂಪ ಮತ್ತು ಅಷ್ಟೇ ಆಕಸ್ಮಿಕ.

ತೊಲ್ಕಾಪ್ಪಿಯಾಣಾರ್ ಹಾಕಿಕೊಟ್ಟ ಈ ಕಾವ್ಯಧರ್ಮವನ್ನನುಸರಿಸಿ, ಶಂಗಂ ಕವಿಗಳು 'ಅಹಂ' (ಮತ್ತು 'ಪುರಂ') ಕಾವ್ಯರಚನೆಯನ್ನು ಪ್ರಾರಂಭಿಸಿದರೆಂಬುದನ್ನು ಈಗಾಗಲೇ ಗಮನಿಸಿದ್ದೇವೆ. ಈ ನಿಯಮಗಳನ್ನು ಆದಷ್ಟು ಎಚ್ಚರಿಕೆಯಿಂದ ಇವರು ಪಾಲಿಸಿಕೊಂಡು ಬಂದರೂ, ಹಂತಹಂತವಾಗಿ ಹಬ್ಬುತ್ತಿದ್ದ ಸಂಸ್ಕೃತೀಕರಣದ ಪ್ರಭಾವದಿಂದ ತಮ್ಮನ್ನು ಸಂಪೂರ್ಣವಾಗಿ ರಕ್ಷಿಸಿಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲವೆಂದೆನಿಸುವುದು.[೨೫] ಆದರೂ ಶಂಗಂ ಪ್ರಣಯಗೀತೆಯಲ್ಲಿ ಕಾಣುವ ಸೌಂದರ್ಯಪ್ರಜ್ಞೆಗೂ ಕ್ಲಾಸಿಕಲ್ ಸಂಸ್ಕೃತ ಕಾವ್ಯಗಳಲ್ಲಿ ಕಾಣುವ ಪ್ರಜ್ಞೆಗೂ ಇರುವ ಅಂತರವನ್ನು ಉಪೇಕ್ಷಿಸುವಂತಿಲ್ಲ. ಪ್ರಣಯಕ್ರೀಡೆಯಲ್ಲಿ ತೊಡಗಿದವರಲ್ಲಿ ಒಬ್ಬರು ಮತ್ತೊಬ್ಬರಲ್ಲಿ ಗುರುತಿಸುವ ದೈಹಿಕ ಮತ್ತು ಭಾವನಾತ್ಮಕ ಸಂವೇದನೆಗಳಲ್ಲಿ, ದೈಹಿಕ-ಸೌಂದರ್ಯ ಪ್ರಜ್ಞೆಯು ತನ್ನ ಹಂತವನ್ನು ಸ್ವಲ್ಪ ಎತ್ತರಿಸಿಕೊಂಡಿದ್ದನ್ನು 'ಶಂಗಂ' ಪ್ರಣಯಕಾವ್ಯಗಳಲ್ಲಿ ನಾವು ಕಾಣುವೆವು. ತಲೈವಿಯ ಮುಂಗಾರಮೋಡ ವರ್ಣದ ದಟ್ಟ ಕೇಶರಾಶಿಯನ್ನು ಮತ್ತು ಅದನ್ನು ಬಳಸಿ ಬೆಳಗುತ್ತಿದ್ದ ಎಳವರೆಯಂತಹ ನೊಸಲನ್ನು, ಬೊಂಬಿನಂತೆ ತೊಯ್ದಾಡುವ ಬಾಹುದ್ವಯಗಳನ್ನು, ಒದ್ದೆ ಕಣ್ಣುಗಳನ್ನು, ಸಾಲುಗಟ್ಟಿ (ಬಿದಿರ ಮುಳ್ಳಿನಂತೆ ಮೊನಚಾದ?) ದಂತಪಂಕ್ತಿಯನ್ನು, ಕುವಳೈ ಪತ್ರಗಳಿಂದ ಹೆಣೆದ ಕೆಳ ಉಡುಗೆಯನ್ನೂ ನಿಭಾಯಿಸಲಾಗದಂತಹ ನಡುವನ್ನು, ಮಧುವಿನಲ್ಲಿ ಅದ್ದಿ ತೆಗೆದ ಹವಳವರ್ಣದ ತುಟಿಗಳನ್ನು, ಕೆತ್ತಿದ ಪುತ್ಥಳಿಯಂತಹ ಮೈಮಾಟವನ್ನು, ಚಂದ್ರನಂತಹ ಮುಖವನ್ನು, ಗಂಡು ನವಿಲಿನ ನಡೆಯನ್ನು, ಎರಡು ಸಾವಿರಕ್ಕೂ ಮಿಕ್ಕಿದ ಕವನರಾಶಿಯಲ್ಲಿ ಹುಡುಕಿ-ಹುಡುಕಿ ತೆಗೆದಾಗ ಒಂದೋ-ಎರಡೋ ನಿದರ್ಶನಗಳು ದೊರೆಯುವುವು. ನಿತಂಬದಿಂದಿಳಿದ ದೇಹದ ಉಲ್ಲೇಖಕ್ಕಿಲ್ಲಿ ಅಪರೂಪದ ಎಡೆ. ಆಲಿಂಗನಕ್ಕಿರುವ ಅವಕಾಶ ಇಲ್ಲಿ ಚುಂಬನಕ್ಕಿಲ್ಲ. ಸುರತ ಕ್ರೀಡೆಗಿಲ್ಲಿ ಮಡಿವಂತಿಗೆ ಇಲ್ಲವಾದರೂ ಅದರ ಶಾಬ್ದಿಕ ಮೆರವಣಿಗೆ ಇಲ್ಲ. ಸಹಜ ವರ್ಣಕ್ಕನುಗುಣವಾಗಿ 'ಶಂಗಂ' ನಾಯಿಕೆಯರು ಕ್ಷೀರ, ಚಂದ್ರಕಾಂತ, ಮುತ್ತು ಮೊದಲಾದವುಗಳ ಬಿಳಿ ಬಣ್ಣದವರಲ್ಲ; ಮಿಡಿಮಾವು, ಚಿಗುರೆಲೆ, ನವಿಲುಗರಿ ಕಣ್ಣಿನ ಕಂದುಕಪ್ಪು, ಕೃಷ್ಣವರ್ಣ ಮತ್ತು ಕಡುನೀಲಿಯವರು.[೨೬] ಅವಳ ಸಹಜ ಸೌಂದರ್ಯ ತೆರೆದುಕೊಂಡೇ ಇತ್ತೆಂದು ತೋರುವುದು, ಏಕೆಂದರೆ ಅವಳ ಎದೆಯನ್ನು ಅರೆಮರೆಮಾಡಿದ್ದ ಹಾರಗಳನ್ನು ಕಿವಿಯನ್ನೂ ಮುಂಗೈಯನ್ನೂ ಅಲಂಕರಿಸಿದ್ದ ಆಭರಣಗಳನ್ನು ಬಿಟ್ಟರೆ, ವಿಶೇಷ ಉಡುಗೆಗಳ ಅಲಂಕಾರವೇ ಇವಳಿಗೆ ಇರಲಿಲ್ಲ. ನಿತಂಬವನ್ನಾದರೋ ಅವಳು ಮರೆಮಾಚಿಕೊಳ್ಳುತ್ತಿದ್ದುದು ವಸಂತದ (ಎಳೆಯ) ಕುವಳೈ ಮೊದಲಾದ ಪತ್ರಗಳಿಂದ ಹೆಣೆದ ಉತ್ತರೀಯದಿಂದ. ಹದಿಹರೆಯದವರ ಹವ್ಯಾಸಕ್ಕನುಗುಣವಾಗಿ ಅವಳೂ ತನ್ನ ಎದೆಯನ್ನು ಗಂಧದ ರಸದಿಂದ ಬಿಡಿಸಿದ ರೇಖಾಚಿತ್ರಗಳಿಂದ ಅಲಂಕರಿಸಿಕೊಳ್ಳುತ್ತಿದ್ದಳು. ಇವನ್ನೆಲ್ಲ ಶಂಗಂ ಕವಿಯು ಆಗೊಮ್ಮೆ ಈಗೊಮ್ಮೆ ಗುರುತಿಸಿದರೂ ಉನ್ಮಾದಿತ, ಉತ್ಪ್ರೇಕ್ಷಿತ, ವೈಭವೀಕೃತ ಕ್ಲಾಸಿಕಲ್ ಕವಿಭಾಷೆಗಿಂತ ಅವನು ಎಷ್ಟು ದೂರ ನಿಂತಿರುವನೆಂಬುದನ್ನು ಅವನ ಕಾವ್ಯವು ಸ್ಪಷ್ಟವಾಗಿ ಪ್ರದರ್ಶಿಸುವುದು.

ಮಾರ್ಗಕಾರನ ಕಾಲಕ್ಕಾಗಲೇ ಈ ನಿಯಮಾವಳಿ ಬದಲಾಗಿ, ಪ್ರಣಯ ಕಾವ್ಯದ ಶಬ್ದ ಭಂಡಾರವು ಶೃಂಗಾರ ರಸದ ಕಣಜವಾಗಿತ್ತು. ಕವಿರಾಜಮಾರ್ಗದ ಉದ್ದಗಲಕ್ಕೆ ಹರಡಿಕೊಂಡಿರುವ

ಈ ಪದಸಂಪತ್ತು (ರೂಪಕ)ಅಲಂಕಾರ ಮತ್ತು ಉಪಮೆಯ ವಿವೇಚನೆಯಲ್ಲಿ ಮಡುಗಟ್ಟಿಕೊಂಡಿರುವುದನ್ನು ಕಾಣಬಹುದು. ಇಲ್ಲಿನ ಆದರ್ಶ ನಾಯಿಕೆಯು ಶಶಿಕಿರಣಕಾಂತಿ (೩-೭೮), ಉದಿತಮಣಿರಾಗ (೩-೮೩) ಅಮೃತಮಯ ಕಾಂತಿ (೩-೧೦೩), ಶ್ವೇತ, ವಿಳಸಿತ, ವಿಶದ (೨-೪೦, ೩-೮೩, ೧-೨) ವರ್ಣ. ಅವಳದ್ದು 'ಝಷಕೇತನ ಕೇತನಾಭ ತನು ತನು...' (೨-೪೦). ಅವಳ ಮುಖ ತಾವರೆ ಮತ್ತು ಚಂದ್ರನನ್ನು (೧-೫೯, ೧-೬೦, ೧-೮೯; ೨-೪೦, ೩-೧೨) ಪ್ರತ್ಯೇಕ-ಪ್ರತ್ಯೇಕವಾಗಿ, ಇಲ್ಲವೆ ಒಟ್ಟಾಗಿ (ಕೆಂದಾವರೆ-ಚಂದ್ರ-೩-೬೭, ೭೪, ೭೫, ೭೭) ಹೋಲುವಂತಹದು. ಮದದಿಂದ ತುಂಬಿದ ಇಲ್ಲವೇ ಮಿಂಚಿನಂತೆ ಸಂಚಲಿಸುವ ನಯನಗಳು; ದುಂಬಿಗಳನ್ನೋ ಇಲ್ಲವೇ ಕನ್ನೈದಿಲೆಗಳನ್ನೋ ಹೋಲುವಂಥವು (೧-೪೩; ೨-೫೮; ೩-೧೦, ೧೨, ೧೬, ೨೪, ೨೫, ೪೭, ೫೦, ೬೦, ೮೩ ಮುಂ.). ಅವಳ ತುಟಿ ಮತ್ತು ಅಂಗೈ ವರ್ಣವು ಚಿಗುರಿನ ಸೊಬಗನ್ನೂ ಕೋಮಲತೆಯನ್ನೂ ಪಡೆದಂಥವುಗಳು (೩-೧೪, ೬೦-೬೨). ಅವಳದ್ದು ಉನ್ನತ ಭ್ರೂಚಾಪ ಇಲ್ಲವೇ ಮದಾಲಸ ಭ್ರೂಲತಾ (೩-೧೭, ೨೩, ೪೭). ಅವಳು ತಳಮಿತ ಮಧ್ಯೆ; ಪೃಥುನಿತಂಬೆ; ಉನ್ನತಸ್ತನಯುಗೇ (೩-೧೦). ಇವುಗಳಿಂದ ಕೂಡಿದ ಅವಳ ನಡಿಗೆ, ಕಳಹಂಸ ತರದ್ದು (೩-೫೦-೫೧).

ಮಾರ್ಗಕಾರನ ಕೆಲವು ಕಾವ್ಯಸಾಲುಗಳನ್ನು ನಿದರ್ಶಿಸಿದರೆ ಅವನ ಯುಗದ ಸೌಂದರ್ಯ-ಪ್ರಜ್ಞೆಯು ಇನ್ನಷ್ಟು ಸ್ಪಷ್ಟಗೊಳ್ಳಬಹುದೇನೋ. ಅವುಗಳಲ್ಲಿ ಕೆಲವು ಇಂತಿವೆ :

- ತಳಮಿತ ಮಧ್ಯೆಯನ್ ಆಯತ-ವಿಳೋಳಲೋಚನೆಯನ್ ಉನ್ನತಸ್ತನಯುಗೆಯಂ ಲಳಿತ-ವಿಳಾಸಿನಿಯಂ ಕೋಮಳಾಂಗಿಯಂ ಪೃಥು-ನಿತಂಬೆಯನ್ (೩-೧೦)
- ಚಂಚಲಾಧರ-ಪಲ್ಲವೆ ರುಚಿರನೇತ್ರ ಕುಸುಮೆ ವಿಲೋಲ ಭುಜಶಾಖೆ (೩-೧೫)
- ಮೃದುತರ ಕಪೋಲಫಲಕಂ ವದನಾಂಬುಜಮ್-ಆಯತೋನ್ನತ ಭ್ರೂಚಾಪಂ (೩-೧೭)
- ವದನವಲ್ತಂಬುರುಹಂ ಪಾದಲೋಲ-ವಿಲೋಚನಂಗಳಲ್ಲವಿವ್-ಅಳಿಗಳ್ (೩-೨೪)
- ವನರುಹದಂತೆ ಮುಖಂ ಲೋಚನಮೆಸೆವುತ್ಪಳದೊಳ್ ತಳಂ ತಳಿರಂತೆಂ (೩-೬೦)
- ಅಳಿಗಳಿವು ಕಣ್ಗಳಲ್ಲಿವು ನಳಿನಮಿದೀ ವದನಮಲ್ತು ನಿಜಕಾಮಿನಿಯಾ (೩-೭೬)

ತೊಲ್ಕಾಪ್ಪಿಯಾಣಾರ್ ಮತ್ತು ಮಾರ್ಗಕಾರನ ಕಾಲದ ಯುಗಧರ್ಮಗಳನ್ನು ಮತ್ತು ಈ ವೈಯಾಕರಣಿಗಳ ದೃಷ್ಟಿಕೋನಗಳನ್ನು ಪರಿಚಯಿಸುವುದಕ್ಕೆ ಸೀಮಿತಗೊಳ್ಳದೇ ಸ್ವಲ್ಪ ವಿಸ್ತರಿಸಿಕೊಂಡು ಈ ಅಭ್ಯಾಸವನ್ನು ಬೆಳೆಸಿದುದರಿಂದ, ನೇರ ದಾರಿಯನ್ನು ಬಿಟ್ಟು ಕವಲು ದಾರಿ ತುಳಿದೆನೇನೋ ಎಂಬ ಅನಿಸಿಕೆ ನನ್ನನ್ನು ಕಾಡುತ್ತಿದೆ; ಆದರೆ, 'ಕವಿರಾಜಮಾರ್ಗ'ವನ್ನು 'ಸಂಸ್ಕೃತ' ದೃಷ್ಟಿಯಿಂದಲ್ಲದೆ 'ದಕ್ಷಿಣದ ಇತರೆ ಪ್ರಾಂತೀಯವಾಗಿರುವಂತಹ ಭಾಷೆಗಳಲ್ಲಿ ಬೆಳೆದು ಬಂದಿರುವ ಸಾಹಿತ್ಯದ ಹಿನ್ನೆಲೆಯಲ್ಲಿ ಅಧ್ಯಯನ' ಮಾಡಿದ ಸಮಾಧಾನ ನನ್ನದಾಗಿದೆ.

ಆಕರ ಟಿಪ್ಪಣಿ :

೧. ತರೀಕೆರೆ, ರಹಮತ್ (ಸಂ.), ಕವಿರಾಜಮಾರ್ಗ : ಸಾಂಸ್ಕೃತಿಕ ಮುಖಾಮುಖಿ (ಕನ್ನಡ ವಿ.ವಿ., ಹಂಪಿ, ೨೦೦೦)– "ಕವಿರಾಜಮಾರ್ಗ : ಹೊಸ ಓದು", ಸುಬ್ಬಣ್ಣ, ಕೆ. ವಿ., ಪು. ೪-೨೦. ಇಲ್ಲಿ ಸಂಖ್ಯೆಗಳಿಂದ ಸೂಚಿಸಿದ ಸಂಪಾದಕರಲ್ಲಿ : ೧ : ಕೆ. ವಿ. ಸುಬ್ಬಣ್ಣ, ೨ : ಎಂ. ಎಂ. ಕಲಬುರ್ಗಿ ಮತ್ತು ೩ : ಕೆ. ಜಿ. ನಾಗರಾಜಪ್ಪ,

೨. ಕಲಬುರ್ಗಿ, ಎಂ. ಎಂ., ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, (ಧಾರವಾಡ, ೧೯೭೩), ಪು. ೧೧೫-೧೧೬; ಕೃಷ್ಣಮೂರ್ತಿ, ಕೆ., "ದಂಡಿ ಭಾಮಹರ ಕೃತಿಗಳು– ತುಲನಾತ್ಮಕ ಅಧ್ಯಯನ", ಕವಿರಾಜಮಾರ್ಗ, ಸಂ. ವಿ. ಸೀತಾರಾಮಯ್ಯ (ಬೆಂಗಳೂರು, ೧೯೨೩), ಪು. ೧೦೧-೧೪೧

೩. ಶಿವರುದ್ರಪ್ಪ, ಜಿ. ಎಸ್., "ಕವಿರಾಜಮಾರ್ಗ : ಕೆಲವು ಪ್ರತಿಕ್ರಿಯೆಗಳು", ತರೀಕೆರೆ, ಅದೇ., ಪು. ೭೧

೪. ಕಳೆದ ಶತಮಾನದ ಕವಿರಾಜಮಾರ್ಗ ಚಿಂತಕರಲ್ಲಿ ಈ ಪ್ರಶ್ನೆಯನ್ನು ಎತ್ತಿದವರಾರನ್ನೂ ನಾನು ಕಾಣುತ್ತಿಲ್ಲ. ನೋಡಿ : ಚಿಟಗುಪ್ಪಿ, ಭೀಮಸೇನರಾವ್, ಕವಿರಾಜಮಾರ್ಗ ಪ್ರಶಸ್ತಿ, (ಧಾರವಾಡ, ೧೯೭೨); ಕಲಬುರ್ಗಿ, ಎಂ.ಎಂ., ಅದೇ; ಮುಳಿಯ ತಿಮ್ಮಪ್ಪಯ್ಯ, ಕವಿರಾಜಮಾರ್ಗ ವಿವೇಕ, (ಮೈಸೂರು, ೧೯೭೩), ಸೀತಾರಾಮಯ್ಯ ಎಂ. ವಿ., (ಸಂ.) ಕವಿರಾಜಮಾರ್ಗ, (ಕವಿಕಾವ್ಯ ಪರಂಪರೆ-೧; ಬೆಂಗಳೂರು, ೧೯೭೩), ಕೃಷ್ಣಮೂರ್ತಿ, ಕೆ., ನೃಪತುಂಗ ದೇವಾನುಮತಂ ಶ್ರೀವಿಜಯ ಪ್ರಭೂತಂ ಕವಿರಾಜಮಾರ್ಗಂ, (ಬೆಂಗಳೂರು, ೧೯೮೩), ಸೀತಾರಾಮಯ್ಯ, ಎಂ. ವಿ., ಶ್ರೀವಿಜಯ ಕೃತ ಕವಿರಾಜಮಾರ್ಗ, (ಎಂ. ವಿ. ಸೀ. ಸಮಗ್ರ ಸಾಹಿತ್ಯ, ಬೆಂಗಳೂರು ೧೯೯೪). ತಮ್ಮ ಮಹಾಪ್ರಬಂಧದಲ್ಲಿ ಚರ್ಚಿಸದಿದ್ದರೂ ಈ ಪ್ರಶ್ನೆಯನ್ನು ಮೊದಲು ಎತ್ತಿದವರು ಎಂ. ಎಂ. ಕಲಬುರ್ಗಿಯವರು.

೫. ನನ್ನ ಗಮನವನ್ನು ವಿಶೇಷವಾಗಿ ಸೆಳೆದ ಇಂಗ್ಲಿಷ್ ಭಾಷೆಯ ಅನುವಾದಗಳಲ್ಲಿ ಪ್ರಮುಖವಾದವುಗಳೆಂದರೆ– ಆಲ್ಬರ್ಟ್, ಡಿ., ತೊಲ್ಕಾಪ್ಪಿಯಮ್ - ಫೋನಾಲಜಿ ಅಂಡ್ ಮಾರ್ಫಾಲಜಿ, (ಚೆನ್ನೈ, ೧೯೮೫); ಇಲುಕ್ಕುವನರ್, ಎಸ್., ತೊಲ್ಕಾಪ್ಪಿಯಮ್ ಇನ್ ಇಂಗ್ಲಿಷ್ ವಿತ್ ಕ್ರಿಟಿಕಲ್ ಸ್ಟಡೀಸ್, (ಚೆನ್ನೈ, ೧೯೯೪); ಮುರುಗನ್, ವಿ, ತೊಲ್ಕಾಪ್ಪಿಯಮ್ ಇನ್ ಇಂಗ್ಲಿಷ್, (ಚೆನ್ನೈ, ೨೦೦೧), ಸುಬ್ರಹ್ಮಣ್ಯಶಾಸ್ತ್ರಿ, ಪಿ. ಎಸ್., ತೊಲ್ಕಾಪ್ಪಿಯಮ್ (ವಿತ್ ವೇರಿಯಸ್ ಸಬ್ ಟೈಟಲ್ಸ್), ಸಂ. ೧-೫ (ಚೆನ್ನೈ ೧೯೫೦, ೧೯೫೨, ೧೯೭೯, ೧೯೭೯; ಅಣ್ಣಾಮಲೈ, ೧೯೮೭). ಇವಲ್ಲವೆ ಮೂರು-ನಾಲ್ಕು ಡಜನ್ ಬಿಡಿ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಈ ಲೇಖನದಲ್ಲಿ ಪ್ರಧಾನವಾಗಿ ಬಳಸಿರುವ ಗ್ರಂಥವು ಇತ್ತೀಚೆಗೆ ಪ್ರಕಟನೆಗೊಂಡ ಮುರುಗನ್ ಸಂಪಾದಿತ ಇಂಗ್ಲಿಷ್ ಅನುವಾದ.

೬. ಒಟ್ಟಾರೆ ಇದ್ದವೆಂಬ ಹದಿನಾಲ್ಕು ಸಂಕಲನಗಳಲ್ಲಿ ಒಂಭತ್ತು ಮಾತ್ರ ಈಗ ಉಳಿದುಕೊಂಡಿವೆ. 'ಕೂತ್ತು', 'ವರಿ', 'ಶಿಟ್ರುಸೈ', 'ಪೆರಿಸೈ' ಮತ್ತು 'ಅಂಕಂಸಿಯವ್' ಎಂಬವು ನಾಶಗೊಂಡ ಸಂಕಲನಗಳಾಗಿವೆ. ಮೂರ್, ಜಾಹ್ನ್ ರಾಲ್‌ಸ್ಟನ್, ದಿ ಏಯ್ಟಿ ಆಂಥೋಲಜೀಸ್, (ಮದ್ರಾಸು, ೧೯೮೫) ಪು. ೬. ನೋ. ಪು. ೫೪೦-೫೫೦

೭. ಶೆಟ್ಟರ್, ಎಸ್., "ಕಲೆಕ್ಟಿವ್ ವಿಜ್‌ಡಮ್ : ಸಮ್ ಇಂಡಿಯನ್ ಎಕ್ಸ್‌ಪೆರಿಮೆಂಟಲ್ಸ್", ಸೈನ್ಸ್ ಅಂಡ್ ಬಿಯಾಂಡ್, ಸಂ. ಎಸ್. ಮೆನನ್ ಮತ್ತಿನ್ನಿತರರು, (ಬೆಂಗಳೂರು, ೨೦೦೪), ಪು. ೧೨೯-೧೩೭. ಈ ಪ್ರಬಂಧದಲ್ಲಿ 'ಶಂಗಂ' ಸಾಹಿತ್ಯ ಮತ್ತು ಕವಿರಾಜಮಾರ್ಗದಲ್ಲಿಯ ಕೆಲವು ಸಮಾನ ಸಂವೇದನೆಗಳನ್ನು ಪರಿಚಯಿಸಲು ಪ್ರಯತ್ನಪಟ್ಟಿರುವೆ.

'ಶಂಗಂ' ಎಂಬುದು ಬಹುಶಃ ಬೌದ್ಧ ಮತ್ತು ಜೈನ 'ಸಂಘ'ಗಳಿಂದ ಪ್ರೇರಿತಗೊಂಡ ಪದವಾಗಿದ್ದು, ಇದು ಸುಮಾರು ಕ್ರಿ.ಶ. ೭ ನೆಯ ಶತಮಾನದಲ್ಲಿ ಪ್ರಸಾರಕ್ಕೆ ಬಂದಿತೆಂದೆನಿಸುವುದು. ತಿರುನಾವುಕ್ಕರಶಿರ್ ನ ತೇವಾರಂ, (ತಿರುಮರೈ VI : ತಿರುತ್ತಾಂಡಹಮ್ ತಿರುಪತ್ತೂರು, ಪ. ೩)ದಲ್ಲಿ ಸಾಕ್ಷಾತ್ ಶಿವನು ಕವಿ ದರುಮಿಯ ರೂಪದಲ್ಲಿ ಪಾಂಡ್ಯರಾಜನ ಆಸ್ಥಾನದಲ್ಲಿ ನೆರೆದ 'ಶಂಗಂ' ಕವಿಗೋಷ್ಠಿಯಲ್ಲಿ ಪಾಲ್ಗೊಂಡ ಕಥೆಯಲ್ಲಿ ಬರುವ ಉಲ್ಲೇಖವೇ ಅತ್ಯಂತ ಪೂರ್ವದ ಉಲ್ಲೇಖವೆಂದು ವಾದಿಸಲಾಗಿದೆ. –ನೋ. "ತಿರುವಿಳೈಯಾಡಲ್ ಪುರಾಣಂ" ಕಥಾನಕದ ಉಲ್ಲೇಖ– ಎನ್. ಸುಬ್ರಹ್ಮಣಿಯನ್, ಒರಿಜಿನಲ್ ಸೋರ್ಸಸ್ ಆಫ್ ದಿ ಹಿಸ್ಟರಿ ಆಫ್ ತಮಿಲ್ನಾಡು, (ಉದುಮಲ್‌ಪೇಟ್, ೧೯೯೪), ಪು. ೨೨೪. ಇದಕ್ಕೂ ವೈದಿಕ 'ಸಂಹಿತ'ಕ್ಕೂ ಇರುವ ಸಂಬಂಧವನ್ನು ಹಲವರು ಸೂಚಿಸಿರುವರು. ಆದರೆ 'ಶಂಗಂ' ಪದವು ಪ್ರಸಾರಕ್ಕೆ ಬರುವುದಕ್ಕಿಂತ ಮುಂಚೆ ತಮಿಳರು ಇದನು 'ತೊಕೈ' ಎಂಬ ಪದದಿಂದ ಗುರುತಿಸಿದ್ದರು– ಮೂರ್, ಅದೇ. ಪು. ೧೨-೧೩.

ಪ್ರಚಲಿತ ತಮಿಳು ಐತಿಹ್ಯದಂತೆ ಅತ್ಯಂತ ಪೂರ್ವಕಾಲದಲ್ಲಿ ಒಟ್ಟು ಮೂರು 'ಶಂಗಂ'ಗಳಿದ್ದು, ಪುರಾತನಮದುರೈ ಮತ್ತು ಕಪಾಟಪುರಂನಲ್ಲಿದ್ದ ಮೊದಲಿನವೆರಡು ಕೇಂದ್ರಗಳು ಸಮುದ್ರವು ಉಕ್ಕೇರಿ ಬಂದ ಮೊದಲ ಮಹಾ 'ಸುನಾಮಿ'ಯಲ್ಲಿ ಕೊಚ್ಚಿಹೋದವು. ಎರಡನೆಯ ಶಂಗಂ(ಕಪಾಟಪುರದ)ನಲ್ಲಿ ರಚಿಸಿದ ತೊಲ್ಕಾಪ್ಪಿಯಮ್ ಗ್ರಂಥವು ಹೇಗೋ ಉಳಿದುಕೊಂಡು ಬಂತು. ಮೂರನೆಯ 'ಶಂಗಂ'ವನ್ನು ವೈಗೈನದಿ ದಡದ ಮೇಲೆ ಹೊಸದಾಗಿ ಕಟ್ಟಿದ ಪಾಂಡ್ಯ ರಾಜಧಾನಿಯಾದ ಮದುರೈನಲ್ಲಿ ಸ್ಥಾಪಿಸಿ, ಇಂದು ಲಭ್ಯವಿರುವ ಸಾಹಿತ್ಯವನ್ನು ರಚಿಸಲಾಯಿತು.

ಈ ಎಲ್ಲದರ ಬಗ್ಗೆ ಹೆಚ್ಚಿನ ವಿವರಗಳಿಗೆ "ದ್ರಾವಿಡ ಸಂಬಂಧ-೩ : ಕಡಲು ಕುಡಿದ ಭೂಖಂಡ ಮತ್ತು ಅದರ ನಕಾಶೆ" ಸಂಕಲನ ಸಂ. ೨೨ ನೋಡಿ.

'ಶಂಗಂ' ಸಾಹಿತ್ಯವೆಂದರ ಏನು? ಅದು ಯಾವ ಯಾವ ಕೃತಿಗಳನ್ನು ಒಳಗೊಂಡಿತ್ತು ಎಂಬುದರ ಬಗ್ಗೆ ಪಂಡಿತರಲ್ಲಿ ಒಮ್ಮತವಿಲ್ಲ. ಕೆಲವರು ಇದರಲ್ಲಿ (೧) ತೊಲ್ಕಾಪ್ಪಿಯಮ್, (೨) ಎಟ್ಟುತ್ತೊಗೈ ಮತ್ತು ಪತ್ತುಪಾಟು ಎಂಬ ಕವನ ಸಂಕಲನಗಳು, (೩) ಐದು ಮಹಾಕಾವ್ಯಗಳು (ಶಿಲಪ್ಪತಿಕಾರಂ, ಮಣಿಮೇಕಲೈ, ಶಿವಕಚಿಂತಾಮಣಿ, ಕುಂತಲಕೇಶಿ ಮತ್ತು ವಳೈಯಾಪತಿ– ಇವುಗಳಲ್ಲಿ ಕೆಲವು ಈಗ ಲಭ್ಯವಿಲ್ಲ– ಮತ್ತು (೪) ಪದಿನೇಣ್-ಕೀಳ್ಕಣಕ್ಕು (ಹದಿನೇಳು ಕ್ಷುಲ್ಲಕ ಕೃತಿಗಳನ್ನು) ಸೇರಿಸುವರು. ಆದರೆ ಇನ್ನು ಕೆಲವರು ಇದನ್ನು ಮೊದಲೆರಡು ವರ್ಗದ ಕೃತಿಗಳಿಗೆ ಮಾತ್ರ ಸೀಮಿತಗೊಳಿಸಿ, ಉಳಿದವು ಶಂಗಂ ಕಾಲಾನಂತರ (ಕ್ರಿ.ಶ. ೩ ರಿಂದ ೬ ನೆಯ ಶತಕದಲ್ಲಿ)ದಲ್ಲಿ ರಚನೆಗೊಂಡವು, ಎಂದು ವಾದಿಸುವರು. ಎರಡನೆಯ ವಾದಕ್ಕೆ ಈಗ ಹೆಚ್ಚು ಮನ್ನಣೆ ದೊರೆತಿರುವುದು.

೮. ಮುರುಗನ್, ಅದೇ., ಪು. IX-XV; ಮೀನಾಕ್ಷಿ, ಕೆ., ತೊಲ್ಕಾಪ್ಪಿಯಮ್ ಅಂಡ್ ಅಷ್ಟಾಧ್ಯಾಯಿ, (ಚೆನ್ನೈ, ೧೯೯೭), ಪು. ೭-೮

೯. ಮೀನಾಕ್ಷಿ, ಅದೇ., ಪು. ೬

೧೦. ಮುರುಗನ್, ಅದೇ. 'ಪುರುಳ್'ನ ಎರಡನೆಯ ವಿಭಾಗ, ಪ. ೧೨-೫೯, ಪು. ೫೪೨-೫೪೩.

೧೧. ಶಿಲಪ್ಪತಿಕಾರಂ, ಸಂ. ದೀಕ್ಷಿತರ್, ರಾಮಚಂದ್ರ, (ಚೆನ್ನೈ, ೧೯೯೭ ರ ಮುದ್ರಣ), ಪು. ೩೯೬, ಅ.ಟಿ. ೩

೧೨. ಮಾರ್ರ್, ಅದೇ.

೧೩. ಮರುಗನ್, ಅದೇ. 'ಶಿಜಿಪ್ಪುಪ್ಪಾಯಿರಮ್' ಅಥವಾ ಪ್ರಾಸ್ತಾವಿಕ ಸ್ತುತಿಪದ್ಯ, ಸಾ. ೧೪, ಪು. xxii.

೧೪. ನಚ್ಚಿಣಾರ್ಕ್ಕಿಣಿಯರ್ ಎಂಬ ಟೀಕಾಕಾರನು ಕ್ರಿ.ಶ. ೧೪ ನೆಯ ಶತಮಾನದಲ್ಲಿ ಹೆಣೆದ ಕತೆ ಇದಾಗಿದೆ– ಮೀನಾಕ್ಷಿ, ಅದೇ., ಪು. ೬

೧೫. ಮುರುಗನ್, ಅದೇ., ಪು. IX; ಕಂದಸ್ವಾಮಿ, ಎಸ್. ಎನ್., ತಮಿಲ್ ಲಿಟರೇಚರ್ ಅಂಡ್ ಇಂಡಿಯನ್ ಫಿಲಾಸಫಿ, (ಚೆನ್ನೈ, ೨೦೦೧). ಪು. ೮೬. ಕನಿಷ್ಠ ಹತ್ತು ಬಗೆಯ ಅಲಂಕಾರಗಳನ್ನು ತನ್ನ ಪೂರ್ವಾಚಾರ್ಯರಿಂದ ಪಡೆದುಕೊಂಡದ್ದನ್ನು ಸ್ವತಃ ತೊಲ್ಕಾಪ್ಪಿಯಾಣಾರ್ ತಿಳಿಸಿರುವನು. ಅದೇ., ಪು. ೬೧

೧೬. ಕಂದಸ್ವಾಮಿ, ಅದೇ., ಪು. ೪೮-೪೯.

೧೭. ಈ ಪ್ರಾಸ್ತಾವಿಕ ಸ್ತುತಿಪದ್ಯದಲ್ಲಿ ಅಂದಿನ ಪಾಂಡ್ಯ ರಾಜನನ್ನು 'ನಿಲಂತರುತಿರುವನ್' ಎಂದು ಮತ್ತು ಶಂಗಂ ಪಂಡಿತ ಸಭೆಯ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದವನನ್ನು ಅತಂಕೋಟು ಆಚಾರ್ಯನೆಂದು ಹೆಸರಿಸಲಾಗಿದೆ. ಈ ಆಚಾರ್ಯನು ಶುದ್ಧ ತಮಿಳಿನ ನುಡಿನಿಯಮವನ್ನು ಮತ್ತು ಚತುರ್ವೇದಾಂತರ್ಗತ ಜ್ಞಾನವನ್ನು ಪಡೆದವನಾಗಿದ್ದನೆಂದು ಹೊಗಳಲಾಗಿದೆ. ಇವನ ಸಮ್ಮುಖದಲ್ಲಿ ನೆರವೇರಿದ ಗೋಷ್ಠಿಯಲ್ಲಿ ತೊಲ್ಕಾಪ್ಪಿಯಾಣಾರ್ ತನ್ನ ಗ್ರಂಥವನ್ನು ಮಂಡಿಸಿ, ಆ ಸಭೆಯಿಂದ ಮನ್ನಣೆ ಪಡೆದುಕೊಂಡನೆಂದು ಪಣಂಪಾರಣಾರ್ ತಿಳಿಸುವನು. ಮುರುಗನ್, ಅದೇ., ಪು. XXII-XXIII.

೧೮. ಕರಾಮಾ ೨-೧೪೩, ೧-೪೭, ೨-೫೧, ೧೫೫, ೧-೩೩; ೧-೭೫; ೧-೪೨; ೧-೯.

೧೯. ಅದೇ., ೧-೨೭, ೪೨, ೨-೬೨; ೧-೪೯; ೧-೪೭; ೧-೨೪; ೨-೧೫೫; ೩-೫೮; ೧-೪, ೧೨ ಮುಂ.; ೧-೧೯, ೨-೪೮ ಮುಂ.; ೨-೫೧; ೧-೧೫, ೩೯ ಮುಂ.; ೨-೧೫, ೩-೧೧; ೧-೩೨; ೧-೪೭, ೨-೫೧, ೧೫೫; ೧-೩೩; ೧-೧೪೦, ೧-೧೦೦; ೧-೧೩, ೨೦, ೮೭, ೨-೬೮ ಮುಂ.; ೧-೧೭; ೧-೧೦೯, ೨-೨೮; ೧-೯ ಮುಂ.

೨೦. ಅದೇ., ೧-೧೭; ೧-೩೮; ೩-೯೯; ೧-೭೯; ೧-೫; ೧-೧೯; ೨-೫೧; ೨-೧; ೨-೧೫೫; ೧-೫೦; ೩-೫; ೧-೪೭; ೨-೪೬.

೨೧. ಅದೇ., ೧-೪೫; ೧-೧೪೭; ೩-೨೩೧; ೨-೧೦೭; ೨-೫೩; ೨-೧೫; ೨-೧೦೨; ೧೦೩, ೧೦೮; ೨-೧೫೩; ೨-೧೦; ೧-೧೪೯; ೨-೧೦೧; ೨-೧೫೩.

೨೨. ಮುರುಗನ್, ಅದೇ., II-೯; II-iix, ೨೭೫; ಪ. ೮೮೩-೪, ಪು. ೩೪೫.

೨೩. ಕಂದಸ್ವಾಮಿ, ಅದೇ., ಪು. ೫೨-೫೩. ತಮಿಳುಬ್ರಾಹ್ಮೀ ಶಾಸನಗಳಲ್ಲಿ ಬಳಸಿರುವ ಪರಭಾಷಾ –ವಿಶೇಷವಾಗಿ ಪಾಲಿ ಮತ್ತು ಪ್ರಾಕೃತ - ಪದಗಳನ್ನು ಬೌದ್ಧ ಮತ್ತು ಜೈನ ಮೂಲದಿಂದ ಪಡೆದುಕೊಳ್ಳಲಾಗಿದ್ದು, ಅವುಗಳನ್ನು ತಮಿಳೀಕರಿಸುವ ಕ್ರಿಯೆಯು ಅಲ್ಲಲ್ಲಿ ಕುಂಠಿತಗೊಂಡಿರುವುದನ್ನು ಕಾಣಬಹುದು. ಇದು ಆನಂತರ ಕಾಲದ ಪಲ್ಲವ ಮತ್ತು ಚೋಳರ ಶಾಸನಗಳಲ್ಲಿಯೂ ಮುಂದುವರಿಯಿತು. ತೊಲ್ಕಾಪ್ಪಿಯಮ್‌ನಲ್ಲಿಯೂ ಕೆಲವು – ಅಂತನ್, ಏತು, ಮಾರಾಯಮ್ ಮುಂ. (ಸೂತ್ರ ೪, 'ಪೊರುಳ್' ಸೂ. ೬೫, ೬೭)– ಸಂಸ್ಕೃತ ಪದಗಳನ್ನು

ಗುರುತಿಸಬಹುದು. ಆದರೆ ಇವುಗಳ ಅರ್ಥವ್ಯಾಪ್ತಿಯಲ್ಲಿರುವ ಅಂತರವನ್ನು ಗಮನಿಸುವುದು ತುಂಬಾ ಅವಶ್ಯ.

೨೪. `ರಾಮ' `ಇರಾಮಣ್' ಎಂದು, ಲಂಕೆ `ಇಲಂಕೈ' ಎಂದು, ತಮಿಳೀಕರಿಸಿಕೊಳ್ಳುವುದು. ಈ ಪ್ರಕ್ರಿಯೆ ತಮಿಳಿನಲ್ಲಿ ವಿಶಿಷ್ಟ ಬಗೆಯಲ್ಲಿ ನಡೆದದ್ದೇನೊ ನಿಜ, ಆದರೆ ಒಂದಿಲ್ಲೊಂದು ಬಗೆಯಲ್ಲಿ ಉಳಿದ ದ್ರಾವಿಡ– ಕನ್ನಡದಲ್ಲೂ– ಭಾಷೆಗಳಲ್ಲೂ ನಡೆಯಿತು. ಒಂದು ಭಾಷೆಯ ಪದವನ್ನು ಮತ್ತೊಂದು ಭಾಷೆಗೆ ಅಳವಡಿಸಿಕೊಂಡಾಗ ವಿಭಿನ್ನ ಬಗೆಯ ಸಾಂಸ್ಕೃತಿಕ ಸಂಸ್ಕಾರ ದೀಕ್ಷೆಗೆ ಅವು ಒಳಗಾಗುವುದು ಅನಿವಾರ್ಯ. ಪ್ರಾಕೃತ, ಸಂಸ್ಕೃತ ಮಾತ್ರವಲ್ಲದೆ ಅರಬ್ಬೀ, ಫಾರಸೀ, ಉರ್ದೂ ಭಾಷೆಗಳಿಂದ, ಮತ್ತು ಇತ್ತೀಚೆಗೆ ಇಂಗ್ಲಿಷ್‌ನಿಂದ ಪಡೆದುಕೊಂಡು, ತನ್ನದಾಗಿಸಿಕೊಂಡಿರುವ ಕನ್ನಡದ ಪ್ರಯೋಗಗಳಿಗೆ ಮಿತಿ ಕಟ್ಟುವುದೇ ಕಷ್ಟ. ಇದು ಬೆಳೆಯುವ ಯಾವುದೇ ಭಾಷೆಯ ಲಕ್ಷಣವಾಗಿದೆ. ಆರಂಭಕಾಲದ ಭಾಷಾ ಪ್ರಯೋಗಗಳಲ್ಲಿ ತಮಿಳರು ಸಂಸ್ಕೃತ-ಪ್ರಾಕೃತ ಪದಗಳನ್ನು ಉಪಯೋಗಿಸುವಾಗ ವಿಶೇಷ ಮಡಿವಂತಿಕೆ ತೋರಿರುವುದು ನಿಜ, ಅದು ಕ್ರಮೇಣ ಸಡಿಲುಗೊಳ್ಳುತ್ತಾ ಸಾಗಿದ್ದೂ ಸರ್ವವಿದಿತ. ಈ ಪ್ರಕ್ರಿಯೆಯು ತ್ವರಿತಗತಿಯಲ್ಲಿ, ಮುಕ್ತಮಾರ್ಗದಲ್ಲಿ, ಹಲವು ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಒತ್ತಡಗಳಿಗೊಳಗಾಗಿ ಸಾಗುವುದನ್ನು ಇತಿಹಾಸದ ಅನೇಕ ಘಟ್ಟಗಳಲ್ಲಿ ನಾವು ಗುರುತಿಸಬಹುದು. ಇದರ ಹೆಚ್ಚಿನ ಚರ್ಚೆ ಬಹುಶಃ ಇಲ್ಲಿ ಅಪ್ರಸ್ತುತ.

೨೫. ತೊಲ್ಕಾಪ್ಪಿಯಮ್‌ನಲ್ಲಿ ಬಹಳ ಅಪರೂಪವಾಗಿ ಕಾಣುವ ಸ್ತ್ರೀಯ ಮೋಹಕಾಂಗ ವರ್ಣನೆಯನ್ನು 'ಎಟ್ಟುತೊಗೈ' ಮತ್ತು 'ಪತ್ತುಪಾಟ್ಟು' ಸಂಕಲನಗಳಲ್ಲಿ ವಿರಳವಾಗಿಯಾದರೂ ಬರುವುದನ್ನು ಗಮನಿಸಿದರೆ, ತೊಲ್ಕಾಪ್ಪಿಯಮ್‌ನ ಕಾಲಾನಂತರದ ತಮಿಳುಸಾಹಿತ್ಯವು ಹೇಗೆ ಹಂತಹಂತವಾಗಿ ಸಂಸ್ಕೃತೀಕರಣಕ್ಕೆ ಒಳಗಾಯಿತೆಂಬುದು ವ್ಯಕ್ತವಾಗುವುದು. ಇದು 'ಶಂಗಂ' ಕವಿಗಳ ಕಾಲದಲ್ಲಾದದ್ದೋ ಅಥವಾ ಆನಂತರ ಸಂಕಲನಕಾರರಿಂದ ಸೇರ್ಪಡೆ ಮಾಡಲ್ಪಟ್ಟಿದ್ದೋ ಎಂಬುದರ ಬಗ್ಗೆ ಸ್ಪಷ್ಟತೆ ದೊರಕುವುದಿಲ್ಲ. 'ಪೂರಿಕ್ಕೋ' ಎಂಬವನಿಂದ (ಕ್ರಿ.ಶ. ೯ ನೆಯ ಶತಮಾನಕ್ಕಿಂತ ಮುಂಚೆ) ಶಂಗಂ ಸಾಹಿತ್ಯವು ಇಂದಿನ ಸಂಕಲನ-ಸ್ವರೂಪವನ್ನು ಪಡೆದುಕೊಂಡಿತೆಂಬ ಅಭಿಮತವಿದೆ– ಆದರೆ ಇದನ್ನು ಒಪ್ಪಲು-ಅಲ್ಲಗಳೆಯಲು ಬಲವಾದ ಆಧಾರಗಳು ದೊರೆಯುವುದಿಲ್ಲ. ನೋ. ಷಣ್ಮುಗ ಪಿಳ್ಳೈ, ಎಂ., ಮತ್ತು ಡೇವಿಡ್ ಲುಡ್, ಇ., ಕುರುಂತೊಗೈ, (ಚೆನ್ನೈ, ೧೯೯೭, ಪ್ರ. ಮು.), ಪು. ೧.

೨೬. 'ಕಲಿತ್ತೊಗೈ' ಮತ್ತು 'ಕುರುಂತೊಗೈ', ಪ್ರಣಯಗೀತೆ(ಅಹಂ)ಯ ಎರಡು ಪ್ರಮುಖ ಅಂಗಗಳು. ಇವುಗಳಲ್ಲಿ ಗುರುತಿಸಲಾದ ತಲೈವಿ(ನಾಯಿಕೆ)ಯ ಪ್ರಧಾನ ಅಂಗಾಂಗಗಳು ಅವಳ ಕೇಶ, ನೊಸಲು, ಬಾಹು ಮತ್ತು ದಂತಪಂಕ್ತಿ. ಅವಳ ಸ್ತನಗಳ ವರ್ಣನೆ ಅಲ್ಲಲ್ಲಿ ಬರುವುದೇನೋ ನಿಜ, ಆದರೆ ಇದರ ವಿಧಾನವು ವಿಶಿಷ್ಟ ಬಗೆಯಾದದ್ದು. ನಾಯಿಕೆಯ ತುಟಿ, ನಿತಂಬ, ತೊಡೆ, ಮೊದಲಾದವುಗಳ ಬಗ್ಗೆ ಇಲ್ಲಿಯ ಉಲ್ಲೇಖ ಆಕಸ್ಮಿಕ ಮಾತ್ರ.
ತಲೈವಿಯ ಕೇಶವರ್ಣವನ್ನು ಮಳೆಮೋಡದ ಕಪ್ಪಿಗೆ, ಕತ್ತಲೆಯ ಮೊತ್ತಕ್ಕೆ, ನವಿಲುಗರಿಕಣ್ಣಿನ ಕಡುನೀಲಿ ಬಣ್ಣಕ್ಕೆ ಹೋಲಿಸಿದರೆ, ಅವುಗಳ ಮಾಟವನ್ನು ಅಲ್ಲೊಮ್ಮೆ-ಇಲ್ಲೊಮ್ಮೆ ಜೇನುಹುಟ್ಟಿಗೆ ಹೋಲಿಸಲಾಗದೆ. ಅವಳ ನೊಸಲನ್ನು ಒಮ್ಮೆ ಬಾಲಚಂದ್ರನಿಗೆ, ಮತ್ತೊಮ್ಮೆ ಪುಷ್ಪಕ್ಕೆ ಸಮೀಕರಿಸಲಾಗಿದೆ (ಕೇಶಕ್ಕೆ– ಕಲಿತ್ತೊಗೈ ೧೩, ೩೧, ೫೯; ೪೮, ೧೩೦; ಕುರುಂತೊಗೈ, ೨೪೭, ೪೦೧ ಮುಂ.; ನೊಸಲಿಗೆ– ಕಲಿತ್ತೊಗೈ ೧೨, ೩೪; ೫೪, ೧೦೭; ಕುರುಂತೊಗೈ, ೧೮). ಭುಜ-ಬಾಹುದ್ವಯಗಳನ್ನು ಮೇಲಿಂದ ಮೇಲೆ ಪ್ರಸ್ತಾಪಿಸುವ ಈ ಕವಿಗಳು, ಅವುಗಳನ್ನು ದುಂಡಗಿನ, ತೂಗಾಡುವ, ಬೊಂಬಿಗೆ (ಕುರುಂತೊಗೈ ೩೯೮; ಕಲಿತ್ತೊಗೈ ೩೮-೩೯, ೪೪), ಕಣ್ಣುಗಳನ್ನು ಅರಳಿದ ಮತ್ತು ನೀರುಂಡ ಪುಷ್ಪಕ್ಕೆ, (ವಿಶೇಷವಾಗಿ, ಕುವಳೈ ಪುಷ್ಪಕ್ಕೆ). ಕೆಂಟೈ ಮತ್ತು ಕಯಲ್ ಮೀನುಗಳಿಗೆ (ಕುರುಂತೊಗೈ ೧೩, ೧೯, ೧೪೨, ೨೨೮; ೧೪, ೨೦೯; ೧೬, ೩೭೯ ಮತ್ತು ೩೯೯; ಕಲಿತ್ತೊಗೈ ೧೧೧; ೫೯; ೪೭; ೯೭;) ಹೋಲಿಕೆ ಮಾಡಲಾಗಿದೆ. ಮೊಗ್ಗಿನಂತಹ ದಂತಪಂಕ್ತಿಯನ್ನು (ಕಲಿತ್ತೊಗೈ ೫೯), ಹವಳದ ತುಟಿಗಳನ್ನು (ಕುರುಂತೊಗೈ ೨; ಕಲಿತ್ತೊಗೈ, ೫೪), ವಿಶಾಲವಾದ ನಿತಂಬವನ್ನು (ಕಲಿತ್ತೊಗೈ ೧೦೭) ಅಪರೂಪವಾಗಿ ಮಾತ್ರ ಈ ಕವಿಗಳು ಉಲ್ಲೇಖಿಸಿರುವರು. ಗಡಿ ಗುರುತಿಸಿಕೊಂಡು ಎದೆಯ ಮೇಲೆ ತುಳುಕಾಡುವ, 'ಸೆಪ್ಪು'ವಿನ ಅಪೂರ್ವ ಆಕೃತಿಯೊಂದಿಗೆ ಸ್ಪರ್ಧೆಗಿಳಿದಿದ್ದ, ಕಳಿತ 'ಕೋಂಕು' ಮೊಗ್ಗುಗಳನ್ನು ಮತ್ತು 'ವೇಂಕೈ' ಪುಷ್ಪಗಳನ್ನು ಸರಿಗಟ್ಟುವಂತಹ, ಕೃಷ್ಣವರ್ಣದಿಂದ ಹೊಳೆವ, ದೃಷ್ಟಿಬೊಟ್ಟು ಇಲ್ಲವೇ ಚಂದನದ ರೇಖಾಚಿತ್ರಗಳಿಂದ ಅಲಂಕರಿಸಿಕೊಂಡ, ಸ್ತನಗಳನ್ನೂ (ಕುರುಂತೊಗೈ ೧೦, ೬೯, ೭೨, ೮೧, ೧೨೦, ೩೩೬, ೩೪೭; ಕಲಿತ್ತೊಗೈ ೩, ೧೩, ೧೭, ೨೧, ೨೨, ೫೫, ೫೬, ೬೭, ೧೧೧, ೧೧೬, ಮುಂ.) ಅವರು ಕಂಡಿರುವರು.

■ ಡಾ. ಷ. ಶೆಟ್ಟರ್ : ಡಾ. ಎಸ್. ರಾಧಾಕೃಷ್ಣನ್ ಸಂದರ್ಶಕ ಪ್ರಾಧ್ಯಾಪಕ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್, ಐಐಎಸ್‌ಸಿ ಕ್ಯಾಂಪಸ್, ಬೆಂಗಳೂರು - ೫೬೦ ೦೧೨ ■

ಹನ್ನೆರಡು ಹನಿಗಳು

ಪಿ. ಪಿ. ಕೃಷ್ಣಕುಮಾರ್

೧.

ನೆಮ್ಮದಿಯಿಲ್ಲದೆ
ಕವಿತೆ ಬರೆಯಲಾಗದು;
ಕವಿತೆ ಬರೆಯದೆ
ನೆಮ್ಮದಿ ಸಿಗದು !

೨.

ಗೆಲುವು ಎಂದರೆ
ಒಮ್ಮೊಮ್ಮೆ ಸಾವು;
ಆದ್ದರಿಂದ
ಸೋಲುತ್ತಿದ್ದೇನೆ !

೩.

ಸೂರ್ಯನ ಬೆಳಕಾಗಿ
ಮಿತ್ರನಾಗಿದ್ದಾನೆ ಅಗ್ನಿ
ಆಗಸದಲ್ಲಿ;
ಆಗಾಗ ಶತ್ರುವಾಗುತ್ತಾನೆ
ಭೂಮಿಯಲ್ಲಿ !

೪.

ಈಗ ಜೀವನವೊಂದು
ವಿಷವೃತ್ತ !
ಬೇರಳು ಮಾಡುವುದು
ಯಾರತ್ತ ! ಅಮೃತತ್ವ
ಕ್ಕಾಗಿ ಹಾರುವುದೊಂದೆ
ದಾರಿ !

೫.

ಹೆಣ್ಣು ಸಂಪೂರ್ಣ
ಬೆತ್ತಲಾದಾಗ,
ಎತ್ತಲೋ ಹೋಯಿತು
ಸೃಷ್ಟಿಯ ಸ್ವಾರಸ್ಯ !

೬.

ಹರಿಜನ ಎಂದು
ಕರೆಸಿಕೊಳ್ಳಲು
ದಲಿತರಿಗೆ ಇಷ್ಟವಿಲ್ಲ;
ನಮಗೋ ಅರ್ಹತೆಯಿಲ್ಲ !
(ನಾವು ಹರಜನರೂ ಅಲ್ಲ.)

೭.

ಅಪ್ಸರೆ
ಯಾಗಿ, ತಾರೆ
ಯಾಗಿ ದೂರವಿರು:
ಹತ್ತಿರ ಬಂದು,
ನನ್ನಂತೆಯೆ ಎಂದು
ತೋರಿಸಿಕೊಳ್ಳದಿರು !

೮.

ಹಾವುಗಳೆಲ್ಲ
ಹಕ್ಕಿಗಳಾಗಲಿಲ್ಲ;
ಕಪಿಗಳೆಲ್ಲ
ಮಾನವರಾಗಲಿಲ್ಲ;
ಮಾನವರೆಲ್ಲ
ದೇವತೆಗಳಾಗಲಿಲ್ಲ !

೯.

ಭೂಮಿಗೀಗ
ಬಾಯಾರಿಕೆ:
ಬಯಕೆ ನೀರಲ್ಲ,
ಕೆನ್ನೀರು !

೧೦.

ಎಷ್ಟೋ ನಕ್ಷತ್ರಗಳು
ಸ್ವಲ್ಪ ಕಾಲವಷ್ಟೆ
ಥಳಥಳ ಹೊಳೆಯುತ್ತವೆ;
ಆಮೇಲೆ ಏನೂ ತಿಳಿಯದು:
ಕತ್ತಲಲ್ಲಿ ಕರಗಿಹೋಗುತ್ತವೊ,
ಬೆಳಕಿನಲ್ಲಿ ಕಳೆದುಹೊಗುತ್ತವೊ !

೧೧.

ಹಾವಿನ ವಿಷ
ಮದ್ದೂ ಆಗಬಲ್ಲದು;
ಮಾನವ ವಿಷದಿಂದ
ಹಾನಿ ಮಾತ್ರ !

೧೨.

ಕವಿಯದು ನನ್ನನ್ನು
ದೇಶದ ಧೂಳಿ;
ಒಳಗೊಳ್ಳದು
ಕಾಲದ ಗವಿ:
ನಾನೊಬ್ಬ ಕವಿ !

■ ಡಾ. ಸಿ. ಪಿ. ಕೃಷ್ಣಕುಮಾರ್ :
೨೨೬೫/೧೯, ಭಾರತ, ೬ನೇ ಕ್ರಾಸ್, ವಿನಾಯಕನಗರ, ಮೈಸೂರು - ೫೭೦ ೦೧೨ ■

ಕನ್ನಡದಲ್ಲಿ ಈಚಿನ ಸಂಶೋಧನ ಪ್ರಬಂಧಗಳು — ಹರಿಕೃಷ್ಣ ಭರಣ್ಯ

ಈಚಿನ ಕೆಲವು ವರ್ಷಗಳಲ್ಲಿ ನಮ್ಮ ಕನ್ನಡದಲ್ಲಿ ನಡೆಯುತ್ತಿರುವ ಸಾಹಿತ್ಯ-ಸಂಸ್ಕೃತಿಗಳ ಸಂಶೋಧನಾ ಪ್ರಬಂಧಗಳಲ್ಲಿ ಕೆಲವನ್ನು (ಪಿಹೆಚ್.ಡಿ./ಎಂ.ಫಿಲ್. ಇತ್ಯಾದಿ) ಓದುವ ಅವಕಾಶವು ನನಗಾಗಿದೆ. ಬರೀ ಓದುವುದಷ್ಟೇ ಅಲ್ಲ, ಅವನ್ನು ಮೌಲ್ಯಮಾಪನ ಮಾಡುವ ಜವಾಬುದಾರಿಯೂ ಇರುತ್ತದೆ. ಇಂಥಾ ಸಂಪ್ರಬಂಧಗಳನ್ನು ತಕ್ಕಮಟ್ಟಿಗೆ ಜಾಗರೂಕತೆ ಹಾಗೂ ಎಚ್ಚರದಿಂದ ಓದಿ ಮೌಲ್ಯಮಾಪನ ವರದಿಯನ್ನು ಕಳಿಸಬೇಕು. ಇಲ್ಲೊಂದು ಪುಟ್ಟ ಟಿಪ್ಪಣಿಯನ್ನು ಸೇರಿಸಿಬಿಡುತ್ತೇನೆ. ಕೊಟ್ಟಿರುವ ಗಡುವಿನ ಮೊದಲೇ ವರದಿಯನ್ನು ಕಳಿಸಿಬಿಡುವುದು ನನ್ನ ಜಾಯಮಾನ. ಈವರೆಗೆ ಎಂದೂ ನಾನು ತಡವಾಗಿ ವರದಿಯನ್ನು ಕಳಿಸಿಯೇ ಇಲ್ಲ, ಮಾತ್ರವಲ್ಲ ಕೇವಲ ಹನ್ನೆರಡೇ ದಿನಗಳಲ್ಲಿ ವರದಿಯನ್ನು ಕಳಿಸಿದ್ದೂ

ನನ್ನ ದಾಖಲೆಯಲ್ಲಿವೆ. ಯಾಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಾನೂ ಒಬ್ಬ ಪೂರ್ಣಕಾಲಿಕ ಸಂಶೋಧಕನಾಗಿಯೇ ಕಾರ್ಯವೆಸಗಿ ಬಂದುದರಿಂದ, ಸಾಮಾನ್ಯವಾಗಿ, ಪೂರ್ಣಕಾಲಿಕವಾಗಿ ಸಂಶೋಧನೆ ನಡೆಸುವವರ ಕಷ್ಟ-ಸುಖಗಳು ನನಗೆ ಚೆನ್ನಾಗಿ ಗೊತ್ತು. ಮಾತ್ರವಲ್ಲ, ಇತರೆಡೆಗಳಲ್ಲಿಯೂ ನಡೆಯುತ್ತಿರುವ ವಿದ್ಯಮಾನಗಳನ್ನೂ ಗಮನಿಸುತ್ತಲೇ ಬಂದವನು. ಸಂಪ್ರಬಂಧದ ರಚನೆಯಿಂದ ಹಿಡಿದು, ಪದವಿ ಪ್ರದಾನವಾಗುವ ವರೆಗೆ ಏನೆಲ್ಲಾ ಚಟುವಟಿಕೆಗಳು ನಡೆಯುತ್ತವೆ ಎಂಬುದನ್ನೂ ತಕ್ಕಮಟ್ಟಿಗೆ ನಾನು ಬಲ್ಲೆ.

ಕನ್ನಡದಲ್ಲಿ ಸಂಶೋಧನ ಪ್ರಬಂಧಗಳು ವೈವಿಧ್ಯಮಯವಾಗಿ ಬರುತ್ತಿವೆ ಎಂದು ಕಡಾ ಖಂಡಿತವಾಗಿ ಹೇಳುವಂತಿಲ್ಲ ಎಂಬುದು ನನ್ನ ಸೀಮಿತ ಅನುಭವದ ಮಾತು. ಇನ್ನೊಂದೆಡೆ, ಒಂದೇ ರೀತಿಯ ವಿಚಾರಗಳ ಒಂದೇ ರೀತಿಯ ಅಧ್ಯಯನಗಳೇ ಬರುತ್ತಿವೆಯೇನೋ ಎಂಬಂತೆಯೂ ಭಾಸವಾಗುವುದಿದೆ. ಮಾತ್ರವಲ್ಲ ಕೆಲವು ಬಾರಿ ಪುನರಾವರ್ತನೆಗಳಾದುದೂ ಇವೆ. ಕನ್ನಡ ಸಾಹಿತ್ಯ-ಸಂಸ್ಕೃತಿಯೊಳಗಿನ ಅಪರೂಪದ ವಿಶೇಷ ರೀತಿಯ ಅಧ್ಯಯನಗಳೂ ವಿರಳವೆಂಬಂತೆ ಅಲ್ಲಲ್ಲಿ ಬರುತ್ತಿರುವುದನ್ನೂ ನಾನು ಗುರುತಿಸಿದ್ದೇನೆ. ಎಂದರೆ, ಇದಕ್ಕೆ ಕಾರಣಗಳನ್ನು ಊಹಿಸಿದರೆ, ಕೆಲವರಿಗೆ ನಿಜವಾದ ಸಂಶೋಧನೆ ಹಾಗೂ ಅಧ್ಯಯನಗಳಿಗಿಂತ, ಆ ಮೂಲಕ ಗಳಿಸುವ ಪದವಿಯ ಆವಶ್ಯಕತೆಯೇ ಪ್ರಧಾನವಾಗಿರುವುದನ್ನು ಗಮನಿಸಬಹುದು. ಕೆಲವೇ ಮಂದಿಗೆ ನಿಜವಾದ ಹೊಸತರ ಬಗೆಗಿನ ಜಿಜ್ಞಾಸೆ-ಕಾಳಜಿ-ತುಡಿತಗಳು ಇರುತ್ತವೆ ಎಂಬುದನ್ನು ಮರೆಯಬಾರದು. ಇನ್ನು ಕೆಲವರಲ್ಲಿ, ಪ್ರಪಂಚದಲ್ಲೇ ಯಾವನೂ ಹೇಳದ ವಿಚಾರಗಳನ್ನು ತಾನೇ ಮೊದಲ ಬಾರಿಗೆ ತಿಳಿಯ ಹೇಳುತ್ತಿದ್ದೇನೆ –ಎನ್ನುವ ಆತುರ ಹಾಗೂ ಭ್ರಮೆಗಳಿರುವುದೂ ಇದೆ.

ಸಾಮಾನ್ಯವಾಗಿ ಎಲ್ಲಾ ಸಂಶೋಧಕರ ಹಿಂದೆಯೂ ಮಾರ್ಗದರ್ಶಕರು ಇದ್ದೇ ಇರುತ್ತಾರೆ. ಇದು ಅಪೇಕ್ಷಣೀಯ. ಸಂಶೋಧನೆಯ ವಸ್ತುವಿನ ಆಯ್ಕೆಯಿಂದ ಹಿಡಿದು ಪರಿಪೂರ್ಣವಾದ ಸಂಪ್ರಬಂಧದ ರಚನೆ ಹಾಗೂ ಅದರ ಸಾದರಪಡಿಸುವಿಕೆಯ ವರೆಗೂ ಮಾರ್ಗದರ್ಶಕರು ಖಂಡಿತವಾಗಿಯೂ ಜೊತೆಯಲ್ಲೇ ಇರಬೇಕು. ಹೀಗಿದ್ದೂ, ಕೆಲವೊಂದು ಸಂದರ್ಭಗಳಲ್ಲಿ ಕಳಪೆ ಮಟ್ಟದ ಸಂಪ್ರಬಂಧಗಳು ಬರುವುದೂ ಇದೆ. ಮಾರ್ಗದರ್ಶಕರ ಹೆಸರಿನಲ್ಲೇ ಕೆಲವೊಂದು ನಾಣ್ಯಗಳು ಚಲಾವಣೆಯಾಗುವುದೂ ಇದೆ. ಇಂಥಾ ಸಂದರ್ಭಗಳನ್ನು ಕೆಲ ಮಂದಿ ಸಂಶೋಧಕರು ಉಪಯೋಗಿಸಿಕೊಳ್ಳುತ್ತಾರೆ. ನಾನು ನೋಡಿದವುಗಳಲ್ಲಿ ಇಂಥವೂ ಇದ್ದವೇ ಎಂಬ ಸಂದೇಹವಿದೆ. ಪ್ರಾಮಾಣಿಕವಾದ ಹಾಗೂ ವಸ್ತುಸ್ಥಿತಿಯ ಅನಿವಾರ್ಯ ಪರಿಸ್ಥಿತಿಗಳೇನಿದ್ದರೂ ನಿಭಾಯಿಸಿಕೊಳ್ಳಬಹುದು. ಆದರೆ ತನ್ನಿಚ್ಛೆಗಂತೂ ಮದ್ದೇ ಇಲ್ಲ. ಕೆಲ ಮಂದಿ ಸಂಶೋಧಕರಂತೂ ತಾವು ನಡೆದುದೇ ದಾರಿ ಎಂದುಕೊಳ್ಳುವ ಜಾಣರಿರುತ್ತಾರೆ. ತಮ್ಮ ಮಿತಿಗಳನ್ನೇ ಹೇಳುತ್ತಾ ಹೇಳುತ್ತಾ ಕೊನೆಗೂ ಏನನ್ನೂ ಮಾಡದೆ, ಅವರಿವರು ಹೇಳಿದ್ದನ್ನೇ ಹೇಳುತ್ತಾ ಅಚ್ಚುಕಟ್ಟಾಗಿ ಮುಗಿಸಿ ಕೈ ತೊಳೆದುಕೊಳ್ಳುವವರೂ ಇರುತ್ತಾರೆ.

ವಸ್ತು-ವಿಚಾರ :

ಸಂಪ್ರಬಂಧಗಳಿಗೆ ಸಂಬಂಧಿಸಿದಂತೆ ಧನಾತ್ಮಕ ಅಂಶಗಳೆಂದರೆ, ಮುಖ್ಯವಾಗಿ ಆಯ್ದುಕೊಳ್ಳುವ ವಸ್ತುವಿನ ಹಿನ್ನೆಲೆ-ಮುನ್ನೆಲೆಗಳ ಬಗೆಗೆ ವಿಸ್ತಾರವಾದ ಅಧ್ಯಯನಗಳು ಸಾಮಾನ್ಯವಾಗಿ ಕಂಡುಬರುವುದು. ಏನನ್ನೋ ಹೇಳಬೇಕೆನ್ನುವ ದೊಡ್ಡ ದೊಡ್ಡ ಆಕಾಂಕ್ಷೆಗಳು ಹಲವೆಡೆ ಕಂಡುಬರುತ್ತವಾದರೆ, ಇದಕ್ಕೆ ಪೂರಕವಾದ ಅಧ್ಯಯನಗಳನ್ನು ತಕ್ಕಮಟ್ಟಿಗೆ ಹುಡುಕಿ ಹೇಳಿಬಿಡುವಂಥವು ಇರುತ್ತವೆ. ಎಂದರೆ, ಹಲವಾರು ಪೂರಕ ಮಾಹಿತಿಗಳು ಇಲ್ಲಿ ವ್ಯವಸ್ಥಿತವಾಗಿ ಲಭ್ಯವಾಗಿ ಬಿಡುತ್ತವೆ. ಹೀಗೆ ಆಯ್ದುಕೊಂಡ ವಸ್ತುವನ್ನು ತಮಗೆ ಸರಿ ಕಂಡಂತೆ, ವಿಭಾಗ ಮಾಡಿಕೊಂಡು ಅಧ್ಯಯನವನ್ನು ನಡೆಸುವ ಪರಿಪಾಠವೂ ವ್ಯವಸ್ಥಿತವಾಗಿರುತ್ತದೆ.

ಸಾಮಾನ್ಯವಾಗಿ ಹೇಳಬೇಕೆಂದರೆ, ಅಪೂರ್ವವಾದ ವಸ್ತು-ವಿಚಾರಗಳ ಬಗ್ಗೆ ಅಲ್ಲೊಂದು ಇಲ್ಲೊಂದು ಎಂಬಂತೆ ಅಧ್ಯಯನಗಳು ನಡೆದಿವೆ ಎಂಬುದು ಸಂತೋಷದ ವಿಷಯ. ಎಂದರೆ, ಹೊಸ ದಿಗಂತವನ್ನು ತೋರಿಸುವಂಥವು, ಹೊಸ ಆಯಾಮವನ್ನು ಗುರುತಿಸುವಂಥವು ಕೆಲವು ನನ್ನ ಗಮನಕ್ಕೆ ಬಂದಿವೆ. ಉದಾಹರಣೆಗೆ ಕನ್ನಡ ಕವಿಗಳು ಕಂಡ ಪರ್ಯಾವರಣ, ಹರಕೆ-ಹಾರೈಕೆಗಳಿಗೆ ಸಂಬಂಧಿಸಿದ ಅಧ್ಯಯನ, ಸಾಹಿತ್ಯದಲ್ಲಿ ಬೇಟೆಯ ಕಲ್ಪನೆ ಇತ್ಯಾದಿಗಳು. ಇವುಗಳಲ್ಲಿ ಕೆಲವು ವೈಜ್ಞಾನಿಕ ಹಿನ್ನೆಲೆಯಲ್ಲಿ ನಡೆದ ಅಧ್ಯಯನಗಳಾಗಿ ಮೆರೆಯುತ್ತವೆ, ಇನ್ನು ಕೆಲವು ಜಾನಪದ ಸಂಸ್ಕೃತಿಯ ವಿಶ್ಲೇಷಣೆಯ ಹೊಸ ಶೋಧನೆಯೆನಿಸುತ್ತವೆ. ಹೆಚ್ಚಿನವುಗಳಲ್ಲೂ ಅನುಬಂಧವು ತುಂಬ ಉಪಯುಕ್ತವಾಗಿರುತ್ತದೆ ಎಂಬುದು ಗುರುತಿಸತಕ್ಕ ಅಂಶ.

ಸಂಶೋಧಕರು ಸಾಮಾನ್ಯವಾಗಿ ವಿಷಯದ ಆಯ್ಕೆಯಲ್ಲಿ ಮಿತಿಗಳನ್ನು ಹಾಕಿಕೊಳ್ಳುವುದು ಸೂಕ್ತ ಹಾಗೂ ಉಚಿತವೇ ಆಗಿದೆ. ಎಂದರೆ ಈ ಮಿತಿಯೊಳಗೆ ಸಮಗ್ರವಾದ ವಿಶ್ಲೇಷಣೆಗಳು ಸಿಗಬಹುದೆಂಬ ನಿರೀಕ್ಷೆ ಇರುತ್ತದೆ. ಆದರೆ, ಈ ಹಾಕಿಕೊಂಡ ಮಿತಿಯೊಳಗಿನಿಂದ ಆಚೀಚೆಗೆ ಸ್ವಲ್ಪವೂ ದೃಷ್ಟಿ ಹರಿಸದೇ ಇರುವ ಸಂದರ್ಭ ಹಾಗೂ ಉದಾಹರಣೆಗಳೂ ಇರುತ್ತವೆ. ಶಾಸನಗಳ ಅಧ್ಯಯನ, ಒಂದು ಕಾಲಾವಧಿಯ ಸಾಹಿತ್ಯದ ಅಧ್ಯಯನ, ಒಂದು ನಿರ್ದಿಷ್ಟ ಪ್ರಕಾರ ಭೇದದ ಅಧ್ಯಯನ –ಇತ್ಯಾದಿಗಳಲ್ಲಿ ಇಂಥಾ ಮಿತಿಗಳನ್ನು ಗುರುತಿಸಬಹುದು. ಸಂಶೋಧಕನು ತನ್ನ ಅಧ್ಯಯನದ ಸಂದರ್ಭದಲ್ಲಿ ಸ್ವಲ್ಪ ಆಚೆ ಈಚೆಗೆ ಇಣಿಕಿ ನೋಡಿದರೆ –ವಿಷಯದ ಇನ್ನಷ್ಟು ಆಳ-ವಿಸ್ತಾರಗಳನ್ನು ಅರಿತುಕೊಳ್ಳಲು ಸಹಕಾರಿಯಾದೀತು, ಹಾಗೂ ತನ್ನ ಮಿತಿಗಳನ್ನು ಹೇಳುವುದರೊಂದಿಗೆ, ಇನ್ನು ಎಲ್ಲೆಲ್ಲಿ ಎಷ್ಟೆಷ್ಟು ವಿಚಾರಗಳ ಬಗ್ಗೆ ಬೆಳಕು ಹರಿಯಿಸಬಹುದೆಂಬುದನ್ನು ಹೇಳಿಕೊಳ್ಳಲೇಬೇಕಾಗುತ್ತದೆ. ಇಂಥಾ ವಿಚಾರಗಳುಳ್ಳ ಕೆಲವು ಪ್ರಬಂಧಗಳನ್ನು ನಾನು ಗಮನಿಸಿದ್ದೇನೆ.

ಇತರ ವಿಚಾರಗಳು :

ಸಂಪ್ರಬಂಧಗಳಲ್ಲಿ ಕಂಡುಬರುವ ಸಾಮಾನ್ಯವಾದ ಕೊರತೆ/ದೋಷಗಳನ್ನು ನಾವು ಹೇಳಲೇಬೇಕು. ಮೂಲಭೂತವಾಗಿ, ನೋಡುವಾಗ ಸಂಶೋಧನ ಪ್ರಬಂಧವು ಓದುಗರಿಗೆ ಹೊಸ ಹೊಸ ವಿಚಾರಗಳನ್ನು ಅಚ್ಚುಕಟ್ಟಾಗಿ, ಸರಳವಾಗಿ ಅರ್ಥವಾಗುವಂತೆ ಹೇಳಲೇಬೇಕಾಗುತ್ತದೆ. ಆದರೆ ವಿಪರ್ಯಾಸವೆಂದರೆ, ಕೆಲಮಂದಿ ಸಂಶೋಧಕರಿಗೆ ಸಂಶೋಧನಾ ಬರವಣಿಗೆಯು ಸರಳವಾಗಿ, ನೇರವಾಗಿ ಹಾಗೂ ಸ್ಪಷ್ಟವಾಗಿ ಇರಬೇಕೆಂಬ ತೀರಾ ಪ್ರಾಥಮಿಕ

ವೆನಿಸುವ ತಿಳಿವಳಿಕೆಯೇ ಇರುವುದಿಲ್ಲ. ಇವಕ್ಕೆ ಒಂದು ಮುಖ್ಯ ಕಾರಣವೆಂದರೆ ಅವರು ಬಳಸುವ ಭಾಷೆಯ ರೀತಿ. ಇಲ್ಲೆಲ್ಲ ಈಚಿನ ವಿಮರ್ಶಾ ಶೈಲಿಯ ದಟ್ಟವಾದ ಮತ್ತು ಕೆಟ್ಟದಾದ ಪ್ರಭಾವಗಳನ್ನು ಗುರುತಿಸಬಹುದಾಗಿದೆ. ಸಂಶೋಧನೆಯು ಬೇರೆ, ವಿಮರ್ಶೆಯು ಬೇರೆ; ಸಂಶೋಧನೆಯೊಳಗೆ ವಿಮರ್ಶೆಯಿರಬೇಕೇ ಹೊರತಾಗಿ ವಿಮರ್ಶೆಯೇ ಸಂಶೋಧನೆಯೆನಿಸುವುದಿಲ್ಲ. ತಾವು ಹೇಳುವ ವಿಚಾರಗಳನ್ನು ವಿಮರ್ಶೆಯ ಪರಿಭಾಷೆಯಲ್ಲಿ ತಿಳಿಸಿದರೇನೇ ಅದು ಗಂಭೀರವಾಗಿಯೂ ಪ್ರೌಢವಾಗಿಯೂ ಇರುತ್ತದೆಯೆನ್ನುವ ಭ್ರಮೆಯು ಕೆಲವರಲ್ಲಿ ಕಾಣಿಸಿದರೆ, ಇನ್ನು ಕೆಲವರಿಗೆ ಈ ವಿಚಾರವು ತಿಳಿದೇ ಇರುವುದಿಲ್ಲ. ತಿಳಿಯಬೇಕೆನ್ನುವ ಎಚ್ಚರವೂ ಇರುವುದಿಲ್ಲ. ಹೀಗಾಗಿ, ಅಸ್ಪಷ್ಟವಾದ, ಅಪಕ್ವವಾದ ಅಬದ್ಧವಾದ ಗೊಂದಲದ ಮಾತುಗಳೇ ಸಂಪ್ರಬಂಧದೊಳಗೆ ಮೆರೆಯುತ್ತವೆ. ಇದರಿಂದಾಗಿ ಇಂಥಾ ಸಂಶೋಧನಾ ರೀತಿಯು ಬರೀ ಬೂಟಾಟಿಕೆಯಂತೆ ಅರ್ಥಹೀನವಾಗಿ ಬಿಡುತ್ತದೆ. ವಾಕ್ಯರಚನೆಯಲ್ಲಿ ಎಚ್ಚರವಿಲ್ಲದ ಅನರ್ಥ ಅಪಾರ್ಥಗಳಿಗೆ ಎಡೆಮಾಡಿಕೊಡುತ್ತದೆ.

ತೀರಾ ಸಾಮಾನ್ಯವಾದ ವಿಚಾರಗಳನ್ನು ಹೇಳುವಾಗಲೂ ಬೇರೆಯವರ ಮಾತುಗಳ ಉದ್ಧೃತಗಳನ್ನು ಬಳಸಿಕೊಂಡು ಹೇಳುವುದು ಕೆಲವರಲ್ಲಿ ಕಂಡುಬರುತ್ತದೆ. ಹಾಗೆಯೇ, ಇಂಗ್ಲಿಷ್ ಮುಂತಾದ ಪರಭಾಷೆಯ ಪುಸ್ತಕಗಳಿಂದ ಆಯ್ದುವನ್ನೇ ಉದ್ಧೃತಗಳಲ್ಲಿ ಬಳಸುವುದೂ ಇರುತ್ತವೆ. ಕನ್ನಡದ ಪದಗಳಿಗೆ ಸಾಮಾನ್ಯವಾಗಿ ಆಂಗ್ಲ ಭಾಷೆಯಲ್ಲಿ ಸಂವಾದಿಯಾಗಿ ಇಂಥಿಂಥಾ ಪದಗಳನ್ನು ಬಳಸುತ್ತಾರೆ ಎಂದು ಹೇಳಿ, ನಂತರ ಕನ್ನಡದ ಪದಗಳಿಗೆ ವಿವರಣೆಯನ್ನು ಕೊಡುವುದು ಹೆಚ್ಚಾಗಿ ಕಂಡುಬರುತ್ತದೆ. ಇದು ಇಂಗ್ಲಿಷಿನ ಮೇಲಿರುವ ಅಂಧವಾದ ವ್ಯಾಮೋಹವೇ ಗುಲಾಮಗಿರಿಯೇ ಎಂಬುದನ್ನು ಬಲ್ಲವರು ತಿಳಿಸಬೇಕು. ಆದರೆ, ಇದೇ ವಿಚಾರವನ್ನು ಸಂಸ್ಕೃತದ ವಿಷಯಕ್ಕೆ ತರುವುದಿಲ್ಲ. ಉದಾಹರಣೆಗೆ ವಿಮರ್ಶೆ ಎಂಬ ಪದಕ್ಕೆ ಆಂಗ್ಲದಲ್ಲಿರುವ ಪದ, ಅದರ ವಿವರಣೆ, ವಿಶ್ಲೇಷಣೆಗಳಿಗೆ, ಅರ್ಥ-ಜಿಜ್ಞಾಸೆಗಳಿಗೆ ಪ್ರಾಧಾನ್ಯವನ್ನು ಕೊಡುತ್ತಾರೆಯೇ ಹೊರತಾಗಿ ಮೂಲಭೂತವಾಗಿ ಸಂಸ್ಕೃತದ ಈ ಪದದ ಜಿಜ್ಞಾಸೆಯನ್ನು ನಡೆಸಬೇಕೆಂಬ ಕನಿಷ್ಠ ತಿಳಿವಳಿಕೆಯೇ ಕಾಣಿಸುವುದಿಲ್ಲ. ಹೀಗೆಯೇ ಎಷ್ಟೆಷ್ಟೋ ವಿಚಾರಗಳನ್ನು ಉದಾಹರಿಸಬಹುದು. ಕನ್ನಡವನ್ನು ಆಂಗ್ಲ ಪದಗಳ ಮೂಲಕ ವಿವರಿಸಿದರೆ, ಜಿಜ್ಞಾಸೆ ನಡೆಸಿದರೆ, ಅದು ವೈಜ್ಞಾನಿಕವೆಂದೇನೂ ಆಗುವುದಿಲ್ಲ.

ಕೆಲವು ಬರವಣಿಗೆಗಳಲ್ಲಿ ತಾವು ಹೇಳುವ ವಿಚಾರಗಳು ತುಂಬ ಮಹತ್ವದವು ಎಂಬಂತೆ ಇರುತ್ತವೆ. ಹೀಗಾಗಿ ವಾಕ್ಯರಚನೆಗಳಲ್ಲೇ ಅಂಥಾ ಪ್ರಯತ್ನಗಳನ್ನು ಗುರುತಿಸಬಹುದು. ಸುಮ್ಮಸುಮ್ಮಗೆ ಕೆಲವು ಪದಗಳನ್ನು ಕಂಸಗಳೊಳಗೆ ಕೊಡುವುದು –ಎಂದರೆ, ಆ ಪದಕ್ಕೆ ನಿಜವಾದ ಅರ್ಥವಲ್ಲದೆ ಬೇರೇನೋ ವಿಶೇಷ ಅರ್ಥಗಳೂ ಇವೆ ಎಂಬ ಭಾವ ಅವರದ್ದು. ಇದು ಏನೆಂಬುದು ಬರೆದಾತನಿಗೇ ಗೊತ್ತು ಹೊರತಾಗಿ ಇತರರಿಗೂ ಗೊತ್ತಾಗಬೇಕಾದರೆ ಸ್ಪಷ್ಟವಾಗಿ ಅದರ ಇನ್ನಿತರ ಅರ್ಥಗಳನ್ನೂ ಅಲ್ಲಲ್ಲೇ ಕೊಡಬೇಕಾಗುತ್ತದೆ. ಇವು ಸಂಶೋಧನಾ ದಾರಿಯ ಅಡಿಗಲ್ಲುಗಳೂ ಹೌದು. ಈ ಸಾಮಾನ್ಯ ಜ್ಞಾನವನ್ನು ಸಂಶೋಧಕನು ತಿಳಿದಿರಲೇ ಬೇಕಾಗುತ್ತದೆ. ಸಾಮಾನ್ಯವಾಗಿ ಇಂಥ ಬರವಣಿಗೆಗಳಲ್ಲಿ ಸುತ್ತು ಬಳಕೆಯ, ಖಚಿತತೆಯಿಲ್ಲದ,

ಎಡಬಿಡಂಗಿ ಮಾತುಗಳು ಕ್ವಚಿತ್ತಾಗಿರುತ್ತವೆ. ಆಂಗ್ಲ ಪದಗಳ ರೀತಿಯಲ್ಲೇ ಕನ್ನಡದ ಪದಗಳನ್ನು ಬಳಸುವುದು, ಟಂಕಿಸುವುದು ಇತ್ಯಾದಿಗಳು ತೀರಾ ಸಾಮಾನ್ಯವಾಗಿದೆ. ಉದಾ : ಸಮಾಜೋಧಾರ್ಮಿಕ, ಸಮಾಜೋಆರ್ಥಿಕ ಇತ್ಯಾದಿ ಕನ್ನಡದ ಜಾಯಮಾನದ್ದಲ್ಲದ, ಕನ್ನಡಕ್ಕೆ ಒಗ್ಗದ ರೀತಿಯ, ಎಷ್ಟೋ ಸರಳವಾಗಿ ಹೇಳಬಹುದಾದ ದಾರಿಯು ಇರುವಾಗ ಇದು ಅಗತ್ಯವೇ?— ಎನ್ನಿಸುತ್ತದೆ. ಬೇರೆಯ ಧೋರಣೆಗಳನ್ನು ಕನ್ನಡಕ್ಕೆ ತರುವಾಗ ಎಡವಟ್ಟು ಸಂಭವಿಸುವುದು. ಹೀಗೆ ಇನ್ನೆಷ್ಟೋ ಉದಾಹರಣೆಗಳನ್ನು ಕೊಡಬಹುದು. ಮೂಲದ ಬೇರಾವುದೋ ಪಾರಿಭಾಷಿಕ ಪದಗಳನ್ನು ಬಳಸಿಕೊಂಡು, ಅವುಗಳ ಸರಿಯಾದ ಜ್ಞಾನವೂ ಇಲ್ಲದ ವಿಕೃತವಾದ ಅನುವಾದಗಳೇ ಇಲ್ಲೆಲ್ಲ ಹೆಚ್ಚಾಗಿ ಕಾಣಸುತ್ತವೆ. ಮೂಲದ ಭಾವವನ್ನು ಕನ್ನಡದ ಜಾಯಮಾನದಲ್ಲಿ ಹೇಳಿದರೇನೇ ಅದು ಸುಭಗವೂ ಚಂದವೂ ಆಗುತ್ತದೆ.

ಇದನ್ನು ಇನ್ನಷ್ಟು ಸ್ಪಷ್ಟಪಡಿಸುವುದಿದ್ದರೆ, ಪಾಶ್ಚಾತ್ಯರಿಂದಲೇ ಬಂದುದೆಂದು ಹೇಳುವ ಎಷ್ಟೆಷ್ಟೋ ಸಿದ್ಧಾಂತಗಳು, ಭಾರತದಲ್ಲಿ ಎಷ್ಟೋ ಶತಮಾನಗಳ ಹಿಂದೆಯೇ ಹೇಳಲಾಗಿತ್ತೆಂಬ ಅರಿವೇ ಇಲ್ಲದ ಮಹಾಸಂಶೋಧನೆಗಳು ನಮ್ಮಲ್ಲಿವೆ. ಹೀಗಾಗಿಯೇ, ಇಂಥವುಗಳನ್ನು ನೋಡಿದಾಗ, ಇದನ್ನು ಸರಿಯಾದ ಕನ್ನಡದಲ್ಲೋ ಅಥವಾ ಪೂರ್ತಿಯಾಗಿ ಇಂಗ್ಲಿಷಿನಲ್ಲೋ ಬರೆದಾಗ ಬಂಡವಾಳವು ಹೊರಗೆ ಬರುತ್ತದೆ ಎಂದು ಅನ್ನಿಸುತ್ತದೆ. ಇದರ ಹಿನ್ನೆಲೆಯಲ್ಲಿ ನನಗನ್ನಿಸುವುದು ಇಷ್ಟು– ಯಾವ ವಿಚಾರ-ಸಂಸ್ಕೃತಿಯನ್ನು ನಾವು ಉದ್ಧರಿಸುತ್ತೇವೋ ಅದನ್ನು ನಾವು ಮೆಚ್ಚಿಕೊಂಡಿದ್ದೇವೆ ಎಂದಷ್ಟೇ ಅರ್ಥ. ಅದುವೇ ಉತ್ತಮವೆಂದೋ, ನಿಜವಾದದ್ದೆಂದೋ ಅರ್ಥವತ್ತಾದ್ದೆಂದೋ ಅಲ್ಲ. ಸಂಶೋಧನೆಯ ದಾರಿಯಲ್ಲಿ, ನಮಗೆ ತಿಳಿಯದೇ ಇರುವ ವಿಚಾರಗಳೇ ಪ್ರಪಂಚದಲ್ಲಿ ಇಲ್ಲವೆಂಬ ಧೋರಣೆಯು ಸರ್ವಥಾ ಸಲ್ಲದು. ತಿಳಿಯದುದನ್ನು ತಿಳಿದಿಲ್ಲ ಎನ್ನುವುದೇ ಸಾಧು, ಚಂದ. ಹಾಗೆಯೇ, ಬರೆದುದು ಬರೆದವನಿಗೊಬ್ಬನಿಗೇ ತಿಳಿಯುವುದಾದಲ್ಲಿ ಆತನು ಬರೆಯಬೇಕಾದ್ದೇನೂ ಇಲ್ಲವಲ್ಲ?

ಕೆಲವರಿಗಂತೂ ಸಂಸ್ಕೃತ ಭಾಷೆಯ ಬಗ್ಗೆ ಅವಜ್ಞೆ, ಅಸಡ್ಡೆ, ಒಂದು ರೀತಿಯ ತಿರಸ್ಕಾರವೂ ಇರುತ್ತದೆ. ಸಂಸ್ಕೃತವೆಂದರೆ ಬ್ರಾಹ್ಮಣರ ಭಾಷೆ, ವೈದಿಕ ಭಾಷೆ ಎಂಬುದಾಗಿಯೇ ಗಟ್ಟಿಯಾಗಿ ನಂಬಿಕೊಂಡವರಿದ್ದಾರೆ. ಇದರಿಂದಾಗಿ ಭಾಷೆ-ಸಂಸ್ಕೃತಿಗಳನ್ನು ಈ ಹಿನ್ನೆಲೆಯಲ್ಲೇ ನೋಡುತ್ತಾ ವಿಚಾರಗಳನ್ನು ಅಡಿಮೇಲಾಗಿ ಚಿತ್ರಿಸುವುದು ಕಂಡುಬರುತ್ತದೆ. ನಿಜ ಹೇಳಬೇಕೆಂದರೆ, ಸಂಸ್ಕೃತದ ಬಗ್ಗೆ ಸರಿಯಾದ ಜ್ಞಾನವಾಗಲೀ, ಅನುಭವವಾಗಲೀ ಇಲ್ಲದೇ ಇರುವುದೇ ಈ ರೀತಿಯ ಕಲ್ಪನೆಗಳಿಗೆ ಕಾರಣವಾಗಿದೆ. ಕೆಲವರಲ್ಲಂತೂ ಅದು ಕ್ಲಿಷ್ಟವಾದುದೆಂಬುದೊಂದೇ ಕಾರಣ. ಆಂಗ್ಲ ವಿದ್ಯಾಭ್ಯಾಸದ ಕೆಟ್ಟ ಪರಿಣಾಮಗಳಲ್ಲಿ ಇದೂ ಒಂದು ಎನ್ನುವುದೂ ಸತ್ಯವೇ. ಹೆಚ್ಚೇಕೆ? ಕನ್ನಡದ ಸಂಶೋಧಕರಲ್ಲಿ ಕೆಲವರಿಗೆ ಕನ್ನಡ ಭಾಷೆಯ ಬಗೆಗಿನ ಪ್ರಾಥಮಿಕ ತಿಳಿವಳಿಕೆಯೂ ಇಲ್ಲದಂಥ ರಚನೆಗಳನ್ನು ನಾನು ನೋಡಿದ್ದೇನೆ. ವಿಪರ್ಯಾಸವೆಂದರೆ, ಇಂಥಾ ಸಂಶೋಧಕರು ಪಾರಿಭಾಷಿಕ ಪದಗಳನ್ನು ಆಂಗ್ಲ ಭಾಷೆಯನ್ನು ಬಿಟ್ಟರೆ ಟಂಕಿಸುವುದು ಸಂಸ್ಕೃತದಲ್ಲೇ!

ಈಚೆಗಂತೂ ಕನ್ನಡದಲ್ಲಿ ವಾಕ್ಯರಚನೆಯನ್ನು ಮಾಡುವಾಗ ಬಹಳ ಮಂದಿ ವಿದ್ವಾಂಸರೂ, ಸಂಶೋಧಕರೂ, ಪ್ರಥಮಾ ವಿಭಕ್ತಿ ಪ್ರತ್ಯಯವನ್ನೇ ಬಿಟ್ಟುಬಿಡುತ್ತಾರೆ. ಇದು ಕೆಲವರಿಗೆ

ಮೋಜು, ಕೆಲವರಿಗೆ ಸೋಮಾರಿತನ, ಕೆಲವರಿಗೆ ಇದು ಗೊತ್ತಿಲ್ಲದ ವಿಚಾರ. ಇದರಿಂದಾಗಿ ಉಂಟಾಗುವ ಅಪಾರ್ಥ, ಅನರ್ಥ ಹಾಗೂ ಅರ್ಥಹೀನತೆಗಳು ಭಾಷೆಗೇ ಅಪಾಯಕಾರಿಯೆನ್ನುವುದನ್ನು ಯೋಚಿಸುವುದೇ ಇಲ್ಲ. ನನ್ನ ದೃಷ್ಟಿಯಲ್ಲಿ ಇದು ಅಕ್ಷಮ್ಯವೇ ಸರಿ. ಹಾಗೆಯೇ, ಪ್ರಬಂಧಗಳಲ್ಲಿ ಕಂಡುಬರುವ (ಕಾಗುಣತ) ಅಕ್ಷರ ತಪ್ಪುಗಳು. ಇಂದಿನ ದಿನದಲ್ಲಿ ಗಣಕಯಂತ್ರವನ್ನು ಬಳಸಿಕೊಂಡು ಅಚ್ಚಾಗುವ ಸಂಪ್ರಬಂಧಗಳಲ್ಲಿನ ತಪ್ಪುಗಳು ಅನಿವಾರ್ಯವೇನಲ್ಲ. ಇವನ್ನೆಲ್ಲಾ ಅಲ್ಲಲ್ಲೇ ಸರಿಪಡಿಸಿಕೊಳ್ಳಲು ಖಂಡಿತವಾಗಿಯೂ ಸಾಧ್ಯವಿದೆ. ಹಾಗೆ ಮಾಡದಿದ್ದರೆ ಇದೂ ಅಕ್ಷಮ್ಯವೇ ಆಗುತ್ತದೆ. ಉದ್ಧೃತಗಳ ಬಗ್ಗೆ ಬರುವಾಗ, ಕೆಲ ಮಂದಿ ಬುದ್ಧಿವಂತರಾದ ಸಂಶೋಧಕರುಗಳ ಬರವಣಿಗೆಗಳಲ್ಲಿ ಯಾವುದು ಉದ್ಧೃತ, (ಎಲ್ಲಿಂದ ಎಲ್ಲಿಯ ವರೆಗೆ) ಯಾವುದು ಆತನ ಸ್ವಂತದ್ದೆಂಬುದು ಗೊತ್ತಾಗದ ರೀತಿಯಲ್ಲಿರುತ್ತವೆ. ಹಾಗೆಯೇ ಸಂಶೋಧನಾ ವಿಷಯದ ಬಗೆಗೆ ಈ ವರೆಗೆ ಎಷ್ಟು ಕೃತಿಗಳು ಬಂದಿವೆ ಎಂಬುದರ ಬಗೆಗೆ ಅಸಡ್ಡೆಯನ್ನು ತೋರುವಂಥವೂ ಕೆಲವಿವೆ. ಬೇರೆ ಆಕರಗಳನ್ನು ನೋಡದೆಯೇ ರಚಿತವಾದಂಥವೂ ಅಲ್ಲೊಂದು ಇಲ್ಲೊಂದು ಇವೆ.

ಕನ್ನಡದ ಪಕ್ಕದ ಭಾಷೆ-ಸಂಸ್ಕೃತಿಗಳಲ್ಲಿ ನಡೆಯುವ ಸಂಶೋಧನೆಗಳೂ ತಕ್ಕಷ್ಟು ಬರುತ್ತಿವೆ. ಉದಾಹರಣೆಗೆ ದಕ್ಷಿಣ ಕನ್ನಡದ ತುಳುನಾಡಿನಲ್ಲಿ ತುಳು ಭಾಷೆ ಹಾಗೂ ಸಂಸ್ಕೃತಿಗಳ ಬಗ್ಗೆ ಕೆಲವು ಸಂಶೋಧನೆಗಳನ್ನು ನೋಡಿದ್ದೇನೆ. ಹಾಗೆಯೇ ಕನ್ನಡ ನಾಡಿನ ಗಡಿಪ್ರದೇಶಗಳಾದ ತಮಿಳುನಾಡು, ಕೇರಳ, ಆಂಧ್ರ, ಮಹಾರಾಷ್ಟ್ರ ಇಲ್ಲೆಲ್ಲ ಮಿಶ್ರಭಾಷಾ-ಸಂಸ್ಕೃತಿ ಪ್ರಭೇದಗಳು ಕಂಡುಬರಬಹುದು. ಈ ಬಗೆಯ ಸಂಶೋಧನೆಗೆ ಹೆಚ್ಚಿನ ಅಧ್ಯಯನ ಹಾಗೂ ತಿಳಿವಳಿಕೆಯ ಅಗತ್ಯವಿರುತ್ತದೆ. ಉದಾಹರಿಸುವುದಿದ್ದರೆ, ತುಳುನಾಡಿನಲ್ಲಿರುವ ನುಡಿಗಟ್ಟುಗಳು, ಆಯಾ ಭಾಷಾಪ್ರಯೋಗ, ಜಾಯಮಾನ ಇತ್ಯಾದಿಗಳು, ದಕ್ಷಿಣ ಕನ್ನಡದಲ್ಲಿರುವ ತುಳು ಭಾಷೆಯನ್ನಾಡುವವರಿಗೆ ತುಳು-ಕನ್ನಡಗಳೆರಡರ ಬಳಕೆಯೂ ಇರುತ್ತವೆ. ಅಲ್ಲೆಲ್ಲಾ ತುಳುವಿನಲ್ಲಿರುವ ಹಲವಾರು ನುಡಿಗಟ್ಟು ಇತ್ಯಾದಿ ಪ್ರಯೋಗಗಳನ್ನು ಅಲ್ಲಿನ ಕನ್ನಡದಲ್ಲೂ ಹಾಗೆಯೇ ಬಳಸಿಕೊಳ್ಳುತ್ತಾರೆ. ಇಂಥವು ತುಳುವನ್ನು ತಿಳಿಯದ ಇತರ ಕನ್ನಡಿಗರನ್ನು ಸಮರ್ಪಕವಾಗಿ ಸೇರದೆಯೇ ಹೋಗಬಹುದು. ಹಾಗೆಯೇ ಗಡಿನಾಡಿನಲ್ಲಿರುವ ಮಲಯಾಳಂ, ತಮಿಳು, ತೆಲುಗು, ಮರಾಠೀ ಇತ್ಯಾದಿಗಳೂ. ಈ ಬಗ್ಗೆ ವಿವರಣೆಗಳು ಖಂಡಿತವಾಗಿಯೂ ಅಪೇಕ್ಷಣೀಯವೆನಿಸುತ್ತವೆ.

ಜಾನಪದ ಮುಂತಾದ ವಿಚಾರಗಳಲ್ಲಿ ಕೆಲವೆಡೆ ವಿಜ್ಞಾನಕ್ಕೂ ಮೀರಿದ ಸತ್ಯ-ವಿಚಾರಗಳಿರುತ್ತವೆ ಎಂಬುದನ್ನು ಹೇಳಲು ಸಂಶೋಧಕರು ಭಯವನ್ನೋ ಸಂಕೋಚವನ್ನೋ ಪಡುತ್ತಾರೆ. ಹಾಗೆ ಭಯಪಡಬೇಕಾದುದೇನೂ ಇಲ್ಲ. ಯಾಕೆಂದರೆ, ಎಲ್ಲವನ್ನೂ ವೈಜ್ಞಾನಿಕವೆಂಬ ಕನ್ನಡಕದ ಮೂಲಕವೇ ನೋಡುವುದಕ್ಕಾಗುವುದಿಲ್ಲ, ಮಾತ್ರವಲ್ಲ ಹಾಗೆ ನೋಡಬೇಕಾದ ಅಗತ್ಯವೂ ಇರುವುದಿಲ್ಲ. ಎಂದರೆ, ಎಲ್ಲವೂ ವಿಜ್ಞಾನದ ನಿಕಷದೊಳಗೇ ತೀರ್ಮಾನವಾಗಬೇಕಾದ್ದೇನೂ ಇಲ್ಲ. ಎಷ್ಟೋ ನಮ್ಮ ಆಚಾರ-ವಿಚಾರಗಳಲ್ಲಿ ವಿಜ್ಞಾನಕ್ಕೂ ನಿಲುಕದ ವಿಶೇಷತೆಗಳಿವೆ ಎಂಬುದನ್ನು ಮೊದಲು ಅರ್ಥವಿಸಿಕೊಂಡು ಅನಂತರ ಬೇರೆಯವರಿಗೆ ತಿಳಿಯ ಹೇಳಬೇಕಾದವು ಎಷ್ಟೋ ಇವೆ.

ಸಂಶೋಧನೆಗೆ ಆಯ್ದುಕೊಳ್ಳುವ ವಸ್ತುವು ತೆಳ್ಳಗಿನದಾದರೆ ಅದರ ಸಂಶೋಧನಾ ದಾರಿ, ಬರವಣಿಗೆ, ಸಂಪ್ರಬಂಧದ ಒಟ್ಟು ಶಿಲ್ಪವೂ ತೆಳ್ಳಗಾಗಿಬಿಡುತ್ತವೆ. ಸಂಕೀರ್ಣವಾದ, ಆಳವಿಸ್ತಾರಗಳಿರುವ ವಸ್ತುವಾದರೂ, ಅದರ ವಿಷಯ ಸಂಗ್ರಹಣೆ, ಬರವಣಿಗೆಯ ರೀತಿ, ವ್ಯವಸ್ಥೆ ಮುಂತಾದ ಘಟಕಗಳಲ್ಲಿನ ಸಂಶೋಧನಾ ಚಾಕಚಕ್ಯತೆಗಳಿಂದಾಗಿ ಅದರ ಮಹತ್ವ, ಮೌಲ್ಯಗಳು ನಿರ್ಣಯಿತವಾಗುತ್ತವೆ. ಗಣಕಯಂತ್ರವು ಬಂದ ಹೊಸದರಲ್ಲಿ ಸಾಹಿತ್ಯದಲ್ಲಿ ಸಂಶೋಧನೆ ಮುಂತಾದವುಗಳಲ್ಲಿ ಅದನ್ನು ಬಳಸಿಕೊಂಡರೆಂಬುದೇ ದೊಡ್ಡ ವಿಷಯವಾಗಿತ್ತು. ಬರಬರುತ್ತಾ ಅದರ ನಿಜಬಣ್ಣ ವಸ್ತುಸ್ಥಿತಿಗಳು ಸಾಮಾನ್ಯರಿಗೂ ಗೊತ್ತಾಗಿಬಿಟ್ಟಿತು. ಇದರಿಂದಾಗಿ ಸಂಶೋಧನೆಯೆಂದರೆ ಇಷ್ಟೇನೇ ಎಂಬಂತೆ ಎಲ್ಲರೂ ಚಿಂತಿಸುವಂತೆ ಮಾಡಿತ್ತು. ಉತ್ತಮ ಹಾಗೂ ಗುಣಮಟ್ಟದ ಸಂಶೋಧನೆಯು ಎಂದೂ ಹಳತಾಗುವುದಿಲ್ಲ. ತೆಳ್ಳಗಿನದ್ದೂ ಆಗುವುದಿಲ್ಲ. ನಡೆದ ದಾರಿಯಷ್ಟೇ ಹಳತಾಗಿರಬಹುದಷ್ಟೇ. ಹಾಗೆಯೇ, ಒಂದಷ್ಟು ಹೊಸ ಪದಪುಂಜಗಳು, ಹೊಸ ಭಾಷಾ ಪ್ರಯೋಗ, ರೀತಿಗಳಿಂದಲಷ್ಟೇ ಸಂಶೋಧನೆಯು ತೀರಾ ಹೊಸದೆಂದೂ ಮೌಲ್ಯವುಳ್ಳದ್ದೆಂದೂ ಆಗಿಬಿಡುವುದಿಲ್ಲ. ಇಲ್ಲೂ, ಸಂಶೋಧನೆಯ ವಸ್ತು-ವಿಚಾರದ ಆಳ, ಬರವಣಿಗೆಯ ರೀತಿ – ಇತ್ಯಾದಿಗಳೇ ಅದರ ಗುಣಮಟ್ಟವನ್ನು ನಿರ್ಧರಿಸುತ್ತವೆ. ಸುಮಾರು ಎರಡು ದಶಕಗಳ ಹಿಂದೆ ನಾನು ನಡೆಸಿದ ಸಂಶೋಧನೆ-ಅಧ್ಯಯನಗಳ ಬಗ್ಗೆ ಯಾವತ್ತೇ ಆಗಲಿ ಯೋಚಿಸುವಾಗಲೆಲ್ಲ ನನ್ನೊಳಗೆ ಏನೋ ಅವ್ಯಕ್ತವಾದ ಭಯವೊಂದು ಕಂಡೇ ಕಾಣಿಸಿಕೊಳ್ಳುತ್ತದೆ; ಇನ್ನೂ ಚೆನ್ನಾಗಿಯೂ ಅರ್ಥವತ್ತಾಗಿಯೂ ಮಾಡಿರಬಹುದಾಗಿತ್ತಲ್ಲವೇ ಎಂದು.

ಮುಕ್ತಾಯದ ಮೊದಲು :

ಕನ್ನಡದಲ್ಲಿ ಸಂಶೋಧನ ಪ್ರಬಂಧಗಳೆಷ್ಟೋ ಅಚ್ಚಾಗಿ ಪುಸ್ತಕ ರೂಪದಲ್ಲಿ ಪ್ರಕಟಣೆಗೊಂಡಿವೆ ಎಂಬುದು ನಮಗೆಲ್ಲಾ ಚೆನ್ನಾಗಿ ಗೊತ್ತು. ಆದರೆ, ಇನ್ನೂ ಎಷ್ಟೋ ಕೃತಿಗಳು, ಅಮೂಲ್ಯವಾದಂಥ ರಚನೆಗಳು ವಿಶ್ವವಿದ್ಯಾನಿಲಯಗಳಲ್ಲೇ ಧೂಳು ತಿನ್ನುತ್ತಾ ಬಿದ್ದಿವೆ ಎಂಬುದೂ ನಮ್ಮಲ್ಲಿ ಹಲವರಿಗೆ ಗೊತ್ತಿದೆ. ಇದು ನಿಜಕ್ಕೂ ಕನ್ನಡದ ಸಂಶೋಧನ ಕ್ಷೇತ್ರದ ದುರಂತವೆಂದೇ ಹೇಳಬೇಕು. ಇದಕ್ಕಾಗಿ ಎಷ್ಟೋ ಸಮಯಗಳಿಂದ ಶ್ರಮವಹಿಸಿ, ಕಷ್ಟಪಟ್ಟು, ಸಂಶೋಧಕರು ರಚಿಸಿದ, ಎಷ್ಟೆಷ್ಟೋ ಅಮೂಲ್ಯವಾದ ವಿಚಾರಗಳಿಂದ ಆತನೇನೋ ಪದವಿಯನ್ನು ಗಳಿಸಿ ಅದರ ಪ್ರಯೋಜನವನ್ನು ಪಡಿದಿರಬಹುದೆಂದೇ ಇಟ್ಟುಕೊಳ್ಳೋಣ. ಇದಕ್ಕಾಗಿಯೇ ವಿಶ್ವವಿದ್ಯಾನಿಲಯ ಹಾಗೂ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ಮೊದಲಾದುವು ಎಷ್ಟೋ ಖರ್ಚು ವೆಚ್ಚ ಮಾಡಿರುತ್ತವೆ – ಸಾಮಾನ್ಯವಾಗಿ ಈ ವಿಚಾರದ ಕುರಿತು ಯಾರೂ ಅಷ್ಟಾಗಿ ಯೋಚಿಸುವುದಿಲ್ಲ. ಸಾರ್ವಜನಿಕ ಹಣವು ಸದುಪಯೋಗವಾಗದೇ, ಸಾರ್ವಜನಿಕರಿಗೆ ಪ್ರಯೋಜನವೂ ದೊರಕದೇ ಇರುವುದು ಇಂದಿನ ಕ್ರೂರವಾದ ಸತ್ಯ. ಕನ್ನಡಕ್ಕೆ ಸಂಬಂಧಿಸಿದಂತೆ ಎಲ್ಲೆಲ್ಲಿ ಎಷ್ಟೆಷ್ಟು ಕೆಲಸಗಳು ನಡೆದಿವೆ ಎಂಬ ಪರಿಪೂರ್ಣ ಮಾಹಿತಿಯು ಸರಿಯಾಗಿ ಇಂದಿಗೂ ಲಭ್ಯವಿಲ್ಲವೆಂಬುದೂ ಅಷ್ಟೇ ಸತ್ಯ.

■ ಡಾ. ಹರಿಕೃಷ್ಣ ಭರಣ್ಯ, ಮುಖ್ಯಸ್ಥರು, ಕನ್ನಡ ವಿಭಾಗ, ಮದುರೈ ಕಾಮರಾಜ ವಿಶ್ವವಿದ್ಯಾನಿಲಯ, ಪಲ್‌ಕಲೈನಗರ, ಮದುರೈ-೬೨೫ ೦೨೧ ■

ಮೂರು ಕವಿತೆಗಳು

ಎಲ್. ಸಿ. ಸುಮಿತ್ರಾ

೧. ಹಂಬಲ

ಶಿಶಿರದ ಬೆಳಗಿನ ಹುಲ್ಲಿನ ದನಿ
ಅಡಿಕೆ ಸಿಂಗಾರದ ಹೂವಿನ ಕಣ
ಚಳಿಗಾಲದಾಕಾಶದ ನೀಲಿಯ ಒಂದಂಶ

ಹೊತ್ತೇರಿದಂತೆ ಬಣ್ಣ ಬದಲಾಯಿಸುವ
ಬೆಟ್ಟತಾವರೆ ಹೂ, ಚೈತ್ರದಾದಿಯ ಮಾವಿನ ಸೊನೆ
ಆಲೆ ಮನೆಯ ಬೆಲ್ಲದ ಕಂಪು

ಹಳದಿ ಚಗತೆ ಹೂವು ಮೇಲೆ ಹಳದಿ ಚಿಟ್ಟೆ
ಮುಂಗಾರ ಮಣ್ಣ ಕಂಪು
ಎಲ್ಲರೊಳಗಿದ್ದೂ ಎಲ್ಲೂ ಕಾಣದ ಅವಳ
ಹುಡುಕೋಣ ಬಾರೆ.

೨. ನೆನಪಿನ ನವಿಲು

ಈ ನೀಲಿ ನವಿಲು
ನನ್ನ ಬಾಲ್ಯ ಸಖಿ.
ಮಧ್ಯೆ ಗರಿಬಿಚ್ಚಿ ನಲಿವ
ಒಂಟಿಕಾಲಿನ ನವಿಲು
ಅಜ್ಜ ಅಮ್ಮನಿಗೆ ಕೊಟ್ಟ
ಗರಿಬಿಚ್ಚಿದ ನವಿಲು ನೆಕ್‌ಲೇಸ್
ಎರಡೂ ಕಡೆ ನವಿಲುಕಣ್ಣುಗಳ ಚಿತ್ತಾರ.

ಚುಚ್ಚುತ್ತದೆಂದು ಅಮ್ಮ
ಪದಕವನ್ನು ಒಂದೆಳೆಗೆ ಹಾಕಿ
ಕತ್ತಿಗೆ ತೊಡಿಸಿದಾಗ
ಎರಡನೇ ತರಗತಿ

ಎದೆಯ ಮೇಲಿನ ನವಿಲು
ಸರಿಯಾಗಿದೆಯೇ
ಮುಟ್ಟಿ ನೋಡುವ ತವಕ
ನೋಡಿದವರೆಲ್ಲ ಕೈ ಮುಟ್ಟಿ ನೋಡುವ ಹಾಗೆ
ನೀರಿ ಹರಳಿನ ಹೊಳೆವ ನವಿಲು.

ಎಷ್ಟೆಲ್ಲ ನೆನಪು ಈ ಸಖಿ ನವಿಲಿಗೆ
ಓಲೆ ನೀಲಿ, ನೀಲಿ ರೇಷ್ಮೆ ಲಂಗ

ಪಟ್ಟೆ ನೀಲಿಯ ಕೈಕಟ್ಟು ಗಡಿಯಾರ
ಮೆಚ್ಚುಗೆ.
ದಶಕಗಳು ಎದೆಯ ಮೇಲೆ
ನವಿಲು ಈಗ ಒಳಗೆ.
ಮಳೆ ಮೋಡ ಕಂಡಾಗ
ಗರಿಗೆದರುವ ನವಿಲು
ಈ ನೀಲಿ ನವಿಲು ಸಖಿ
ನನ್ನ ಬಾಲ್ಯ.

೩. ವಿಸ್ಮೃತಿಯ ವಿಜಯ*

ನೂರು ನದಿಗಳ ನಾಡು ಸುತ್ತಿ
ಹಿಮಾಲಯದ ಶಿಖರಗಳ ಸುತ್ತಿ
ಕಾಡು ಮೇಡು ಸಪ್ತ ಸಾಗರ ದಾಟಿ
ಕಷ್ಟಗಳ ಕಲ್ಲುಮುಳ್ಳಿನ ದಾರಿತುಳಿದು
ಸುಖದ ಪಲ್ಲಕ್ಕಿ ತಲುಪುವ ಮೊದಲೇ
ಮನೆಬಾಗಿಲಲ್ಲೇ ಎಡವಿದಿರಿ

ಮನಸು ಮುರಿದಾಗ ಸಪ್ತಸಾಗರದಾಚೆಯು
ಪಂಜರದೊಳಗಿನ ಗಿಳಿ ಮೂಲ ಹುಡುಕಿ ಹಾರಿ
ಹೋದಾಗ ಅಂಗಳದ ತುಂಬೆ ಒಣಗಿ
ಬಾಗಿಲಿನ ತೋರಣ ಕಳಚಿ, ಮಲ್ಲಿಗೆಬಳ್ಳಿ ಬಾಡಿ
ಒಳಗಿನ ಗಾಳಿ ಹಳಸಿ ಮನದ ಕಿಟಕಿ ಶಾಶ್ವತ ಮುಚ್ಚಿತು
ಮನಸು ಭಣ ಭಣ, ಮನೆ ಕತ್ತಲು

ಒಡಲಿನ ಚೂರು ದೂರವಾಗಿ
ಮುಗ್ಧ ಮನದ ಜೀವ ಮಗುವಿನಂತಾಗಿ
ಆಸರೆಗೆ ಯಾರು ? ಗೋಡೆ, ಗೂಡು, ಕಿಟಕಿ ಮೇಜುಗಳಿಗೆ
ಅಲಂಕಾರವಾಗಿದ್ದ ಪುಸ್ತಕ, ಕಲಾಕೃತಿ ನೆಲೆ ತಪ್ಪಿದವು.
ದಾರಿಯಲಿ ಗಿಡ ಹುಟ್ಟಿ, ಮೆಟ್ಟಿಲಲಿ ಧೂಳುತುಂಬಿ
ಸ್ನೇಹದ ಜೇನುಗೂಡು ಖಾಲಿ, ಮನೆಯೊಡತಿ ಇಲ್ಲ
ಸುತ್ತಿ ಸುಳಿಯುವ ವಿಷಾದ
ವಿಸ್ಮೃತಿಯ ವಿಜಯ.

(*ಅಪಘಾತದಲ್ಲಿ 'ನೆನಪು' ಕಳೆದುಕೊಂಡ ವಿಜಯಾ ದಬ್ಬೆಗೆ)

■ ಡಾ. ಎಲ್. ಸಿ. ಸುಮಿತ್ರಾ :
'ಅಶ್ವಿನಿ', ಅನಿಕೇತನ ರಸ್ತೆ, ಸೊಪ್ಪುಗುಡ್ಡೆ, ತೀರ್ಥಹಳ್ಳಿ - ೫೭೭ ೪೩೨ ■

ಕುವೆಂಪು ಸಾಹಿತ್ಯದಲ್ಲಿ ಶೂದ್ರ ಸಂಸ್ಕೃತಿ-ದರ್ಶನ

ಮನು ಬಳಿಗಾರ್

ಇಪ್ಪತ್ತನೇ ಶತಮಾನದ ಕನ್ನಡ ಸಾಹಿತ್ಯದ ಪ್ರಾತಃಸ್ಮರಣೀಯರಲ್ಲಿ ಕುವೆಂಪು ಅಗ್ರಪಂಕ್ತಿಯವರು. ಬರವಣಿಗೆಯ ಬಹುತೇಕ ಎಲ್ಲ ಪ್ರಕಾರಗಳಲ್ಲೂ– ಕಾವ್ಯ, ಮಹಾಕಾವ್ಯ, ಖಂಡಕಾವ್ಯ, ಕತೆ, ಕಾದಂಬರಿ, ನಾಟಕ, ಮಕ್ಕಳ ನಾಟಕ, ಅನುವಾದ, ವಿಮರ್ಶೆ, ಪರಾಮರ್ಶೆ ಇತ್ಯಾದಿ– ಕೃಷಿ ಮಾಡಿರುವ ಕುವೆಂಪು ನಿಸರ್ಗವರ್ಣನೆಯಲ್ಲಿ, ಸೌಂದರ್ಯೋಪಾಸನೆಯಲ್ಲಿ ಅದ್ವಿತೀಯರು. ಸೃಷ್ಟಿಯ ಚೆಲುವನ್ನು ಅನನ್ಯವಾಗಿ ತೆರೆದಿಡುವ ಜೊತೆ ಜೊತೆಯಲ್ಲೇ ವೈಚಾರಿಕ ಪ್ರಜ್ಞೆ, ಆಧ್ಯಾತ್ಮಿಕ ಆವಿಷ್ಕಾರ, ಮಾನವೀಯ ದೃಷ್ಟಿಗಳನ್ನು ತಮ್ಮದೇ ಆದ ರೀತಿಯಲ್ಲಿ ಅಭಿವ್ಯಕ್ತಿಸಿರುವುದು ಅವರ ಹಿರಿಮೆ. ಜಡ ಸಂಸ್ಕೃತಿಯೊಂದನ್ನು ಚೈತನ್ಯ ಸಂಸ್ಕೃತಿಯನ್ನಾಗಿ ಪರಿವರ್ತಿಸುವಲ್ಲಿ ಕುವೆಂಪು ಸಿದ್ಧಹಸ್ತರು. ಸಹಸ್ರಾರು ವರ್ಷಗಳಿಂದ ಬಂದ ಸಹಜ ಸ್ವೀಕೃತವಾದ ಪರಂಪರಾಗತ ವೈದಿಕ ಧರ್ಮವನ್ನು ಹೊಸ ಹೊಳಹಿನೊಂದಿಗೆ ನೋಡುವ 'ಪೂರ್ಣದೃಷ್ಟಿ'ಯ ದರ್ಶನವೊಂದನ್ನು ನೀಡಿದ ಧವಳ ಕೀರ್ತಿ ಅವರದು. ಹೀಗೆ ಮಾಡುವಾಗ ಇಡೀ ಪುರಾಣ ಚರಿತ್ರೆಗಳೊಂದಿಗೆ ತಮ್ಮ ಹೊಸ ಸಿದ್ಧಾಂತವನ್ನು ಎದುರು ನಿಲ್ಲಿಸಿ ಮುಖಾಮುಖಿಯಾಗಿಸುತ್ತಾರೆ. ಅಪರಿಪೂರ್ಣವೆಂದೆನಿಸುವ ಅವುಗಳ ಅರ್ಥವ್ಯಾಪ್ತಿಯನ್ನೆಲ್ಲ ಪರಿಷ್ಕರಿಸುತ್ತಾರೆ. ತರತಮದ ಸ್ಥಾಯಿಭಾವವನ್ನಳಿಸಿ 'ಸಮಾನತೆ', 'ಸಮಭಾವ'ಗಳ ಸಮತತ್ವವೊಂದನ್ನು ಹುಟ್ಟುಹಾಕುತ್ತಾರೆ. ತಮ್ಮ ಅಸಾಧಾರಣ ಪ್ರತಿಭೆಯಿಂದ ಇಡೀ ನಾಡು, ನುಡಿ, ಜನಾಂಗವನ್ನು ಕ್ರಿಯಾಶೀಲ ಗೊಳಿಸುತ್ತಾರೆ. ಹೀಗಾಗಿ ಅವರ ಸಾಹಿತ್ಯದ ಅಂತರ್‌ವಾಹಿನಿಯಾಗಿ ಹೊಸ ಸಂಸ್ಕೃತಿಗಾಗಿನ ತಹತಹ ನಿರಾತಂಕವಾಗಿ ಹರಿದು ಬರುತ್ತದೆ.

ತಾವು ಹುಟ್ಟಿದ್ದು ಧಾರ್ಮಿಕವಾಗಿ ಅಪ್ರತಿಷ್ಠಿತ ಪರಿಸರದಲ್ಲಿ ಎಂಬ ನೋವು ನಿರಂತರ ಜಾಗೃತಿಯಾಗಿ ಕುವೆಂಪು ಕೃತಿಗಳಲ್ಲಿ ಮೂಡಿಬರುತ್ತದೆ. ಸ್ವತಃ ಶೂದ್ರ ಹಿನ್ನೆಲೆಯ ಅವರು ಚಾತುರ್ವರ್ಣ್ಯ ಪದ್ಧತಿಯ ಕಡುವೈರಿಗಳು. ಪುರೋಹಿತಶಾಹಿಯನ್ನು ಸಂಪೂರ್ಣವಾಗಿ ಅಲ್ಲಗಳೆದವರು. ದ್ವೈತಮತಕ್ಕೆ ಅದ್ವೈತ ನೆಲೆಯ 'ಮನುಜಮತ'ವನ್ನು ಪರ್ಯಾಯವಾಗಿಸಿದವರು. ಅನಾದಿಕಾಲದ ಸಂಕುಚಿತ ದೃಷ್ಟಿಯ ಸನಾತನಧರ್ಮ ಪಥಕ್ಕೆ ವಿಶ್ವಪಥವನ್ನು ತೋರಿಸಿದವರು. ಮೇಲುಕೀಳಿನ ಮನುಧರ್ಮಶಾಸ್ತ್ರವನ್ನು ನಿರಾಕರಿಸಿ 'ಎದೆಯ ಶಾಸ್ತ್ರ'ವೊಂದನ್ನು ಸ್ಥಾಪಿಸಿ 'ಮನು ನಿನಗೆ ನೀನು' ಎಂದು ಸಾರಿದವರು. ನವೋದಯ ಕಾಲದ ತಮ್ಮ ಸಮಕಾಲೀನ ಇತರ ಬರಹಗಾರರಿಗೆ ಇಲ್ಲದ ಸವಾಲುಗಳು ಕುವೆಂಪುರವರಿಗೆ ಇದ್ದಾಗ್ಯೂ ತಮ್ಮ ಪ್ರಖರ ಪಾಂಡಿತ್ಯದಿಂದ, ಅಪ್ರತಿಮ ಪ್ರತಿಭೆಯಿಂದ, ಅಪೂರ್ವ ಸಂವೇದನಾಶೀಲತೆಯಿಂದ, ತರ್ಕಬದ್ಧ ವಿಷಯ ಮಂಡನಾ ಚಾತುರ್ಯದಿಂದ ಅವುಗಳನ್ನೆಲ್ಲ ಸಮರ್ಥವಾಗಿ ಎದುರಿಸಿದ್ದು ಅಲ್ಲದೆ ತಮ್ಮ ಎದುರಾಳಿಗಳೂ ತಲೆದೂಗುವಂತೆ ಮಾಡಿದ್ದು ಕೇವಲ 'ಕುವೆಂಪು'ರವರಿಗೆ ಮಾತ್ರ ಸಾಧ್ಯವಾದದ್ದು ಇಂದು ಚಾರಿತ್ರಿಕ ಸತ್ಯವಾಗಿದೆ.

ಚಾತುರ್ವರ್ಣ್ಯ ಪದ್ಧತಿಯಲ್ಲಿ ಅತ್ಯಂತ ಕೊನೆಯಲ್ಲಿ ಅಥವಾ ಕೆಳಸ್ತರದಲ್ಲಿ ಬರುವುದು ಶೂದ್ರವರ್ಗ. ಶತಶತಮಾನಗಳ ಸಾಮಾಜಿಕ ಅವಜ್ಞೆಗೆ ಒಳಗಾಗಿ ಮೇಲ್ಪದರದಲ್ಲಿರುವವರ ಕೃಪಾಕಟಾಕ್ಷದಲ್ಲೇ ಮುನ್ನಡೆಯಬೇಕಿರುವುದು ತಮ್ಮ ಕರ್ತವ್ಯವೆಂದು ನಂಬಿದವರ ಅಥವಾ

ನಂಬಿಸಲ್ಪಟ್ಟವರ ಸಮೂಹವಿದು. ದುಡಿತವನ್ನೇ ಜೀವನಮಾರ್ಗ ಹಾಗೂ ಕೊನೆಯ ಮೋಕ್ಷವೆಂದೂ ಅಂದುಕೊಂಡವರ ಗುಂಪಿದು. ಇವರ ಸಂಸ್ಕೃತಿಯೆಂದರೆ ಕಾಯಕಸಂಸ್ಕೃತಿ, ಶ್ರಮಸಂಸ್ಕೃತಿ, ಬೆವರಿನ ಸಂಸ್ಕೃತಿ. ಈ ವರ್ಗದ ಪ್ರತಿನಿಧಿಯಂತೆ ಮಾರ್ದನಿಸುತ್ತವೆ ಕುವೆಂಪು ಕೃತಿಗಳು. ಶೂದ್ರಸಮೂಹದ ಸ್ವಾಭಿಮಾನವನ್ನು ಬಡಿದೆಬ್ಬಿಸುವ ಮಹತ್ಕಾರ್ಯದಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡು ಅದರಲ್ಲಿ ಬಹಳಷ್ಟು ಯಶಸ್ಸನ್ನು ಕಂಡಿದ್ದಾರೆನ್ನಬಹುದು. ಅರ್ಧಶತಮಾನಕ್ಕೂ ಮೊದಲೇ ಅವರಿಂದ ರಚಿತವಾದ ಹೊಸ ದೃಷ್ಟಿಕೋನದ ಸಾಹಿತ್ಯದ ಪರಿಣಾಮವಾಗಿಯೇ ಇಂದು ಅವರ ಅಪಾರ ಶಿಷ್ಯವರ್ಗ ಹಾಗೂ ಜಾಗೃತ ಸಮಾಜವೊಂದು ನಮ್ಮೆದುರಿಗಿದೆ.

ಕುವೆಂಪುರವರು ೧೯೨೪-೩೦ ರ ನಡುವೆ ಬರೆದ ಪದ್ಯಗಳನ್ನೊಳಗೊಂಡ ಅವರ ಮೊದಲ ಕವನ ಸಂಕಲನ 'ಕೊಳಲು' (೧೯೩೦) ದಲ್ಲಿ ಬರುವ 'ಗೊಲ್ಲನ ಬಿನ್ನಹ'ದಲ್ಲಿ ತಾನು ಊದುವ ಕೊಳಲನ್ನು 'ಕಾಡಿನ ಕೊಳಲಿದು' ಹಾಗೂ ತಮ್ಮನ್ನು 'ಕಾಡ ಕವಿಯು ನಾ' ಎಂದೆನ್ನುತ್ತ ತಮ್ಮನ್ನೇ ತಾವು ಕಾಡಿನ ಜನಾಂಗದೊಂದಿದೆ ಒಂದಾಗಿಸಿಕೊಳ್ಳುತ್ತಾರೆ. ಮತ್ತೆ ತಾವು ಊದುವ ಕೊಳಲು ಪಿಳ್ಳಂಗೋವಿ, ಅದನ್ನು ಊದುತ್ತಿರುವುದು 'ಮರಮಿಗಗಳಿಗಾಗೂದಿದೆ ನಾನು' ಎಂದು ತಮ್ಮ ಉದ್ದೇಶಿತ ಶೂದ್ರ ಜಗತ್ತನ್ನು ಸಂಕೇತಿಸುತ್ತಾರೆ ಹಾಗೂ 'ಕವಿತೆಗೆ' ಎಂಬ ಕವನದಲ್ಲಿ 'ನಿನ್ನ ಸಂಗದಿಂದ ತಿರುಕ ರಾಜನಾದನು' ಎಂದು ತಮ್ಮನ್ನೂ ಆ ಜನಾಂಗದೊಂದಿಗೆ ಸಮೀಕರಿಸಿಕೊಳ್ಳುತ್ತಾರೆ. ಶೂದ್ರ ಸಂಸ್ಕೃತಿಯ ಪ್ರತೀಕವಾದ ಕೃಷಿ ಕಾಯಕದ ರೈತನ ಹಿರಿಮೆ ಗರಿಮೆಗಳ ಹಾಡುತ್ತ 'ಬಾಳಿತು ನಮ್ಮೀ ನಾಗರಿಕತೆ ಸಿರಿ/ಮಣ್ಣು ನೇಗಿಲಿನಾಶ್ರಯದಿ... ನೇಗಿಲ ಕುಳಿಯೊಳಗಡಗಿದೆ ಕರ್ಮ/ನೇಗಿಲ ಮೇಲೆಯೆ ನಿಂತಿದೆ ಧರ್ಮ' (ನೇಗಿಲಯೋಗಿ) ಎಂದು ಧರ್ಮದ ಮೂಲವಾವುದು ಎಂಬುದನ್ನು ಸೂಕ್ಷ್ಮವಾಗಿ ತಿಳಿಸುತ್ತಾರೆ. ಶೂದ್ರ ಜನಾಂಗಕ್ಕೆ ಆದಿಯಿಂದ ಬಂದ ಗಾಯತ್ರಿಮಂತ್ರ ನಿಲುಕದ್ದಾದ್ದರಿಂದ, ಜೀವನಮಾರ್ಗದ ಹೊಸದಾದ 'ಗೊಲ್ಲನ ಗಾಯತ್ರಿ' ಎಂಬ ಹಾಡನ್ನೆ ಕಟ್ಟಿಕೊಡುತ್ತಾರೆ. ಮನುಷ್ಯ ಮನುಷ್ಯನ ಮಧ್ಯೆ ತರತಮಗಳನ್ನು ಸೃಷ್ಟಿಸುವ ವೇದಶಾಸ್ತ್ರಗಳನ್ನು ಅಲ್ಲಗಳೆಯುತ್ತ 'ವೇದ ಮಾಡಬಲ್ಲುದೇನು? ನನ್ನ ಎದೆಯನರಿವುದೇನು?... ವೇದವಲ್ಲ ಶಾಸ್ತ್ರವಲ್ಲ ಬುದ್ಧಿಯೊರೆದುದು' ಎಂಬ ನಿರ್ಧಾರ ಪ್ರಕಟಿಸುತ್ತಾರೆ. (ಶಿವನ ಕೃಪೆಯದಿರಲಿ ಬಿಡು –ಕಲಾಸುಂದರಿ) ಹಾಗೆಯೇ ಭೇದಭಾವ ಮೂಲದ ಕುಲವನ್ನು ಜರೆಯುತ್ತ 'ಕುಲಕುಲವೆಂದೊರಲುವೆ ಏತಕೆ ಕೋಗಿಲೆಗಾವುದು ಕುಲವಿದೆ ಹೇಳು?... ಬೇಸಗೆ ಸಮಯದಿ ಬೇಸರಗೊಂಡಿರೆ ಗೊಲ್ಲನ ಕೊಳಲನು ಕೇಳಿಹೆಯೇನು?' ಎಂದು ಖಾರವಾಗಿ ಪ್ರಶ್ನಿಸುತ್ತಾ (ಕುಲ–'ನವಿಲು') "ಹಳೆಮತದ ಕೊಳೆಯೆಲ್ಲ ಹೊಸಮತಿಯ ಹೊಳೆಯಲ್ಲಿ ಕೊಚ್ಚಿ ಹೋಗಲಿ; ಬರಲಿ ವಿಜ್ಞಾನ ಸ್ವಾತಂತ್ರ್ಯಸಿದ್ಧಿ" ಎಂದು ಹಾರೈಸುತ್ತಾರೆ. (ತುರುಣರಿರ ಎದ್ದೇಳಿ).

ದೇವರ ಅಸ್ತಿತ್ವದಲ್ಲಿ ಅಪಾರ ನಿಷ್ಠೆ ಹಾಗೂ ಆಧ್ಯಾತ್ಮಿಕ ಒಲವು ಎರಡನ್ನೂ ಹೊಂದಿದ್ದರೂ ವೈಚಾರಿಕ ವೈಜ್ಞಾನಿಕ ದೃಷ್ಟಿಕೋನವನ್ನು ಒಂದಿನಿತೂ ಕುಗ್ಗಿಸಿಕೊಳ್ಳದ ಕುವೆಂಪು ತಮ್ಮದೇ ಆದ ಸ್ವತಂತ್ರ ನಿಲುವೊಂದನ್ನು ಲೋಕಕ್ಕೆ ಅರ್ಪಿಸುತ್ತಾರೆ. ಹಾಗೆಯೇ ಆ ದೇವರು ಅಕಸ್ಮಾತ್ ಶೋಷಣೆಗೆ ನೆಪವಾದರೆ ಅವನನ್ನೂ 'ನೂಕಾಚೆ ದೂರ' ಎಂದು ಬದಿಗೆ ತಳ್ಳುತ್ತಾರೆ. ಅಂಥ ದೇವರು ಹಾಗೂ ಮಾನವನ ನಡುವಿನ ಮಧ್ಯಸ್ಥನಾದ ಅರ್ಚಕನನ್ನು 'ಗಂಟೆ ಜಾಗಟೆಗಳಿಂ

ಬಡಿಮ, ಕುತ್ತಿಗೆ ಹಿಡಿದು ಕಡಲಡಿಗೆ ತಳ್ಳಿರ್ರಿ' ಎಂದು ಕರೆ ಕೊಡುತ್ತಾರೆ. ದೇವರ ಸ್ಥಾನಗಳಾದ ಗುಡಿ, ಚರ್ಚು, ಮಸೀದಿಗಳ ಬಿಟ್ಟು ಹೊರಬರಲು ಹಾಗೂ 'ನೂರು ಮತದ ಹೊಟ್ಟ ತೂರಿ ಎಲ್ಲ ತತ್ತ್ವದೆಲ್ಲೆ ಮೀರಿ, ನಿರ್ದಿಗಂತವಾಗಿ ಏರಿ' ಚೇತನವು ಸದಾ ಅನಿಕೇತನವಾಗಿರಲೆಂದು ಹಾರೈಸುತ್ತಾರೆ.

'ಹುಟ್ಟಿನಿಂದಲೂ ನನಗೆ ಪುರೋಹಿತರು ಮತ್ತು ರಾಜರು ಎಂದರೆ ಆಗದು' ಎಂದು ತಮ್ಮ ಆತ್ಮಕಥನ(ನೆನಪಿನ ದೋಣಿ, ಪು. ೧೦೬೮)ದಲ್ಲಿ ಕುವೆಂಪು ಬರೆದುಕೊಂಡಿದ್ದಾರೆ. 'ಕವಿಗರಸುಗಿರಸುಗಳ ಋಣವಿಲ್ಲ. ಅವನಗ್ನಿಮುಖಿ ಪ್ರಳಯಶಿಖಿ' 'ಚಕ್ರವರ್ತಿಯ ವಿಪುಲ ಸಂಪತ್ತು ಕವಿಯ ಕಾಲ್ಗಳಡಿ' 'ವಸಂತವನದಲಿ ಕೂಗುವ ಕೋಗಿಲೆ, ರಾಜನ ಬಿರುದನು ಬಯಸುವುದಿಲ್ಲ; ಹೂವಿನ ಮರದಲಿ ಜೇನುಂಬುಳುಗಳು ಮೊರೆವುದು ರಾಜನ ಭಯದಿಂದಲ್ಲ' ಎಂದು ದಿಟ್ಟತನದಿಂದ ಹಾಡಿದ್ದಾರೆ. 'ಪೊಡವಿಯೊಳಡಗಿರುವ ತಳಹದಿಯ ತೆಗಳುವರೆ?/ಮೆರೆಯುತಿರುವರಮನೆಯ ಸಿರಿಯೊಂದ ಹೊಗಳುವರೆ?' ಎಂದು ಧೈರ್ಯವಾಗಿಯೇ 'ಪಾಂಚಜನ್ಯ'ದಲ್ಲಿ ಪ್ರಶ್ನಿಸುತ್ತಾರೆ. ಪುರೋಹಿತಶಾಹಿ, ರಾಜತ್ವ– ಸಾಮ್ರಾಜ್ಯಶಾಹಿ– ವಸಾಹತುಶಾಹಿ– ಈ ಎಲ್ಲವನ್ನೂ ಕುವೆಂಪು ವಿರೋಧಿಸಿದ್ದರೂ ವಸಾಹತುಶಾಹಿಯನ್ನು ಮಾತ್ರ ಒಂದು ವರ ಮತ್ತು ಶಾಪ ಎರಡೂ ಎಂದು ವಿಶ್ಲೇಷಿಸುತ್ತಾರೆ. ವರ ಯಾಕೆಂದರೆ, ಇಲ್ಲಿ ಬಂದ ಇಂಗ್ಲಿಷ್ ಕಲಿಕೆಯಿಂದಾಗಿ ಹಾಗೂ ಆಳುವವರು ತಂದ ಕೆಲ ಸುಧಾರಣೆಗಳಿಂದಾಗಿ ಈ ದೇಶದ ಶೂದ್ರ ಸಮುದಾಯದ ಜಾಗೃತಿ ಹಾಗೂ ಬಿಡುಗಡೆ ಆಯಿತು. ಶಾಪ ಯಾಕೆಂದರೆ, ಇಡೀ ದೇಶದ ವ್ಯಕ್ತಿ ಸ್ವಾತಂತ್ರ್ಯಹರಣ ಹಾಗೂ ಸಂಪತ್ತಿನ ಲೂಟಿಯಾಯಿತು. ಏನೇ ಆದರೂ ಒಟ್ಟಾರೆ ಶೂದ್ರ ಜನಾಂಗದ ಪ್ರತಿನಿಧಿಯಂತೆ ಕಾವ್ಯ ರಚಿಸುತ್ತ "ನಿರ್ಮಲ ಸರಸ್ವತಿಯ ವೀಣೆಯಂ ಶೂದ್ರಂ ಕಸಿದುಕೊಂಡು..." (ಗೊಬ್ಬರ –೧೯೩೫) ಎಂದು ಹಾಡುತ್ತ ವ್ಯಷ್ಟಿಪ್ರಜ್ಞೆಯಿಂದ ಸಮಷ್ಟಿಪ್ರಜ್ಞೆಯೆಡೆಗೆ ಪಯಣಿಸುತ್ತಾರೆ. ಶೂದ್ರತನದ ಸಂಕೇತವಾದ ಗೊಬ್ಬರ ಕೆಳಗೆ ಭೂಮಿಯಲ್ಲಿದ್ದರೂ ಮೇಲೆ ಅರಳುವ ಹೂ, ಬಿಡುವ ಕಾಯಿ ಹಣ್ಣುಗಳಿಗೆ ಮೂಲ ಜೀವಧಾತುವಾಗಿ ತನ್ನನ್ನೇ ತಾನು ಅರ್ಪಿಸಿಕೊಳ್ಳುವುದರಲ್ಲಿಯ ಸಂದೇಶ ಮಾತ್ರ ಅತ್ಯಂತ ಗಮನಾರ್ಹವಾದುದು.

ಇನ್ನು ಕುವೆಂಪು ಗದ್ಯ ಸಾಹಿತ್ಯದಲ್ಲಿಯೂ ಕೂಡ ಇದೇ ರೀತಿಯ ಶೂದ್ರ ಸಂಸ್ಕೃತಿಯು ಮನೆಮಾಡಿಕೊಂಡಿರುವುದನ್ನು ನಾವು ನೋಡಬಹುದಾಗಿದೆ. ಅವರ ಮಹಾಕಾದಂಬರಿಗಳಾದ ಕಾನೂರು ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು ಹಾಗೂ ಅವರು ರಚಿಸಿದ ಅಪಾರ ಗದ್ಯಸಾಹಿತ್ಯದಲ್ಲೆಲ್ಲ ಇದು ಕಾವ್ಯಗಳಂತೆಯೇ ಮುಖ್ಯವಾಹಿನಿಯಾಗಿ ಪ್ರವಹಿಸುತ್ತದೆ. ಅಲ್ಲಿ ಬರುವ ಬಹುತೇಕ ವ್ಯಕ್ತಿಗಳು, ಘಟನೆಗಳು, ಸಂದರ್ಭಗಳು, ಸಂಭಾಷಣೆಗಳು, ಪ್ರತಿಮೆ ಪ್ರತೀಕಗಳು– ಇತ್ಯಾದಿಗಳಲ್ಲಿ ಇದನ್ನು ಮೇಲ್ನೋಟದಲ್ಲೇ ಕಂಡುಕೊಳ್ಳಬಹುದಾಗಿದೆ.

- ಉದಾಹರಣೆಗಾಗಿ ಈ ವರ್ಣನೆಯನ್ನು ನೋಡಿ : "ಆತನು ಹಾಕಿಕೊಂಡಿದ್ದ ಖಾದಿಬಟ್ಟೆಯ ಷರ್ಟೂ ಅಡ್ಡಲಾಗಿ ಉಟ್ಟಿದ್ದ ಪಂಚೆಯೂ ಪ್ರಯಾಣ ಧೂಳಿಯಿಂದ ಮಲಿನವಾಗಿದ್ದುವು. ಒಟ್ಟಿನಲ್ಲಿ ಪೌರುಷ, ಆಧ್ಯಾತ್ಮಿಕತೆ, ಅಂತರ್ಮುಖತೆ, ರಸಿಕತೆ, ಮೇಧಾಶಕ್ತಿ ಇತರರಿಗೆ ಕಷ್ಟವಲ್ಲದಿದ್ದರೂ ತನಗೇ ಕಷ್ಟಕರವಾಗಬಹುದಾದ ಹಠಭಾವ, ಇವುಗಳಿಂದ ಮೆರೆಯುತ್ತಿದ್ದ ಆತನು ಭವ್ಯ ವ್ಯಕ್ತಿಯಾಗಿದ್ದನು." (ಕಾನೂರು ಹೆಗ್ಗಡಿತಿ, ಪು. ೨) ಶೂದ್ರ ಸಮೂಹದ

ಸಂಕೇತವಾದ ಧೂಳು, ಮಲಿನತೆಗಳಲ್ಲಿದ್ದರೂ ಈತ ಭವ್ಯ ವ್ಯಕ್ತಿಯಾಗಿದ್ದನು ಎಂಬುದು ಭವ್ಯತೆ ಕೂಡ ಅನೇಕ ಸಾರೆ ಶೂದ್ರ ನೆಲೆಯಲ್ಲಿ ಅರಳುತ್ತದೆಂಬುದನ್ನು ಹೇಳಿದಂತಿದೆ.

- "ಗಾಡಿಯಲ್ಲಿ ಮುಂದೆ ಕುಳಿತಿದ್ದ ರಾಮಯ್ಯನು ಸಿಂಗಪ್ಪಗೌಡರನ್ನು ನೋಡಿದನು. ಪುಟ್ಟಣ್ಣನೊಡನೆ ಬೇಟೆಯ ವಿಚಾರವಾಗಿಯೂ ಮನೆಯ ನಾಯಿಗಳ ವಿಚಾರವಾಗಿಯೂ ಕುತೂಹಲ ಉತ್ಸಾಹಗಳಿಂದ ಮಾತಾಡುತ್ತಿದ್ದ ಹೂವಯ್ಯನು ಅವರನ್ನು ಕಾಣಲಿಲ್ಲ" (ಕಾನೂರು ಹೆಗ್ಗಡಿತಿ, ಪು. ೧೧). ಇಲ್ಲಿ ಹೂವಯ್ಯನಿಗೆ ತನ್ನ ನಾಯಿಯ ವಿಷಯ ಹಾಗೂ ಬೇಟೆಯ ಸಂಗತಿಗಳೇ ಮುಖ್ಯವಾಗಿದೆಯೇ ಹೊರತು ವಯಸ್ಸಿನಲ್ಲಿ ಹಿರಿಯನಾದ ಚಿಕ್ಕಪ್ಪ ಸಿಂಗಪ್ಪಗೌಡರಲ್ಲ ಎಂಬುದು ಶೂದ್ರತನದ ಸಂಕೇತವೆ.
- "ದಾರಿದ್ರ್ಯದಲ್ಲಿ ಹುಟ್ಟಿಬೆಳೆದು, ಅಸಂಸ್ಕೃತರಿಂದ ಪೋಷಿತವಾಗಿ, ಅವರ ನಡೆ ನುಡಿ ಆಚಾರ ವ್ಯವಹಾರ ಶೀಲಗಳನ್ನು ಕಲಿತ ಸುಬ್ಬಮ್ಮನಲ್ಲಿ ಸುಸಂಸ್ಕೃತ ಸ್ತ್ರೀಸಹಜವಾದ ಔದಾರ್ಯ ಗಾಂಭೀರ್ಯ ನಯವಿನಯ ಸಂಯಮ ಸಂಚಲನಗಳು ಒಂದಿನಿತೂ ಇರಲಿಲ್ಲ. ಆದಕಾರಣ ಅದುವರೆಗೂ ಅವಕಾಶ ಸಿಕ್ಕದೆ ಸುಪ್ತವಾಗಿದ್ದ ಅಹಂಕಾರ, ಛಲ, ದರ್ಪ, ಸ್ವಾರ್ಥಪರತೆ, ದುರಭಿಮಾನ ಮೊದಲಾದ ಕಾಡುಭಾವಗಳು ಆಕೆ ಯಜಮಾನರ ಪತ್ನಿಯಾಗಿ ಕಾನೂರಿಗೆ ಹೆಗ್ಗಡಿತಿಯಾದ ಕೂಡಲೆ ಭಯಾನಕವಾಗಿ ಹೆಡೆಯೆತ್ತಿ ನಿಂತುವು" (ಕಾನೂರು ಹೆಗ್ಗಡಿತಿ, ಪು. ೪೦, ೪೧).

ಹೀಗೆ ಶೂದ್ರ ಜನಾಂಗದ ಹಾಗೂ ಶೂದ್ರ ಸಂಸ್ಕೃತಿಯ ವರ್ಣನೆ ಇಡೀ ಕಾದಂಬರಿಯ ಬಹುಮುಖ್ಯ ಭಾಗವೆನಿಸುತ್ತದೆ.

ಇದರಂತೆಯೇ ಇನ್ನೊಂದು ಮಹಾಕಾದಂಬರಿ 'ಮಲೆಗಳಲ್ಲಿ ಮದುಮಗಳು'ದಲ್ಲಿಯೂ ಒಟ್ಟಾರೆಯಾಗಿ ಶೂದ್ರ ಸಂಸ್ಕೃತಿಯೇ ಚಿತ್ರಿತವಾಗಿದ್ದುದು ಗೋಚರವಾಗುತ್ತದೆ :

- "ನಾಗರಿಕರಿಗೆ ಭೀಕರವಾಗಿ ಕಾಣುವ ವರ್ಷಾಕಾಲದ ಆ ಭಯಂಕರ ಪರ್ವತಾರಣ್ಯದ ರುದ್ರ ಪ್ರಕೃತಿ ಅವನಿಗೆ ಪರಿಚಯದಿಂದ ಸಾಧಾರಣವಾಗಿತ್ತು. ಅವನೂ ಆ ಪ್ರಕೃತಿಯ ಒಂದಂಶ ವಾಗಿದ್ದನು : ಬೆಟ್ಟದಲ್ಲಿ ಬಂಡೆಯಂತೆ, ಕಾಡಿನಲ್ಲಿ ಮರದಂತೆ ಅದರ ಒಂದಂಗವಾಗಿದ್ದನು" (ಮಲೆಗಳಲ್ಲಿ ಮದುಮಗಳು, ಪು. ೭).

  "ಕಾಣಿಸದಿದ್ದರೂ ತೊರೆಯ ಕಡೆ ಕಣ್ಣಿಟ್ಟು, ಯಾವ ಆಲೋಚನೆಯನ್ನೂ ಮಾಡದೆ, ಶೂನ್ಯ ಮನಸ್ಸಿನಿಂದ ತೊರೆಯ ಮೊರೆಯನ್ನು ಆಲಿಸುತ್ತಾ ತಾನೇ ತೊರೆಯ ಮೊರೆಯಾದನೋ ಎಂಬಂತೆ ಕುಳಿತಿದ್ದ ಗುತ್ತಿ ತಟಕ್ಕನೆ ಎಚ್ಚತ್ತು ಮೂಗನ್ನೂ ಅರಳಿಸಿ, ಮೂಸಿ ಮೂಸಿ, ಗಾಳಿ ಕುಡಿಯತೊಡಗಿದನು" (ಮಲೆಗಳಲ್ಲಿ ಮದುಮಗಳು, ಪು. ೯).

  "ನಾಯಿಯ ಮತ್ತು ಹೊಲೆಯನ ಮನೋಮಯ ಕೋಶಗಳೆರಡೂ ಒಂದನ್ನೊಂದು ಆಲಿಂಗಿಸಿದ್ದುವು. ಆದ್ದರಿಂದಲೇ ಹಿಂದಕ್ಕಟ್ಟಿ ಬಂದಿದ್ದ ಹುಲಿಯನು ಬಂದಾಗ ಗುತ್ತಿಗೆ ಸಿಟ್ಟಿಗೆ ಬದಲಾಗಿ ಸಂತೋಷವಾದದ್ದು" (ಮಲೆಗಳಲ್ಲಿ ಮದುಮಗಳು, ಪು. ೧೦).

  "ಜೇನು ಕೀಳುವುದು, ಹಕ್ಕಿ ಹೊಡೆಯುವುದು, ಮೀನಿಗೆ ಗಾಳ ಹಾಕುವುದು, ಕೆರೆಗೆ ಬಲೆಹಾಕಿ ಮೀನು ಹಿಡಿಯುವುದು, ಹಲಸಿನ ಹಣ್ಣೋ ದೀರ್ಕನ ಹಣ್ಣೋ ಮಾವಿನ ಹಣ್ಣೋ ಕಲ್ಲುಸಂಪಿಗೆ ಹಣ್ಣೋ ಕುಯ್ಯುವುದು, ಉರುಳು ಒಡ್ಡಿ ಹುಂಡುಕೋಳಿ ಚಿಟ್ಟುಗೋಳಿ

ಕಾಡುಕೋಳಿಗಳನ್ನು ಹಿಡಿಯುವುದು ಮೊದಲಾದ ನಾನಾ ಲಲಿತ ಮತ್ತು ರುದ್ರ ಸಾಹಸಗಳಲ್ಲಿ ತಿಮ್ಮಪ್ಪ ಅಣ್ಣನೊಡನೆ ಭಾಗಿಯಾಗಿ ಸಂತೋಷಪಟ್ಟಿದ್ದನು" (ಮಲೆಗಳಲ್ಲಿ ಮದುಮಗಳು, ಪು. ೪೬).

ಇಲ್ಲಿ ಶೂದ್ರ ಸಂಸ್ಕೃತಿಯೊಂದಿಗೇನೇ ಕುವೆಂಪುರವರ ರಸಾನುಭೂತಿಯನ್ನೂ ಅದ್ವೈತ ತತ್ವದ ಅಂಶಗಳನ್ನೂ ಗುರುತಿಸಬಹುದಾಗಿದೆ.

ನಿಸರ್ಗದ ಚೆಲುವಿನ ನಡುವೆ, ಅವರು ಧ್ಯಾನ ಸ್ಥಿತಿಯ ಮೂಲಕ ಏರ್ಪಡಿಸಿಕೊಳ್ಳುವ ಸಂವಾದ ಹಾಗೂ ತಲ್ಲೀನತೆಯ ಸ್ಥಿತಿಯನ್ನು ರಸಾನುಭೂತಿ ಎಂಬ ಪಾರಿಭಾಷಿಕದ ಮೂಲಕ ಸೂಚಿಸುತ್ತಾರೆ. ಎಂದರೆ ವಸ್ತುವೊಂದನ್ನು ನೋಡುತ್ತ ಪರಿಭಾವಿಸುತ್ತ ತಾನೇ ಅದಾಗುವದು ಅಷ್ಟೇ ಅಲ್ಲ, ಎಲ್ಲವನ್ನೂ ಅಖಂಡ ಚೈತನ್ಯದ ಅಭಿವ್ಯಕ್ತಿಯೆಂಬಂತೆ ಕಾಣುವದು : ಜಡಕ್ಕೂ ಚೇತನಕ್ಕೂ ಯಾವುದೇ ವ್ಯತ್ಯಾಸವಿಲ್ಲವೆಂಬಂಥ ನೆಲೆಯಲ್ಲಿ ನಿಲ್ಲುವದು : ಸರ್ವಸ್ವವನ್ನೂ ಸಮದರ್ಶನದಲ್ಲಿ ಪರಿಭಾವಿಸುವದು– ಇತ್ಯಾದಿಗಳು ಕುವೆಂಪು ತಲುಪುವ ಅದ್ವೈತ ಸ್ಥಿತಿಯ ಅನುಭವಗಳು (ಡಾ. ಜಿ. ಎಸ್. ಶಿವರುದ್ರಪ್ಪ : ಕುವೆಂಪು ಸಮಗ್ರ ಕಾವ್ಯಕ್ಕೆ ಒಂದು ಪ್ರವೇಶ).

ಕುವೆಂಪು ಗದ್ಯ ಸಾಹಿತ್ಯದಲ್ಲಿ ಅವರು ಆಗಾಗ ಬರೆದ ಲೇಖನಗಳು, ಸಾಂದರ್ಭಿಕ ಭಾಷಣ ಗಳು, ನೀಡಿದ ಉಪನ್ಯಾಸಗಳು ಹಾಗೂ ಸಂದರ್ಶನಗಳು ಉಲ್ಲೇಖಾರ್ಹ ಎಂದೆನಿಸುತ್ತವೆ. ಅವರ ಕಾದಂಬರಿ ಹಾಗೂ ಕಾವ್ಯದಲ್ಲಿ ಶೂದ್ರ ಸಂಸ್ಕೃತಿಯ ಬಗ್ಗೆ ವರ್ಣನೆಯಿದ್ದಂತೆಯೇ ಲೇಖನಗಳಲ್ಲಿ ಯಾವ ದಿಕ್ಕಿನಲ್ಲಿ ಈ ಜನಾಂಗದ ಮುನ್ನಡೆ ಇರಬೇಕೆಂಬ ಬಗ್ಗೆ ನೇರವಾದ ಪ್ರಸ್ತಾಪವಿದೆ, ಹೋರಾಟದ ನೆಲೆ ದಿಕ್ಕುದೆಶೆ, ಆಶಯ, ಮಾರ್ಗದರ್ಶನ ಎಲ್ಲ ಇದೆ. ಯಾವ ಯಾವ ಶಕ್ತಿಗಳು ಈ ಪ್ರಗತಿಪಥದಲ್ಲಿ ಅಡೆತಡೆಯೊಡ್ಡಬಹುದೆಂಬ ಬಗ್ಗೆ ಎಚ್ಚರಿಕೆಯೂ ಇದೆ. ಹಾಗೆಯೇ ಅವುಗಳನ್ನು ಬದಿಗೊತ್ತುವ ಸಾಹಸದ ಕ್ರಮಗಳನ್ನೂ ಋಜು ಮಾರ್ಗವನ್ನೂ ಸೂಚಿಸಲಾಗಿದೆ. ಒಟ್ಟಿನಲ್ಲಿ ಶೂದ್ರ ಸಮೂಹದ ಹೋರಾಟ ವ್ಯರ್ಥಾಲಾಪವಾಗದಿರಲೆಂಬ ಅಪಾರ ಕಾಳಜಿಯ ನೈಜ ಚಿತ್ರಣವಿದೆ. ಈ ಕುರಿತು ಕೆಲವೊಂದು ಉದಾಹರಣೆಗಳನ್ನಿಲ್ಲಿ ನೋಡಬಹುದಾಗಿದೆ :

ನಲ್ವತ್ತರ ದಶಕದ ಪೂರ್ವಾರ್ಧದಲ್ಲಿ ಬರೆದ ಅವರ ವಿಚಾರೋಪನ್ಯಾಸಗಳ ಸಂಕಲನ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' (೧೯೪೪) ದಲ್ಲಿಯ ಈ ಕೆಲ ಸಾಲುಗಳನ್ನು ನೋಡಿ :

"ನನ್ನ ಅಭಿಪ್ರಾಯಗಳು ಕೆಲವರಿಗೆ ರುಚಿಸದಿರಬಹುದು, ಮತ್ತೆ ಕೆಲವರಿಗೆ ಕ್ರಾಂತಿಕಾರಿ ಗಳಾಗಿ ತೋರಬಹುದು. ಆದರೂ ನನ್ನ ಮನಸ್ಸಿನಲ್ಲಿ ಯಾರನ್ನಾದರೂ ನೋಯಿಸ ಬೇಕೆಂಬ ಇಚ್ಛೆ ಲವಲೇಶವೂ ಇಲ್ಲ. ಅಲ್ಲದೆ ನಾನು ಹೇಳಲಿರುವ ಅಭಿಪ್ರಾಯಗಳು ಅಲ್ಪಾಲೋಚನೆಯಿಂದಾಗಲಿ, ಉದ್ರೇಕದ ಬುದ್ಧಿಯಿಂದಾಗಲಿ, ಅನುದಾರತೆಯಿಂದಾಗಲಿ, ಪ್ರತಿಹಿಂಸಾ ಭಾವದಿಂದಾಗಲಿ ಬಂದುವಲ್ಲ; ಬಹುಕಾಲದ ದೀರ್ಘಮಂಥನದಿಂದ, ಪ್ರಶಾಂತ ಧ್ಯಾನದಿಂದ, ಅನ್ಯಾಯಗಳನ್ನೂ ಅವಿವೇಕಗಳನ್ನೂ ಅಜ್ಞಾನಜನ್ಯವಾದ ಕ್ರೂರ ವರ್ತನೆಗಳನ್ನೂ ಕಂಡಾಗ ಮೂಡಿದ ಸಾತ್ವಿಕ ಕ್ರೋಧದಿಂದ, ನಮ್ಮ ದೇಶ ನಮ್ಮ ನಾಡು ನಮ್ಮ ಭಾಷೆ ನಮ್ಮ ಸಂಸ್ಕೃತಿ ನಮ್ಮ ಸ್ಥಿತಿಗತಿಗಳು ಉಚ್ಛ್ರಾಯವಾಗಬೇಕೆಂಬ ಹಂಬಲದಿಂದ ಮೂಡಿದುವಾಗಿವೆ." ವಿಶೇಷವಾಗಿ ಯುವಕರಿಗಾಗಿಯೇ ಬರೆಯಲಾದ

ಇದರಲ್ಲಿ ಕುವೆಂಪುರವರು ತಮ್ಮ ಆಲೋಚನಾ ಕ್ರಮದ ಹುಟ್ಟು ಬೆಳವಣಿಗೆಗಳನ್ನು ವಿವರಿಸುತ್ತಾ ಅವುಗಳ ಮುಖ್ಯ ಉದ್ದೇಶವನ್ನೂ ಅರಹುತ್ತಾರೆ. ಮುಂದುವರಿದು ನಿರಂಕುಶ ಮತಿತ್ವವೆಂದರೆ, ನಿರಂಕುಶಪ್ರಭುತ್ವವೆಂದು ತಪ್ಪಾಗಿ ಭಾವಿಸದೇ ಸಂಯಮಪೂರ್ಣವಾದ ಧೀರ, ಉದಾರ, ಪ್ರತಿಭಾಪೂರ್ಣ ಬುದ್ಧಿಸ್ವಾತಂತ್ರ್ಯವೇ 'ನಿರಂಕುಶಮತಿ' ಎಂದು ಸ್ಪಷ್ಟಪಡಿಸುತ್ತಾರೆ.

ಮತ್ತೆ, "ವೇದ ಪೂರೈಸಿದ ಗ್ರಂಥವಲ್ಲ; ವೇದದ ಕಟ್ಟಕಡೆಯ ಅಧ್ಯಾಯ ಅಂದಿಗೇ ಮುಗಿದಿಲ್ಲ. ಅದು ಇಂದಿಗೂ ನಾಳೆಗೂ ಮುಂದುವರಿಯುತ್ತದೆ. ಹಾಗೆಯೇ ಋಷಿಗಳೂ ಆಚಾರ್ಯರೂ ಅಂದಿಗೇ ಪೂರೈಸಿಲ್ಲ, ಕೊನೆಗೊಂಡಿಲ್ಲ; ಇಂದಿಗೂ ನಾಳೆಗೂ ಬರುತ್ತಲೇ ಇರುತ್ತಾರೆ. ಆದ್ದರಿಂದ ಹೊಸ ಋಷಿಗಳ ಹೊಸ ವೇದವಾಕ್ಯಗಳನ್ನು ಕಿವಿಗೊಟ್ಟು ಕೇಳಿ." –ಇಲ್ಲಿ ಕುವೆಂಪುರವರು ಆದಿ ಅನಾದಿಕಾಲದ ವೇದ ಶಾಸ್ತ್ರ ಹಾಗೂ ನಂಬುಗೆಗಳನ್ನೆಲ್ಲ ಅಂಧಾನುಕರಣೆಯಿಂದ ಸ್ವೀಕರಿಸುವದು ಬೇಡವೆಂದು ಸ್ಪಷ್ಟಪಡಿಸುತ್ತಲೇ ಹೊಸ ವಿಚಾರ ಆಚಾರಗಳಿಗೆ ಸದಾ ಸ್ವಾಗತವಿರಲಿ, ಅಂದರೆ ಹೊಸ ಋಷಿಗಳೂ ವ್ಯಾಖ್ಯಾನಗಳೂ ಬಂದೇ ಬರುತ್ತವೆ ಎಂಬ ಹಂಬಲವನ್ನೂ ಶ್ರದ್ಧೆಯನ್ನೂ ವ್ಯಕ್ತಪಡಿಸುತ್ತಾರೆ. ಕಾವ್ಯದಲ್ಲಿ ಗುಡಿ ಚರ್ಚು ಮಸೀದಿಗಳ ನಿರ್ಮಾಣವನ್ನು ಅಲ್ಲಗಳೆಯುತ್ತ ಬಂದಂತಹ ಆಲೋಚನಾ ಕ್ರಮವೇ ಇಲ್ಲಿಯೂ ಪುಟಿದೇಳುವುದನ್ನು ನಾವು ಸ್ಪಷ್ಟವಾಗಿ ಗುರ್ತಿಸಬಹುದಾಗಿದೆ. ಮತ್ತೆ ನೋಡಿ :

"ಅಸ್ಪೃಶ್ಯ ಯುವಕರಾದವರಿಗೆ ನನ್ನದೊಂದು ಬಿನ್ನಹ. ನೀವು ಅವಮಾನಿಸಿಕೊಂಡು ದೇವಾಲಯಕ್ಕೆ ಹೋಗದಿದ್ದರೆ ಏನಾಗುತ್ತದೆ? ಗುಡಿಯ ಕಲ್ಲಿನಲ್ಲಿ ದೇವರಿದ್ದಾನೆ ಎಂಬ ಭ್ರಾಂತಿ ನಿಮಗೇಕೆ? ಪ್ರಭುಲಿಂಗಲೀಲೆಯಲ್ಲಿ ಸತ್ಯಸಾಕ್ಷಾತ್ಕಾರದ ಕಾರ್ಯವನ್ನು ಬಿಟ್ಟು ಕೀರ್ತಿಪೂಜಾಲಾಭದಾಶೆಗೆ ದೇವಸ್ಥಾನವನ್ನು ಕಟ್ಟಿಸುತ್ತಿದ್ದ ಸಿದ್ಧರಾಮನನ್ನು ಕುರಿತು ಅಲ್ಲಮನು– 'ಸಕಲ ಕಲ್ಲನು ಕಡಿದು, ಕಲ್ಲಿಗೆ / ಶಿಖರ ದೇಗುಲವೆಂದು ಮಾಡಿಸಿ / ಮಕರಿಸುವರಿವರೊಡ್ಡರಲ್ಲದೆ ಸಿದ್ಧರಲ್ಲ' ಎಂದಿದ್ದಾನೆ. ಒಡ್ಡತನದ ಕೆಲಸವನ್ನು ನಾವೇಕೆ ಮಾಡಬೇಕು! ಗುಡಿಯೊಳಗೆ ಹೋಗಿ ಮತದ ಮೌಢ್ಯಕ್ಕೂ ಪುರೋಹಿತರ ಸುಲಿಗೆಗೂ ಒಳಗಾಗುವುದಕ್ಕಿಂತ ದೂರವಾಗಿದ್ದುಕೊಂಡು ಎದೆಯ ದೇಗುಲದಲ್ಲಿಯೆ ಈಶ್ವರನನ್ನು ಇನ್ನಷ್ಟು ಅತಿಶಯವಾದ ಭಾವಭಕ್ತಿಯಿಂದ ಪೂಜಿಸಬಾರದೆ? ಅಸ್ಪೃಶ್ಯರನ್ನು ದೇವಾಲಯಗಳಿಗೆ ಪ್ರವೇಶ ಮಾಡಲು ಬಿಡಬೇಕೆಂದು ಹೇಳುತ್ತಿರುವುದು ಉಚ್ಚವರ್ಗದ ಹಿಂದುಗಳ ಪರಿಶುದ್ಧತೆಗಾಗಿ ಮತ್ತು ದೃಷ್ಟಿವೈಶಾಲ್ಯ ಸಾಧನೆಗಾಗಿ ಹೊರತು ಹರಿಜನರ ಮೋಕ್ಷಕ್ಕಾಗಿಯಲ್ಲ." –ಹೀಗೆ ಯಾವದೇ ಒಂದು ಮತದ ಗೊಡ್ಡು ಆಚರಣೆಗಳಿಗೆ ಬಲಿಬೀಳದೆ ಸರ್ವಧರ್ಮಗಳ ಸಾರವಾದ ಉದಾರ 'ದರ್ಶನ' ವೊಂದನ್ನು ಕಂಡುಕೊಳ್ಳಬೇಕು. ಕಾರಣ ಆ ಪ್ರಾಪ್ತಿಗಾಗಿ ಎಲ್ಲರೂ 'ನಿರಂಕುಶಮತಿ'ಗಳಾಗುವದು ಅತ್ಯವಶ್ಯವೆಂದು ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳುತ್ತಾರೆ.

"ನನ್ನ ಜೀವನವೆಲ್ಲ ಕಲ್ಪನೆ ಸ್ಮೃತಿಗಳ ಕೃಪೆಯಿಂದ ಸುಖಶಾಂತಿಪೂರ್ಣವಾಗಿದೆ. ನಾನು ಮನುಷ್ಯನಿರ್ಮಿತ ದೇವಾಲಯಗಳಿಗೆ ಹೋಗಬೇಕಾಗಿಲ್ಲ. ಪ್ರಕೃತಿ ಅಲ್ಲಲ್ಲಿ ಆಗಾಗ ದಾನ

ಮಾಡಿರುವ ಭವ್ಯಸುಂದರ ದೃಶ್ಯಗಳು ನನ್ನ ಕಲ್ಪನೆಯಲ್ಲಿ ಸೆರೆಯಾಗಿರುವುದರಿಂದ ನಾನು ಬಯಸಿದಾಗ ಅವುಗಳ ದರ್ಶನವಾಗುತ್ತದೆ. ಆ ದರ್ಶನಗಳ ಮುಂದೆ ನರನಿರ್ಮಿತ ದೇವಾಲಯಗಳು ಕ್ಷುದ್ರವಾಗುತ್ತವೆ'' ('ಮಲೆನಾಡಿನ ಚಿತ್ರಗಳು' ಮುನ್ನುಡಿಯಲ್ಲಿ). ನೂರು ಮತದ ಹೊಟ್ಟ ತೂರುವ ಅವರ ಅನಿಕೇತನ ಕಾವ್ಯ ಸಂದೇಶ ಹಾಗೂ ಅಲ್ಲಿಯ ಮನುಜಮತ ವಿಶ್ವಪಥದ ಹಿರಿಯ ಆಶಯಗಳೇ ಇಲ್ಲಿಯೂ ಪ್ರತಿಫಲನಗೊಂಡಿದ್ದನ್ನು ಕಾಣಬಹುದಾಗಿದೆ. ಅಲ್ಲದೆ "ನಾನೀಗ ಕಾವ್ಯವನ್ನು ಬದುಕುತ್ತಿದ್ದೇನೆ, ಬರೆಯುತ್ತಿಲ್ಲ" ಎಂದು ಅವರೇ ಒಮ್ಮೆ ಹೇಳಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ. ಅಂದರೆ ಅವರಿಗೆ ಗದ್ಯ ಹಾಗೂ ಪದ್ಯ ಎರಡರ ಬದುಕು ಹಾಗೂ ದೃಷ್ಟಿಕೋನಗಳು ಒಂದೇ ಆಗಿವೆ ಎನ್ನಬಹುದು.

ಇಂತಹ ಒಂದು ಹೊಸ ದೃಷ್ಟಿಗಾಗಿ ಹೊಸ ಸಾಹಿತ್ಯ ನಿರ್ಮಾಣವಾಗಬೇಕೆಂದು ಕುವೆಂಪು ಬಯಸಿದ್ದನ್ನು ಅವರ 'ಹೊಸ ಸಾಹಿತ್ಯ ಮತ್ತು ಹೊಸ ದೃಷ್ಟಿ' (೧೯೩೭) ಎಂಬ ಭಾಷಣದಲ್ಲಿ ಕಂಡುಕೊಳ್ಳಬಹುದಾಗಿದೆ : ನೋಡಿ :

"ರಸಋಷಿಯಾದ ಕವಿ ಅರ್ವಾಚೀನದ ಶಿಖರೇಶ್ವರದಲ್ಲಿ ನಿಂತು, ತನ್ನೊಂದು ಕೈಯನ್ನು ಮಸುಗುಗತ್ತಲೆ ಕವಿದ ಪ್ರಾಚೀನ ಗೋರಿಯೊಳಗೆ ನೀಡಿ ಹುಡುಕುತ್ತಿರುತ್ತಾನೆ; ಮತ್ತೊಂದು ಕೈಯನ್ನು ಅನಂತತೆಯ ಗಗನ ನೀಲಿಮೆ ತುಂಬಿರುವ ಭವಿಷ್ಯತ್ತಿನ ಅವ್ಯಕ್ತಗರ್ಭದ ಕಡೆಗೆ ಚಾಚಿ ತಡುವುತ್ತಿರುತ್ತಾನೆ. ಅಂತಹ ಕವಿಯಿಂದ ಕಾವ್ಯರಚನೆಯೇ ಆಗಬೇಕೆಂದಿಲ್ಲ; ರಾಷ್ಟ್ರ ನಿರ್ಮಾಣವೂ ಆಗಬಹುದು. ಅವನಿಂದ ಮತಸ್ಥಾಪನೆಯಾಗಬಹುದು ಅಥವಾ ಅತಿ ಗಹನವಾದ ವಿಜ್ಞಾನ ಸಂಶೋಧನೆಯಾಗಬಹುದು. ಅಂಥ ಕವಿ ಸಾಕ್ರೆಟೀಸ್ ಆಗುತ್ತಾನೆ; ತಪ್ಪಿದರೆ, ಬುದ್ಧದೇವನಾಗುತ್ತಾನೆ, ಅಶೋಕ ಚಕ್ರವರ್ತಿಯಾಗುತ್ತಾನೆ; ಅಥವಾ ಪಂಪನಾಗುತ್ತಾನೆ." –ಹೀಗೆ ಕವಿ, ಕಾದಂಬರಿಕಾರ, ನಾಟಕಕಾರ ಇತ್ಯಾದಿ ಆಗುತ್ತಲೇ ಕುವೆಂಪು ಕೂಡ ಕುವೆಂಪುವಾಗಿಯೇ ಕಾವ್ಯಗಣಿಯಲ್ಲಿ ಅನರ್ಘ್ಯ ರತ್ನದಂತೆ ಕಂಗೊಳಿಸುತ್ತಾರೆ.

ಮೂರನೆಯದಾಗಿ ಕುವೆಂಪು ನಾಟಕಗಳು. ೧೪ ನಾಟಕಗಳಲ್ಲಿ ಈ ಸಂಬಂಧದಲ್ಲಿ ನಾವು ವಾಲ್ಮೀಕಿಯ ಭಾಗ್ಯ–೧೯೩೧, ಜಲಗಾರ–೧೯೨೮, ಶೂದ್ರ ತಪಸ್ವಿ–೧೯೪೪, ಬೆರಳ್‌ಗೆ ಕೊರಳ್(೧೯೪೭), ಯಮನ ಸೋಲು–೧೯೨೮ ಇತ್ಯಾದಿಗಳನ್ನು ಉದಾಹರಿಸಬಹುದಾಗಿದೆ.

ಜಲಗಾರ ಒಂದು ಅನನ್ಯವಾದ ನಾಟಕ. ಇಲ್ಲಿ ಕೆಳಸ್ತರದ ಶೂದ್ರ ಪ್ರತಿಭೆಗಳು ಹೇಗೆ ಸಾಮಾಜಿಕ ನ್ಯಾಯಕ್ಕಾಗಿ ಹಾತೊರೆಯುತ್ತವೆ, ಭಗವಂತನ ಕೃಪೆಗಾಗಿ, ಆಶೀರ್ವಾದಕ್ಕಾಗಿ ಅಂಗಲಾಚುತ್ತವೆ ಎಂಬ ಪ್ರಶಾಂತ ಚಿತ್ತದ ಹೆಣಗಾಟ ಇದೆ. ಸರ್ವೇಸಾಮಾನ್ಯವಾಗಿ ಕುವೆಂಪುರವರ ಎಲ್ಲ ನಾಟಕಗಳಲ್ಲೂ ಈ ಶೂದ್ರ ವರ್ಗದವರ ನೋವು, ಹೋರಾಟ ಹಾಗೂ ಆದರ್ಶಗಳ ಮಂಡನೆ, ಮನುಷ್ಯನ ಏಕತೆಯ ಸಂದೇಶ ಹೊರಹೊಮ್ಮುತ್ತದೆ. ಅಂತೆಯೇ ಸರ್ವಧರ್ಮ ಸಮನ್ವಯತೆಯೂ ಇರುತ್ತದೆ.

ಶೂದ್ರ ತಪಸ್ವಿ ಕೃತಿಯ ವಿಶೇಷತೆಯೆಂದರೆ ಇದೊಂದು ಶೂದ್ರಸಂಸ್ಕೃತಿ ದರ್ಶನದ ಒಟ್ಟಾರೆ ನಿಲುವಿನ ಪ್ರಾತಿನಿಧಿಕ ಕೃತಿಯಾಗಿದೆ. ವಾಲ್ಮೀಕಿ ರಾಮಾಯಣದ ಉತ್ತರಕಾಂಡದಲ್ಲಿಯ ಒಂದು ಪ್ರಸಂಗವನ್ನು ತೆಗೆದುಕೊಂಡು ಅದನ್ನು ಇಲ್ಲಿ ಸಮಕಾಲೀನತೆಗೆ ಅಳವಡಿಸಿಕೊಳ್ಳಲಾಗಿದೆ.

ಶೂದ್ರಕನೆಂಬ ಶೂದ್ರವರ್ಗದ ಋಷಿಯೊಬ್ಬ ತಪಸ್ಸಿಗೆ ಕೂಡುವದು ಆ ಪರಿಣಾಮವಾಗಿಯೇ ಬ್ರಾಹ್ಮಣ ವೃದ್ಧನೊಬ್ಬನ ಐದು ವರ್ಷದ ಮಗ ಸತ್ತು ಹೋಗುವದು, ಇದಕ್ಕೆ ನೇರವಾಗಿ ರಾಜ ರಾಮನನ್ನೇ ಹಾಗೂ ಆತನ ಆಡಳಿತದ ನ್ಯೂನತೆಯನ್ನೇ ಕಾರಣವಾಗಿಸುವದು ಹಾಗೂ ಪಾಪಪರಿಹಾರಕ್ಕೋ ಅಥವಾ ಧರ್ಮದ ಗ್ಲಾನಿ ಅಳಿಸುವದಕ್ಕೋ ಎಂಬಂತೆ ಶ್ರೀರಾಮ ಶೂದ್ರ ಶಂಬೂಕಮುನಿಯನ್ನು ಹತ್ಯೆ ಮಾಡುವದು, ನಂತರ ದೇವಾನುದೇವತೆಗಳು ಇದನ್ನು ಮೆಚ್ಚಿ ರಾಮನನ್ನು ಕೊಂಡಾಡುವದು ಮೂಲ ಕಥೆಯ ವಸ್ತುವಾಗಿದೆ. ಇದು ಕುವೆಂಪು ಕೈಯಲ್ಲಿ ವರ್ತಮಾನಕ್ಕೆ ಅಳವಡಿಸಲ್ಪಟ್ಟು ಜಡಧರ್ಮದ ಎಲ್ಲೆಗಳನ್ನು ಮೀರುವ ಮಾನವೀಯ ತತ್ವಗಳ ಪ್ರತಿಪಾದನಾ ಕೃತಿಯಾಗಿ ಹೊರಹೊಮ್ಮುತ್ತದೆ. ಇಲ್ಲಿ ರಾಮ ಕೇವಲ ಅಂಧಾನುಕರಣೆಯ ಸದಾ ಸಾಂಪ್ರದಾಯಿಕ ರಾಜನಾಗುವದಿಲ್ಲ. ನಿಜವಾದ ಧರ್ಮ ಆವುದು ಎಂದು ವಿವೇಚಿಸುವ ಬುದ್ಧಿಯವನಾಗುತ್ತಾನೆ. ಹೀಗೆ ದೇವರಿಗೂ ವಿವೇಕವನ್ನು ತುಂಬಿದ್ದು ಆತನೂ ಯೋಚಿಸುವಂತೆ ಮಾಡಿದ್ದು ಕುವೆಂಪು ಹಿರಿಮೆ ಎಂದು ಹೇಳಬಹುದು. ವೃದ್ಧ ಬ್ರಾಹ್ಮಣನ ಹೇಳಿಕೆಯನ್ನು ಶ್ರೀರಾಮನು ಸಂಶಯಾಸ್ಪದವಾಗಿ ನೋಡಿದರೂ ಆತನ ಆಜ್ಞೆಗೆ ಕಟ್ಟುಪ್ಪಣೆಗೆ ಬಾಗಿ ಬ್ರಹ್ಮಾಸ್ತ್ರವನ್ನೇ ಶೂದ್ರಕನ ಮೇಲೆ ಪ್ರಯೋಗಿಸಲಾಗಿ ಅದೂ ಕೂಡ ಶೂದ್ರಕನನ್ನು ಸಂಹರಿಸಲು ವಿಫಲವಾಗುವದಷ್ಟೇ ಅಲ್ಲ, ಆತನನ್ನು ಸುತ್ತುವರಿದು ಪಾದಗಳಿಗೆ ಅಡ್ಡಬಿದ್ದು ನಮಿಸುವದೇ ಅಲ್ಲದೆ ಪುನಃ ಅಲ್ಲಿಂದ ಹೊರಟು ಅಧರ್ಮಿಯನನ್ನು ಅಂದರೆ ಈಗ ವೃದ್ಧ ಬ್ರಾಹ್ಮಣನನ್ನು ಸಂಹರಿಸಲು ಆತನೆಡೆಗೆ ಬರುತ್ತಿರಲು ಆತನಿಗೂ ಪಶ್ಚಾತ್ತಾಪವಾಗಿ ಕ್ಷಮೆ ಕೇಳಿ ಆತ ಶ್ರೀರಾಮ ಇಬ್ಬರೂ ಶೂದ್ರಕನಿಗೆ ನಮಸ್ಕರಿಸುತ್ತಿರುವಂತೆ ಮೃತ ಬಾಲಕ ಎಚ್ಚರಗೊಂಡು ಸ್ವರ್ಗಲೋಕದಲ್ಲಿ ದುಂದುಭಿ ಮೊಳಗುತ್ತದೆ. ವನವೆಲ್ಲ ಸಂಭ್ರಮಗೊಂಡು ಶೂದ್ರಕ ಋಷಿಯ ಮೇಲೆ ಪುಷ್ಪವೃಷ್ಟಿಯಾಗತೊಡಗುವದರೊಂದಿಗೆ ಅಂದರೆ ಸತ್ಯದ ಜಯದಲ್ಲಿ ನಾಟಕ ಮುಕ್ತಾಯಗೊಳ್ಳುತ್ತದೆ. ಹೀಗೆ ತಪಸ್ಸನ್ನೂ ಕೂಡ ಶೂದ್ರ ನೆಲೆಗೆ ತಂದು ನಿಲ್ಲಿಸಿ ಆ ಶೋಷಿತ ಸಮೂಹದಲ್ಲಿ ಸ್ವಾಭಿಮಾನ ತುಂಬುವ, ಬ್ರಹ್ಮಾಸ್ತ್ರವನ್ನು ವಿಫಲಗೊಳಿಸುವ, ನಿಜಧರ್ಮ ಆವುದೆಂದು ತೋರಿಸುವ ಸಾಮರ್ಥ್ಯ ಕುವೆಂಪುಗಲ್ಲದೇ ಮತ್ತಾರಿಗೂ ಇಷ್ಟೊಂದು ಮಟ್ಟಿಗೆ ಸಾಧ್ಯವಾಗಿಲ್ಲವೆನ್ನಬಹುದು.

ಕುವೆಂಪುರವರ ಶೂದ್ರ ಸಮೂಹದ ಬಗೆಗಿನ ಕಾಳಜಿ ಚಿಂತನೆ ಕೇವಲ ಪುಸ್ತಕಾಭ್ಯಾಸಕ್ಕಾಗಿ ಮೀಸಲಾಗುಳಿಯದೇ ವಿಶೇಷವಾಗಿ ಕೆಳವರ್ಗ ಹಾಗೂ ಇಡೀ ಸಮಾಜದ ಸರ್ವೋನ್ನತಿಗಳಿಗೆ ಮಾರ್ಗದರ್ಶಿಯಾಗುತ್ತದೆ. ಇದರಿಂದಾಗಿಯೇ ಇರಬೇಕು ಅವರಿಗೆ ಗಾಂಧೀಜಿಯವರ 'ಸರ್ವೋದಯ' ಸಂದೇಶ ಆಪ್ಯಾಯಮಾನವಾಗುತ್ತದೆ : 'ಹಿಂದಾಯಿತು ಓರ್ರೋರ್ವರ ಕಾಲ. ಇದು ಸರ್ವರ ಕಾಲ' ಎಂದು ಕಾವ್ಯದಲ್ಲಿ ಹರಿದು ಬರುತ್ತದೆ. ಸರ್ವೋದಯವು ಒಂದು ಯುಗಮಂತ್ರವಾಗಿ ಅವರಿಗೆ ಸ್ವೀಕೃತವಾಗುತ್ತದೆ. ಒಟ್ಟಾರೆ ಸಮಾಜದ ಉಚ್ಛ್ರಾಯ ಸ್ಥಿತಿಯೇ ತಮ್ಮ ಸಾಹಿತ್ಯದ ಮೂಲೋದ್ದೇಶವೆಂದೆನ್ನುತ್ತಿದ್ದವರು ಕುವೆಂಪು. ಇದಕ್ಕಾಗಿ ಸಮಷ್ಟಿ ಪ್ರಜ್ಞೆಯ ಹೊಸ ಮಾರ್ಗವನ್ನು ತೋರಿಸುತ್ತಾರವರು. ಗಾಂಧೀಜಿಯವರನ್ನು ಅವರ ಸ್ವಾತಂತ್ರ್ಯ ಚಳವಳಿಯನ್ನು ಅತಿಯಾಗಿ ಮೆಚ್ಚುತ್ತಿದ್ದರೂ ಕುವೆಂಪು ಔದ್ಯೋಗೀಕರಣ ಹಾಗೂ ಯಂತ್ರಗಳ ಉಪಯೋಗದ ವಿಷಯದಲ್ಲಿ ಮಾತ್ರ ತಮ್ಮದೇ ಆದ, ಗಾಂಧೀಜಿಗಿಂತ ತುಸು ವಿಭಿನ್ನ

ಅಭಿಪ್ರಾಯ ಹೊಂದಿದ್ದರು. ಯಂತ್ರಗಳ ಸಮರ್ಪಕ ಉಪಯೋಗ ಮಾಡಿಕೊಂಡು ಜನಸಾಮಾನ್ಯರ ಅಭ್ಯುದಯ ಸಾಧಿಸಬೇಕೆಂಬುದು ಅವರ ನಿಲುವಾಗಿತ್ತು. ಅದಕ್ಕಾಗಿಯೇ ಯಂತ್ರಗಳೊಡನೆ ದುಡಿಯುವ ಇಂಜಿನಿಯರ್, ಕಾರ್ಮಿಕರನ್ನು 'ಯಂತ್ರರ್ಷಿ' ಎಂದು ಕರೆದು 'ಯಂತ್ರರ್ಷಿ ಮಾನವರೆ ಮಂತ್ರರ್ಷಿಗಳು ನಮಗೆ' ಎಂದು ಮನ್ನಣೆ ನೀಡುತ್ತಾರೆ.

ಬರೀ ಸಾಹಿತ್ಯಕ್ಕಾಗಿ ಸಾಹಿತ್ಯ ಎಂಬ ಹಳೆಯ ಧೋರಣೆಯ ಬದಲಾಗಿ ಸಾಹಿತ್ಯದಿಂದ ಜನಜಾಗೃತಿ, ಭಾಷಾಭಿಮಾನವೃದ್ಧಿ, ಆಧ್ಯಾತ್ಮಿಕ, ವೈಚಾರಿಕ ಹಾಗೂ ವೈಜ್ಞಾನಿಕ ದೃಷ್ಟಿಯ ಬೆಳವಣಿಗೆ ಸಾಧ್ಯವೆಂದು ಕುವೆಂಪು ಬಲವಾಗಿ ನಂಬಿ ಸಾಹಿತ್ಯ ಸೃಷ್ಟಿಸಿದವರು. ತಮ್ಮದೇ ಆದ ಅನೇಕ ಹೊಸ ವಿಚಾರಗಳಿಗೆ ಹೊಸದಾಗಿಯೇ ಹೆಸರು ಕೊಟ್ಟವರು. ತಮ್ಮ ಸಾಹಿತ್ಯ ರಚನೆಯ ಪ್ರಾರಂಭದ ಕಾಲಮಾನವನ್ನು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ರೊಮ್ಯಾಂಟಿಕ್ ಯುಗ ಅಥವಾ ರೊಮ್ಯಾಂಟಿಕ್ ಕಾವ್ಯ ಇತ್ಯಾದಿಯಾಗಿ ತಪ್ಪು ಅರ್ಥ ಬರುವ ಶಬ್ದಗಳಿಂದ ಕರೆಯಲಾಗುತ್ತಿದ್ದರೆ ಕುವೆಂಪು ಆ ಕಾಲಘಟ್ಟವನ್ನು 'ನವೋದಯ' ಎಂದು ಕರೆದರು. ಇದು ಸಾಹಿತ್ಯರಚನಾ ಅಥವಾ ಬೆಳವಣಿಗೆಯ ಕ್ರಮವನ್ನು ಸೂಚಿಸುವದೊಂದು ಕಡೆಯಾದರೆ ಮತ್ತೊಂದು ಕಡೆ ನವ ರೀತಿಯ ಬದಲಾವಣೆಯ ಆಯಾಮಗಳನ್ನು ಸಾಹಿತ್ಯ ತನ್ನ ಅಂತರಂಗದ ಅರಿವಿನಲ್ಲಿ ಹಾಗೂ ಬಹಿರಂಗದ ಕ್ರಿಯೆಯಲ್ಲಿ ಅಭಿವ್ಯಕ್ತಿಸತೊಡಗಿತು.

ಇದೇ ರೀತಿಯ ಇನ್ನಿತರ ಹೊಸ ಶಬ್ದಗಳ / ವಿಚಾರಗಳ ಸಾಲಿನಲ್ಲಿ ನೇಗಿಲಯೋಗಿ, ಶ್ರೀಸಾಮಾನ್ಯ ಹಾಗೂ ಯಂತ್ರರ್ಷಿ ಇತ್ಯಾದಿಗಳನ್ನೂ ಇಟ್ಟು ನೋಡಬಹುದಾಗಿದೆ. ಕುವೆಂಪುರವರೇ ಸೃಷ್ಟಿಸಿದ ಈ ಪಾರಿಭಾಷಿಕಗಳಲ್ಲಿ ಒಂದು ವಿಶಿಷ್ಟ ಅರ್ಥ ಹಾಗೂ ಅಪಾರ ಸಾಧ್ಯತಾಶಕ್ತಿ ಸಾಮರ್ಥ್ಯ ಹೊರಹೊಮ್ಮುತ್ತಿರುವದನ್ನು ಗುರುತಿಸಬಹುದಾಗಿದೆ.

ಶೂದ್ರ ಜನಾಂಗದ ಪ್ರಮುಖ ಪ್ರತಿನಿಧಿಯಾದ ರೈತ ಅಥವಾ ಕೃಷಿಗಾರನನ್ನು ಯೋಗಿಯ ಸ್ಥಾನಮಾನಕ್ಕೇರಿಸಿದ್ದು, 'ನೇಗಿಲಯೋಗಿ' ಎಂಬ ಸಂಬೋಧನೆ, ರೈತನ ಶ್ರಮ, ಶ್ರದ್ಧೆ, ಕಾರ್ಯನಿಷ್ಠೆ, ಅಪೇಕ್ಷಾರಹಿತ ಮನೋಭಾವ ಇತ್ಯಾದಿಗಳನ್ನು ಒಟ್ಟಾಗಿಯೇ ಸೂಚಿಸುವ ನೇಗಿಲಯೋಗಿ ಶಬ್ದ ಕನ್ನಡ ಸಾಹಿತ್ಯಕ್ಕೆ ಒಂದು ಶ್ರೇಷ್ಠ ಕೊಡುಗೆಯೆನ್ನಬಹುದು.

ಇದರಂತೆಯೇ 'ಶ್ರೀಸಾಮಾನ್ಯ'– ಜನಸಾಮಾನ್ಯರು (ಬಹುತೇಕ ಶೂದ್ರರೆ) ಎಂಬುದು ಎಂದಿನಿಂದಲೂ ಬಂದದ್ದೇ. ಆದರೆ ಕುವೆಂಪು ನೋಟದಲ್ಲಿ ಆ ಸಾಮಾನ್ಯ ಅಸಾಮಾನ್ಯನಾಗುತ್ತಾನೆ. ಆತ ಎಚ್ಚರಗೊಂಡಾಗ, ಬಿಡುಗಡೆಗೊಂಡಾಗ ನಿಜವಾಗಿ 'ಕಲ್ಯಾಣ ರಾಜ್ಯ'ಕ್ಕೆ ಒಂದರ್ಥ ಬರುತ್ತದೆಂಬುದು ಅವರ ನಿಲುವು. ಅದಕ್ಕಾಗಿಯೇ ಆ ಸಾಮಾನ್ಯ 'ಶ್ರೀಸಾಮಾನ್ಯ'ನಾಗಿ ಗೌರವಯುತ ಸ್ಥಾನ ಪಡೆದುಕೊಳ್ಳುತ್ತಾನೆ. ಅವನ ಏಳ್ಗೆ, ಆತ್ಮೋನ್ನತಿಗಳೇ ಕುವೆಂಪು ಕಾಳಜಿ, ಕಳಕಳಿಯಾಗುತ್ತದೆ. ಅವರ ಇಡೀ ಸಾಹಿತ್ಯ ಇಂತಹ ಒಂದು ಹೊಸ ಹುಡುಕಾಟಕ್ಕೆ, ನವ ಚರಿತ್ರೆ ನಿರ್ಮಾಣಕ್ಕೆ, ಅನನ್ಯ ಮಾನವೀಯ ನೆಲೆಗೆ ಒಂದು ಸುಭದ್ರ ಚೌಕಟ್ಟನ್ನು ಒದಗಿಸಿ ಕೊಡುತ್ತದೆ. ಅವರ ಬಹುಮುಖಿ ಸಂಸ್ಕೃತಿ ದರ್ಶನದಲ್ಲಿ ಶೂದ್ರ ಸಂಸ್ಕೃತಿ ದರ್ಶನವು ಸಿಂಹಪಾಲು ಪಡೆದುಕೊಳ್ಳುತ್ತದೆ.

■ ಮನು ಬಳಿಗಾರ್, 'ಶಿಗ್ಗಿಮನೆ', # ೩೭, ೬ ನೇ ಕ್ರಾಸ್, ೩೫ನೇ ಮೇನ್, ಬಿ.ಟಿ.ಎಂ. ೨ ನೇ ಹಂತ, ಬೆಂಗಳೂರು-೫೬೦ ೦೭೬ ■

ನೇಸರ ಮೂಡುವ ಮುನ್ನ ಇರುವೆಗಳ ಸಾಲೊಂದು ಆಹಾರವನ್ನರಸಿ ಬಂದಿತು. ಅಲ್ಲೊಂದು ಇಲ್ಲೊಂದು ಎಲೆಯ ಮೇಲೆ ಮಂಜಿನ ಹನಿ ಹೊಳೆಯುತ್ತಿತ್ತು. ಇಂಥದನ್ನು ಅವೆಂದೂ ನೋಡಿರಲಿಲ್ಲ. ಅಚ್ಚರಿ, ಕುತೂಹಲವಾಯಿತು. ಒಂದು ಗುಂಪು— ಬಹುಶಃ ಇದು ಆಕಾಶದಿಂದ ಬಿದ್ದ ಅಮೃತದ ಹನಿ— ಎಂದಿತು. ಇನ್ನೊಂದು ಗುಂಪು— ಭೂಮಿಯ ಮೇಲಿರುವದರಿಂದ ಭೂಮಿಯಿಂದ ಮೇಲೆದ್ದಿರಬೇಕು, ಅದನ್ನು ಮುಟ್ಟದಿರುವದು ಲೇಸು— ಎಂದು ಹೇಳಿದವು. ತಮ್ಮ ತಮ್ಮ ವಾದವೇ ಸರಿ ಎನ್ನುತ್ತ ಇದ್ದವು.

ಸಮಾಧಾನವಾಗದೆ ಎಲ್ಲ ಇರುವೆಗಳು ವೃದ್ಧ ಇರುವೆಯನ್ನು ಸಮೀಪಿಸಿದವು. ಆಗ ವೃದ್ಧ ಇರುವೆ ಎಂದಿತು— "ಈ ಸೃಷ್ಟಿಯಲ್ಲಿ ಒಂದು ನಿಯಮವಿದೆ. ಪ್ರತಿಯೊಂದು ಹುಟ್ಟು ಸಾವಿನಲ್ಲಿ ಕೊನೆಯಾಗುತ್ತದೆ. ಆ ಕೊನೆಯ ಕ್ಷಣದಲ್ಲಿ ಅದು ಎಲ್ಲಿಂದ ಬಂತೋ ಅಲ್ಲಿಗೆ ಮರಳಿ ಸೇರಬೇಕಾಗುತ್ತದೆ ಅದು ಪ್ರಕೃತಿ ನಿಯಮ. ಸ್ವಲ್ಪ ಹೊತ್ತು ಕಾದರೆ ಎಲ್ಲಿಯದೆಂದು ತಿಳಿಯುತ್ತದೆ." ಸೂರ್ಯ ಉದಯಿಸಿದಂತೆ ಅವನ ಕಿರಣಗಳು ಮಂಜು ಹನಿಯನ್ನು ಮುಟ್ಟಿದವು. ಅದರ ಭವ ಕಳೆಯಿತು. ಆವಿಯ ರೂಪದಲ್ಲಿ ಅದು ಅನಂತ ಸೇರಿತು. ಅಂದರೆ ಅದರ ಸಾವಾಯಿತು.

ಇದು ಸೃಷ್ಟಿಯಲ್ಲಿನ ಸಕಲ ಚರಾಚರ ಜೀವಿಗಳಿಗೂ ಅನ್ವಯಿಸುತ್ತದೆ. ಹುಟ್ಟಿನ ಕ್ಷಣದಿಂದ ಸಾವಿನೆಡೆಗೆ ನಡಿಗೆ ಪ್ರಾರಂಭ.

ಮನುಷ್ಯನನ್ನು ಅಂಕೆಯಲ್ಲಿಟ್ಟು ಬದುಕನ್ನು ನಿಯಂತ್ರಿಸಿ ಜೀವಿ ಬೆಳೆದಂತೆ ಸಾವು ಹತ್ತಿರ ಹತ್ತಿರವಾಗುವದು. ಹುಟ್ಟು ಸಾವಿನ ತೋಳಿನಲ್ಲಿಯೇ ಅರಳುವದು. ಬದುಕಿನ ಎಲ್ಲ ಶಕ್ತಿಯನ್ನು ಸಾವು ನುಂಗಿ ಹಾಕುವದು. ಸಾವು ಎನ್ನುವದು ಶೂನ್ಯ. ಸಾವಿನೊಡನೆ ತನ್ನೆಲ್ಲ ಅಸ್ತಿತ್ವದ ಕೊನೆಯನ್ನು ಕಲ್ಪಿಸಿಕೊಂಡು ಮನುಷ್ಯ ತಲ್ಲಣ ಹೊಂದುತ್ತಾನೆ. ಹುಟ್ಟು ಸಾವು ಎರಡೂ ಸೃಷ್ಟಿಯ ನಿಯಮ. ಹುಟ್ಟಿದವರು ಸಾಯದಿದ್ದರೆ ಬದುಕು ಬರ್ಬರವಾಗುತ್ತದೆ. ಸಾವು ಬದುಕಿನ ವಿದಾಯ. ಸಾವು ದೇಹವನ್ನು ನಿಶ್ಚಲಗೊಳಿಸುವದು. ಬದುಕಿದವರಿಗೆ ದುಃಖ ತರುವದು. ಸತ್ತವರ ಅಗಲುವಿಕೆಯಿಂದ ಬದುಕಿದವರಿಗೆ ದುಃಖವಾಗುವದು.

ಜನ್ಮವೆತ್ತಿದ ನಂತರ ಅಂಗೀಕರಿಸಲೇಬೇಕಾದ ಅನಿವಾರ್ಯತೆ ಸಾವು. ಯಯಾತಿ ಸಾವನ್ನು ಮುಂದೂಡಿದ. ಸಾವಿತ್ರಿ ಸತ್ಯವಾನನನ್ನು ಸಾವಿನಿಂದ ತಡೆಹಿಡಿದಳು. ಸಾವಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಸಾಯಲು ಪ್ರಯತ್ನ ಮಾಡಿದರೆ ಸಾವು ಬರದೇ ಸಾಯಲು ಸಾಧ್ಯವಿಲ್ಲ. ಒಬ್ಬ ಸಾಯಲು ಪ್ರಯತ್ನ ಮಾಡಿದ. ನೇಣು ಹಾಕಿಕೊಳ್ಳುವದು, ವಿಷಪ್ರಾಶನ ಮಾಡುವದು, ಗುಂಡು ಹಾರಿಸಿಕೊಳ್ಳುವದು ಈ ಮೂರು ವಿಧದಿಂದಲಾದರೂ ಸಾಯಲಿಕ್ಕೆ ಪ್ರಯತ್ನಿಸಿದ. ಆದರೆ ಜನರಿರುವ ಸ್ಥಳದಲ್ಲಿ ಸಾಯಬಾರದು ಎಂದು ನಿರ್ಧರಿಸಿ ಸಮುದ್ರ ದಡಕ್ಕೆ ಬಂದನು. ಆದರೆ, ಈಜಾಡಲು ಬಂದವರು ಉಳಿಸಬಹುದು ಎಂದು ಯೋಚಿಸಿದ. ಕೊನೆಗೆ ಏನೋ ಯೋಚಿಸಿ ಹಡಗಿನಲ್ಲಿ ಟಿಕೆಟ್ ತೆಗೆದುಕೊಂಡು ತುತ್ತತುದಿಗೆ ಹೋದನು. ವಿಷ-ನೇಣು-ಗುಂಡು ಇವರಲ್ಲಿ ಮೊದಲು ಏನು ಮಾಡುವದು ಎಂದು ಯೋಚಿಸಿ– ಮೊದಲು ವಿಷ ತೆಗೆದುಕೊಂಡು, ಕಿಟಕಿಗೆ

ಕುಣಿಕೆಯನ್ನು ಕುತ್ತಿಗೆಗೆ ಹಾಕಿಕೊಂಡು ಗುಂಡು ಹಾರಿಸಿಕೊಳ್ಳುವದು ಎಂದು ನಿರ್ಧರಿಸಿದನು. ಹಾಗೆ ಗುಂಡು ಹೊಡೆದುಕೊಂಡಾಗ ಗುರಿ ತಪ್ಪಿ ಹಗ್ಗಕ್ಕೆ ಬಿದ್ದು ಹಗ್ಗ ಕತ್ತರಿಸಿ ಸಮುದ್ರದಲ್ಲಿ ಬಿದ್ದು, ಉಪ್ಪುನೀರು ಕುಡಿದು ವಿಷ ಹೊರಗೆ ಬಂದು ಉಳಿದುಕೊಂಡನು.

ವೈಜ್ಞಾನಿಕ ದೃಷ್ಟಿಯಲ್ಲಿ ಸಾವು ಎಂದರೆ ದೇಹ ತನ್ನ ಕಾರ್ಯಕಲಾಪಗಳಿಗೆ ಅಸಮರ್ಥವಾಗುವದು ಅಥವಾ ಇದನ್ನು ನಿಯಂತ್ರಿಸಲು ಮಿದುಳು ಸ್ಥಗಿತವಾಗುವದು. ಧಾರ್ಮಿಕ ರೀತಿಯಲ್ಲಿ ಪ್ರಾಣ ತನ್ನ ಸೂಕ್ಷ್ಮ ಶರೀರದೊಂದಿಗೆ ಹೊರಕ್ಕೆ ಹೋಗುವದು.

ಜೀವಕೋಶಗಳ ಉತ್ಪತ್ತಿ ಕುಂದಿದಂತೆ ಸಾವು ಸಮೀಪಿಸುತ್ತದೆ. ಉಸಿರು ಬಿಟ್ಟಾಗ ಸಾವಿನ ಛಾಯೆ. ಉಸಿರು ಎಳೆದಾಗ ಬದುಕಿನ ಬೆಳಕು. ಅದಕ್ಕೆ ಬೇಂದ್ರೆಯವರು 'ಉಸಿರೇ ಅಮೃತ ಬಳ್ಳಿ' ಎಂದಿದ್ದಾರೆ. ಆಧುನಿಕ ವಿಜ್ಞಾನ ಹುಟ್ಟನ್ನು ತನ್ನ ನಿಯಂತ್ರಣಕ್ಕೆ ತರಬಲ್ಲದು, ತಂದಿದೆ. ಆದರೆ ಸಾವನ್ನು ತನ್ನ ಅಂಕಿತದಲ್ಲಿ ಇಟ್ಟುಕೊಂಡಿಲ್ಲ, ಸಾವು ಅಜೇಯ. ನಿದ್ರೆ ನಿತ್ಯದ ಸಾವು, ಸಾವು ಶಾಶ್ವತ ನಿದ್ರೆ. ಸಾವಿನ ಅನಿವಾರ್ಯತೆಯನ್ನು ಕುರಿತು ಸರ್ವಜ್ಞ ಹೇಳಿದ್ದಾನೆ : ಸಾವು ಜೀವಗಳೆರಡು ಭಾವಿಸಲು ಒಂದಯ್ಯ

ಜೀವಿಸಲು ಬೀಜ ಸಾವಂತೆ– ಜಗಹಿತಕೆ

ಸಾವುದೇ ಜೀವ ಸರ್ವಜ್ಞ

ಸಾವು ಎಲ್ಲರಿಗೂ ಒಂದಲ್ಲ ಒಂದು ದಿನ ಬಂದೇ ಬರುವದು ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಆ ಸಾವಿಗೆ ಒಂದು ರೀತಿ, ನೀತಿ, ಧರ್ಮ ಧೋರಣೆ ಇರುವದೇ? ಇಲ್ಲ ಎಂಬ ತಿಳಿವಳಿಕೆ ನಮಗುಂಟು. ಆ ರೀತಿ ಇದ್ದರೇನೆ ಒಳ್ಳೆಯದು ಎಂದು ಅಂದುಕೊಳ್ಳುವೆವು. ಆದರೆ ಸಾವಿನ ವ್ಯವಹಾರ ಇನ್ನೂ ರಹಸ್ಯ. ಯಾವಾಗ ಹೇಗೆ, ಯಾರಿಗೆ ಎಲ್ಲಿಂದ ಬರುತ್ತದೆ ಎಂಬುದು ರಹಸ್ಯ. ಒಬ್ಬರ ಸಾವು ಅವರೊಬ್ಬರದೇ ಅಲ್ಲ. ಅದು ಕೈ ಹಿಡಿದವರ, ಒಡಹುಟ್ಟಿದವರ, ಒಡಲಲ್ಲಿ ಹುಟ್ಟಿದವರ, ಹೆತ್ತವರ, ಹತ್ತಿರದವರ, ಬಂಧುಗಳ, ಆತ್ಮೀಯರ, ಮಿತ್ರರ, ಸಹೋದ್ಯೋಗಿಗಳ ಸಂತೋಷವನ್ನು ಅವರವರಿಗೆ ಸಂಬಂಧಿಸಿದಂತೆ ಸ್ವಲ್ಪ ಕಾಲ, ಹೆಚ್ಚು ಕಾಲ, ದೀರ್ಘ ಕಾಲ ಇಲ್ಲವಾಗಿಸುತ್ತದೆ. ಅನಂತರ ಅದೇ ರೀತಿ ಮರೆವನ್ನು ಉಂಟುಮಾಡುತ್ತದೆ. ಲಿಂಕನ್, 'ಸಾವಿಗೆ ಅಂಜಿ ಓಡಿ ಹೋಗಬೇಡ, ಏಕೆಂದರೆ ನಿರ್ಧರಿತ ಕಾಲಕ್ಕೆ ಮುಂಚೆ ನೀನೆಂದಿಗೂ ಸಾಯಲಾರೆ. ಹಾಗೆಯೇ ನಿನ್ನ ನಿರ್ಧರಿತ ಸಮಯ ಬಂದಾಗ ಯಾವ ಶಕ್ತಿಯೂ ನಿನ್ನನ್ನು ಸಾವಿನಿಂದ ಉಳಿಸಲಾರದು' ಎಂದಿದ್ದಾರೆ. ಇದೇ ಪ್ರಕೃತಿಯ ನಿಯಮ.

ಸಾವಿನಲ್ಲಿಯೂ ವಿವಿಧ ಬಗೆಗಳಿವೆ. ಸಹಜ ಸಾವು ಸ್ವರ್ಗದ ಆಹ್ವಾನ. ವೈಯಕ್ತಿಕ ಕಾರಣಕ್ಕಾಗಿ ಸಾವನ್ನು ಆಹ್ವಾನಿಸಿದರೆ ತುಚ್ಛ. ದೇಶಕ್ಕಾಗಿ ಧರ್ಮಕ್ಕಾಗಿ ಪ್ರಾಣತ್ಯಾಗ ಮಾಡಿದರೆ ಅದು ಹುತಾತ್ಮತೆ. ಯುದ್ಧದಲ್ಲಿ ತನ್ನ ವಿರೋಧಿಗಳ ಜೀವ ತೆಗೆದರೆ ಅದು ವೀರವೃತ್ತಿ. ಆ ಯೋಧನಿಗೆ ಗೌರವ. ಒಬ್ಬ ವ್ಯಕ್ತಿ ಬಲವಂತದಿಂದ ಇನ್ನೊಬ್ಬರ ಜೀವ ತೆಗೆದರೆ ಅವನು ಕೊಲೆಗಾರ. ಅವನ ತಪ್ಪಿಗೆ ಶಿಕ್ಷೆಯಂತೆ, ಅವನ ಜೀವವನ್ನೇ ತೆಗೆಯುತ್ತಾರೆ. ಯುದ್ಧವು ಸಾಯಿಸುವ ಮತ್ತು ಸಾಯುವ ಕ್ರಿಯೆ.

ಮಾತಾ ಅಮೃತಾನಂದಮಯಿ ಅವರು 'ಸಾವೆಂದರೆ ನಾನು ಎಂಬುದರ ಸರ್ವನಾಶ. ಎಲ್ಲದರ ಅಂತ್ಯ. ಸಾವಿನ ಆಲೋಚನೆಯಿಂದ ಪಾರಾಗಲು ಆಶೆಗಳನ್ನು ಮಾನವ

ಹುಟ್ಟಿಸಿಕೊಳ್ಳುವನು. ಸಾವಿನ ದಿನಗಳನ್ನು ಕ್ಷಣಗಳನ್ನು ನೆನಪಿಸಲು ಹುಟ್ಟುಹಬ್ಬಗಳು ಬರುತ್ತವೆ' ಎಂದಿದ್ದಾರೆ. ಲಂಕೇಶ್ ತಮ್ಮ ಒಂದು ಲೇಖನದಲ್ಲಿ 'ಸಾವು ಮಾತ್ರ ಅನಿರೀಕ್ಷಿತ ರೀತಿಯಲ್ಲಿ, ಬೆಳಕು ಹುಟ್ಟಿರುವ ಎಲ್ಲ ಕೋಣೆಗಳನ್ನು ಬಿಟ್ಟು ಕಗ್ಗತ್ತಲ ನಿಗೂಢ ಮೂಲೆಗಳಿಂದ ಬರಬಲ್ಲದು. ಹುಟ್ಟು ಹೇಗೆ ನಿಜಕ್ಕೂ ನಿಗೂಢವಾಗಿದೆಯೋ, ನಮ್ಮ ಚಿಕ್ಕಂದಿನ ನೆನಪು ತಾಯಿಯ ಗರ್ಭದ ವರೆಗೆ ಹೇಗೆ ನಮ್ಮನ್ನು ಸಾಗಿಸಲಾರದೋ ಹಾಗೆಯೇ ಸಾವು ನಿಜಕ್ಕೂ ವಿಚಿತ್ರ. ಆದ್ದರಿಂದಲೇ ಸಾವು ನಮಗೆ ಉಳಿದಿರುವ ಒಂದೇ ಗೋಪ್ಯ' ಎಂದಿದ್ದಾರೆ. ಭೈರಪ್ಪನವರು ತಮ್ಮ 'ಅಂಚು' ಕಾದಂಬರಿಯಲ್ಲಿ 'ಸಾವು ಬಿಡುಗಡೆಯ ಬಾಗಿಲು' ಎನ್ನುತ್ತಾರೆ. ಶಾಂತಿನಾಥ ದೇಸಾಯಿ ಅವರು ತಮ್ಮ 'ಮುಕ್ತಿ' ಕಾದಂಬರಿಯಲ್ಲಿ 'ಮರಣ ಎಂಬುದರ ಬಗ್ಗೆ ನಾನು ನನ್ನತನ ಎಂಬುದರ ಅರಿವು ಇಲ್ಲದಾಗುವದು. ಯಾವ ಅನುಭವದ ಅರಿವೂ ಸಾವಿನಿಂದ ಆಗುವುದಿಲ್ಲ. ಆದ್ದರಿಂದ ಸಾವಿನ ಬಗ್ಗೆ ಚಿಂತೆ ಬೇಡ. ಇನ್ನು ಉಳಿದವರಿಗೆ ದುಃಖ ಆಗುವದು. ಅದರ ಅರಿವು ನಮಗಾಗುವುದಿಲ್ಲ. ಯಾಕೆಂದರೆ ನಾನು ಎಂಬ ಪ್ರಜ್ಞೆ ನನಗಿರುವದಿಲ್ಲ' ಎಂದು ವ್ಯಕ್ತಪಡಿಸಿದ್ದಾರೆ. ಬದುಕಿನಲ್ಲಿ ಬಯಸದೇ ಕಷ್ಟಪಡದೆ ಖಂಡಿತವಾಗಿ ಎಲ್ಲರಿಗೂ ದೊರಕುವ ವಸ್ತು ಸಾವು ಎಂದಿದೆ ಸುಭಾಷಿತ. 'ಆವ ವಿದ್ಯೆಯ ಕಲಿತೊಡೇನ, ಸಾವ ವಿದ್ಯೆ ಬೆನ್ನ ಬಿಡದು' ಎನ್ನುತ್ತಾಳೆ ಅಕ್ಕಮಹಾದೇವಿ.

ನಮ್ಮ ಜನಪದರು ಸಾವೆಂಬ ನಿಗೂಢವನ್ನು,

ಜವರಾಯ ಬಂದರೆ ಬರಿಕೈಲಿ ಬರಲಿಲ್ಲ / ಕುಡುಕೋಲು ಕೊಡಲಿ ಹಿಡಕೊಂಡು ಬಂದ
ಒಳ್ಳೊಳ್ಳೆ ಮರನ ಕಡಕೊಂಡು ಬಂದ / ಫಲ ಬಿಟ್ಟ ಮರನ ಕಡಕೊಂಡು ಬಂದ...

ನರಜನ್ಮ ಹೋಗುವಾಗ ತಾಯಿಲ್ಲ ತಂದಿಲ್ಲ / ನ್ಯಾಯ ದೇವರಿಲ್ಲ ದೊರೆಯಿಲ್ಲ
ತಮ್ಮಯ್ಯ ಹೋಗುವಾಗ ನಾಯಿ ಕೂಡ / ಹಿಂದೆ ಬರೋಲ್ಲ.

ಮಳೇನ್ನ ಮರಣಾನ್ನ ಯಾರು ತಿಳಿದಾರು ಎಂಬ ಗಾದೆ ಮಾತು. ಈ ಎರಡು ಪದ್ಯಗಳಲ್ಲಿ ಎಂಥ ಸತ್ಯಾಂಶ ಅಡಗಿದೆ ಎಂಬುದನ್ನು ತಿಳಿಯಬಹುದು.

ಶೇಕ್ಸ್‌ಪಿಯರ್ ಈ ರೀತಿ ಹೇಳಿದ್ದಾನೆ : The undiscovered country / From whose bourn / No traveller returns (ಯಾವ ಯಾತ್ರಿಕನೂ ತಿರುಗಿಬರಲಾರದ ಕಂಡರಿಯದ ದೇಶ). ಡಿ.ವಿ.ಜಿ. ಹೀಗೆ ಹೇಳಿದ್ದಾರೆ : ಮರಣದಿಂ ಮುಂದೇನು? ಪ್ರೇತವೋ ಭೂತವೋ? / ಪರಲೋಕವೋ ಪುನರ್ಜನ್ಮವೋ ಅದೇನೋ? / ತಿರುಗಿ ಬಂದವರಿಲ್ಲ ವರದಿ ತಂದವರಿಲ್ಲ ಧರೆಯ ಬಾಳ್ಗದರಿನೇಂ? ಮಂಕುತಿಮ್ಮ (೮೪೬). (ಸತ್ತ ನಂತರ ಪ್ರೇತವಾಗುವೆವೋ ಭೂತವಾಗುವೆವೋ ಪರಲೋಕಕ್ಕೆ ಹೋಗುವೆವೋ ಪುನಃ ಹುಟ್ಟುವೆವೋ ತಿಳಿಯದು. ಅಲ್ಲಲ್ಲಿ ಹೋಗಿ ಬಂದವರಾಗಲಿ, ವರದಿ ತಂದವರಾಗಲಿ ಯಾರೂ ಇಲ್ಲ. ಅದನ್ನು ಕುರಿತು ಯೋಚಿಸುವದರಿಂದ ಭೂಮಿಯಲ್ಲಿ ನಮ್ಮ ಬಾಳಿಗೆ ಆಗಬೇಕಾದುದು ಏನೂ ಇಲ್ಲ.)

ಸತ್ತವನೆಂದೆನಬೇಡ ಸೋತೆನೆಂದೆನಬೇಡ / ಬತ್ತಿತೆನ್ನೊಳು ಸತ್ವದೂಟೆ ಎನಬೇಡ / ಮೃತ್ಯು ಎನ್ನುವುದೊಂದು ತೆರೆ ಇಳಿತ ತೆರೆಯೇರೋ / ಮತ್ತೆ ತೋರ್ಪುದು ನಾಳೆ ಮಂಕುತಿಮ್ಮ (೫೯೩). (ಜೀವನದಲ್ಲಿ ಎಂದಿಗೂ ನಾನು ಸೋತೆ ನನ್ನ ಸತ್ವದ ಚಿಲುಮೆ ಬತ್ತಿದೆ ಎಂದೆನಬೇಡ. ಮೃತ್ಯು ಎನ್ನುವದು ಒಂದು ಪರದೆ ಇಳಿದು ಮತ್ತೊಂದು ಪರದೆ ಏರಿದಂತೆ. ನಾಳೆ ಮತ್ತೆ ಪರದೆ ಪುನಃ ಏಳುತ್ತದೆ.)

ಸಾವಿಗೆ ಯಾವ ಭೇದಭಾವವಿಲ್ಲ. ಸಮಾನತೆಯ ಅಂಶ ಸಾವಿನಲ್ಲಿದೆ. ಸಾವು ಲೋಕದ ಏಕೈಕ ಸಮತಾವಾದಿ. ಸಾವಿನ ವಾಸ್ತವತೆ ಬಗ್ಗೆ ಬುದ್ಧನ ಕಥೆ ಪ್ರಸ್ತುತ ಎನಿಸಿದೆ. ಕಿಸಾಗೋತಮಿಯ ಮಗು ಸತ್ತಾಗ ಬುದ್ಧನ ಹತ್ತಿರ ಬಂದು ತನ್ನ ಮಗುವನ್ನು ಬದುಕಿಸಲು ಕೇಳಿದಳು. ಆಗ ಬುದ್ಧ ಸಾವಿಲ್ಲದ ಮನೆಯ ಸಾಸಿವೆ ತಂದರೆ ಬದುಕಿಸಬಲ್ಲೆ ಎಂದಾಗ ಕಿಸಾಗೋತಮಿ ಸಾಸಿವೆಗೆ ಅಲೆದಾಡಿದಳು. ಆಗ ಎಲ್ಲಿಯೂ ಸಾಸಿವೆ ಸಿಗಲಿಲ್ಲ. ಪ್ರಾತ್ಯಕ್ಷಿಕದಿಂದ ಅವಳಿಗೆ ಅರಿವು ಬರಲು ಬುದ್ಧ ಈ ರೀತಿ ಹೇಳಿದ. ಸಾವು ಜೀವದ ಬೆನ್ನಿಗೆ ಅಂಟಿಕೊಂಡು ಬಂದಿದೆ ಎಂಬ ಕಟುಸತ್ಯವನ್ನು ಆಕೆ ಅರಿತಳು.

ರವೀಂದ್ರನಾಥ ಠಾಕೂರರು ಜೀವನ-ಮರಣ ಇವುಗಳ ಸಂಬಂಧವನ್ನು ತಮ್ಮ `ಗೀತಾಂಜಲಿ'ಯಲ್ಲಿ `ಮಗು ಬಲದ ಮೊಲೆಯನುಂಬುವಾಗ ತಾಯಿ ಬಿಡಿಸಲು ಬೆಚ್ಚಿ ಆಕ್ರಂದಿಸುವದು. ಮರುಕ್ಷಣವೇ ಎಡದ ಮೊಲೆಯನೂಡಿಸಲು ಸಾಂತ್ವನ ಹೊಂದುವದು' ಎಂದಿದ್ದಾರೆ. ಠಾಕೂರರು ಸಾವನ್ನು ಜೀವದ ಗೆಳೆಯನಂತೆ ಕಂಡರು. ಒಬ್ಬ ವಿರಕ್ತ ಸಂನ್ಯಾಸಿಯಂತೆ ಅಥವಾ ಸಾಯಲು ನುಗ್ಗುವ ರಣಕಣದ ಕಡುಗಲಿಯಂತೆ ಸಾವಿಗೆ ಮುಖಾಮುಖಿಯಾಗಲಿಲ್ಲ. ಎರಡೂ ಕೈಚಾಚಿ ತಾಯಿಯ ತೆಕ್ಕೆಗೆ ಒಡುವ ಬಾಲಕನಂತೆ ಸಾವಿನತ್ತ ಓಡಿದರು. ಸಾವಿಗಾಗಿ ಅಭಿಸಾರಿಕೆಯಂತೆ ಪ್ರತೀಕ್ಷೆ ಮಾಡಿದರು. ವಾಕ್ಯಕ್ಕೆ ಒಂದು ಪೂರ್ಣವಿರಾಮದಂತೆ ಜೀವನಕ್ಕೆ ಸಾವು ಆಪ್ಯಾಯಮಾನ. ಅವರ King of the Dark Chamber ನಾಟಕದ ದೊರೆಯಂತೆ ಸಾವು ರುದ್ರನಷ್ಟೇ ಭದ್ರಮುಖ.

ರವೀಂದ್ರರು ೧೯೪೦ ರ ಜುಲೈ ೩೦ ಬೆಳಗ್ಗೆ ೬ ಗಂಟೆಗೆ ಕೊನೆಯ ಕವನ ಬರೆದರು. ಎರಡು ತಾಸುಗಳ ನಂತರ ಮೂರ್ಛೆ ಹೊಂದಿದರು. ಆ ಅವಸ್ಥೆಯಲ್ಲಿಯೇ ಚಿರನಿದ್ರೆ ಹೊಂದಿದರು (ಗೌರೀಶ ಕಾಯ್ಕಿಣಿ ಅವರ `ಮೃತ್ಯು ಮತ್ತು ಮಹಾಕವಿ' ಲೇಖನ).

ಸಾಕ್ರೆಟಿಸ್‌ನಿಗೆ ಮರಣದಂಡನೆಯಾಯಿತು. ಸೇವಕರು ಹೆಮ್‌ಲಾಕ್ ಎಂಬ ವಿಷವನ್ನು ತಯಾರಿಸುತ್ತಿದ್ದರು. ಮಿತ್ರರು ಬಂಧುಗಳು ದುಃಖಿಸುತ್ತಿದ್ದರು. ಅದಕ್ಕೆ ಸಾಕ್ರೆಟಿಸ್ ಈ ರೀತಿ ಹೇಳಿದನು— `ನೀವು ಮೂರ್ಖರು! ನನ್ನ ಸಾವಿಗಾಗಿ ಏಕೆ ದುಃಖಿಸುವಿರಿ? ನಿಜವಾಗಿ ನನ್ನ ಸಾವಿಗಾಗಿ ನಾನು ಹುಟ್ಟಿದ ಕೂಡಲೇ ಕಣ್ಣೀರು ಹಾಕಬೇಕಾಗಿತ್ತು. ಏಕೆಂದರೆ ಸಾವಿನ ಗಣನೆ ಹುಟ್ಟಿನಿಂದಲೇ ಬಂದಿತು. ಇದು ಎಲ್ಲರಿಗೂ, ನಿಮಗೂ ಬರಲಿದೆ. ನಿಮಗಾಗಿ ಏಕೆ ನೀವು ದುಃಖಿಸುತ್ತಿಲ್ಲ?' ವಿಷ ಸಿದ್ಧವಾದ ನಂತರ ಸಾಕ್ರೆಟಿಸ್ ಅದನ್ನು ಪ್ರತಿಭಟಿಸದೇ ಶಾಂತವಾಗಿ ಕುಡಿದನು. ಮರಣದ ಕೂಡ ಸರಸವಾಗಿ ಸಲ್ಲಾಪ ಮಾಡಿದನು. 'ನಾನರಿಯೆ ಸಾವು ಏನೆಂಬುದು. ಅದು ಒಳ್ಳೆಯದಾಗಿರಬಹುದು. ನನಗೆ ಅದರ ಅಂಜಿಕೆ ಇಲ್ಲ. ಇಷ್ಟು ಮಾತ್ರ ನಾನು ಬಲ್ಲೆ. ಒಬ್ಬನ ಹಿಂದಿನ ಬಾಳ್ವೆಯನ್ನು ಬಿಟ್ಟು ಹೋಗುವದು ಅನಿಷ್ಟ ಕಾರ್ಯ. ಈ ರೀತಿ ಮುಂದೆ ಬರುವ ಇಷ್ಟವನ್ನು ನಾನರಿತ ಅನಿಷ್ಟಕ್ಕೂ ಮಿಗಿಲೆಂದು ಎಣಿಸಿ ಸ್ವೀಕರಿಸುವೆನು' ಎಂಬುದು ಅವನ ಧೀರವಾಣಿ. ಎಂಥ ಸ್ಥಿತಪ್ರಜ್ಞತೆ?

ನಮ್ಮ ಜೀವನಕ್ಕೆ ಸಾವು ಕೊನೆಯೆಂದು ತಿಳಿದು ಜೀವನದಲ್ಲಿ ಆಸಕ್ತಿ ಕಳೆದುಕೊಳ್ಳುವದು ಬೇಡ. ಸಾವು ಬಂದಾಗ ಜೀವನದಲ್ಲಿ ಆಸಕ್ತಿಯನ್ನಿರಿಸಿ ಬಳಲುವದೂ ಬೇಡ. ಜೀವನವನ್ನು ನಮ್ಮ ಅಂತರಂಗದ ಸದ್ಭಾವದಿಂದ ತಿಳಿದಾಗ ಸಾವು ಸರಸ ಎಂದಿದ್ದಾರೆ ಹಿರಿಯರೊಬ್ಬರು.

ರವೀಂದ್ರರು ತಮ್ಮ 'Stray Birds'ದಲ್ಲಿ 'ಸಾವಿನಲ್ಲಿ ಅನೇಕ ಏಕವಾಗುತ್ತದೆ. ಸಜೀವದಲ್ಲಿ ಏಕ ಅನೇಕವಾಗುತ್ತದೆ' ಎನ್ನುವಲ್ಲಿ ಎಲ್ಲ ಜೀವಿಗಳು ಜೀವದಿಂದ ಇದ್ದಾಗ ಅನೇಕಗಳ ಬಗ್ಗೆ ಹೋರಾಡುವವು. ಆದರೆ ಸಾವು ಮಾತ್ರ ಎಲ್ಲರಿಗೂ ಏಕವಾಗಿರುವುದು. ಸಾವಿನ ರೂಪ ಬಹುವಾಗಿರಬಹುದು. ಆದರೆ ಸತ್ತ ನಂತರ ಎಲ್ಲರೂ ಸೇರುವುದು ಭೂತಾಯಿ ಮಡಿಲನ್ನು.

ಪ್ರತಿನಿತ್ಯ ಜೀವಿಗಳು ಯಮನ ಕಡೆಗೆ ಸಾಗುತ್ತಿರುವದನ್ನು ನೋಡಿಯೂ ಇದ್ದವರು ತಾವು ಮಾತ್ರ ಶಾಶ್ವತ ಎಂದು ತಿಳಿಯುವ ಮನುಷ್ಯರ (ಮೂಢರ) ನಂಬಿಕೆ ಆಶ್ಚರ್ಯವಾದದ್ದು ಎಂದು ಧರ್ಮರಾಯ ಮಹಾಭಾರತದಲ್ಲಿ ಯಕ್ಷನಿಗೆ ಕೊಡುವ ಉತ್ತರ ನಮಗೆ ಕನ್ನಡಿಯಷ್ಟೇ ಸತ್ಯ. ಪ್ರಾಚೀನ ಕಾಲದಲ್ಲೇ ಚಾರ್ವಾಕರು ಎಂಬ ನಾಸ್ತಿಕರಿದ್ದರು. ಮರಣಾನಂತರ ದೇಹ ಭಸ್ಮವಾಗುತ್ತದೆ. ಬದುಕಿರುವಾಗಲೇ ಸುಖ ಅನುಭವಿಸಬೇಕು ಎನ್ನುವ ವಾದ ಇವರದು. ಇಂತಹ ವಾದ ಈಗಲೂ ಇದೆ. ಮುಂದೆಯೂ ಇರುವದು. 'ಜಾತಸ್ಯ ಹಿ ಧ್ರುವೋ ಮೃತ್ಯು ಧ್ರುವಂ ಜನ್ಮ ಮೃತಸ್ಯ ಚ / ತಸ್ಮಾತ್ ಪರಿಹಾರ್ಯೇನ ತ್ವಂ ಶೋಚಿತುಂ ಅರ್ಹಸಿ.' ಹುಟ್ಟಿದವನಿಗೆ ಮರಣ ನಿಶ್ಚಿತ. ಹಾಗೆಯೇ ಮರಣಿಸಿದವನಿಗೆ ಜನ್ಮ ಖಚಿತ. ಪರಿಹಾರವಿಲ್ಲದ ಈ ಸಮಸ್ಯೆ ಬಗ್ಗೆ ಶೋಕಿಸಬೇಡ ಎಂಬ ವಿವೇಕವನ್ನು ಅರ್ಜುನನಿಗೆ ಕೃಷ್ಣ ಉಪದೇಶಿಸಿದ್ದಾನೆ. ಕಠೋಪನಿಷತ್ತಿನಲ್ಲಿ ಸಂವಾದವಾಗಿ ಧೀರ ಬಾಲಕ ನಚಿಕೇತ ಮರಣದ ರಹಸ್ಯವನ್ನೆ ಯಮಧರ್ಮನಿಗೆ ಪ್ರಶ್ನಿಸಿದ. ಆದರೂ, ಸಾವಿನ ರಹಸ್ಯ ಭೇದಿಸಲು ಸಾಧ್ಯವಾಗಲಿಲ್ಲ ವಿಜ್ಞಾನಕ್ಕೂ ಆಗಿರುವುದಿಲ್ಲ.

ಮನುಷ್ಯ ಭೌತಿಕ ಶರೀರ ಹಾಗೂ ಭೌತಿಕವಲ್ಲದ ಚೈತನ್ಯ ಎರಡನ್ನೂ ಹೊಂದಿದ್ದಾನೆ. ಸತ್ತ ನಂತರ ಭೌತಿಕ ಶರೀರ ನಾಶವಾಗುತ್ತದೆ. ಆದರೆ ಚೈತನ್ಯ ಉಳಿಯುವದು. ಅದೇ ಆತ್ಮ. ಅದು ಹೊಸ ದೇಹವನ್ನು ಹೊಂದುತ್ತದೆ ಎಂಬುದು ಭಾರತೀಯರ ಸಿದ್ಧಾಂತ.

ಬದುಕು ಅರ್ಥವಾಗದವರಿಗೆ ಸಾವೂ ಒಂದು ಒಗಟು. ಅದಕ್ಕೆ ಕನ್‌ಫ್ಯೂಶಿಯಸ್– We don't know life. How can we know Death? ಎಂದಿದ್ದಾನೆ.

ಸಾವೇ ಇಲ್ಲದಿದ್ದರೆ? ಎಷ್ಟೊಂದು ಜನ, ತಲೆಮಾರುಗಳ ಸಂಘರ್ಷ? ಅಲ್ಪಾಯುಷ ಮಾನವನಿಗೆ ಇಷ್ಟೊಂದು ಸ್ವಾರ್ಥ ದುರಾಶೆ ನೀಚತನ ಕುಟಿಲತನ ಇರುವಾಗ ಸಾವೇ ಇರದಿದ್ದರೆ ಊಹಿಸಲು ಅಸಾಧ್ಯ. ಅಲೆಕ್ಸಾಂಡರ್ ಸಮಾಧಿಯ ಮೇಲೆ ಈ ರೀತಿ ಕೆತ್ತಲಾಗಿದೆಯಂತೆ– 'A tomb now suffices for him for whom the whole world was not sufficient.' ಪ್ರಪಂಚವೇ ಸಾಲದ ಈ ವ್ಯಕ್ತಿಗೆ ಈಗ ಒಂದು ಚಿಕ್ಕ ಗೋರಿ ಸಾಕಾಗಿದೆ.

ಕೆಲವರು ಮುಪ್ಪು ಬಂದಾಗ, ಯಾರೂ ಪೋಷಿಸದಿದ್ದಾಗ, ವ್ಯಕ್ತಿ ಸ್ವಾತಂತ್ರ್ಯಕ್ಕೆ ಕುಂದು ಬಂದಾಗ, ಅವಮಾನ ಹೊಂದಿದಾಗ, ಅಸಾಧ್ಯ ರೋಗ ಉಲ್ಬಣಿಸಿದಾಗ ಸಾವು ಏಕೆ ಬರಬಾರದು ಎಂದು ಚಿಂತಿಸುವರು. ಹೇಡಿಯಾಗಿ ಜೀವನಕ್ಕೆ ಹೆದರಿ ಸಾವನ್ನು ಬಯಸುವದು ಧೀರರ ಲಕ್ಷಣವಲ್ಲ. ಸಾವನ್ನು ಪ್ರತಿಭಟಿಸಿ ಹಿರಣ್ಯಕಶ್ಯಪ, ತಾರಕಾಸುರ, ಮಹಿಷಾಸುರ ವರವನ್ನು ಪಡೆದರೂ ಅವರಿಗೆ ಸಾವು ಬಂದೇ ಬಂದಿತು.

"ಸಾವಿನಾಚೆಗೆ ಏನಿದೆಯೋ, ಏನಿಲ್ಲವೋ ಅದನ್ನು ಕಂಡವರಾರು? ಕಂಡರೂ ಹಿಂದಕ್ಕೆ

ಬಂದು ಹೇಳಿದವರಾರು? ಸಾವಿನಾಚೆಯ ಬದುಕಂತೂ ನಮ್ಮ ಎದುರಿಗಿದೆ. ಅದನ್ನು ಪ್ರೀತಿಸುವದನ್ನು ಯಾವ ಪರದ ಪರದಾಟವೂ ಇಲ್ಲದೆ ಪ್ರೀತಿಸುವುದನ್ನು ನಾವು ಕಲಿಯಬೇಕಾಗಿದೆ. ಪರದ ಹೆಸರಿನಲ್ಲಿ ಇಹದ ಬದುಕನ್ನು ತುಚ್ಛವಾಗಿ ಕಾಣುವುದಾಗಲೀ, ಗೌಣವಾಗಿ ಎಣಿಸುವುದಾಗಲೀ ಸಲ್ಲದು. ಇಹ ಪರ ಇವೆರಡರಲ್ಲೂ ಸಲ್ಲುವಂತೆ ನಾವು ಇಹವನ್ನು ಚೆನ್ನಾಗಿ ಬದುಕಿದರೆ ಸಾಕು. ಇಲ್ಲಿನ ಸುಖ ದುಃಖ, ಇಲ್ಲಿನ ಚೆಲುವು ಒಲವು ಸಾವಿನಾಚೆಗೆ ಇದ್ದಿರಲಾರದು. ನಮ್ಮ ಉಪನಿಷತ್ಕಾರರು ಒತ್ತಿ ಹೇಳಿದ್ದು ಇದನ್ನೆ. ಈ ಲೋಕದ ಕರ್ತವ್ಯ ಕರ್ಮಗಳನ್ನು ಮಾಡುತ್ತಲೇ ನಾವು ನೂರು ಶರದ್ ಋತುಗಳನ್ನು ಕಾಣುವಂತಾಗಲಿ ಎಂದು. ಈ ಜೀವನ ಶ್ರದ್ಧೆ ಎಲ್ಲಕ್ಕಿಂತ ದೊಡ್ಡದು. ಇರುವ ಬದುಕನ್ನು ಯಥಾವತ್ತಾಗಿ ಒಪ್ಪಿಕೊಂಡು ಬದುಕುವ ಧೈರ್ಯ ದೊಡ್ಡದು. ಈ ಬದುಕಿನಲ್ಲಿ ನಾವು ನೂರಾರು ಕನಸು ಕಟ್ಟಬಹುದು. ಆದರೆ ನಾವು ಆಶಿಸಿದ ರೀತಿಯಲ್ಲೆ ನಮಗೆ ಬದುಕಿನ ಸಮಯ ಸಂದರ್ಭಗಳು ದೊರೆಯದೆ ಹೋಗಬಹುದು" ಎಂದಿದ್ದಾರೆ ಜಿ. ಎಸ್. ಶಿವರುದ್ರಪ್ಪ.

ಓರ್ವ ಆಂಗ್ಲ ಕವಿ, ಜಾಲಿ ಮರದಂತೆ ನೂರು ವರ್ಷ ಇದ್ದು ನೆರಳನ್ನು ಕೊಡದೇ ಸಾಯುವುದಕ್ಕಿಂತ ಒಂದು ಲಿಲ್ಲಿ ಹೂ ಬೆಳಿಗ್ಗೆ ಅರಳಿ ಸುಮಧುರ ಪರಿಮಳ ಜನರಿಗೆ ನೀಡಿ ಮುಡಿ ಏರಿ ನೋಡುಗರಿಗೆ ಸಂತೋಷ ನೀಡಿ ಸಂಜೆ ಬಾಡಿ ಹೋಗುವ ಜೀವನವೇ ಮೇಲು, ಎಂದಿದ್ದಾರೆ.

ಸಾವಿನ ಬಗ್ಗೆ ಚಿಂತಿಸದೇ ಇದ್ದಷ್ಟು ದಿನ ಮಾನವೀಯ ಮೌಲ್ಯಗಳಿಂದ ಜೀವನವನ್ನು ಸಾಗಿಸಿ ಮರಣಿಸಿದಾಗ 'ಎಷ್ಟು ಒಳ್ಳೆಯ ಮನುಷ್ಯ ಇನ್ನಷ್ಟು ದಿನ ಇರಬಾರದಿತ್ತೇ' ಎಂದು ಜನರು ಹೇಳಿದಾಗ ಆ ಜೀವ ಸಾರ್ಥಕವೆನಿಸುವದು. 'ರಂಗಭೂಮಿಯ ಮೇಲೆ ಪ್ರಥಮ ಪ್ರವೇಶದಲ್ಲಿ ದೊರೆಯುವ ಪ್ರಶಂಸೆಗಿಂತಲೂ ರಂಗಭೂಮಿಯಿಂದ ಕೊನೆಗೆ ತೆರಳುವಾಗಿನ ಪ್ರಶಂಸೆಯೇ ಮಹತ್ವವುಳ್ಳದ್ದು' ಎಂಬ ಸ್ಪೇನ್ ದೇಶದ ಮಾತು ಅರ್ಥವತ್ತಾಗಿದೆ.

> "ಹೀಂಗಿರಬೇಕಲ್ಲ ಸಂಸಾರದಲ್ಲಿ
> ಹೀಗೇ ಇರುವದು ಪ್ರಾಚೀನದಲ್ಲಿ
> ಮಕ್ಕಳಾಡಿ ಮನೆ ಕಟ್ಟಿದಂತೆ
> ಆಟ ಸಾಕೆಂದು ಅಳಿಸಿ ಪೋದಂತೆ"

ಎನ್ನುವ ಪುರಂದರದಾಸರ ಈ ಜೀವನ ತತ್ವದ ಅಂತರಾರ್ಥವನ್ನು ನಾವು ಅರಿಯಬೇಕು.

ಶರಣರು 'ಮರಣವೇ ಮಹಾನವಮಿ' ಎಂದಿದ್ದಾರೆ. ಶರಣರ ಗುಣ ಮರಣದಲ್ಲಿ ನೋಡು —ಎಂಬುದು ಎಂಥ ಅನುಭಾವದ ಮಾತು. ಕೆಲವರು ಇದ್ದು ಸತ್ತಿರುತ್ತಾರೆ. ಹಲವರು ಸತ್ತು ಬದುಕುತ್ತಿದ್ದಾರೆ. ಸತ್ತು ಬದುಕುವವರ ಸಾಲಿನಲ್ಲಿ ನಮ್ಮ ಬದುಕು ನಿಲ್ಲುವದಾದರೆ ಸಾವು ಸಾರ್ಥಕ, ಬದುಕು ಅರ್ಥಪೂರ್ಣ.

■ ಯು. ಎನ್. ಸಂಗನಾಳಮಠ, ರಾಜ್ಯಶಾಸ್ತ್ರ ಉಪನ್ಯಾಸಕರು, ಸರಕಾರಿ ಪದವೀಪೂರ್ವ ಕಾಲೇಜು, ಹೊನ್ನಾಳಿ-೫೭೭ ೨೧೭, ಜಿ. ದಾವಣಗೆರೆ ■

ಪುಸ್ತಕ ಪರಿಶೀಲನೆ

೧. *ಗತಿ-ಚಿತ್ರ* : ಪ್ರಮೀಳಾ ಚೊಕ್ಕಾಡಿ

ಇಂಚರ ಪ್ರಕಾಶನ, ೧೬೭, ೧೦ ನೇ ಮೇನ್, ೩ ನೇ ಫೇಸ್, ಪೀಣ್ಯ ಉದ್ಯೋಗನಗರ, ಬೆಂಗಳೂರು-೫೮, ಪ್ರ.ಮು. ೨೦೦೩, ಪು. ೪೪, ರೂ. ೪೦/-

೨. *ಹೊಸ್ತಿಲು ಹಿಮಾಲಯದ ಮಧ್ಯೆ* : ವಾಸುದೇವ ನಾಡಿಗ್

ಸಂಚಯ, ೧೦೦, ೨ ನೇ ಮೇನ್, ೬ ನೇ ಬ್ಲಾಕ್, ೩ ನೇ ಸ್ಟೇಜ್, ೩ ನೇ ಫೇಸ್, ಬನಶಂಕರಿ, ಬೆಂಗಳೂರು-೮೫, ಪ್ರ.ಮು. ೨೦೦೩, ಪು. ೬೦, ರೂ. ೪೦/-

ಕಾವ್ಯ ಹೇಗಿರಬೇಕೆಂದು ಹೇಳುವದು-ಅಪೇಕ್ಷಿಸುವದು : ಇದಕ್ಕಿಂತಲೂ ಕಾವ್ಯ ಹೀಗಿರಬಾರದು, ಇದು ಕಾವ್ಯವಲ್ಲ ಎಂದು ಹೇಳುವದು, ಲೆಕ್ಕಕ್ಕೆ ಸಿಗುವ ವಿಷಯ. ಮುಖ್ಯವಾಗಿ 'ಇದನ್ನು ಗದ್ಯವಾಗಿಯೇ ಹೇಳಬಹುದಿತ್ತು' ಎನಿಸಿಕೊಳ್ಳುವ ಸಾಲುಗಳು ಕಾವ್ಯ ಅಲ್ಲ. ಕಾವ್ಯ ಹರಿಯುತ್ತಿರಬೇಕು, ಬರೆದ ಶಬ್ದಗಳಿಗಿಂತ-ಶಬ್ದಗಳಿಂದ ಹೆಚ್ಚಿನದು ಅನುಭವಕ್ಕೆ ಬರತಿರಬೇಕು–, ಅಭಿವ್ಯಕ್ತಿಯ ರೀತಿಯ ಒತ್ತಡ, ಅನಿವಾರ್ಯತೆ, ಅಲ್ಲಿಯ ಕೌಶಲ್ಯ ಓದುಗನಿಗೂ ಅನುಭವವಾಗಬೇಕು.

ಇಷ್ಟು ಹೇಳುವದು ಅಗತ್ಯವೆನಿಸಿದ್ದು ನನ್ನ ಮುಂದಿರುವ ಎರಡು ಕವನ ಸಂಕಲನಗಳಿಂದಾಗಿ : ಒಂದು, ವಾಸುದೇವ ನಾಡಿಗ್ ಇವರ 'ಹೊಸ್ತಿಲು ಹಿಮಾಲಯದ ಮಧ್ಯೆ' ಹಾಗೂ ಎರಡು, ಪ್ರಮೀಳಾ ಚೊಕ್ಕಾಡಿಯವರ 'ಗತಿ-ಚಿತ್ರ'. ನಾಳೆ ಸಶಕ್ತವಾಗಿ ಬೆಳೆಯುವ ಭರವಸೆ ಈ ಎರಡೂ ಸಂಕಲನಗಳ ಕರ್ತೃಗಳಲ್ಲಿ ಕಂಡುಬಂದುದರಿಂದ. ಈ ಎರಡೂ ಸಂಕಲನಗಳನ್ನು ಓದಿ ಮುಗಿಸಿದ ಮೇಲೆ ಇವು ಬಹಳ ಮಹತ್ವದ ಕೃತಿಗಳೆನಿಸದಿದ್ದರೂ, ಬೆಳವಣಿಗೆಯ ಸಾಧ್ಯತೆಯುಳ್ಳ ಕವಿಗಳಿಬ್ಬರ ಕೃತಿಗಳು ಎಂದು ಅನಿಸದೇ ಇರದು. ಪ್ರಮೀಳಾ ಚೊಕ್ಕಾಡಿಯವರ ಕವಿತೆಗಳಲ್ಲಿ ಬಹಳಷ್ಟವು ಭಾವಗೀತೆಗಳಿಗೆ ಹತ್ತಿರದವು; ಎಷ್ಟೋ ಕಡೆಗೆ ಭಾವಗೀತೆಗಳೇ ಅನಿಸುತ್ತವೆ.

"ಕಣ್ಣು ಕೊಳದ ನೀಲಿ ಹರಹಲ್ಲಿ / ನೂರು ನಕ್ಷತ್ರ ಹೊಳೆದ ಮೇಲೆ / ನನ್ನ ನಿನ್ನ ನಡುವೆ / ಯಾವುದು ಹೊಸತಲ್ಲ ಹೇಳು / ಪ್ರೀತಿ ಹುಟ್ಟಿದ ಮೇಲೆ."

ಇದನ್ನೂ ಓದಿ–

"ಬೇಸಿಗೆಯ ತೊರೆಯಂತೆ ಕಿರುಜೀವ ಹಿಡಿದರೂ/ಬೆಟ್ಟ ಕಣಿವೆಗಳ ಬಳಸುತ್ತ ಕಲಕಲನೆ/ ಪಯಣದಲ್ಲಿ ಧ್ವನಿಗೈದು ಸಾಗಬೇಕು/......../ನಭದಲ್ಲಿ ಬಿಳಿಮುಗಿಲಾಗಿ ತೇಲಬೇಕು" "ಮೂಲೆಯಲಿ ಮುತ್ತು ಮಲ್ಲಿಗೆ ಗಿಡದ ಮೈತುಂಬಾ/ಬೆಳ್ಳನೆ ಬೆಳದಿಂಗಳು ಹರಡಿಕೊಂಡಿತ್ತು."

ಆದರೆ ಪ್ರಮೀಳಾ ಅವರಿಗೆ 'ತಮ್ಮನ ಫೀಸು, ತಂಗಿಯ ಓದು, ಅಮ್ಮನ ಕಾಯಿಲೆ ಜೊತೆಗೆ ಅಪ್ಪನ ಜೂಜಿಗೂ ಹಣ ಪೂರೈಸಲು ದುಡಿಯುವ ಸೇಲ್ಸ್ ಗರ್ಲ್ ಬಗೆಗೂ ಬರೆಯಬೇಕಿದೆ. ಬೆಳಕು ತೂರದ ಮನೆಯೊಳಗಿನ ಕಾಡುಜೀವಿಗಳ ವಿರುದ್ಧ ದನಿಯೆತ್ತಿ ಪ್ರೀತಿಯ ಬೆನ್ನು ಹತ್ತಿಹೋದ ಹುಡುಗಿಯ 'ಗತಿಚಿತ್ರ'ವನ್ನೂ ಕೊಡಬೇಕಾಗಿದೆ. ಪೂರ್ತಿ ಸೆಳೆಯದ ವಿಷಾದ, ಅನುಮಾನ, ಪರರ ನೋವು ಹಾಗೂ ಸಣ್ಣ ತಕರಾರುಗಳ ಬಗೆಗೂ ಪ್ರಮೀಳಾ ಕಾವ್ಯ ಬರೆದಿದ್ದಾರೆ.

ಇಲ್ಲೆಲ್ಲ ತೀವ್ರತೆಗಾಗಿ ಹವಣಿಸುತ್ತಿರುವ, ಅಭಿವ್ಯಕ್ತಿಗೊಳ್ಳಬೇಕಾದ, ವೈಚಾರಿಕತೆಯೆಡೆಗೆ ಹಣಿಕಿಕ್ಕುತ್ತಿರುವಂತಹ ತಾತ್ಕಾಲಿಕ ಅನುಭವಗಳಿವೆ. ಪ್ರಮೀಳಾ ಯಾವ ರೀತಿಯ ವ್ಯಕ್ತಿಯಾಗಿ ಬೆಳೆಯುತ್ತಾರೋ, ಬೆಳೆಯಲಿಚ್ಛಿಸುತ್ತಾರೋ ಅನ್ನುವದರ ಮೇಲೆ ಅವಲಂಬಿಸಿ ಅವರ ಮುಂದಿನ ಕೃತಿಗಳು ರೂಪುಗೊಳ್ಳಲಿವೆ.

ವಾಸುದೇವ ನಾಡಿಗರ ಕವಿತೆಗಳಲ್ಲಿ ಹೆಚ್ಚಿನವುಗಳಿಗೆ ಕವಿ ಜಗದ ವ್ಯಾಪಾರದಲ್ಲಿ, ಪ್ರಕೃತಿಯ ತತ್ವಗಳಲ್ಲಿ ಕಂಡ ಸೋಜಿಗ, ವಿಸ್ಮಯದಿಂದ ಕಂಡ ಅನುಭವವೇ ನಿಲುವಾಗಿದೆ. ಇಂತಹ ಅನುಭವಕ್ಕೆ

ಭಾಷ್ಯ ಬರೆಯಬೇಕೆಂಬ ತೀವ್ರ ಹಂಬಲ ಇಲ್ಲದಿದ್ದರೂ, ಆ ಬಗೆಗೆ ಏನನ್ನಾದರೂ ಹೇಳಬೇಕೆನ್ನುವ ತವಕ ಇದೆ– "ಕಾಲ ಸರಪಳಿ ಸೆಳತಕೆ ಸಿಲುಕಿ / ತೂಗುಯ್ಯಾಲೆಯಲಿ ತೇಲಿಬಿಟ್ಟ / ಬಾಳು. ಹೇಳಿ ಮಾಡಿಸಿದ ನೆರಳು."

ಗಟ್ಟಿಯಾಗಬೇಕಾದ 'reflection'ಗಳೆಷ್ಟೋ ಇವೆ– ೧) ಕೊಳಲ ವ್ಯಾಪಾರ, ೨) ಕೂತು-ಕೂತಲ್ಲೆ ಕವಿತೆ, ೩) ನಾಯಿಪಾಡು ಮುಂತಾದವುಗಳಲ್ಲಿ. ಜೊತೆಗೆ 'ಜೀವಕುಲುಮೆ'ಯಲ್ಲಿ ಬರುವ ಇಂತಹ (ಕೆಳಗೆ ಕೊಟ್ಟ) ಸಾಲುಗಳು ಶಕ್ತಿಯುತ ಕಾವ್ಯದ ಉದಾಹರಣೆಯಾಗಿವೆ :

".........ಗರ್ಭ / ಕಣ್ಣಂಗಳಕೆ ದಕ್ಕದ ಕಣ / ಕಣಕಣವೂ ಕೂಡಿ ತೂಕವಾಗಿ / ಅಳತೆಗೂ ಮೀರಿದ ದೇಹ / ....ಕಾಯಿಸಿ ಆಕಾರಕ್ಕೊದಗಿಸುವಿಕೆ / ಜೀವಕುಲುಮೆಯ ಪರಿವೆ"

ಗಂಭೀರ ಚಿಂತನೆಯಿದ್ದಾಗಲೂ, ಅನುಭವದಲ್ಲಿಯ ಮಜಾ ಮತ್ತು ವಿಸ್ಮಯ ಕಳೆದುಕೊಳ್ಳದೆ ಬರೆಯಲ್ಲರು ವಾಸುದೇವ ನಾಡಿಗರು.

ಇಬ್ಬರಿಗೂ ಹೇಳಬೇಕಾದ ಮಾತಿದು. ಕಾವ್ಯ ಒಂದು ಗಂಭೀರ ಕಟ್ಟುವಿಕೆ, ಅದರ ಹಿಂದಿನ ಒತ್ತಡ, ಚಿಂತನೆ ಅಂತೆಯೇ ಕಟ್ಟುವ ಕಲೆಯನ್ನು ಪ್ರಜ್ಞಾಪೂರ್ವಕ ಮೇಳೈಸಿಕೊಂಡಾಗ, ಓದಿ ಬದಿಗಿಟ್ಟ ಮೇಲೂ ಓದಿದವನ ಭಾಗವಾಗಬಲ್ಲಂತಹ ಕಾವ್ಯ ಬರುತ್ತದೆ.

– ಪ್ರೊ. ದುಷ್ಯಂತ ನಾಡಗೌಡ, ವೆಂಕಟಾದ್ರಿ ೧೨೪, ೨ ನೇ ಮೇನ್, ಗಾಂಧೀನಗರ, ಧಾರವಾಡ-೪

೩. *ಕಣ್ಣಳತೆ :* ಡಾ. ಟಿ. ಸಿ. ಪೂರ್ಣಿಮಾ

ಸಿವಿಜಿ ಪಬ್ಲಿಕೇಷನ್ಸ್, ೭೦, ೩ನೇ ಮೇನ್, ಜಬ್ಬಾರ್ ಬ್ಲಾಕ್, ವೈಯಾಳಿ ಕಾವಲ್, ಬೆಂಗಳೂರು-೫೬೦ ೦೦೩, ಪ್ರ.ಮು. ೨೦೦೪, ಪು. ೧೧೨, ರೂ. ೯೦/-

ಡಾ. ಟಿ. ಸಿ. ಪೂರ್ಣಿಮಾ ಅವರ 'ಕಣ್ಣಳತೆ'ಯಲ್ಲಿ ೯ ಲೇಖನಗಳಿವೆ. 'ಕುವೆಂಪು-ಬಸವ ತೌಲನಿಕ ನೋಟ', 'ಕನ್ನಡ ಕಾವ್ಯಗಳಲ್ಲಿ ಸ್ವಾತಂತ್ರ್ಯ ಸಮರದ ಪ್ರಜ್ಞೆ', 'ಕನ್ನಡ ಕವಯಿತ್ರಿಯರ ಹೆಜ್ಜೆ ಗುರುತು', ಲೇಖನಗಳು ಸಾಹಿತ್ಯಕ್ಕೆ ಸಂಬಂಧಿಸಿದರೆ 'ಅಣ್ಣಾ, ನಾನು ಹೆಂಗೂಸಲ್ಲ' ಮತ್ತು 'ಸಂಸಾರವೆಂಬ ಹಗೆಯಯ್ಯ' ಲೇಖನಗಳು ವಚನಸಾಹಿತ್ಯ ಕುರಿತಾಗಿವೆ. 'ಕನ್ನಡ ಭಾಷೆ : ಹಿರಿಮೆ, ಗರಿಮೆ-ಆತಂಕ', 'ಕನ್ನಡ ಭಾಷಾಭಿವೃದ್ಧಿ-ಮಾಧ್ಯಮಗಳ ಪಾತ್ರ' ಭಾಷೆಯನ್ನು ಕುರಿತಾಗಿವೆ. 'ಗಾಂಧಿ ಮತ್ತು ಸ್ತ್ರೀಜಾಗೃತಿ' ಹಾಗೂ 'ಮಹಿಳೆ ಮತ್ತು ಮಾಧ್ಯಮ' ಲೇಖನಗಳು ಸ್ತ್ರೀವಾದೀ ನೆಲೆಯುಲ್ಲಿವೆ.

"ಸಾಹಿತ್ಯ ರಚನೆಯ ಆಕಾಂಕ್ಷೆಯಿಂದ ಬಸವಣ್ಣ ವಚನ ಬರೆಯಲಿಲ್ಲ. 'ಅನು ಒಲಿದಂತೆ ಹಾಡುವೆನು' ಎಂದು ಹೇಳಿಕೊಳ್ಳುವ ಅಣ್ಣ ಬಿತ್ತಿದ್ದು ವಿಚಾರ, ಬೆಳೆದದ್ದು ಸಾಹಿತ್ಯದ ಪೈರು. ಮತ್ತೆ ಫಲ ವೈಚಾರಿಕತೆ. 'ನಾನು ಕವಿಯಲ್ಲ. ನನ್ನದು ಕಲೆಯಲ್ಲ' ಎಂದರೂ ಕುವೆಂಪು ಅವರದ್ದು ಸಾಹಿತ್ಯದ್ದೇ ಕೃಷಿ" –ಎಂದು ಡಾ. ಪೂರ್ಣಿಮಾ ಗುರುತಿಸಿದ್ದಾರೆ.

"ವಚನಕಾರರು ಮೊದಲು ಖಂಡಿಸಿದ್ದು ಸಾಮಾಜಿಕ ಶ್ರೇಣೀಕರಣವನ್ನು. ಬಸವಣ್ಣನವರಂತೆ ಕುವೆಂಪು ಸಹ ಕಟ್ಟಾ ಸಮಾಜವಾದಿಯೇ, 'ಮೇಲಿಲ್ಲವೋ ಕೀಳಿಲ್ಲವೋ / ಸರ್ವಸಮಾನದ ರಾಜ್ಯ / ಅಧ್ಯಕ್ಷನೋ ಸೇನಾನಿಯೋ! ಕಾಯಕವೆಲ್ಲವೂ ಪೂಜ್ಯ' –ಹೀಗೆ ಸಕಲ ಶ್ರೀಸಾಮಾನ್ಯರಿಗೂ ಕುವೆಂಪು ದೀಕ್ಷಾಗೀತೆ ಬೋಧಿಸಿದರು." –ಎಂದು ಬರೆಯುವ ಪೂರ್ಣಿಮಾ ಲೇಖನದುದ್ದಕ್ಕೂ ಕುವೆಂಪು ಮತ್ತು ಬಸವಣ್ಣನವರ ಸಾಹಿತ್ಯ ಪ್ರಕಾರ ಬೇರೆಬೇರೆಯಾದರೂ ವಿಚಾರಧಾರೆ ಒಂದೇ ರೀತಿಯಾಗಿವೆ ಎಂದಿದ್ದಾರೆ.

ಕನ್ನಡ ಸಾಹಿತ್ಯಲೋಕ ೨೦ ನೇ ಶತಮಾನವೊಂದರಲ್ಲೇ ಕಂಡಿರುವಷ್ಟು ಪುಟ ಮಹಿಳಾ ಸಾಹಿತಿಗಳನ್ನು ಕಳೆದ ೨೦ ಶತಮಾನಗಳ ಕಾಲ ಕಂಡಿಲ್ಲ ಎನ್ನುವ ಲೇಖಕಿ ಅಕ್ಕಮಹಾದೇವಿ, ಮುಕ್ತಾಯಕ್ಕ, ಗಂಗಾಂಬಿಕೆ, ನೀಲಾಂಬಿಕೆ, ನಾಗಲಾಂಬಿಕೆ, ಸೂಳೆಸಂಕಮ್ಮ, ಬೊಂತಾದೇವಿ, ಅಕ್ಕಮ್ಮ, ಆಮುಗೆ ರಾಯಮ್ಮ, ಆಯ್ದಕ್ಕಿ

ಲಕ್ಕಮ್ಮ, ಮೋಳಿಗೆ ಮಹಾದೇವಿ, ಸತ್ಯಕ್ಕ, ಗೊಗ್ಗವ್ವೆ, ಕಾಳವ್ವೆ, ಲಿಂಗಮ್ಮ ಮುಂತಾಗಿ ಬಸವಯುಗದಲ್ಲಿ ಕಾಣುವ ಅಧಿಕ ಸಂಖ್ಯೆಯ ಕವಯಿತ್ರಿಯರನ್ನು ಗುರುತಿಸಿದ್ದಾರೆ.

ಹೊಯ್ಸಳ ದೊರೆ ಒಂದನೇ ಬಲ್ಲಾಳನ ಆಶ್ರಯದಲ್ಲಿದ್ದ ಕಂತಿ ಅಥವಾ ಕಂತಿಕೆ ಎಂಬ ಕವಯಿತ್ರಿಯ ಬಗೆಗೆ ಪೂರ್ಣಿಮಾ ವಿವರವಾದ ಮಾಹಿತಿಗಳನ್ನು ಕಲೆಹಾಕಿದ್ದಾರೆ. ಕನ್ನಡ ಸಾಹಿತ್ಯ ಚರಿತ್ರೆಯ ಅಭ್ಯಾಸಿಗಳಿಗೆ ಕಂತಿಯ ವಿಷಯ ಕುತೂಹಲ ಹುಟ್ಟಿಸುವಂತಿದೆ.

'ಅಣ್ಣಾ, ನಾನು ಹೆಂಗೂಸಲ್ಲ', 'ಸಂಸಾರವೆಂಬ ಹಗೆಯಯ್ಯ' ಲೇಖನಗಳು ಸ್ತ್ರೀವಾದೀ ನೆಲೆಯಲ್ಲಿ ವಚನಗಳನ್ನು ಆಧರಿಸಿ ವಿವರಿಸುತ್ತವೆ. ಸ್ತ್ರೀಗೆ ಸಾಮಾಜಿಕ ನ್ಯಾಯ ಇರಬೇಕೆನ್ನುವ ಅಗತ್ಯವನ್ನು ಸಾರಿ ಹೇಳುತ್ತವೆ.

ಸಾಹಿತ್ಯ ಭಾಷೆ, ಸ್ವಾತಂತ್ರ್ಯ ಚಳುವಳಿ, ಸ್ತ್ರೀವಾದೀ ಚಿಂತನೆಗಳನ್ನೊಳಗೊಂಡು ಟಿ. ಸಿ. ಪೂರ್ಣಿಮಾ ಅವರ ವಿಚಾರಲಹರಿ ಕಣ್ಣಳತೆಯಲ್ಲಿ ಸಾಗುತ್ತವೆ. ಪೂರ್ಣಿಮಾ ಮೂಲತಃ ಕವಯಿತ್ರಿ. 'ಕಣ್ಣಳತೆ' ಎಂದು ಪುಸ್ತಕದ ಹೆಸರಿಡುವಲ್ಲೇ ಅವರ ಕವಿಮನಸ್ಸು ಕೆಲಸ ಮಾಡಿದೆ.

ಫಲ, ಪೈರು, ಇಳುವರಿ, ಕಸುಬು ಹೀಗೆ ಗ್ರಾಮೀಣ ಕೃಷಿಜೀವನದಲ್ಲಿ ಬಳಕೆಯಾಗುವ ಶಬ್ದಗಳು ಪೂರ್ಣಿಮಾ ಅವರ ವೈಚಾರಿಕ ಲಹರಿಯ ಲೇಖನಗಳಲ್ಲಿ ಬಳಕೆಯಾಗುತ್ತವೆ. ಈ ಲೇಖನಗಳಿಗೆ ಸರಾಗವಾಗಿ ಓದಿಸಿಕೊಳ್ಳುವ ಗುಣವಿದೆ.

– ಬಂದಗದ್ದೆ ರಾಧಾಕೃಷ್ಣ, ಪುಸ್ತಕ ಹೊಂಬಾಳಿ, ಕೆಳದಿ ಅಂಚೆ, ಸಾಗರ-೫೭೭ ४೦೧ ಜಿ. ಶಿವಮೊಗ್ಗ

೪. ಇಬ್ಬನಿ : ಅಪ್ಪಾಸಾಹೇಬ ಅಲಿಬಾದಿ

ವಿನೂತನ ಪ್ರಕಾಶನ, ಶಾಂತಿನಿಕೇತನ, ಜಯನಗರ, ಅಥಣಿ - ೫೯೧ ೩೦೪, ಪ್ರ.ಮು. ೨೦೦೩, ಪು. ೭೪, ರೂ. ೬೦/-

ಈ ಸಂಗ್ರಹಕ್ಕೆ ಮುನ್ನುಡಿ ಬರೆದ ಚಂಪಾ ಹೇಳುತ್ತಾರೆ : "ಸಾಮಾನ್ಯ ಹೇಳಿಕೆಗಳನ್ನೇ 'ಪದ್ಯ' ರೂಪದಲ್ಲಿ ಕೊಡುವದು; ಹಳೆ ರೂಪಕಗಳ ಬಳಕೆ; ಪ್ರಾಸದ ಚಟಕ್ಕಾಗಿಯೇ ಕವನ ಕಟ್ಟುವದು– ಇವೆಲ್ಲ ನಮ್ಮ ಇಂದಿನ ಬಹುತೇಕ 'ಹನಿಕವಿ'ಗಳಲ್ಲಿ ಕಾಣುವ ದೋಷಗಳು." ಈ ವಿಶ್ಲೇಷಣೆಯನ್ನು ಬರೆಯುವಾಗ, ಅಪ್ಪಾಸಾಹೇಬ ಅಲಿಬಾದಿ ಅವರ ಹೆಸರನ್ನು ವೈಯಕ್ತಿಕವಾಗಿಯೇ ಹೇಳುವ ಬದಲು, ಚಂಪಾ ಇಲ್ಲಿ 'ಬಹುತೇಕ' ಎಂಬ ಸಾರ್ವತ್ರಿಕ ಶಬ್ದವನ್ನು ಬಳಸಿದ್ದಾರೆ ಎನಿಸುತ್ತದೆ. ಏಕೆಂದರೆ, ಈ ವಿಶ್ಲೇಷಣೆಗೆ ಹೊಂದಿಕೊಳ್ಳುವ ಹನಿಗವಿತೆಗಳೇ ಈ ಸಂಗ್ರಹದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ. ಹಾಗಿದ್ದೂ, ಕೆಲವಾದರೂ ರಚನೆಗಳಲ್ಲಿ ಉತ್ತಮ ಕಲ್ಪನೆಗಳಿವೆ, ಕಾವ್ಯಾಂಶಗಳಿವೆ :

ಉದಾ. : ೧. 'ಲೆಕ್ಕ ಹಾಕುವುದೆಂದರೆ : / ಹರಿವ ನೀರಿಗೆ / ಸುಳಿವ ಗಾಳಿಗೆ / ತೆರಿಗೆ ಹಾಕಿದಂತೆ',

೨. 'ನೆನಪಿನ ಮೋಡಗಳು / ಹರ್ಷದ ವರ್ಷಗರೆದರೆ / ಒಮ್ಮೊಮ್ಮೆ ಕಂಗಾಲಾಗಿ / ಕಂಬನಿ ಉದುರಿಸುತ್ತವೆ.'

ಈ ಪ್ರಶಂಸೆಯ ಆಚೆಯೂ ಒಂದು ಮಾತನ್ನು ನಾನು ಹೇಳಲೇಬೇಕು. ಅಪ್ಪಾಸಾಹೇಬ ಒಂದೆಡೆಗೆ ಬರೆಯುತ್ತಾರೆ : 'ಹಕ್ಕಿ / ಅದೆಷ್ಟು ಬಡಿದರೂ / ರೆಕ್ಕೆ / ಹೋಗಿ ತಲುಪುವುದೇ / ಚುಕ್ಕೆ.'

ವಾಸ್ತವವಾಗಿ, ಹೀಗೆ ವಿಚಾರ ಮಾಡುವದೇ ತಪ್ಪು. ಏಕೆಂದರೆ, ಪ್ರಕೃತಿದತ್ತವಾದ ಒಂದು (ಹಾರುವ) 'ಮಿತಿ'ಯನ್ನು ಅದೇ ಪ್ರಕೃತಿಯ ಕೊಡುಗೆಯಾದ ಇನ್ನೊಂದು 'ಅಮಿತ'ದ ಬದಿಗಿಟ್ಟು ಅಳೆದು, ಮೊದಲನೆಯದರ ಮಿತಿಯನ್ನು 'ಆಡಿಕೊಳ್ಳು'ವದು ಖಂಡಿತಕ್ಕೂ ಅನಪೇಕ್ಷಣೀಯ.

ಅಪ್ಪಾಸಾಹೇಬ ಅಲಿಬಾದಿ ಅವರು, ಚಂಪಾ ಅವರ ಮಾತಿನಲ್ಲಿಯೇ ಹೇಳುವದಾದರೆ: "ಸೀಮಿತ ಶಕ್ತಿಯನ್ನು ಮಿತವಾಗಿ ಬಳಸಿದರೆ ಕಾವ್ಯಕ್ಕೆ ಹೆಚ್ಚಿನ ಬಿಗುವು ಬರಲು ಸಾಧ್ಯ."

– ದೇಶಪಾಂಡೆ ಸುಬ್ಬರಾಯ, ನೆಲೆ, ೧೩, ಕುಸುಮನಗರ, ಶ್ರೀರಂಗಮಾರ್ಗ, ಧಾರವಾಡ-೫೮೦ ೦೦೮

೫. ಸುತ್ತಮುತ್ತ : ಡಾ. ಹೆಚ್. ಎ. ಪಾರ್ಶ್ವನಾಥ್

ನಿತಿನ್ ಪ್ರಕಾಶನ, ಸೋನಿಯಾ, ೬೨, ೩ ನೇ ತಿರುವು, ಕುರುಬರಹಳ್ಳಿ, ಸಿದ್ಧಾರ್ಥನಗರದ ಹತ್ತಿರ, ಮೈಸೂರು- ೧೧, ಪ್ರ.ಮು. ೨೦೦೪, ಪು. ೧೧೧, ರೂ. ೩೫/-

ಸಾರಸ್ವತಲೋಕಕ್ಕೆ ಪತ್ರಿಕಾ ಪ್ರಪಂಚವೂ ಒಂದು ಹೃದಯವಿದ್ದಂತೆ. ಪತ್ರಿಕೆಗಳಲ್ಲಿ ಓದುಗರ ನೇರ ಅನಿಸಿಕೆ, ಅಭಿಪ್ರಾಯ, ಪ್ರತಿಭಟನೆ, ಮಾರ್ಗದರ್ಶನ, ಸಲಹೆ-ಸೂಚನೆ, ಅನೇಕ ಸಂಶೋಧನೆಗಳಿಗೂ ಪ್ರೇರಣೆಯಾಗಬಲ್ಲ ದನಿಗಳು ಸದಾ ಮಿಡಿಯುತ್ತಿರುತ್ತವೆ. ಅಂತೆಯೇ ಕರ್ನಾಟಕದಾದ್ಯಂತ ಹೆಸರು ಮಾಡಿರುವ ಎಲ್ಲ ದಿನಪತ್ರಿಕೆ, ನಿಯತಕಾಲಿಕಗಳಲ್ಲಿಯ ವಾಚಕರ ವಾಣಿಗಳಲ್ಲಿ ಅಭಿವ್ಯಕ್ತಗೊಳಿಸಿದ ತಮ್ಮ ನೇರ ಅನಿಸಿಕೆ, ವಾದಮಂಡನೆ, ಸಂಶೋಧನೆ, ಹೂತುಹೋಗಿರುವ ಶಿಲಾಶಾಸನದ ಬಗೆಗಿನ ವಿವರ, ಇತಿಹಾಸ, ಕನ್ನಡ ನೆಲ-ಜಲದ ಸಮಸ್ಯೆಗಳ ಕುರಿತು ಆಂದೋಲನ, ರಂಗಭೂಮಿ, ಚಲನಚಿತ್ರ ವಿಷಯಗಳಿಗೆ ಸಂಬಂಧಿಸಿದ ತಮ್ಮ `ವಾಚಕರ ವಾಣಿ'ಗಳನ್ನು ಒತ್ತಟ್ಟಿಗೆ ತಂದು ಸಂಪಾದಿಸಿ ತಮ್ಮ `ಸುತ್ತಮುತ್ತ'ದ ತಟ್ಟೆಯಲ್ಲಿ ವಿಧವಿಧವಾದ ವ್ಯಂಜನಗಳನ್ನು ಓದುಗರ ಮುಂದೆ ಬಿಡಿಸಿಟ್ಟಿದ್ದಾರೆ ಡಾ. ಹೆಚ್. ಎ. ಪಾರ್ಶ್ವನಾಥರು.

ಡಾ. ಪಾರ್ಶ್ವನಾಥರು ವೃತ್ತಿಯಿಂದ ವೈದ್ಯರಾಗಿದ್ದರೂ ಪ್ರವೃತ್ತಿಯಿಂದ, ಸದಾ ಲವಲವಿಕೆಯಿಂದ ಸಾಹಿತ್ಯ, ಸಂಸ್ಕೃತಿ, ಕನ್ನಡ ಭಾಷಾಭಿಮಾನ, ಆಂದೋಲನ, ವೈಚಾರಿಕ ಪ್ರತಿಭಟನೆ, ಆರೋಗ್ಯಕರ ವಾದಮಂಡನೆ, ರಂಗಭೂಮಿ ಚಟುವಟಿಕೆ, ಚಲನಚಿತ್ರ ಪ್ರಪಂಚದ ಒಳ ಹೊರಗುಗಳು, ಅನೇಕ ಕಣ್ಮರೆಯಾಗುತ್ತಿರುವ ಶಿಲಾಶಾಸನಗಳ ಸಂಶೋಧನೆ ಇತ್ಯಾದಿಯಾಗಿಯೂ ಹಾಗೂ ಸಾಮಾಜಿಕ ಕಳಕಳಿಗೆ ಸಂಬಂಧಿಸಿದಂತೆ ವೈವಿಧ್ಯಮಯ ವಿಷಯಗಳಿಗೆ ಸ್ಪಂದಿಸುವ ಚಿಂತಕ, ಹಿತಚಿಂತಕರಾಗಿರುವುದು ಅಪರೂಪವೆನಿಸುತ್ತದೆ. `ವಾಚಕರ ವಾಣಿ'ಯಂಥ ಅಲಕ್ಷಿತ ಅಂಕಣಕ್ಕೆ ಒಂದು ಸಾಹಿತ್ಯಿಕ ಹೊಸ ಆಯಾಮವನ್ನೇ ಒದಗಿಸಿಕೊಟ್ಟಿರುವುದು ಹೊಸತನಕ್ಕೆ ತುಡಿಯುತ್ತಿರುವ ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಂತಿದೆ.

ರಂಗಭೂಮಿಗೆ ಸಂಬಂಧಿಸಿದಂತೆ ಕನ್ನಡದ ಶ್ರೇಷ್ಠ ನಾಟಕಕಾರರಾದ ಶ್ರೀರಂಗರನ್ನು ಕುರಿತು ಲಘುವಾಗಿ ಮಾತನಾಡಿದ ಹಿರಿಯ ಚಿಂತಕ ಡಾ. ಕೆ. ರಾಘವೇಂದ್ರರಾವ್ ಅಂಥವರನ್ನು ಸಹ ಬಿಡದೆ ತಮ್ಮ `ಚಿಂತನ ಮಂಥನ'ದ ಚಾವಡಿಗೆ ಎಳೆದು ತರುವದಕ್ಕೂ ಹಿಂದೆ ಮುಂದೆ ನೋಡುವದಿಲ್ಲ ಡಾ. ಪಾರ್ಶ್ವನಾಥರು!

ಹಲವು ಪ್ರಸಂಗಗಳಿಗೆ, ವ್ಯಕ್ತಿಗಳಿಗೆ ಕನ್ನಡಿ ಹಿಡಿಯುವ ಕೃತಿ ಇದು.

– ಡಾ. ಮೋತಿಲಾಲ ಹಲವಾಯಿ, ವಿಶಾಲ, ೨ ನೇ ಮುಖ್ಯರಸ್ತೆ, ಶಕ್ತಿನಗರ, ಧಾರವಾಡ-೫೮೦ ೦೦೪

೬. ತೇಜಸ್ವಿ ಕಥನ : ಟಿ. ಪಿ. ಅಶೋಕ

ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ-೫೭೭ ೪೧೭, ಪ್ರ.ಮು. ೨೦೦೪, ಪು. ೧೩೭, ರೂ. ೮೦/-

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯ ಎಸ್ಟೇಟಿನ ಮಧ್ಯೆ ಮನೆ ಮಾಡಿ ಕುಳಿತ ತೇಜಸ್ವಿ, ಅಲ್ಲಿಂದ ಹೊರಡಿಸುವ ಸಾಹಿತ್ಯದ ಋಜುಮಾರ್ಗಗಳು ಕನ್ನಡದ ಸಹೃದಯರ ಮನಸ್ಸುಗಳನ್ನು ಮೀರಿ ಸಾಗಿವೆ. ಕಾದಂಬರಿಕಾರನಾಗಿ, ಕವಿಯಾಗಿ, ಕತೆಗಾರನಾಗಿ, ನಾಟಕಕಾರನಾಗಿ, ವಿಮರ್ಶಕನಾಗಿ, ಛಾಯಾಗ್ರಾಹಕನಾಗಿ, ಚಿತ್ರಕಾರನಾಗಿ –ಹೇಗೆ ಹೇಗೆಲ್ಲ ತೇಜಸ್ವಿಯವರು ಎಡತಾಕಿದರೂ ಗೆದ್ದವರು ಅವರ ಅಭಿಮಾನಿ ಸಹೃದಯಿಗಳೆ.

ಕನ್ನಡದ ಪ್ರತಿಭಾಸಂಪನ್ನ ವಿಮರ್ಶಕ ಟಿ.ಪಿ. ಅಶೋಕ ಅವರು ತೇಜಸ್ವಿಯವರನ್ನು ಅರ್ಥ ಮಾಡಿ ಕೊಳ್ಳುವ ಗಾಢ ನೆಲೆಗಳನ್ನು ಕಂಡುಕೊಂಡಿದ್ದಾರೆ. ತೇಜಸ್ವಿಯವರ ಕೃತಿಗಳ ಅಂತರ್‌ಸಂಬಂಧದ ನೆಲೆಗಳನ್ನು ಕಂಡುಕೊಳ್ಳುವ ಮೂಲಕ ಅವುಗಳೊಳಗಿನ ಸ್ಥಾಯೀ ಗುಣಗಳು ಹಾಗೂ ಅದನ್ನು ಕಾರ್ಯಗತಗೊಳಿಸಲು ಅವರು ಬಳಸುವ ಸಲಕರಣೆಗಳು ಮುಂತಾದುವನ್ನು ದಟ್ಟ ಮನವರಿಕೆಯ ಅನಂತರ 'ತೇಜಸ್ವಿ ಕಥನ'ದಲ್ಲಿ ಪ್ರಕಟಿಸಿದ್ದಾರೆ.

ಒಂದೊಂದು ಕೃತಿಯ ಕುರಿತು ವಿಮರ್ಶಿಸುವಾಗಲೂ ಒಂದೊಂದು ಕ್ರಿಯಾತ್ಮಕ ವಿಶೇಷಣಗಳು ತೇಜಸ್ವಿಯವರ ಮಡಿಲೇರುತ್ತವೆ. ಅಬಚೂರಿನ ಪೋಸ್ಟಾಫೀಸಿನಲ್ಲಿ ತೇಜಸ್ವಿಯವರು ನಡೆಸುವ 'ಅಸ್ತಿತ್ವವಾದೀ ಹುಡುಕಾಟ', ಚಿದಂಬರ ರಹಸ್ಯದೊಳಗಿನ 'ಕಲಾತ್ಮಕ ಜಾಣ್ಮೆ', ಜುಗಾರಿ ಕ್ರಾಸ್‌ನಲ್ಲಿ ಕಂಡುಕೊಂಡ 'ವಿಶ್ವಾತ್ಮಕ ಲೀಲೆ'ಯ ಆಯಾಮ, ಪರಿಸರದ ಕತೆ, ಕಿರುಗೂರಿನ ಗಯ್ಯಾಳಿಗಳಲ್ಲಿ ನೆಲೆಗೊಳಿಸಿರುವ 'ವೈನೋದಿಕ ದರ್ಶನ', 'ಅಣ್ಣನ ನೆನಪಿ'ನೊಳಗಣ ಸಂಶ್ಲೇಷಣಾತ್ಮಕ ಗ್ರಹಿಕೆ, ಅಲೆಮಾರಿಯ ಅಂಡಮಾನ್ ಹಾಗೂ ಮಹಾನದಿ ನೈಲ್‌ನಲ್ಲಿ ಅಂತರ್ಗತ ಮಾಡಿ ಕಂಡಿರುವ 'ಬ್ರಹ್ಮಾಂಡ ಪ್ರಜ್ಞೆ' ಇತ್ಯಾದಿಗಳು ಅವರನ್ನು ಪ್ರಜ್ಞಾವಂತ ಸಾಹಿತಿಗಳ ಸಮೂಹದ ಉತ್ತುಂಗಕ್ಕೇರಿಸುತ್ತವೆ. ಟಿ. ಪಿ. ಅಶೋಕರ ಅಧ್ಯಯನದ ಫಲವಾಗಿ ನಿರೂಪಿತಗೊಂಡಿರುವ ತೇಜಸ್ವಿಕಥನದ ಕಾಣ್ಕೆಯಿದು.

ಇಲ್ಲಿ ತೇಜಸ್ವಿಯವರನ್ನು ಬಿಡಿಬಿಡಿಯಾಗಿಯೂ ಆ ಬಳಿಕ ಇಡಿಯಾಗಿಯೂ ಗ್ರಹಿಸಿದ ರೀತಿ ವಿಮರ್ಶಕನೊಬ್ಬನ ದೃಷ್ಟಿಕೋನದ ನಿಖರತೆಯ ಬಗೆಗಿನ ದಿಕ್ಸೂಚಿಯಾಗಿದೆ.

ತೇಜಸ್ವಿಯವರನ್ನು 'ಕಾರಂತ ಹಾಗೂ ಕುವೆಂಪು ಅವರ ಅರ್ಥಪೂರ್ಣ ಮುಂದುವರಿಕೆ' ಎಂಬುದಾಗಿ ಹೇಳಿದ್ದು ಅತ್ಯಂತ ಜವಾಬ್ದಾರಿಯುತ ಮಾತು. 'ತೇಜಸ್ವಿ ಕಥನ'ದಲ್ಲಿ ಅಶೋಕರು ಅದಕ್ಕೆ ಸಾಕಷ್ಟು ಸಮರ್ಥನೆಯನ್ನು ಒದಗಿಸಿದ್ದಾರೆ. ನಗರದ ವಾತಾವರಣವನ್ನು ಬದಿಗೊತ್ತಿ ಗ್ರಾಮೀಣ ಪರಿಸರಕ್ಕೆ ಆತದ್ದು ಮಾತ್ರವಲ್ಲ ಕೃಷಿಕರಾಗಿ ಬದುಕುತ್ತಲೇ ಸಾಹಿತ್ಯಕೃಷಿಯಲ್ಲಿ ತೊಡಗಿದ್ದು ಸ್ನಾತಕೋತ್ತರ ಪದವೀಧರರಾದ ತೇಜಸ್ವಿಯವರ ದಿಟ್ಟ ನಿಲುಮೆಗೆ ಹಿಡಿದ ಕನ್ನಡಿ. ಆದ್ದರಿಂದಲೇ ವಿದ್ಯಾವಂತ ಹಾಗೂ ಅವಿದ್ಯಾವಂತ ಪಾತ್ರಗಳ ನಡುವೆ ಸಾಕಷ್ಟು ಸಮತೋಲನ ತರುವುದಕ್ಕೆ ಅವರಿಗೆ ಸಾಧ್ಯವಾಗಿರಬೇಕು. ಒಂದು ಕಡೆ ಚೀಂಕ್ರ ಮೇಸ್ತ್ರಿಯಾದರೆ ಇನ್ನೊಂದು ಕಡೆ ಅರಿಸ್ಟಾಟಲ್. ಒಂದು ಕಡೆ ಮಂದಣ್ಣನಾದರೆ ಇನ್ನೊಂದು ಕಡೆ ಕರ್ವಾಲೋ. ಯಾರು ಯಾರಿಗಿಂತ ಬುದ್ಧಿವಂತರು? ರಾಮಾಯಣಕ್ಕೆ ಸಂವಾದಿಯಾಗಿ ಮಲೆಮಾದೇಶ್ವರ ಕಾವ್ಯ ನಿಲ್ಲಬಲ್ಲುದೆಂಬ ಚಿಂತನೆಯೇ ಕುಡಿಯೊಡೆದ ಕಾಲದಲ್ಲಿ ಮಂದಣ್ಣ ಹುಟ್ಟಿದ್ದಾನೆ!

ತೇಜಸ್ವಿಯವರ 'ನಿಗೂಢ ಮನುಷ್ಯರು', 'ಸ್ವರೂಪ'ದಂತಹ ಕೃತಿಗಳು ಪತ್ತೇದಾರಿಯ ಲಕ್ಷಣವನ್ನು ಒಳಗೊಂಡಿದ್ದರೂ ಅಶೋಕರು ಅದನ್ನು ಹಾಗೆ ಕರೆಯಲು ಒಪ್ಪುವುದಿಲ್ಲ. ಅದರೊಳಗಿನ ಶೋಧನಾತ್ಮಕ, ಸಂಶ್ಲೇಷಣಾತ್ಮಕ ಗುಣಗಳನ್ನು ಬಯಲಿಗೆಳೆಯುವ ಪ್ರಯತ್ನ ಅವರದು. ನವ್ಯತೆಯ ಜಾಡನ್ನು ಹಿಡಿದು ಬರೆಯತೊಡಗಿದ ತೇಜಸ್ವಿಯವರು ಮೊದಮೊದಲು ಪ್ರಕಟಪಡಿಸುತ್ತಿದ್ದ ಅಸಂಗತತೆಯೆಲ್ಲ ಕಾಲಕ್ರಮದಲ್ಲಿ ಬದುಕಿನ ದರ್ಶನವಾಗಿ ಮಾರ್ಪಟ್ಟದ್ದು ಮಾತ್ರವಲ್ಲದೆ ನವ್ಯದ ಏಕಮುಖೀ ದೃಷ್ಟಿಕೋನವನ್ನು ಬದಿಗಿಟ್ಟು ಬಹುಮುಖಿಯಾಗಿ ಪಲ್ಲಟಗೊಂಡ ಸ್ಥಿತ್ಯಂತರವನ್ನು ಅಶೋಕರು ಸ್ಪಷ್ಟವಾಗಿ ಗುರುತಿಸಿದ್ದಾರೆ. 'ಅಬಚೂರಿನ ಪೋಸ್ಟಾಫೀಸು' ಕಥಾಸಂಕಲನದ ಮುನ್ನುಡಿಯಲ್ಲಿ ಲೇಖಕರ ಮಾತುಗಳನ್ನು ಅಶೋಕರು ನಿರಾಕರಿಸದೆ ಅದರ ಜೊತೆಗೇ ಸಾಗಿದ್ದಾರೆ. ಆ ಮೂಲಕ ಬಳಿಕದ ಬಹುತೇಕ ಕೃತಿಯೊಳಗಿನ ಅಂತರ್‌ಸಂಬಂಧವನ್ನು ಕಂಡುಕೊಳ್ಳುವುದಕ್ಕೆ ತೇಜಸ್ವಿಯವರ 'ಆ' ಮಾತುಗಳೂ ಸಹಾಯಕ್ಕೆ ನಿಂತಿರಬಹುದು.

ಮುಂದೆ ಅಶೋಕರು 'ತೇಜಸ್ವಿಯವರ ಬರವಣಿಗೆ ಮನುಷ್ಯಕೇಂದ್ರಿತವಲ್ಲವೆಂದೂ ಒಟ್ಟಾರೆ ಜೀವಜಾಲದ ವ್ಯವಸ್ಥೆಯ ಅಂಗವೆಂದೂ, ಹೇಳುವುದರ ಮೂಲಕ ತೇಜಸ್ವಿಯವರ ಕೃತಿಗಳ ಮುಂದಿನ ಓದಿಗೆ ಓದುಗನನ್ನು ಸಿದ್ಧಪಡಿಸುತ್ತಾರೆ.

ಕೃತಿ ಓದಿದ ಬಳಿಕ ವಿಮರ್ಶಕ ಏನು ಹೇಳಿದ್ದಾನೆ ಎಂದು ಹುಡುಕುವ ಜಾಯಮಾನಕ್ಕೆ ವಿರುದ್ಧವಾಗಿ ವಿಮರ್ಶಕನ ಕನ್ನಡಕ ಧರಿಸಿ ಆ ಮೂಲಕ ಕೃತಿ ಓದುವ ಅಪಾಯ(!)ವೂ ಒದಗಿಬಂದರೆ ಅಚ್ಚರಿಪಡಬೇಕಾದ್ದಿಲ್ಲ. 'ತೇಜಸ್ವಿ ಕಥನ'ದ ಜಿದ್ದು ಆ ಮಟ್ಟಿಗಿದೆ.

– ಡಾ. ನಾ. ದಾಮೋದರ ಶೆಟ್ಟಿ, ಪ್ರಸಾಧನ, ಬಜ್ಪೆ, ಭಾರತೀನಗರ, ಮಂಗಳೂರು-೫೭೫ ೦೦೪ (ದ.ಕ.)

೭. ನಮ್ಮೊಳಗಿನ ನಾವು : ವನಮಾಲಾ ಕಟ್ಟೇಗೌಡರ

ಯುವಕರ ಸಂಘ, ರಾಮನಗರ, ಹಗರಿಬೊಮ್ಮನಹಳ್ಳಿ-೫೮೩ ೨೧೨, ಪ್ರ.ಮು. ೨೦೦೩, ಪು. ೧೦೮, ರೂ. ೫೦/-

ಮಾನವ ಸಂಬಂಧಗಳ ಸುತ್ತಮುತ್ತ ಹೆಣೆದಿರುವ ಹನ್ನೆರಡು ಸಣ್ಣ ಕಥೆಗಳ ಸಂಗ್ರಹವೇ 'ನಮ್ಮೊಳಗಿನ ನಾವು.' ಇಲ್ಲಿನ ಕೆಲವು ಕಥೆಗಳು ಆತ್ಮಚರಿತ್ರೆಯ ಭಾಗಗಳಂತಿದ್ದರೆ ಮತ್ತೆ ಕೆಲವು ಜೀವನಚರಿತ್ರೆಯ ಭಾಗಗಳಂತಿವೆ. ಲೇಖಕಿ ವನಮಾಲಾ ಕಟ್ಟೇಗೌಡರ ಅವರೇ ಅರಿಕೆಯಲ್ಲಿ ಇದನ್ನು "ಒಂದಿಷ್ಟು ಸ್ವಂತ ಅನುಭವಗಳು, ಒಂದಿಷ್ಟು ನೋಡಿದ, ಕೇಳಿದ ಘಟನೆಗಳ ಆಧಾರದ ಮೇಲೆ ಬರೆದ ಕಥೆಗಳು" ಎಂದು ತಿಳಿಸಿರುತ್ತಾರೆ. ಇಡೀ ಸಂಕಲನದ ಕಥೆಗಳು ಮಾತ್ರ ಒಂದು ಕಾದಂಬರಿಯ ಬಿಡಿಬಿಡಿ ಅಧ್ಯಾಯಗಳಂತಿದ್ದು ಒಂದೇ ಬಾರಿ ಓದಬಹುದು ಅಥವಾ ಬಿಡಿಬಿಡಿಯಾಗಿಯೂ ಓದಬಹುದು. 'ಅವಸ್ಥೆ', 'ಹಸಿವು', 'ಒಂದು ಮಗುವಿನ ಸುತ್ತ' ಮುಂತಾದ ಕಥೆಗಳನ್ನು ಓದುವಾಗ ನಮಗರಿವಿಲ್ಲದಂತೆ ನಮ್ಮ ಕಣ್ಣುಗಳು ಮಂಜಾಗುತ್ತವೆ. "ಬದುಕೋದಕ್ಕೆ ಕೈ ಕಾಲು, ಕಣ್ಣು, ಕಿವಿಗಳಿಗಿಂತ ಆರೋಗ್ಯಕಾರಿ ಮನಸ್ಸು ಮುಖ್ಯ, ಹೃದಯ ಮುಖ್ಯ, ಅವೆರಡೂ ನಿಮಗದಾವಲ್ಲ ಮಾಯಿಂದಿ". (ಪು. ೫೪) "ನೀವು ಜೀವಿಸ್ತಾ ಇರೋದು ಇಲ್ಲಗಳ ಸಾಮ್ರಾಜ್ಯದಲ್ಲಿ ಮಾಯಿಂದಿ, ಪ್ರೀತಿಯ ಸಾಮ್ರಾಜ್ಯದಲ್ಲಿ. ನಿಮ್ಮ ಗಂಡ, ಅತ್ತೆ, ಮಾವ, ಮಕ್ಳು- ನಿಮ್ಮನ್ನ ತುಂಬ ಪ್ರೀತಿಸ್ತಿದ್ದಾರೆ. ಅವ್ರ ಪ್ರೀತಿಗಾದ್ರೂ ಬೆಲೆಕೊಟ್ಟು ನೀವು ಬದುಕಿಗೆ ಸ್ಪಂದಿಸಲೇಬೇಕು" (ಪು. ೫೫), "ಈ ಜಗತ್ತು ನಿಂತಿರೋದೇ ಪ್ರೀತಿ ಹಾಗೂ ನಂಬಿಕೆಯ ಆಧಾರದ ಮೇಲೆ. ಇದಕ್ಕಿಂತ ಹೆಚ್ಚಿಗೆ ನಾನೇನೂ ಹೇಳಲಾರೆ" (ಪು. ೫೬) ಮುಂತಾದ ವಾಕ್ಯಗಳು ಪ್ರೀತಿಯ ಬಗ್ಗೆ, ಬದುಕಿನ ಬಗ್ಗೆ ಸುಂದರ ಭಾಷ್ಯಗಳಾಗಿವೆ. ಲೇಖಕಿ ತಿಳಿಸಿರುವಂತೆ ಅದಮ್ಯ ಜೀವನೋತ್ಸಾಹದ ಬಗ್ಗೆ ಇದಕ್ಕಿಂತ ಹೆಚ್ಚಿಗೆ ನಾನೇನೂ ಹೇಳಲಾರೆ.

"ಮನದೊಳಗಿನ ಕಿಚ್ಚು" ಕತೆಯಲ್ಲಿ ಮಾಯಿಯನ್ನು ಸುಧಾಕರ ತಿರಸ್ಕರಿಸುವ" "ಅಭಿಪ್ರಾಯ ಭೇದಗಳಿದ್ರ ಹ್ಯಾಂಗಾದ್ರೂ ಹೊಂದ್ಕೊಂಡು ಬದುಕಬಹುದು, ಆದರೆ ಜೀವನ ವಿಧಾನನS ಬ್ಯಾರೆ ಇದ್ರ ಹ್ಯಾಂಗ ಹೊಂದಿಕಿ ಆಕ್ಕೈತಿ", ವಾಕ್ಯಗಳು ನಮ್ಮೆಲ್ಲರಿಗೂ ಆಗುವ ಅನುಭವಗಳೇ ಆಗಿವೆ. "ನಮ್ಮೊಳಗಿನ ನಾವು" ಕತೆ ವಿಡಂಬನೆ-ವ್ಯಂಗ್ಯಗಳಿಂದ ಕೂಡಿದ್ದು ಬಹುಕಾಲ ನೆನಪಿನಲ್ಲಿ ಉಳಿಯುವಂತಿದೆ. "ಉರಿ ಬರಲಿ ಸಿರಿ ಬರಲಿ" ಕಥೆಯಲ್ಲಿ ಮಾನವೀಯ ನೆಲೆಗೆ ಬೆಲೆ ಇದ್ದರೆ, "ಒಂದು ಮಗುವಿನ ಸುತ್ತ" ಕಥೆಯಲ್ಲಿ ಮಹಿಳೆಯನ್ನು ಉದಾತ್ತೀಕರಿಸುವ ಧೋರಣೆಯಿದೆ. "ಹಸಿವು" ಕತೆಯಲ್ಲಿ ದಾಂಪತ್ಯದ ಸಮಸ್ಯೆಗಳ ವಿಶ್ಲೇಷಣೆ ಇದ್ದರೆ "ಆಸ್ಫೋಟ"ದಲ್ಲಿ ಲೈಂಗಿಕ ಸಂಬಂಧಗಳ ನಿರೂಪಣೆ ಇದೆ. ಮಹಿಳಾ ಬರಹಗಾರ್ತಿಯರೆಂದರೆ ಪುರುಷರನ್ನು ಅತಿಯಾಗಿ ತಿರಸ್ಕರಿಸಿ ಮಹಿಳೆಯರನ್ನು ಅತಿಯಾಗಿ ಪುರಸ್ಕರಿಸಬೇಕಿಲ್ಲ ಎಂಬುದಕ್ಕೆ ಒಂದು ಉತ್ತಮ ಉದಾಹರಣೆ ಈ ಸಂಕಲನ. ಮಹಿಳೆಯೊಬ್ಬರು ಇಷ್ಟೊಂದು ಸಮತೂಕವಾಗಿ ಬರೆಯುವುದು, ಬರೆದರೂ ತಂತ್ರ ಮತ್ತು ಭಾಷಾ ದೃಷ್ಟಿಗಳಲ್ಲಿ ಯಶಸ್ವಿಯಾಗಿರುವುದು ವಿಶೇಷವಾಗಿದೆ. ಗಂಡು-ಹೆಣ್ಣುಗಳಲ್ಲಿ ಮೇಲು-ಕೀಳೆಂಬ ಸಿದ್ಧ ಸಿದ್ಧಾಂತಕ್ಕೆ ಬದಲಾಗಿ ಇಬ್ಬರೂ ಸಮಾನರೆಂಬುದನ್ನು ಕತೆಗಳ ಮೂಲಕ ವಿವರಿಸಿದ್ದಾರೆ.

ಬಾಹ್ಯ ಸಂಪರ್ಕದ ಕೊರತೆಯ ನಡುವೆಯೂ ಅದಮ್ಯ ಜೀವನೋತ್ಸಾಹದಿಂದ ಬರೆದ ಈ ಹನ್ನೆರಡೂ ಕಥೆಗಳು ಒಂದಕ್ಕಿಂತ ಒಂದು ಚೆನ್ನಾಗಿವೆ. ನಿರೂಪಣೆ, ತಂತ್ರ ಮತ್ತು ಭಾಷೆ ಒಂದಕ್ಕೊಂದು ಪೂರಕವಾಗಿವೆ.

– ಜಿ. ಟಿ. ಶ್ರೀಧರ ಶರ್ಮ, ತ್ಯಾಗರಾಜ ವಿಸ್ತರಣೆ, ಅಜ್ಜಂಪುರ-೫೭೭ ೫೪೭, ತಾ. ತರೀಕೆರೆ

೮. ಬಡಜನರು : ಫಿಯೋದರ್ ದಾಸ್ತೊಯೆವ್ಸ್ಕಿ : ಅನು. ಶ್ರೀನಿವಾಸ ವಿ. ಸುತ್ರಾವೆ

ಐಬಿಎಚ್ ಪ್ರಕಾಶನ, ಜಯನಗರ, ಬೆಂಗಳೂರು-೫೬೦ ೦೮೦, ಪ್ರ.ಮು. ೨೦೦೩, ಪು. ೧೫೨, ರೂ. ೬೦/-

ಫಿಯೋದರ್ ದಾಸ್ತೊಯೆವಸ್ಕಿ (೧೮೨೧-೧೮೮೧) ಓರ್ವ ಶ್ರೇಷ್ಠ ರಷ್ಯನ್ ಕಾದಂಬರಿಕಾರ. ಅವನು ೨೪ ವರ್ಷದವನಿದ್ದಾಗ ಬರೆದು ಪ್ರಸಿದ್ಧಿ ಪಡೆದ ಪ್ರಥಮ ಕಾದಂಬರಿ. 'Poor Folk'ನ ಕನ್ನಡ

ಅನುವಾದ 'ಬಡಜನರು'. ಜಗತ್ತಿನ ಶ್ರೇಷ್ಠರ ಪುಸ್ತಕಗಳನ್ನು ಕನ್ನಡಕ್ಕೆ ನೀಡಬೇಕೆಂಬ ಐಬಿಎಚ್ ಪ್ರಕಾಶನದ ಆಶಯಕ್ಕೆ ಶ್ರೀನಿವಾಸ ವಿ. ಸುತ್ರಾವೆ ಅವರ ಸಮರ್ಥ ಅನುವಾದ ಪುಷ್ಟಿಯನ್ನೇ ನೀಡಿದೆ. ಬಡಜನರು ಅನುಭವಿಸಬೇಕಾದ ಅನ್ಯಾಯ, ಅಪಮಾನ, ಅವರ ಆಸೆ ನಿರಾಸೆಗಳು ಮನ ಮುಟ್ಟುವಂತೆ ಇಲ್ಲಿ ಚಿತ್ರಿತವಾಗಿವೆ. ಮಧ್ಯವಯಸ್ಕ (೪೫-೫೦) ಕೆಳದರ್ಜೆಯ ಕಾರಕೂನ ಮಕಾರ ಅವಕ್ಸೇಲಿಯವಿಚ್ ತಾನು ಪ್ರೀತಿಸುವ ತನ್ನ ದೂರದ ಸಂಬಂಧಿ ತರುಣಿ ವರ್ವರಾಳಿಗೆ ಬರೆದ ಅಂತಃಕರಣ, ಪ್ರೀತಿ, ಪ್ರೇಮ ತುಂಬಿದ ಪತ್ರಗಳ ವಿನಿಮಯವೇ ಕಾದಂಬರಿಯ ಹಂದರವಾಗಿದೆ. ಮನುಷ್ಯನ ಮನೋವ್ಯಾಪಾರಗಳ ಶೋಧನೆ, ಸನ್ನಿವೇಶಗಳನ್ನು ಕಲಾತ್ಮಕವಾಗಿ ರೂಪಿಸುವಿಕೆ, ಆದರ್ಶಮಯ ಮತ್ತು ಧರ್ಮಭೀರು ನಡವಳಿಕೆಯ ಸೂಕ್ಷ್ಮತೆಗಳು ಕಾದಂಬರಿಯುದ್ದಕ್ಕೂ ಚೆಲ್ಲುವರಿದಿವೆ, ವ್ಯಕ್ತಿ ಆತ್ಮಗೌರವದಿಂದ ಬದುಕಬೇಕೆನ್ನುವ ಎಚ್ಚರದೊಂದಿಗೆ ಮುಂದುವರಿಯುವ ಪತ್ರ ಪ್ರೇಮದ ತುಂಬ ಮೌಲ್ಯಗಳ ವಿಶ್ಲೇಷಣೆ ಕಂಡುಬರುತ್ತದೆ. ತನಗೆ ಆತ್ಮೀಯವೆನಿಸುವ ವ್ಯಕ್ತಿಯ ಭಾವನೆ, ಮನೋರಂಗದ ವಿಚಾರಗಳ ಕುರಿತಾದ ಗೌರವದ ಅಭಿವ್ಯಕ್ತಿ ಓದುಗರ ಮೆಚ್ಚುಗೆಯನ್ನು ಗಳಿಸುತ್ತದೆ. ರೋಮ್ಯಾಂಟಿಕ್ ಸಂಪ್ರದಾಯದ ಕಥನ ರೀತಿ, ರಶಿಯನ್ ಸಮಾಜದ ವಿಶಿಷ್ಟ ಪದರೂಪಗಳ ಅಳವಡಿಕೆಗಳಿಂದಾಗಿ ಇದೊಂದು ಅನುವಾದಿತ ಕೃತಿ ಎಂಬ ನೆನಪನ್ನು ನಮಗೆ ನೀಡುತ್ತದೆ. ಅಂಥ ಯಶಸ್ವಿ ಅನುವಾದಕ ಶ್ರೀನಿವಾಸ ವಿ. ಸುತ್ರಾವೆ ಮೆಚ್ಚುಗೆಗೆ ಪಾತ್ರರೇ ಹೌದು. ೧೯ ನೆಯ ಶತಮಾನದ ರಷ್ಯನ್ ಸಮಾಜದ ಚಿತ್ರಗಳು ಅಚ್ಚುಕಟ್ಟಾಗಿ ಇಲ್ಲಿ ಬಿಂಬಿತವಾಗಿವೆ. ಕಾದಂಬರಿ ಓದುಗರನ್ನು ಸೆಳೆದುಕೊಂಡು ಹೋಗುತ್ತದೆ. ಕಥಾನಾಯಕ, ಕಥಾನಾಯಕಿಯರ ಮನೋಚಿಂತನೆಯ ಆಳ ನಮಗೆ ಖುಶಿ ನೀಡುತ್ತದೆ. ಬಡಜನರು ವಾಸ್ತವ ಬದುಕಿನೊಂದಿಗೆ ಎತ್ತರದ ಚಿಂತನೆ ಮತ್ತು ವರ್ತನೆಗಳನ್ನು ಸಮಾಜ ಜೀವನದಲ್ಲಿ ಮೆರೆಯಬಲ್ಲರು ಎಂಬ ಸತ್ಯವನ್ನು ನಮಗೆ ಅರಹುತ್ತದೆ.

– ಶಿವಶಂಕರ ಹಿರೇಮಠ, ವಿಮುಕ್ತ, ೧೩ ಮಂಜುನಾಥ ಕಾಲನಿ, ಶಿವಗಿರಿ, ಧಾರವಾಡ-೫೮೦ ೦೦೭

೯. ಹೊನ್ನ ಬೆಳಕೆ ಬಾ : ಪಾರ್ವತಿ ಜಿ. ಐತಾಳ್

ಎನ್‌ಆರ್‌ಎಎಂಎಚ್ ಪ್ರಕಾಶನ, ಕೋಟೇಶ್ವರ-೫೭೬ ೨೨೨, ಪ್ರ.ಮು. ೨೦೦೪, ಪು. ೫೮, ರೂ. ೫೦/-

ಪಾರ್ವತಿ ಜಿ. ಐತಾಳ್ ಅವರ ಪ್ರಥಮ ಕವನ ಸಂಕಲನ 'ಹೊನ್ನ ಬೆಳಕೆ ಬಾ'. ಈ ಸಂಗ್ರಹದ ೪೭ ಕವನಗಳಲ್ಲಿ, ಗೃಹಿಣಿಯರ ಅಸಹಾಯಕತೆ, ಅವರು ಎದುರಿಸಬೇಕಾದ ಅಸಡ್ಡೆ ನಿರ್ಲಕ್ಷ್ಯಗಳ ಚಿತ್ರಣದೊಂದಿಗೇ, ಬದುಕಿನ ವಿವಿಧ ಆಯಾಮಗಳೂ ಅಭಿವ್ಯಕ್ತಗೊಂಡಿವೆ. 'ತನ್ನತನವ ಮರೆತು', 'ಮೂಗಿ ಮೂರ್ಖಳಂತೆ' ಗೃಹಲಕ್ಷ್ಮಿಯ ಪಟ್ಟ ಕಟ್ಟಿಕೊಂಡು ಎಷ್ಟು ಕಾಲ ಹೀಗೆ ಇರಲಿ ಎಂಬ ಚಿಂತನೆಯ ಎಳೆಯೊಂದಿಗೇ, 'ಮೊಗ್ಗುಗಳು ನಾವು, ಅರಳಗೊಡಿ, ಬೆಳೆಯಗೊಡಿ, ಬೆಳಗಬಿಡಿ' ಎಂಬ ವಿನಂತಿಯ ಧ್ವನಿಯೂ ಕೇಳಿಬರುತ್ತದೆ. ಆದರೆ, ದೈನ್ಯ, ವಿನಂತಿಗಳು ಉಪಯೋಗವಿಲ್ಲವೆಂದು ಕಂಡುಕೊಂಡ ಸ್ತ್ರೀಪ್ರಜ್ಞೆ ಎಚ್ಚತ್ತು ತನ್ನ ಶಕ್ತಿಮೂಲವನ್ನು, ತನ್ನ ಅಂತಸ್ಸತ್ವವನ್ನು ಕಂಡುಕೊಂಡು "ನಾ ನಿನಗಿದ್ದರೆ ನೀ ನನಗೆ" ಎಂದು ಹೇಳುವ ಹಂತವನ್ನು ತಲುಪುತ್ತದೆ. ಕುದುರೆ ಮತ್ತು ಕುದುರೆಸವಾರನ ಪ್ರತಿಮೆಯ ಮೂಲಕ ಪಾರ್ವತಿ ಇದನ್ನು ಅಭಿವ್ಯಕ್ತಿಸುತ್ತಾರೆ. "ಏ ಕುದುರೆ, ಎಂಥ ಹೆಡ್ಡಿ ನೀನು, ಕಡಿವಾಣ ಬಿಗಿ ಹಿಡಿದು ಎಳೆದು, ಚಾವಟಿ ಬೀಸುತ್ತಿರುವ ಸವಾರನನ್ನು ಕೆಳಗೆ ಕೆಡುವು" ಎಂದು ಕುದುರೆಗೆ ಸಲಹೆ ನೀಡುತ್ತಾರೆ. ಇಲ್ಲಿ ಕುದುರೆ ಹೆಣ್ಣಾಗಿ, ಗಂಡು ಸವಾರನಾಗಿ ಚಾಟಿ ಬೀಸುತ್ತಿರುವ ಸಂಸಾರದ ಚಿತ್ರಣವಿದೆ. ತಾನು ಶಕ್ತಿಯ ಮೂಲ ಎಂಬುದನ್ನು ಕುದುರೆ ಅರಿತಾಗ, ಸವಾರ, ಸವಾರನಾಗಿ ಮುಂದುವರಿಯುವುದು ಸಾಧ್ಯವಿಲ್ಲ. ಹಾಗೆಯೇ ಸ್ತ್ರೀ ತನ್ನ ಅಂತಸ್ಸತ್ವವನ್ನರಿತು, ಉಪಯೋಗ ಮಾಡಿಕೊಂಡರೆ ಅವಳ ಗುಲಾಮಗಿರಿ ತಪ್ಪುತ್ತದೆ. ತನ್ನ ಮೇಲೆ ಅಧಿಕಾರ ಮಾಡುವವರನ್ನು ತಡೆಯಬಹುದು. ಆದರೆ ಲೇಖಕಿ, ಕೆಡವಿದ ಸವಾರನಿಗೆ ಪ್ರೀತಿಯ ಪಾಠ ಹೇಳಬೇಕೆನ್ನುತ್ತಾರೆ.

``ಸೋತಲ್ಲದೆ ಕಲಿಯಲಾರ ಆತ ಪ್ರೀತಿಯ ಪಾಠ''. ಅಹಂಕಾರವಲ್ಲಿ ಪ್ರೀತಿ ಸಾಧ್ಯವಿಲ್ಲವೆಂಬುದನ್ನು ಸೂಚಿಸುವುದಲ್ಲದೇ, ಸ್ತ್ರೀಪುರುಷರು ಪರಸ್ಪರ ಅರಿತು ಹೊಂದುಕೊಂಡಾಗ ಅನ್ಯೋನ್ಯತೆ ಸಾಧ್ಯವೆಂಬುದನ್ನು ಕವಯಿತ್ರಿ ನಂಬುತ್ತಾರೆ. ಇಂದು ಸ್ತ್ರೀ ಅನುಭವಿಸುತ್ತಿರುವ ಬವಣೆಗೆ ಪುರುಷ ಮಾತ್ರವೇ ಹೊಣೆಯಲ್ಲ, ಸ್ತ್ರೀಯರ ಮೌನ ಸಮ್ಮತಿ, ನಿಷ್ಕ್ರಿಯತೆಗಳೂ ಕಾರಣವೆಂಬುದನ್ನು ಪಾರ್ವತಿಯವರ ಹಲವು ಕವನಗಳು ವ್ಯಕ್ತಪಡಿಸಿದರೂ, ಕೆಲವು ಕವನಗಳಲ್ಲಿ `ಇಲ್ಲಿ ಬರೀ ಮರಳು, ಇಲ್ಲದ ಸುಖದ ನೆರಳು' ಎಂಬ ನೈರಾಶ್ಯದ ಛಾಯೆ ಕಂಡುಬರುತ್ತದೆ. `ಊರು ಬೆಳೆದಿದೆ' ಎಂಬ ಕವನ, ಕೈಗಾರಿಕೆಗಳಿಂದಾಗಿ, ಸುಂದರ ವನಸಿರಿಯಿಂದ, ಸರಳವಾಗಿ ಕಂಗೊಳಿಸುತ್ತಿದ್ದ ಹಳ್ಳಿಗಳು ಬದಲಾಗಿ, ಊರುಗಳು, ಕಾರ್ಖಾನೆಗಳ ಹೊಗೆಯಿಂದ ತುಂಬಿಕೊಂಡಿರುವುದನ್ನು ಚಿತ್ರಿಸುತ್ತದೆ. `ಗಾಯ', ಈಗಲೂ ಹೆಣ್ಣುಮಕ್ಕಳು ಅಡಿಗೆ ಮನೆಗೆ ಅಂಟಿಕೊಂಡು, ಮನೆಯವರೆಲ್ಲರ ಸಾಕುಬೇಕುಗಳ ಬಗೆಗೆ ಗಮನ ನೀಡುತ್ತಿದ್ದರೂ, ಆ ಹೆಣ್ಣಿನ ಸಣ್ಣಪುಟ್ಟ ಗಾಯಗಳಿಗೆ, ಮನೆಯವರೆಲ್ಲರ ನಿರ್ಲಕ್ಷ್ಯವನ್ನೂ, ಅದರಿಂದ ಹೆಣ್ಣಿನ ಮನಸ್ಸಿಗಾಗುವ ನೋವನ್ನೂ ಚಿತ್ರಿಸುತ್ತದೆ.

ಪ್ರೀತಿಯ ಬಗೆಗಿನ ಸುಂದರ ಕವನದಲ್ಲಿ, ಮನಸ್ಸು ಕದ್ದವನನ್ನು ಹುಡುಕುತ್ತ ಹೊರಟು ಆತ ಸಿಗದೆ ನಿರಾಶಳಾದ ಕವಯಿತ್ರಿಗೆ 'ಇಲ್ಲೆ ಇರುವೆನಲ್ಲ, ನೀ ಕೊಟ್ಟ ಜಾಗದಲ್ಲಿ ಕುಳಿತಿರುವೆನಲ್ಲ' ಎಂಬ ಧ್ವನಿ ಕೇಳಿಸಿದಾಗ, ``ಒಳಗೆ ನೋಡಿದೆ ನಾನು, ಮುಗುಳುನಗುತ್ತ ಮುದ್ದಾಗಿ ಕುಳಿತವನ ಕಂಡು ನಾಚಿ ನೀರಾದೆ'' ಎಂದು ಬರೆಯುತ್ತಾರೆ. ಈ ಚಿತ್ರ, ಪ್ರಣಯ ಮತ್ತು ಶೃಂಗಾರ, ಭಕ್ತಿಯ ಮಜಲು ಮುಟ್ಟುವ, ಒಲಿದವರು ನಮ್ಮೊಳಗೇ ಇರುವರೆಂಬ ಸಮಾಧಾನದ ಸುಂದರ ಕಲ್ಪನೆಯನ್ನು ಮೂಡಿಸುತ್ತದೆ. ಪ್ರೀತಿ, ವೈಚಾರಿಕತೆ, ಮಾನವೀಯತೆ, ನಿರಾಶೆ, ಭರವಸೆ, ವಿಷಾದ, ಸೌಮ್ಯದ ಪ್ರತಿಭಟನೆಗಳನ್ನೊಳಗೊಂಡು ಪಾರ್ವತಿಯವರ ಕವನಗಳು ಜೀವನ್ಮುಖೀ ನಿಲವನ್ನು ಅಭಿವ್ಯಕ್ತಿಸುತ್ತವೆ. ಭಾವನೆಗಳನ್ನು, ಆಲೋಚನೆಗಳನ್ನು, ಕವನಗಳನ್ನಾಗಿ ಪರಿವರ್ತಿಸುವಾಗ ಕಾವ್ಯಾತ್ಮಕತೆಗೆ, ಇನ್ನಷ್ಟು ಗಮನ ಕೊಟ್ಟರೆ, ಪಾರ್ವತಿಯವರಿಂದ ಮತ್ತಷ್ಟು ಸುಂದರ ಕವನಗಳನ್ನು ನಿರೀಕ್ಷಿಸಬಹುದು.

– ಎಲ್. ವಿ. ಶಾಂತಕುಮಾರಿ, ೪ ನೇ ಮೇನ್, ೫ ನೇ ಕ್ರಾಸ್, ಪೂರ್ಣಪ್ರಜ್ಞ ಲೇಔಟ್, ಬನಶಂಕರಿ ३ ನೇ ಹಂತ, ಬೆಂಗಳೂರು-೫೬೦ ೦೮೫

೧೦. ಆಳು ಕೂಗಿನ ಹಕ್ಕಿ : ಬಸವರಾಜ ವಕ್ಕುಂದ

ಸಿವಿಜಿ ಪಬ್ಲಿಕೇಷನ್ಸ್, ೭೦, ೨ ನೇ ಮೇನ್, ಜಬ್ಬಾರ್ ಬ್ಲಾಕ್, ವೈಯಾಳಿಕಾವಲ್, ಬೆಂಗಳೂರು-೫೬೦ ೦೦३, ಪ್ರ.ಮು. ೨೦೦೪, ಪು. ೧೧೬, ರೂ. ೬೦/-

ಮಂಜುಗಡ್ಡೆ, ತುಹಿನ, ತುಂತುರ, ಆವಿ, ಹನಿ, ನೆರೆ, ತೊರೆ, ತರಂಗ, ಗುಳ್ಳೆ ಎಲ್ಲಕ್ಕೂ ಮೂಲ ನೀರು ಹೇಗೋ ಹಾಗೆ ಬಸವರಾಜ ವಕ್ಕುಂದ ಅವರ ಕವನ ಸ್ಫುರಣಕ್ಕೆ ನೋವು ಮೂಲದ್ರವ್ಯ. ಈ ನೋವೇ ವಿವಿಧ ರೂಪ ಆಕಾರ ತಳೆದು ವೈವಿಧ್ಯಮಯ ವಿಷಯಗಳನ್ನು ಹೊತ್ತು ಹೊಸ-ಹೊಸ ಕವನಗಳಾಗಿ ಹೊರಬಂದಿವೆ. ಇವರ ಕಾವ್ಯಪ್ರಜ್ಞೆಗೆ ಮನಸ್ಸನ್ನು ವಶೀಕರಣಗೊಳಿಸುವ ಶಕ್ತಿ ಇದೆ. ಲಾಭ-ಹಾನಿಯನ್ನು ಲೆಕ್ಕಹಾಕುವವರ ಪ್ರಪಂಚದಲ್ಲಿ ಲೆಕ್ಕಕ್ಕೆ ಮಾತ್ರ ಮಹತ್ವ, ವಸ್ತುವಿಗೆ ಅಲ್ಲ. ತೆಂಗಿನ ಕಾಯಿ ಒಳ್ಳೆಯದೆ, ಎತ್ತರದಿಂದ ಹಂಚಿನ ಮನೆಯ ಮೇಲೆ ಬಿದ್ದಾಗ ಹತ್ತಾರು ಹಂಚುಗಳನ್ನು ಒಡೆದಾಗ ಕಾಯಿ ಒಳ್ಳೆಯದೂ ಕೆಟ್ಟದ್ದೊ? ಲಾಭವೋ ಹಾನಿಯೋ ಅದು ಪರಿಸ್ಥಿತಿಗೆ ಬಿಟ್ಟದ್ದು ಹೇಗೋ ಹಾಗೆ, ಆಯಾ ಆಯಾಮಗಳಲ್ಲಿ ಕವಿತೆಗಳನ್ನಿಟ್ಟು ನೋಡಿದಾಗ ಒಂದೇ ಕವನದಲ್ಲಿ ಕವಿಯ ಎರಡು ಮೂರು ಭಾವಗಳನ್ನು ಕಾಣಬಹುದಾಗಿದೆ. ಹೀಗೆ ಕೆಲವು ಕವನಗಳನ್ನು ನೇರವಾಗಿ ಓದದೇ, ಪ್ರಜ್ಞೆಯಿಂದ ಫಿಲ್ಟರ್ ಮಾಡಿ ನೋಡಿದಾಗ, ಬುದ್ಧಿಯ ಒರೆಗಲ್ಲಿಗೆ ತಿಕ್ಕಿದಾಗ ಅದರ ಅಂತರಾರ್ಥ ತೆರೆದುಕೊಳ್ಳುತ್ತದೆ.

ಶಬ್ದಜಾಲವೆಲ್ಲ ಕವನವಾಗಲಾರದು, ಕೃತ್ರಿಮತೆಯ ಸೋಂಕಿಲ್ಲದ, ತಿಣುಕಾಟ ಕಸರತ್ತಿಲ್ಲದ ತೀರ ಸಹಜ ಸರಳ ಸುಂದರ ನಿಸ್ಪೃಹ ಕವನಗಳು ಇವು. ಅಪ್ಪನಿದ್ದಾಗಲೂ– ಇಲ್ಲದಾಗಲೂ ಕಣ್ಣೀರನ್ನೇ ಕಂಡಿದ್ದ ಅವ್ವ– ಯಾವ ಕಾಲಕ್ಕೂ ಜೀವನ ದುಃಖಮಯ ವೇದನೆ– ಮುಂದೆ 'ಜೀವನದಿ'ಯಲ್ಲಿ

ಒಳಗೊಳಗೆ ತೇವಗೊಳ್ಳುತ್ತ
ಒಣಬೇರುಗಳ ಹುಡುಕಿ ಜೀವಜಲವಾಗಿ ಹರಿಯಬೇಕು
ಬರಗಾಲದಲ್ಲಿ ಬತ್ತಿದರು ಮತ್ತೊಮ್ಮೆ
ತುಂಬಿಕೊಳ್ಳುವ ಕನಸ ಹೊಳೆಯಾಗಿ ಹರಿಯಬೇಕು

ಎನ್ನುವಲ್ಲಿ ಬೆಳಕು-ಹಸಿರು ತುಂಬಿ ನಂತರ ತರುವ ಭವಿಷ್ಯಕ್ಕಾಗಿ ಕವಿ ಆಶಾವಾದಿಯಾಗಿ ಕಾದಿದ್ದಾರೆ.

ನೋವುಗಳೇ ಬನ್ನಿ ನನ್ನ ಎದೆಗೆ
ಹಕ್ಕಿಗಳು ಬರುವಂತೆ ಗಿಡ, ಮರ, ಪೊದೆಗೆ

ವೈಯಕ್ತಿಕ ಭಾವಗಳನ್ನು ಪ್ರತಿಮೆ ಪ್ರತೀಕಗಳಾಗಿ ಸಾರ್ಥಕವಾಗಿ ಬೆಳೆಸಿಕೊಂಡಿದ್ದಾರೆ. 'ಗಮಗಮಿಸುವ ಕುಸುಮಗಳ ಹಾರ ಕಂಕಣ ಡಾಬು' come live with me and be my love ಇಂಗ್ಲಿಷ್ ಕವನವನ್ನು ನೆನಪಿಸುತ್ತದೆ. ಹೊರಗಿನ ದೀಪಕ್ಕೆ ಎಣ್ಣೆಯೇ ಉಸಿರು ಒಳಗಿನ ದೀಪಕ್ಕೆ ಉಸಿರೇ ಎಣ್ಣೆ ಎನ್ನುವಲ್ಲಿ ವಕ್ಕುಂದ ಅವರ ಅರಿವಿಗೆ ಬಾರದೇ, ಬೇಡವೆಂದರೂ ಅಧ್ಯಾತ್ಮ ಇಣುಕುತ್ತದೆ. ಒಳಗಿನ ದೀಪ-ಜ್ಯೋತಿ-ಚೈತನ್ಯ ಪರಮಾತ್ಮನ ಸ್ವರೂಪ ಉಸಿರಾಟ, ನಿರಂತರ ಪ್ರಯತ್ನ, ಕಾರ್ಯ-ಕಾರಣ ಸಂಬಂಧ. ಹೀಗೆ ಪ್ರೀತಿ, ಪ್ರೇಮ, ವಿರಹ ಆಕ್ರೋಶ, ಸಂಧಾನ, ಸುಧಾರಣೆ, ಸಹಾನುಭೂತಿಯನ್ನು ಮೊದಲ್ಗೊಂಡು ಅತ್ಯಮೂಲ್ಯ ವಿಚಾರಗಳನ್ನು ಕವಿ ಓದುಗರ ಮುಂದಿಡುತ್ತಾರೆ. ಕಾವ್ಯಪ್ರಪಂಚದಲ್ಲಿ ತಮ್ಮ ಸ್ವಂತಿಕೆಯ ಛಾಪು ಒತ್ತುತ್ತ ವಕ್ಕುಂದರು ಸಹೃದಯರ ಹೃದಯಕ್ಕೆ ಹತ್ತಿರವಾಗುತ್ತಾರೆ.

– ಸುಮಿತ್ರಾ ಹಲವಾಯಿ, ವಿಶಾಲ, ಶಕ್ತಿನಗರ, ೨ ನೇ ಮೇನ್, ಧಾರವಾಡ-೫೮೦ ೦೦೪

೧೧. ಅಪ್ಪ ಮತ್ತು ಮಣ್ಣು : ಶಶಿಕಲಾ ವೀರಯ್ಯಸ್ವಾಮಿ

ಸುವರ್ಣ ಪ್ರಕಾಶನ, ಸಿಂದಗಿ - ೫೮೬ ೧೨೮, ಪ್ರ.ಮು. ೨೦೦೪, ಪು. ೬೮, ರೂ. ೩೦/-

ಹದಿನಾಲ್ಕು ವರ್ಷಗಳ ಹಿಂದೆ ಬರೆದ ಲೇಖನವನ್ನು ಈಗ ಯಥಾವತ್ತಾಗಿ ಪುಸ್ತಕ ರೂಪದಲ್ಲಿ ಪ್ರಕಟಿಸಿರುವುದಾಗಿ ಶಶಿಕಲಾ ವೀರಯ್ಯಸ್ವಾಮಿಯವರು ಹೇಳಿಕೊಂಡಿದ್ದಾರೆ. ಸ್ವಕೇಂದ್ರಿತ, ಮಾಹಿತಿಪ್ರಧಾನ ಎನಿಸುವ ಕನ್ನಡದ ಬಹಳಷ್ಟು ಆತ್ಮಕಥನಗಳ ದೌರ್ಬಲ್ಯವನ್ನು ಈ ಪುಟ್ಟ ಕೃತಿಯಲ್ಲಿ ಲೇಖಕಿ ಮೀರುವ ಪ್ರಯತ್ನ ಮಾಡಿರುವುದು ಗಮನಾರ್ಹ. ಇಲ್ಲಿನ ಕಥನದುದ್ದಕ್ಕೂ ಕವಿಹೃದಯವೇ ಮಿಡಿದಿದ್ದರೂ ತಂತ್ರ, ಕೌಶಲ, ಕೃತಕಗೊಳ್ಳದ ಆಡುಮಾತು, ಕುಂತ ಪೆಟ್ಟಿಗೆ ಓದಿ ಮುಗಿಸಲೇಬೇಕೆಂಬ ಒತ್ತಡ ಹೇರುವ ಜೀವಂತಿಕೆ ಇವುಗಳಿಂದಾಗಿ ಇದೊಂದು ಹೃದಯಂಗಮ ನೀಳ್ಗತೆಯಂತೆ ಮನ ತಟ್ಟುತ್ತದೆ. ಹೆಸರು ಸ್ಥಳಗಳನ್ನು ಬದಲಾಯಿಸಿದರೆ ಇದನ್ನು ಕಥೆಯಾಗಿ ಪರಿವರ್ತಿಸಿಬಿಡಬಹುದು. ಇದನ್ನು ಓದುವಾಗ ೧೪ ವರ್ಷಗಳ ಹಿಂದಿನದೆಂಬುದು ಮರೆತು ಹೋಗಿ ಈ ಕ್ಷಣದಲ್ಲಿ ಜೀವ ತಳೆದಂತೆ ಭಾಸವಾಗುತ್ತದೆ. ಕಾಲವನ್ನು ಸಹಜವಾಗಿ ಜಯಿಸುವ ಇಂಥ ಕಥನ ನೀಡಿದ ಲೇಖಕಿ ಯಾಕೆ ಇದನ್ನು ಇಷ್ಟಕ್ಕೆ ಮುಗಿಸಿದ್ದಾರೆ ಎನಿಸದಿರದು. ಅಲ್ಲದೆ ಯಾಕೆ ಇವರು ಕಥೆಗಳನ್ನು ಬರೆದಿಲ್ಲ ಎಂಬ ಪ್ರಶ್ನೆಯೂ ಮೂಡದಿರದು. "ಯಾವ ಹೊಲದ ಕಣಕಣವನ್ನು ಅಪ್ಪ ಪ್ರೀತಿಸಿದ್ದನೋ, ಅದೇ ಹೊಲದ ಮಣ್ಣಲ್ಲಿ ಸೇರಿಹೋದ ಅಪ್ಪ" ಈ ವಸ್ತು ಕೇಂದ್ರದ ಸುತ್ತ ಹೆಣೆದುಕೊಳ್ಳುವ ಇಲ್ಲಿನ ಕಥಾನಕ ಮನುಷ್ಯನ ಅಸ್ತಿತ್ವ ಮತ್ತು ಅದರ ಸಾರ್ಥಕತೆಯನ್ನು ಶೋಧಿಸುತ್ತ ಕೌಟುಂಬಿಕ, ಸಾಮಾಜಿಕ ಸಂಬಂಧಗಳ ಸ್ವರೂಪವನ್ನು ಅಂತಃಕರಣದ ಬೆಳಕಿನಲ್ಲಿ ದೀಪ್ತಗೊಳಿಸುತ್ತದೆ.

– ಬಸವರಾಜ ವಕ್ಕುಂದ, ೧೭/೫, ವಸ್ತ್ರದ ಬಿಲ್ಡಿಂಗ್, ಮಹಿಷಿ ರಸ್ತೆ, ಮಾಳಮಡ್ಡಿ, ಧಾರವಾಡ-೭

ಸಂಕಲನ : ಅನಿಸಿಕೆ

೧. ಸಂಕಲನ-೧೯ ರಲ್ಲಿ ಈ ಸಲದ ಸಂಚಿಕೆಗೆ ಅಪೂರ್ವವಾದ 'ನನ್ನ ಶಾಲಾ ಗುರುಗಳು' ಹೊಸ ಮಾಲಿಕೆ ಆರಂಭಿಸಿ, ಮರೆತುಹೋದ, ಅಳಿದುಹೋಗಿರುವ ಗುರುಗಳಿಗೆ ಸ್ಮರಣೆ ಮೂಲಕ ಧನ್ಯವಾದ ಹೇಳುವ ಅಪೂರ್ವ ಕೆಲಸ ಮಾಡಿದ್ದೀರಿ. ಎಂ. ರಾಮಚಂದ್ರಗೌಡ ಅವರ 'ಅವ್ವ ಅಪ್ಪ' ಲೇಖನದಲ್ಲಿ ಅವರ ತಂದೆಯ ಶಿಸ್ತು, ನ್ಯಾಯನಿಷ್ಠುರತೆ, ಕಾರ್ಯದಕ್ಷತೆ ಬಹುವಾಗಿ ಹಿಡಿಸಿದವು. ಸಮಕಾಲೀನ ಮಹಿಳಾ ಸಾಹಿತ್ಯದ ಬಗ್ಗೆ ಎಸ್. ವಿ. ಪ್ರಭಾವತಿಯವರ ಲೇಖನ ತಾರ್ಕಿಕವಾಗಿದೆ. ಹಾಗೆಯೇ ಡಾ. ಶ್ರೀನಿವಾಸ ಹಾವನೂರರ 'ಕನ್ನಡದಲ್ಲಿ ಕಲ್ಲಚ್ಚು...' ಅವರ ಪಳಗಿದ ಲೇಖನ. ಅರವಿಂದ ಚೊಕ್ಕಾಡಿಯವರ 'ಅಭಿವೃದ್ಧಿಯ ಅನ್ವೇಷಣೆ' ಒಂದು ಪರಿಣಾಮಕಾರಿ ಲೇಖನ. ನಿಮ್ಮ 'ಕಡೀಪುಟ'ವಂತೂ ಪತ್ರಿಕೆಗಳ ಹೂರಣದ ರುಚಿಯನ್ನು ಬಯಲಿಗೆಳೆದು ಇಟ್ಟಿದೆ. **— ಶರಣಗೌಡ ಎರಡೆತ್ತಿನ, ದಾವಣಗೆರೆ**

೨. ಸಂಕಲನದ ನಿಮ್ಮ ಸಾಹಸ ನಮ್ಮಂಥ ಯುವಕರಿಗೆ ಅನೇಕ ಕಾರಣಗಳಿಂದ ಮಾದರಿ. ಸಾಹಿತ್ಯಕ್ಕಾಗಿಯೇ ಬದುಕು ಸವೆಸಿದ ನೀವು ಪರಂಪರೆಯೊಂದನ್ನು ನಿಮ್ಮ ಹಿಂದಿನ ತಲೆಮಾರಿಗಾಗಿ ಪ್ರೋತ್ಸಾಹಿಸಲಿಲ್ಲ ಎಂದು ಆಪಾದಿಸುತ್ತ ದೂರವಿದ್ದ ನನ್ನಂಥವನಿಗೆ ನಿಮ್ಮ ಸಂಕಲನದಲ್ಲಿ ಬಹಳಷ್ಟು ಉತ್ತರಗಳು ಸಿಗುತ್ತಲಿವೆ. ನಿಮ್ಮ ಈ ಕಾಳಜಿಗೆ ನಾವು ಋಣಿ. **— ಡಾ. ಆರ್. ಜಿ. ಮಠಪತಿ, ಬಾಗಲಕೋಟ**

೩. ಸಂಕಲನ-೧೯ ರಲ್ಲಿ ನನ್ನ ಲೇಖನ 'ಕನ್ನಡದಲ್ಲಿ ಕಲ್ಲಚ್ಚು...' ಅಚ್ಚುಕಟ್ಟಾಗಿ ಅಚ್ಚು ಮಾಡಿದ್ದೀರಿ. ಖುಶಿಯಾಯಿತು. ಹ್ಞಾ, ನನ್ನ ಯಾವ ಲೇಖನಕ್ಕೂ ಸಂಭಾವನೆ ಕೊಡೋದು ಸರ್ವಥಾ ಬೇಡ.
— ಡಾ. ಶ್ರೀನಿವಾಸ ಹಾವನೂರ, ಮಂಗಳೂರು

೪. ಎಸ್. ಶೆಟ್ಟರ್ ಅವರು 'ಕವಿರಾಜಮಾರ್ಗ'ದ ಬಗ್ಗೆ ಬರೆದ ಲೇಖನ ಕನ್ನಡದ ಭಾಷೆ ಮತ್ತು ಸಾಹಿತ್ಯದ ಬಗ್ಗೆ ಹೊಸ ದೃಷ್ಟಿಯನ್ನು ಹಮ್ಮಿಸುವ ಪ್ರಯತ್ನ. ಅವರ ಭೂಮಿ ಮತ್ತು ಭೂಪತಿಯ ಬಗ್ಗೆಯ ಲೇಖನವನ್ನೂ ಓದಿ ತುಂಬಾ ಪ್ರಭಾವಿತನಾಗಿದ್ದೇನೆ. ತಾವು ಘನಕಾರ್ಯ ಕೈಗೊಳ್ಳುತ್ತಿದ್ದೀರಿ ಅದಕ್ಕೆ ಸಕಲ ಯಶಸ್ಸನ್ನು ಆಶಿಸುತ್ತೇನೆ. **— ಪ್ರೊ. ಜಿ. ವೆಂಕಟಸುಬ್ಬಯ್ಯ, ಬೆಂಗಳೂರು**

೫. ಡಾ. ಷ. ಶೆಟ್ಟರ್ ಅವರ ಲೇಖನಮಾಲೆ ಆರಂಭಗೊಂಡದ್ದು ಸಂತಸದ ವಿಷಯ. ಇಂಥ ಮೌಲಿಕ ಲೇಖನಗಳು ನಮ್ಮಂಥವರಿಗೆ ಸದಾ ದಾರಿದೀಪಗಳಾಗಬಲ್ಲವು. **— ಡಿ. ಎಸ್. ಅಕ್ಕಿ, ಗೋಗಿ**

೬. ಸಂಕಲನ ನಡೆಸುವ ನಿಮ್ಮ ಛಲಕ್ಕೆ ಅಭಿನಂದನೆಗಳು. **-- ವ್ಹಿ. ಎ. ಮಾಚಕನೂರ, ಬೆಂಗಳೂರು**

೭. ಸಂಕಲನ ಚೆನ್ನಾಗಿ ಬರ್ತಾ ಇದೆ. ಏನೇ ಕಷ್ಟ ಬರಲಿ ಎದುರಿಸಿ ಪತ್ರಿಕೆ ನಿಲ್ಲದ ಹಾಗೆ ನಡೆಸಿದ್ದೀರಲ್ಲ— ನಿಮ್ಮ ಧೈರ್ಯ, ಸಾಹಸ ಮತ್ತು committment ಮೆಚ್ಚುವಂಥದ್ದು. ನಿಮ್ಮ ಕೆಲಸಕ್ಕೆ ನಮ್ಮಿಂದ ಎಲ್ಲ ಪ್ರೋತ್ಸಾಹವೂ ಇದೆ. **— ಎಚ್. ಜಿ. ಸೋಮಶೇಖರರಾವ್, ಬೆಂಗಳೂರು**

೮. 'ಕನ್ನಡದಲ್ಲಿ ಕಲ್ಲಚ್ಚು ಅರ್ಥಾತ್ ಶಿಲಾಬರಹದ ಮುದ್ರಣ' ಹಾವನೂರರ ಲೇಖನ ತುಂಬಾ ಸ್ವಾರಸ್ಯಕರವಾಗಿದೆ. **— ಲಲಿತಾ ಸಿದ್ದಬಸವಯ್ಯ, ತುಮಕೂರು**

೯. ಸಾಹಿತ್ಯಕ್ಕೆಂದೇ ಮೀಸಲಾದ ಸಂಕಲನ ಅಪೂರ್ವವಾಗಿದೆ. ಇಂಥ ಪತ್ರಿಕೆ ನಡೆಸುವುದು ಒಂದು ಹೋರಾಟವೇ ಸರಿ. ಈ ಹೋರಾಟದಲ್ಲಿ ಸಹೃದಯ ಕನ್ನಡಿಗರ ಬೆಂಬಲ ನಿಮ್ಮ ಬೆನ್ನಿಗಿದೆ.
—ಬಸವರಾಜ ಚಿಕ್ಕನರಗುಂದ, ಹುಬ್ಬಳ್ಳಿ

೧೦. ಸಂಕಲನ ಮುಂದುವರಿಯುತ್ತಿರುವುದು ಚೇತೋಹಾರಿ ವಿಷಯ. ಆಕ್ಸಿಜನ್ ತೆಗೆದುಕೊಂಡಾಗಲೊಮ್ಮೆ ಉಸಿರಾಡುವಂತಿರುವ ಕನ್ನಡದ ಅನೇಕ ಸಾಹಿತ್ಯ ಪತ್ರಿಕೆಗಳಿಗಿಂತ ಭಿನ್ನವಾಗಿ ಹಾಗೂ ಅತ್ಯಂತ ನಿಯಮಿತವಾಗಿ ಸಂಕಲನ ಈಗಿನಂತೆಯೇ ಮುಂದೆಯೂ ಬರುತ್ತಿರಲಿ. 'ನನ್ನ ಶಾಲಾ ಗುರುಗಳು' ಮಾಲಿಕೆ ಆರಂಭಿಸಿದ್ದು ಅತ್ಯಂತ ಔಚಿತ್ಯಪೂರ್ಣ. **— ಕಂನಾಡಿಗಾ ನಾರಾಯಣ, ಚಿತ್ರದುರ್ಗ**

೧೧. ನಿಮ್ಮ ಸಂಕಲನ ಪತ್ರಿಕೆ Fantastic! **— ಡಾ. ಗಿರೀಶ ಕಾರ್ನಾಡ, ಬೆಂಗಳೂರು**

ಕಡೇಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

ನಾ ಸಣ್ಣಾವ್ನ ಇದ್ದಾಗ ಒಮ್ಮೊಮ್ಮೆ ಸಂಜೀ ವ್ಯಾಳ್ಯೇಕ ಅಥವಾ ರಾತ್ರಿ ಹೊತ್ತು ಎಲ್ಲ್ಯಾರ ಗೆಳ್ಯಾರ ಕೂಡ ತಿರಗ್ಯಾಡಾಕ ಹೊಗತೇನಿ ಅಂದರ ನಮ್ಮ ಅವ್ವ ತಟ್ಟನ ಬ್ಯಾಡ ಅಂತಿದ್ಲು. ಮತ್ತ ತಾನ್‌ಅ ಹೇಳತಿದ್ಲು– ಆ ದಾರ್‍ಯಾಗ ದೆವ್ವ ಇರತಾವು, ಅಲ್ಲಿ ಅಗಸ್ಯಾಗಿನ ಹುಣಸೀ ಗಿಡದಾಗ ಕರೇ ದೆವ್ವ ಮನೀ ಮಾಡೇತಿ. ದೆವ್ವಗೊಳು ರಾತ್ರೀ ಹೊತ್ತಿನ್ಯಾಗ ಸಂಚಾರ ಮಾಡತಾವು. ಸಣ್ಣ ಮಕ್ಕಳು, ಹೆಣ್ಮಕ್ಕಳು, ವಯಸ್ಸಾದವರು ಕಂಡರ ಗಬಕ್ಕನ್‌ಅ ಹಿಡಕೊಂಡ ಬಿಡತಾವು, ದೆವ್ವ ಬಡಕೊಂತಂದರ ಹುಚ್ಚ ಹಿಡೀತಯ್ತಿ, ಹಿಡಕೊಂತಂದರ ಜೀವ್ನ ಹೊಕ್ಕಯ್ತಿ. ಅದಕ್ಕ ಕತ್ತಲಾಧ ಮ್ಯಾಲ ಎಲ್ಲ್ಯೂ ಹೊರಗ ಹೋಗಬ್ಯಾಡಪಾ. ನೀ ಇರಾವ್ನ ಒಬ್ಬ ಮಗ ನನಗ, ಅನಕೊಂತ ಕಣ್ಣಾಗ ನೀರ ತರತಿದ್ಲು. ಅವ್ವನ ತುಂಬಿದ ಗಂಟಲದಾಗ ನನ್ನ ಎಲ್ಲಾ ಹಟ-ಆಸೆ-ಛಲಗಳನ್ನ ಬಿಗಿದು ಕಟ್ಟಿಹಾಕುವಂಥಾ ತಾಕತ್ತು, ನಿರ್ಧಾರ ತುಂಬಿತ್ತು. ನಾ ಮುಸುಮುಸು ಮಾಡಕೊಂತ ಮಾನ್ಯಾಗ ಕುಂಡರತಿದ್ದೆ.

ದೇವರ್ಹ್ಹಂಗಿದ್ದ ನನ್ನ ಅವ್ವ ಒಂದ ದಿನ ಸಂಜೀ ಮಬ್ಬುಕಾವಳ ಕವಿಯೂ ಹೊತ್ತಿನ್ಯಾಗ ಸಾವಕಾಶ ಎದ್ದು ಹೋಗಿಬಿಟ್ಟಳು. ಎಲ್ಲ್ಯೋ ಯಾವುದೋ ಹುಣಸೀ ಗಿಡದಾಗ ಮನೀ ಮಾಡಿಕೊಂಡು ಕುಂತಿರಬೇಕು. ಹುಣಸೀ ಗಿಡ, ಅದರ ಚಿಗುರು, ಹುಳಿ, ಬಣ್ಣ, ರುಚಿ ನೆನಪಾದರೂ ಸಾಕು, ಅವ್ವನ ಕೈಯಾಗಿನ ತುತ್ತು, ಕಣ್ಣಾಗಿನ ಕಾಳಜಿ, ಮನದಾಗಿನ ಮಮತೆ ದೆವ್ವ ಆಗಿ ಬಡಕೋತಾವು, ಹುಚ್ಚ ಆಗತೇನಿ; ಹಿಡಕೋತಾವು ಜೀವ್ನ ಹ್ಯಾದಂಗಾಕ್ಕತಿ. ದೇವರ್ಹ್ಹಂಗಿದ್ದ ಅವ್ವ ದೆವ್ವನ್ಹ್ಹಂಗ ಆದ್ಲು ಅಂದ್ನೆಲ್ಲ, ಹೌದು, ದೇವ ಪದ ಇನ್ನಷ್ಟು ದಪ್ಪ, ದಟ್ಟ, ಆಳ, ಗಾಢ, ತೀವ್ರ ಆದರ ದೆವ್ವ ಆಗೂದು ಸಹಜ.

ದೆವ್ವ ಅನ್ನೂದು ಭಯ ಪಡುವಂಥಾ, ಹೆದರುವಂಥಾ ಭಾವ ಅಲ್ಲ. ಮತ್ತ ಮತ್ತ ನಮ್ಮನ್ನ ಕೆದಕಿ, ಕೆಣಕಿ, ಕೆತ್ತಿ, ಮೆತ್ತಿ ನಿಜದ ನೆಲೆಯ, ಮಣ್ಣಿನ ಜೀವಂತ ಅರ್ಥಪೂರ್ಣ ಮೂರ್ತಿಯನ್ನಾಗಿಸುವ ಭಾವ. ಆದ್ದರಿಂದ ದೇವತ್ವಕ್ಕಿಂತ ದೆವ್ವತ್ವ ಇನ್ನೂ ಹೆಚ್ಚು ಸ್ಮರಣೀಯ, ಪೂಜ್ಯ, ಉಪಾಸ್ಯ.

ದೆವ್ವ ಭೂತಕಾಲದ್ದು- ಭೂತದ್ದು, ಭೂತ ಅನಿಸಿಕೊಂಡದ್ದು. ವರ್ತಮಾನದ ಮನುಷ್ಯ ತನ್ನ ಭವಿಷ್ಯದ ದೇವತ್ವದ ಹುಡುಕಾಟದೊಳಗ ತನಗ ಬೇಕಾದ ಭಾವ, ಕನಸು, ಆಸೆಗಳನ್ನ, ವ್ಯಕ್ತಿಗಳನ್ನ ದೆವ್ವ ಮಾಡಿಕೊಂಡು ಸದಾ ಸಂಚಯಿಸಿ ಇಟ್ಟುಕೊಂಡು ಸಂಚಾರ ಮಾಡುವ ತ್ರಿಕಾಲ ಜೀವ್ನ ಆಗಿರತಾನ. ಅವ್ನನೊಳಗ ಈ ಮೂರೂ ಕಾಲ ಒಂದರೊಳಗೊಂದು ತಳಕು ಹಾಕ್ಕೊಂಡು ತ್ರಿವರ್ಣ ಬಟ್ಟೆ ನೇಯತಾವು, ಬಣ್ಣ ರಾಚತಾವು, ವರ್ಣ ಮೆರಸತಾವು. ಈ ಪ್ರಕಾರ ನಾವೆಲ್ಲರೂ ಒಂದಿಲ್ಲಾ ಒಂದು ದಿನ ದೆವ್ವ ಆಗಾವರೇ.

ಹಿಂಗ ನಿರಂತರ ಪ್ರತಿ ಕ್ಷಣ ತ್ರಿಭಾವಿ ಆಗಿದ್ದರೂ ನಮ್ಮ ಪಾಲಿಗೆ ಭೂತ ಅನ್ನೂದು ವಿಸ್ಪಷ್ಟ, ಕಷ್ಟಸ್ಪಷ್ಟ. ನಾವು ವರ್ತಮಾನದೊಳಗ್‌ಅ ಚಲಾಯಮಾನರಾಗಿದ್ದರೂ ಅದು ಅಸ್ಪಷ್ಟ. ಭವಿಷ್ಯ ತನ್ನ ಸ್ವಭಾವಕ್ಕ ತಕ್ಕಂಗ ಅದೃಷ್ಟ. ಭೂತದ, ದೆವ್ವದ ಅಂದಿನ ಕನ್ನಡಿಯೊಳಗ ನಮ್ಮನ್ನ, ಗತಿಸಿ ಆಗಿ ಹೋಗಿರುವ ನಮ್ಮ ಘಟನೆ, ನಿರ್ಧಾರ, ಯೋಚನೆಗಳ ಹಿನ್ನೆಲೆಯೊಳಗ ಸಾಧ್ಯವಾದಷ್ಟು ಮಟ್ಟಿಗೆ ಹೆಚ್ಚಿನ ಸ್ಪಷ್ಟತೆಯಿಂದ ಇಂದಿನ ಕಾಲವನ್ನ ನೋಡಿಕೊಳ್ಳಬಹುದು. ವರ್ತಮಾನದ ಪಾಟಿಯ ಮ್ಯಾಲ ನಾಳೆಯ ಪೇಣೆ ಹಿಡಕೊಂಡು ನಿನ್ನೆಯ ಕುಂಡಲಿ ಬರೆಯುವ ನಾವು ಉಸಿರಾಡತಾ ಇರೋದೇ ದೆವ್ವ ಆಗಲಿಕ್ಕೆ. ಅದಕ್ಕಾಗೇ ನಮ್ಮ ನಾಟಕಕಾರರು, ಸಾಹಿತಿಗಳು, ಕಲಾವಿದರು ಭೂತದ, ದೆವ್ವದ ಹಾಳೀ ಮ್ಯಾಲ, ಕಲ್ಲ ಮ್ಯಾಲ ತಮ್ಮನ್ನು ವಿಶ್ಲೇಷಿಸಿ, ರೂಪಿಸಿ, ಕಂಡುಕೊಳ್ಳುವ ಪ್ರಯತ್ನಾ ಮಾಡತಿರತಾರು.

ತೊಗಲಿನ್ಹ್ಹಂಗ ಅಂಟಿದ ಭೂತವನ್ನ ಕೆರಕೋಬಹುದು, ತಿಕ್ಕಿಕೊಳ್ಳಬಹುದು, ಉಜ್ಜಬಹುದು. ಅದೂ ತಾತ್ಕಾಲಿಕ ಸಮಾಧಾನಕ್ಕಾಗಿ ಮಾತ್ರ. ವರ್ತಮಾನ ಅನ್ನೂದು ಮೈಮ್ಯಾಲಿನ ಪ್ರತಿನಿತ್ಯದ ಧೂಳಿನ್ಹ್ಹಂಗ, ಬೆವ್ವರಿನ್ಹ್ಹಂಗ, ಹೊಲಸಿನ್ಹ್ಹಂಗ. ಅದನ್ನ ಬರೇ ತೊಳಕೋಬಹುದು, ತಿಳಕೋಬಹುದು ಅಷ್ಟೇ. ಭವಿಷ್ಯ ಅನ್ನೂದು ನಮ್ಮನ್ನು ತುಂಬಿಕೊಂಡಿರುವ ಚರ್ಮದ ಚೀಲ. ಅದು ಮರ್ಮದ ಅರಿವಾಕ್ಕತ್ಯೋ, ಬರೇ ಧೂಳಾಗಿ ಧೂಳಿನ್ಯಾಗ ನಮ್ಮನ್ನ ಹೂಳತಯ್ತ್ಯೋ ಎಲ್ಲವೂ ಅನಿರ್ದಿಷ್ಟ, ಅನಿಶ್ಚಿತ.

ಡೆಂಗ್ಯೂ ಜ್ವರ ತಡೆಯಿರಿ

ಡೆಂಗ್ಯೂ ಜ್ವರ ಮುಂಜಾಗ್ರತಾ ಕ್ರಮಗಳು

- ಮನೆ ಸುತ್ತಮುತ್ತ ನಿಂತ ನೀರಿನ ಸಂಗ್ರಹ ಇಲ್ಲದಂತೆ ನೋಡಿಕೊಳ್ಳಿ.
- ತೆಂಗಿನ ಚಿಪ್ಪು, ಪ್ಲಾಸ್ಟಿಕ್ ಚೂರು, ಟೈರು, ಗ್ಲಾಸ್ ಬಾಟಲ್, ಹೂವಿನಕುಂಡ, ಡ್ರಮ್, ಬಕೆಟ್‌ನಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಿ.
- ಮನೆಯ ನೀರಿನ ತೊಟ್ಟಿಯನ್ನು ಭದ್ರವಾಗಿ ಮುಚ್ಚಿ. ಮನೆಯ ಸುತ್ತಲ ಪರಿಸರ ಚೊಕ್ಕಟವಾಗಿರಿಸಿಕೊಳ್ಳಿ. ಸಜ್ಜಾದ ಮೇಲಿನ ನೀರು ಖಾಲಿ ಮಾಡಿರಿ.
- ಹೊಸ ಕಟ್ಟಡ ಕಟ್ಟುತ್ತಿರುವವರು ನೀರಿನ ತೊಟ್ಟಿಗಳನ್ನು ಪ್ರತಿವಾರ ಖಾಲಿ ಮಾಡಿ, ಶುಚಿ ಮಾಡಿಸಿ. ಕೊನೆಯ ಪಕ್ಷ ನೀರಿನ ಮೇಲೆ ಎರಡು ಚಮಚ ಸೀಮೆಎಣ್ಣೆ ಹಾಕಿ.

ಸೂಚನೆ : ಮನೆಯ ಸುತ್ತಮುತ್ತ ಇದ್ದು ಹಗಲಲ್ಲಿ ಕಚ್ಚುವ ಈಡಿಸ್ ಈಜಿಪ್ಟ್ ಸೊಳ್ಳೆಗಳು ಡೆಂಗ್ಯೂ ಜ್ವರ ಹರಡುತ್ತವೆ.

ಡೆಂಗ್ಯೂ ಜ್ವರದ ಚಿಹ್ನೆಗಳು

ತೀವ್ರ ಜ್ವರ, ತಲೆ ನೋವು, ಮಾಂಸಖಂಡಗಳ ನೋವು, ಕೀಲುಗಳಲ್ಲಿ ನೋವು, ಕಣ್ಣುಗಳ ಹಿಂಭಾಗದಲ್ಲಿ ನೋವು, ವಾಂತಿ, ನಿಶ್ಶಕ್ತಿ. ಕಾಯಿಲೆ ತೀವ್ರವಾದಲ್ಲಿ ರಕ್ತಸ್ರಾವ ಚಿಹ್ನೆಗಳು ಕಂಡುಬರುತ್ತವೆ ಮತ್ತು ಸಾವೂ ಸಂಭವಿಸಬಹುದು.

ಈ ಜ್ವರ ಕಾಣಿಸಿದಲ್ಲಿ ಕೂಡಲೇ ವೈದ್ಯರನ್ನು ಸಂಪರ್ಕಿಸಿ.

ವಿವರಗಳಿಗೆ ಸಂಪರ್ಕಿಸಿ : ದೂರವಾಣಿ : 2239033, 5583204, 3444286, 6566356

ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಕಟಿತ

ಬೆಂಗಳೂರು ಮಹಾನಗರ ಪಾಲಿಕೆ

BMP-CHO-1/0304

SANKALANA : RNI No. KARKAN 14160 / 10 / 1 / 2002 - TC

ಸಂಕಲನ : ಮಾರ್ಚ್ + ಏಪ್ರಿಲ್ ೨೦೦೫

ಸಂಪುಟ ೪, ಸಂಚಿಕೆ ೨

ಸಂಪಾದಕರು : ಸಿದ್ಧಲಿಂಗ ಪಟ್ಟಣಶೆಟ್ಟಿ + ಹೇಮಾ ಪಟ್ಟಣಶೆಟ್ಟಿ

●

ಟಿ. ಆರ್. ರಾಧಾಕೃಷ್ಣ

ಜಿ. ಟಿ. ಶ್ರೀಧರ ಶರ್ಮ   ಪ್ರೇಮಾ ಭಟ್

ಜ್ಯೋತಿ ಗುರುಪ್ರಸಾದ್

ಷ. ಶೆಟ್ಟರ್   ಸಿ. ಪಿ. ಕೃಷ್ಣಕುಮಾರ್

ಹರಿಕೃಷ್ಣ ಭರಣ್ಯ

ಎಲ್. ಸಿ. ಸುಮಿತ್ರಾ   ಮನು ಬಳಿಗಾರ್

ಯು. ಎನ್. ಸಂಗನಾಳಮಠ

●

ದುಷ್ಯಂತ ನಾಡಗೌಡ   ಬಂದಗದ್ದೆ ರಾಧಾಕೃಷ್ಣ

ದೇಶಪಾಂಡೆ ಸುಬ್ಬರಾಯ   ಮೋತಿಲಾಲ ಹಲವಾಯಿ

ನಾ. ದಾಮೋದರ ಶೆಟ್ಟಿ   ಜಿ. ಟಿ. ಶ್ರೀಧರ ಶರ್ಮ

ಶಿವಶಂಕರ ಹಿರೇಮಠ   ಎಲ್. ವಿ. ಶಾಂತಕುಮಾರಿ

ಸುಮಿತ್ರಾ ಹಲವಾಯಿ   ಬಸವರಾಜ ವಕ್ಕುಂದ

●

ಶರಣಗೌಡ ಎರಡೆತ್ತಿನ   ಆರ್. ಜಿ. ಮಠಪತಿ

ಶ್ರೀನಿವಾಸ ಹಾವನೂರ

ಜಿ. ವೆಂಕಟಸುಬ್ಬಯ್ಯ   ಡಿ. ಎನ್. ಅಕ್ಕಿ

ವ್ಹಿ. ಎ. ಮಾಚಕನೂರ

ಎಚ್. ಜಿ. ಸೋಮಶೇಖರರಾವ್   ಲಲಿತಾ ಸಿದ್ದಬಸವಯ್ಯ

ಬಸವರಾಜ ಚಿಕ್ಕನರಗುಂದ

ಕಂನಾಡಿಗಾ ನಾರಾಯಣ   ಗಿರೀಶ ಕಾರ್ನಾಡ

●

ಸಿದ್ಧಲಿಂಗ ಪಟ್ಟಣಶೆಟ್ಟಿ

●

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪